ಇಯತ್ತೆ

10

# ಸ್ವ-ವಿಕಾಸ ಮತ್ತು ಕಲಾ ರಸಾಸ್ವಾದ

# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ-2116 (ಪ್ರ. ಕ್ರ. 43/16) ಎಸ್‌ಡಿ-4 ದಿನಾಂಕ 25.4.2016
ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯ
ದಿನಾಂಕ 29.12.2017ರಂದು ನಡೆದ ಸಭೆಯಲ್ಲಿ ಈ ಪುಸ್ತಕ ಸನ್ 2018-19 ಈ ಶೈಕ್ಷಣಿಕ
ವರ್ಷದಿಂದ ಕಲಿಸಲು ಮಾನ್ಯತೆ ನೀಡಲಾಗಿದೆ.

# ಸ್ವ-ವಿಕಾಸ ಮತ್ತು ಕಲಾ ರಸಾಸ್ವಾದ





## ಹತ್ತನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-4

F8WA2V

ತಮ್ಮ ಸ್ಮಾರ್ಟ್‌ಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿನ Q.R.Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿನ Q.R.Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

**ಪ್ರಥಮಾವೃತ್ತಿ : 2018**
**ಪುನರ್ಮುದ್ರಣ : 2022**

**©ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ- 4**

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಸ್ವ-ವಿಕಾಸ ಮತ್ತು ಕಲಾ ರಸಾಸ್ವಾದ ವಿಷಯ ಸಮಿತಿ**

ಡಾ. ಶಿರೀಷ ಸಾಠೆ, ಅಧ್ಯಕ್ಷ
ಶ್ರೀಮತಿ ಶೀತಲ ಬಾಪಟ, ಸದಸ್ಯ
ಶ್ರೀ. ವಿದ್ಯಾನಿಧಿ (ಪ್ರಸಾದ) ವನಾರಸೆ, ಸದಸ್ಯ
ಶ್ರೀಮತಿ ಆಭಾ ಭಾಗವತ ಸದಸ್ಯ
ಶ್ರೀಮತಿ ಪ್ರತಿಭಾ ಕದಮ, ಸದಸ್ಯ
ಡಾ. ಅಜಯಕುಮಾರ ಲೊಳಗೆ, ಸದಸ್ಯ ಸಚೀವ

**ಮುಖ ಪುಟ**
ಶ್ರೀಮತಿ ಆಭಾ ಭಾಗವತ

**ಚಿತ್ರ ಮತ್ತು ಅಲಂಕಾರ**
ಶ್ರೀಮತಿ ಮಧುರಾ ಪೆಂಡಸೆ
ಶ್ರೀ ಭೂಷಣ ರಾಜೆ

**ವಿಶೇಷ ಸಹಕಾರ್ಯ**
ಸಂಶೋಧನ ಮತ್ತು ವಿಕಾಸ ವಿಭಾಗ
ಶ್ಯಾಮಚಿ ಆಯಿ ಫೌಂಡೇಶನ್

**ಪ್ರಕಾಶಕರು**
ವಿವೇಕ ಉತ್ತಮ ಗೋಸಾವಿ
**ನಿಯಂತ್ರಕ**
ಪಾಠ್ಯಪುಸ್ತಕ ನಿರ್ಮಿತಿ ಮಂಡಳ
ಪ್ರಭಾದೇವಿ – ಮುಂಬಯಿ – 25

**ನಿಮಂತ್ರಿತರು**

ಶ್ರೀಮತಿ ಸಾಯಲಿ ತಾಮಣೆ
ಶ್ರೀಮತಿ ಪರಿಣಿತಾ ಬಾಲಸುಬ್ರಮಣ್ಯ
ಶ್ರೀಮತಿ ನೀತಾ ಮುತಾಲಿಕ
ಶ್ರೀಮತಿ ನಿಶಿಗಂಧಾ ಶೇಜೂಳ
ಡಾ. ಶ್ಯಾಮಲಾತಾಯಿ ವನಾರಸೆ
ಶ್ರೀ. ಇಮ್ತಿಯಾಜ ಶೇಖ
ಶ್ರೀ. ಸಂಜಯ ಬುಗಟೆ
ಶ್ರೀ. ಶಿವಾಜಿ ಹಾಂಡೆ

**ಸಂಯೋಜಕ** : **ಡಾ. ಸದಾನಂದ ಎಂ. ಬಿಳ್ಳೂರ**
ವಿಶೇಷಾಧಿಕಾರಿ ಕನ್ನಡ
**ಶ್ರೀ ಆರ್. ಎಮ್ ಗಣಾಚಾರಿ**
ವಿಷಯ ಸಹಾಯಕ ಕನ್ನಡ

**ಭಾಷಾಂತರ** : ಶ್ರೀ ಪ್ರಕಾಶ. ಎಲ್. ಪ್ರಧಾನ.

**ಸಮೀಕ್ಷೆ** : ಡಾ. ಬಿ. ಬಿ. ಪೂಜಾರಿ.

**ಅಕ್ಷರ ಜೋಡಣೆ** : ಪಿ. ಸಿ. ಗ್ರಾಫಿಕ್ (P. C. Graphic)

**ನಿರ್ಮಿತಿ** : **ಶ್ರೀ ಸಚ್ಚಿತಾನಂದ ಆಫಳೆ**
ಮುಖ್ಯ ನಿರ್ಮಿತಿ ಅಧಿಕಾರಿ
**ಶ್ರೀ ಸಚಿನ ಮೆಹತಾ**
ನಿರ್ಮಿತಿ ಅಧಿಕಾರಿ
**ಶ್ರೀ ನಿತಿನ ವಾಣಿ**
ಸಹಾಯಕ ನಿರ್ಮಿತಿ ಅಧಿಕಾರಿ

**ಕಾಗದ** : 70 ಜಿ. ಎಸ್. ಎಮ್. ಕ್ರೀಮ್‌ವೋವ್ಹ

**ಮುದ್ರಣಾದೇಶ** :

**ಮುದ್ರಕ** :

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ

ಮತ್ತು ಉಪಾಸನಾ **ಸ್ವಾತಂತ್ರ್ಯ;**

ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು

ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು

ಆಶ್ವಾಸನೆ ನೀಡುವ **ಬಂಧುತ್ವವನ್ನು**

ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**

ಇಂದು ದಿನಾಂಕ ಇಪ್ಪತ್ತಾರನೆಯ ನವ್ವೆಂಬರ, ೧೯೪೯ ನೆಯ ಇಸವಿ

**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

**ವಿದ್ಯಾರ್ಥಿ ಗೆಳೆಯರೆ,**

ಹತ್ತನೇಯ ವರ್ಗದಲ್ಲಿ ನಿಮ್ಮೆಲ್ಲರಿಗೂ ಸ್ವಾಗತವಿದೆ. 'ಸ್ವ-ವಿಕಾಸ ಮತ್ತು ಕಲಾ ರಸಾಸ್ವಾದ' ಈ ವಿಷಯದ ಪಾಠ್ಯಪುಸ್ತಕವನ್ನು ನಿಮ್ಮ ಕೈಯಲ್ಲಿಡಲು ನಮಗೆ ವಿಶೇಷ ಆನಂದವಾಗುತ್ತದೆ.

ಜಾಗತಿಕೀಕರಣದ ಇಪ್ಪತ್ತೊಂದನೇಯ ಶತಮಾನದಲ್ಲಿ ಆವಶ್ಯವಾದ ಜೀವನ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳುವ ಸಲುವಾಗಿ ಮತ್ತು ನಿಮ್ಮ ಕರಿಅರದ ಯಶಸ್ವಿ ಪ್ರಗತಿಗಾಗಿ ಅವಶ್ಯಕವಾದ ಮಾರ್ಗದರ್ಶನವು ನಿಮಗೆ ಈ ಪುಸ್ತಕದಿಂದ ಸಿಗಬಹುದು. ಭಾವೀ ಜೀವನದಲ್ಲಿಯ ಆವ್ಹಾನಗಳನ್ನು ನೀವು ಸಕ್ಷಮವಾಗಿ ಎದುರಿಸಬಹುದು. ಹಾಗೆಯೆ ಸ್ವ ಪರಿಚಯ ಮಾಡಿಕೊಂಡು ಸ್ವಂತದ ಅವಕಾಶಗಳನ್ನು ಗುರುತಿಸುವ ಕ್ಷಮತೆ ನಿಮ್ಮಲ್ಲಿ ನಿರ್ಮಾಣವಾಗಬಹುದೆಂಬ ವಿಶ್ವಾಸವಿದೆ.

ಮಾನವಜೀವನದಲ್ಲಿ ಕಲೆಗೆ ಅನ್ಯಸಾಧಾರಣ ಮಹತ್ವವಿದೆ. ಹಾಗೆಯೇ ಕಲೆಯಿಂದ ನಮ್ಮ ಆಯುಷ್ಯವು ಸಮೃದ್ಧವಾಗಲು ಸಹಾಯವಾಗುತ್ತದೆ ಎಂಬುದು ನಿಮಗೆ ಗೊತ್ತಿದೆ. ಇದರಿಂದ ಕಲಾರಸಾಸ್ವಾದ ಈ ಭಾಗವು ಅಷ್ಟೇ ಮಹತ್ವದ್ದಾಗಿದೆ.

ಸ್ವ-ವಿಕಾಸ ಮತ್ತು ಕಲಾರಸಾಸ್ವಾದ ಈ ಪಾಠ್ಯಪುಸ್ತಕದ ಮೂಲ ಉದ್ದೇಶವು ನಿಮ್ಮ ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ ಸಂಗತಿಗಳೊಂದಿಗೆ ಇದೆ. ಪುಸ್ತಕದ ಪ್ರಾರಂಭವನ್ನು ನಿಮಗೆ ಹಿಡಿಸುವ ಚಿತ್ರರೂಪದ ಕತೆಯಿಂದ ಮಾಡಲಾಗಿದೆ. ಚಿತ್ರದಿಂದ ಮುಂದಿನ ಪ್ರಕರಣದಲ್ಲಿ ಏನು ಕಲಿಯುವವರಿದ್ದೇವೆ ಎಂಬುದರ ಸಂದೇಶ ಕೊಡಲಾಗಿದೆ. ಈ ಪಾಠ್ಯಪುಸ್ತಕದಿಂದ "ಸ್ವಲ್ಪ ಮೋಜು ಮಾಡೋಣ ಮತ್ತು ಚರ್ಚೆ ಮಾಡಿರಿ" ಇಂಥ ಅನೇಕ ಕೃತಿಗಳನ್ನು ನೀವು ಚಾಚೂ ತಪ್ಪದೇ ಮಾಡಿರಿ. ಈ ಕೃತಿಗಳು ನಿಮ್ಮ ವಿಚಾರ ಪ್ರಕಿಯೆಗೆ ಚಾಲನೆ ಕೊಡಬಹುದು.

ಪಠ್ಯಪುಸ್ತಕದಲ್ಲಿ ಅನೇಕ ಚಿಕ್ಕ ಚಿಕ್ಕ ಆಟಗಳ ಸಮಾವೇಶ ಮಾಡಲಾಗಿದೆ. ಆ ಆಟಗಳಿಂದ ನೀವು ಸಾಕಷ್ಟು ಕಲಿಯುವವರಿದ್ದೀರಿ. ಕೊಟ್ಟ ಉಪಕ್ರಮ, ಅವುಗಳ ಕಾರ್ಯರೂಪ ಮತ್ತು ಆ ವೇಳೆಯಲ್ಲಿಯ ಆವಶ್ಯಕವಿರುವ ಕೃತಿಗಳನ್ನು ನೀವು ಸ್ವತಃ ಕಾಳಜಿಪೂರ್ವಕವಾಗಿ ಮಾಡಿರಿ. ಹಾಗೆಯೇ ಅವಶ್ಯಕತೆ ಇದ್ದಲ್ಲಿ ನಿಮ್ಮ ಶಿಕ್ಷಕರ, ಪಾಲಕರ ಮತ್ತು ವರ್ಗದಲ್ಲಿಯ ಸಹಪಾಠಿಗಳ ಸಹಾಯ ಪಡೆದುಕೊಳ್ಳಿರಿ. ಇಂದಿನ ತಂತ್ರಜ್ಞಾನದ ವೇಗದ ಯುಗದಲ್ಲಿ ಸಂಗಣಕ, ಸ್ಮಾರ್ಟ್‌ಫೋನ ಇವಂತೂ ನಿಮಗೆ ಪರಿಚಯವಾಗಿವೆ.

ಪಠ್ಯಪುಸ್ತಕ ಅಭ್ಯಾಸಮಾಡುವಾಗ ಮಾಹಿತಿ ಸಂಪ್ರೇಷಣ ತಂತ್ರಜ್ಞಾನದ ಸಾಧನಗಳ ಯೋಗ್ಯ ಉಪಯೋಗ ಮಾಡಿರಿ. ಇದರಿಂದ ನಿಮ್ಮ ಅಧ್ಯಯನವು ಸುಲಭವಾಗಬಹುದು.

ಪಠ್ಯಪುಸ್ತಕವನ್ನು ಓದುವಾಗ, ಅಭ್ಯಸಿಸುವಾಗ, ಮತ್ತು ತಿಳಿದುಕೊಳ್ಳುವಾಗ ನಿಮಗೆ ಅದರಲ್ಲಿ ಹಿಡಿಸಿದ ಭಾಗ ಅಲ್ಲದೆ ಅಭ್ಯಾಸಮಾಡುವಾಗ ಬರುವ ತೊಂದರೆಗಳನ್ನು, ಪ್ರಶ್ನೆಗಳನ್ನು ನಮಗೆ ಅವಶ್ಯವಾಗಿ ತಿಳಿಸಿರಿ.

ನಿಮಗೆ ನಿಮ್ಮ ಶೈಕ್ಷಣಿಕ ಪ್ರಗತಿಗಾಗಿ ಹಾರ್ದಿಕ ಶುಭಾಶಯಗಳು !

(ಡಾ. ಸುನಿಲ ಮಗರ)
**ಸಂಚಾಲಕ**
ಮಹಾರಾಷ್ಟ್ರ ರಾಜ್ಯ ಪಾಠ್ಯ ಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

**ಪುಣೆ**
**ದಿನಾಂಕ: 18 ಮಾರ್ಚ್ 2018, ಯುಗಾದಿ**
**ಭಾರತೀಯ ಸೌರ ದಿನಾಂಕ:** 27 ಫಾಲ್ಗುಣ 1939

# ಸ್ವ-ವಿಕಾಸ ಮತ್ತು ಕಲಾರಸಾಸ್ವಾದ ಕ್ಷಮತೆಯ ವಿಧಾನಗಳು

**ಹತ್ತನೆಯ ಇಯತ್ತೆಯ ಕೊನೆಗೆ ವಿದ್ಯಾರ್ಥಿಗಳಲ್ಲಿ ಮುಂದಿನ ಕ್ಷಮತೆಗಳ ವಿಕಾಸವಾಗಬೇಕು, ಎಂಬ ಅಪೇಕ್ಷೆ ಇದೆ.**

| ಅ.ಕ್ರ. | ಘಟಕಗಳು | ಕ್ಷಮತೆಯ ವಿಧಾನಗಳು |
|---|---|---|
| 1. | ನಾನೊಬ್ಬ ನಾಗರಿಕ | 1) ಚಿಕಿತ್ಸಕ ವಿಚಾರ- ದೈನಂದಿನ ಆಯುಷ್ಯದಲ್ಲಿಯ ಸ್ವಂತದ ಮತ್ತು ಇತರರ ವರ್ತನೆಯ ವಿಶ್ಲೇಷಣೆ ಮಾಡಿ ಅದು ಪ್ರಜಾಪ್ರಭುತ್ವ ಜೀವನಶೈಲಿಯ ಮೌಲ್ಯಗಳಿಗೆ ಹಿಡಿದು ಇದೆಯೋ ಎಂಬುದರ ಚಿಕಿತ್ಸೆ ಮಾಡುವ ಕ್ಷಮತೆ ಪ್ರತಿಪಾದಿಸುವದು.<br>2) ಸಹವೇದನೆ-ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಪರಸ್ಪರ ಅವಲಂಬನೆಯ ಅರಿವು ಮತ್ತು ಅದನ್ನನುಸರಿಸಿ ಇತರ ಜನರ ಕುರಿತು ಸಹವೇದನೆಯನ್ನು ಪ್ರತಿಪಾದಿಸುವದು.<br>3) ಸ್ವಯಂ-ವ್ಯವಸ್ಥಾಪನೆ- ಸ್ವಂತದ ವರ್ತನೆಯಲ್ಲಿಯ ತಪ್ಪುಗಳನ್ನು ಗುರುತಿಸಿ ಅವುಗಳನ್ನು ಹೋಗಲಾಡಿಸುವ ದೃಷ್ಟಿಯಿಂದ ಯೋಗ್ಯ ನಿಯೋಜನೆಯನ್ನು ಮಾಡುವ ಕ್ಷಮತೆಯನ್ನು ಪ್ರತಿಪಾದಿಸುವದು.<br>4) ವಿವಿಧತೆಯ ಸ್ವೀಕಾರ-ಸ್ವಂತದ ಸುತ್ತಮುತ್ತಲಿನ ಜನರಲ್ಲಿಯ ವಿವಿಧತೆಯನ್ನು ಸ್ವೀಕರಿಸುವ ಮತ್ತು ಅದರ ಮಹತ್ವವನ್ನು ತಿಳಿದು ಅದರ ಸಮರ್ಥನೆ ಮಾಡುವ ಕ್ಷಮತೆ ಪ್ರತಿಪಾದಿಸುವದು.<br>5) ನೇತೃತ್ವಕ್ಷಮತೆ/ನೇತೃತ್ವಗುಣ-ಸ್ವಂತದ ಮನೆಯಲ್ಲಿ ಇಲ್ಲವೆ ಶಾಲೆಯಲ್ಲಿ ಪ್ರಜಾಪ್ರಭುತ್ವ ಜೀವನ ಶೈಲಿಯನ್ನು ಪ್ರತ್ಯಕ್ಷದಲ್ಲಿ ತರಲು, ಅವಶ್ಯಕವಿದ್ದ ಬದಲಾವಣೆಯನ್ನು ತರಲು, ಅವಶ್ಯಕವಿದ್ದ ನೇತೃತ್ವಗುಣವನ್ನು ಪ್ರತಿಪಾದಿಸುವದು. |
| 2. | ನಾನು ಮತ್ತು ಮಾಧ್ಯಮಗಳು-1 | 1) 'ಸ್ವ' ದ ಅರಿವು/ಸ್ವಯಂ ಬೋಧನೆ-ಮಾಧ್ಯಮಗಳ ಪರಿಣಾಮ, ಕಿಶೋರ ಅವಸ್ಥೆಯಲ್ಲಿ ಬದಲಾವಣೆ ಮತ್ತು ಈ ಎರಡರಿಂದ ಉದ್ಭವಿಸುವ ಸಂಭಾವ್ಯ ಅಪಾಯಗಳ ಕುರಿತು ಇರುವ ತಿಳುವಳಿಕೆ ಪ್ರತಿಪಾದಿಸುವದು.<br>2) ಭಾವನೆಗಳನ್ನು ವ್ಯವಸ್ಥಿತವಾಗಿ ಹತೋಟಿಯಲ್ಲಿಡುವದು- ಮಾಧ್ಯಮಗಳಿಂದ ಸ್ವಂತದ ಆಯುಷ್ಯದ ಮೇಲಾಗುವ ಪರಿಣಾಮಗಳನ್ನು ಎದುರಿಸುವ, ಕಿಶೋರಾವಸ್ಥೆಯ ವೇಳೆಯಲ್ಲಿ ಆಗುತ್ತಿರುವ ಭಾವನಿಕ ಬದಲಾವಣೆಗಳನ್ನು ವ್ಯವಸ್ಥಿತ ರೀತಿಯಿಂದ ಎದುರಿಸುವ/ಹತೋಟಿಯಲ್ಲಿಡುವ ಕ್ಷಮತೆಯನ್ನು ಪ್ರತಿಪಾದಿಸುವದು.<br>3) ಚಿಕಿತ್ಸಕ ವಿಚಾರ-ದೈನಂದಿನ ಜೀವನದಲ್ಲಿಯ ನಿರ್ಣಯಗಳ ಮೇಲೆ ಮಾಧ್ಯಮಗಳ ಪ್ರಭಾವವನ್ನು ಗುರುತಿಸಲು ಬರುವ ಕ್ಷಮತೆಯನ್ನು ಪ್ರತಿಪಾದಿಸುವದು.<br>4) ಧೃಢವಾದ ನಿರ್ಣಯ ತಗೆದುಕೊಳ್ಳುವ ಆತ್ಮವಿಶ್ವಾಸ-ವ್ಯಸನ ಮತ್ತು ಅದಕ್ಕೆ ಸಂಬಂಧಿಸಿ ಬರುವ ಅಪಾಯ ಮತ್ತು ಹೊಣೆಗಾರಿಕೆ ಇಲ್ಲದ ವರ್ತನೆಯಿಂದ ತಪ್ಪಿಸಿಕೊಳ್ಳುವ ಧೃಢವಾದ ಭೂಮಿಕೆಯನ್ನು ತಗೆದುಕೊಳ್ಳಲು ಅವಶ್ಯಕವಿರುವ ಆತ್ಮವಿಶ್ವಾಸವನ್ನು ಪ್ರತಿಪಾದಿಸುವದು.<br>5) ಸಮಸ್ಯೆಯ ನಿರಾಕರಣೆ-ವ್ಯಸನಾಧೀನತೆಯಂತಹ ಸಮಸ್ಯೆಗಳ ಮೇಲೆ ಯೋಗ್ಯ ಪರ್ಯಾಯ ಹುಡುಕಿ ಸಮಸ್ಯೆಯನ್ನು ಬಗೆಹರಿಸುವ ಕ್ಷಮತೆಯನ್ನು ಪ್ರತಿಪಾದಿಸುವದು. |
| 3. | ನಾನು ಮತ್ತು ದೃಶ್ಯಕಲೆ | 1) ಕಲೆಯ ಕುರಿತು ಅರಿವು-ದೃಶ್ಯಕಲೆಗಳಲ್ಲಿಯ ವಿವಿಧ ಪ್ರವಾಹಗಳ ಕುರಿತು ಅರಿವು ಪ್ರತಿಪಾದಿಸುವದು.<br>2) ಕಲಾವಿಷ್ಕಾರ ನಿರ್ಮಿತಿ- ವಿವಿಧ ಪ್ರವಾಹಗಳಲ್ಲಿಯ ಒಂದರ ಉಪಯೋಗ ಮಾಡಿ ಯಾವುದೇ ಕಲಾವಿಷ್ಕಾರ ನಿರ್ಮಾಣ ಮಾಡುವ ಕ್ಷಮತೆಯನ್ನು ಪ್ರತಿಪಾದಿಸುವದು.<br>3) ಅಭಿವ್ಯಕ್ತಿ-ದೃಶ್ಯಕಲೆಯ ಮಾಧ್ಯಮದಿಂದ ಸ್ವಂತದ ವಿಚಾರ, ಭಾವನೆ ಮತ್ತು ಅನುಭವವನ್ನು ವ್ಯಕ್ತಗೊಳಿಸಲು ಬರುವ ಕ್ಷಮತೆ ಪ್ರತಿಪಾದಿಸುವದು.<br>4) ಸೃಜನಶೀಲತೆ- ಕೆಲವು ಬೇರೆ ಮತ್ತು ಹೊಸ ಕಲೆಯ ಪ್ರಕಾರಗಳ ಮಾಧ್ಯಮದಿಂದ ನವನಿರ್ಮಾಣ ಮಾಡಲು ಬರುವ ಕ್ಷಮತೆಯನ್ನು ಪ್ರತಿಪಾದಿಸುವದು.<br>5) ಸೌಂದರ್ಯದೃಷ್ಟಿ ನಿರ್ಮಾಣವಾಗುವದು - ಯಾವುದೇ ಕಲಾವಿಷ್ಕಾರದ ನಿರಿಕ್ಷಣೆ ಮಾಡಿ ಅದರಲ್ಲಿಯ ಸ್ವಂತಕ್ಕೆ ಹಿಡಿಸುವ ಘಟಕಗಳ ವರ್ಣನೆಯನ್ನು ಸ್ವಂತದ ಶಬ್ದಗಳಲ್ಲಿ ಮಾಡುವ ಕ್ಷಮತೆಯನ್ನು ಪ್ರತಿಪಾದಿಸುವದು. |

| ಅ. ಕ್ರ | ಘಟಕಗಳು | ಕ್ಷಮತೆಯ ವಿಧಾನಗಳು |
|---|---|---|
| | | 6) ಪ್ರತ್ಯಕ್ಷ ಜೀವನದಲ್ಲಿಯ ಉಪಯೋಜನೆ<br>1) ಕಲೆಯ ಮಾನವೀ ಜೀವನದಲ್ಲಿಯ ಮಹತ್ವ ಹೇಳಲು ಬರುವ ಕ್ಷಮತೆಯನ್ನು ಪ್ರತಿಪಾದಿಸಲು ಬರುವದು.<br>2) ದೃಶ್ಯಕಲೆಯಲ್ಲಿಯ ಕರಿಅರದ ಅವಕಾಶದ ಕುರಿತು ತಿಳಿವಳಿಕೆ ಪ್ರತಿಪಾದಿಸುವದು.<br>3) ಕಲೆಗೆ ಸಂಬಂಧಿಸಿದ ಕೆಲವು ವಿಚಾರಗಳ ಅರ್ಥ ಹಚ್ಚಿ-ಆಯುಷ್ಯದಲ್ಲಿ ಅವುಗಳ ಸತ್ಯತೆಯ ಕುರಿತು ವಿಚಾರ ಮಾಡುವ ಕ್ಷಮತೆಯನ್ನು ಪ್ರತಿಪಾದಿಸುವದು. |
| 4. | ನಾನು ಮತ್ತು ಮಾಧ್ಯಮಗಳು-2 | 1) 'ಸ್ವ'ದ ಅರಿವು/ಸ್ವಯಂಬೋಧನೆ - ಮಾಧ್ಯಮದ ಮತ್ತು ಸಮಾಜ ಮಾಧ್ಯಮಗಳ ಪರಿಣಾಮದಿಂದ, ಉದ್ಭವಿಸುವ ಸಂಭಾವ್ಯ ಅಪಾಯದ ಕುರಿತು ಇರುವ ತಿಳುವಳಿಕೆಯನ್ನು ಪ್ರತಿಪಾದಿಸುವದು.<br>2) ಭಾವನೆಗಳನ್ನು ವ್ಯವಸ್ಥಿತರೀತಿಯಿಂದ ಬಗೆಹರಿಸುವದು/ಹತೋಟಿಯಲ್ಲಿ ಇಡುವದು-ಭಿನ್ನಲಿಂಗಿ ಇಲ್ಲವೆ ಸಮಲಿಂಗಿ ವ್ಯಕ್ತಿಗಳ ಕುರಿತು ಆಕರ್ಷಣೆ ಮತ್ತು ಭಾವನೆಗಳನ್ನು ವ್ಯವಸ್ಥಿತರೀತಿಯಿಂದ ಹತೋಟಿಯಲ್ಲಿ ಇಡುವ ಕ್ಷಮತೆಯನ್ನು ಪ್ರತಿಪಾದಿಸುವದು.<br>3) ಚಿಕಿತ್ಸಕ ವಿಚಾರ- ಸ್ತ್ರೀ-ಪುರುಷರ ಸಮಾಜದಲ್ಲಿಯ ಸ್ಥಾನದಕುರಿತು ಮತ್ತು ಭೂಮಿಕೆಕುರಿತಾದ ಸಂಕಲ್ಪನೆ ನಿರ್ಮಾಣ ಮಾಡುವಲ್ಲಿ ಮಾಧ್ಯಮಗಳ ಪ್ರಭಾವವನ್ನು ಗುರುತಿಸಲು ಬರುವ ಕ್ಷಮತೆಯನ್ನು ಪ್ರತಿಪಾದಿಸುವದು.<br>4) ಧೃಡ ಭೂಮಿಕೆ ತೆಗೆದುಕೊಳ್ಳುವ ಆತ್ಮವಿಶ್ವಾಸ- ಲೈಂಗಿಕ ದುರ್ವರ್ತನೆಯಿಂದ ದೂರವಿರಲು ಧೃಡ ಪಾತ್ರವಹಿಸಲು ಅವಶ್ಯಕವಿರುವ ಆತ್ಮವಿಶ್ವಾಸವನ್ನು ಪ್ರತಿಪಾದಿಸುವದು.<br>5) ಸಮಸ್ಯೆಯ ನಿರಾಕರಣೆ - ಲೈಂಗಿಕ ಶೋಷಣೆಯಂತಹ ಸಮಸ್ಯೆಗಳ ಮೇಲೆ ಯೋಗ್ಯ ಪರ್ಯಾಯ ವನ್ನು ಆಯ್ದು ಸಮಸ್ಯೆ ಬಗೆಹರಿಸುವ ಕ್ಷಮತೆಯನ್ನು ಪ್ರತಿಪಾದಿಸುವದು. |
| 5. | ನಾನು ಮತ್ತು ನನ್ನ ಕರಿಅರ | 1) ಚಿಕಿತ್ಸಕ ವಿಚಾರ -ಕರಿಅರದ ಪ್ರಚಲಿತ ಸಂಕಲ್ಪನೆಗಳ ವಸ್ತುನಿಷ್ಠ ವಿಶ್ಲೇಷಣೆ ಮಾಡಿ ಅದರಿಂದ ಸ್ವಂತದ ವ್ಯಾಖ್ಯೆ ಮಾಡಲು ಬರುವ ಕ್ಷಮತೆಯನ್ನು ಪ್ರತಿಪಾದಿಸುವದು.<br>2) ಸಮಸ್ಯೆಯ ನಿರಾಕರಣೆ- ಸ್ವಂತದ ಕರಿಅರದ ದಾರಿಯಲ್ಲಿ ಬರುವ ಪ್ರಶ್ನೆಗಳು ಮತ್ತು ಸಮಸ್ಯೆಗಳ ಮೇಲೆ ಯೋಗ್ಯವಾದ ದಾರಿಯನ್ನು ಹುಡುಕುವ ಕ್ಷಮತೆಯನ್ನು ಪ್ರತಿಪಾದಿಸುವದು.<br>3) ಧ್ಯೇಯ ಕಟ್ಟುವಿಕೆ - ಸ್ವಂತದ ಧ್ಯೇಯವನ್ನು ನಿರ್ದಿಷ್ಟವಾಗಿ ನಿರ್ಧರಿಸಲು ಬರುವ ಕ್ಷಮತೆಯನ್ನು ಪ್ರತಿಪಾದಿಸುವದು.<br>4) ಸ್ವಯಂ-ವ್ಯವಸ್ಥಾಪನೆ - ಸ್ವಂತದ ಧ್ಯೇಯವನ್ನು ತಲುಪುವಲ್ಲಿ ಬರುವ ತೊಂದರೆಗಳನ್ನು ನಿವಾರಿಸುವ ಸಲುವಾಗಿ ಸ್ವಂತದರಲ್ಲಿ ಯೋಗ್ಯವಾದ ಬದಲಾವಣೆಯನ್ನು ತರುವ ಕ್ಷಮತೆಯನ್ನು ಪ್ರತಿಪಾದಿಸುವದು.<br>5) ಪ್ರಭಾವಿ ಸಂಪ್ರೇಷಣ-ಕರಿಅರದ ಸಂದರ್ಭದಲ್ಲಿ ಪಾಲಕರ ವಿಚಾರವನ್ನು ತಿಳಿದು ಕೊಳ್ಳುವದು, ಸ್ವಂತದ ವಿಚಾರಸ್ಪಷ್ಟವಾಗಿ ಶಬ್ದಬದ್ಧ ಮಾಡುವದು ಮತ್ತು ಪ್ರಭಾವಿಯಾಗಿ ಪಾಲಕರೊಂದಿಗೆ ಸಂವಹನ ಮಾಡುವದು. ಇವುಗಳ ಕುರಿತು ಕ್ಷಮತೆ ಪ್ರತಿಪಾದಿಸುವದು.<br>6) ನಿರ್ಣಯ ಕ್ಷಮತೆ - ಕೊಟ್ಟ ಏಳು ಕ್ಷೇತ್ರಗಳಲ್ಲಿ ತಮ್ಮ ಇಷ್ಟದಂತೆ ಯಾವುದೇ ಒಂದು ಕ್ಷೇತ್ರದ ಆಯ್ಕೆ ಮಾಡುವ ಮತ್ತು ಅದರ ಸಮರ್ಥನೆ ಮಾಡುವ ಕ್ಷಮತೆ ಪ್ರತಿಪಾದಿಸುವದು. |
| 6. | ನಾನು ಮತ್ತು ಪ್ರಯೋಗ-ಜೀವಿಕಲೆ | 1) ಕಲೆಯ ಕುರಿತು ಅರಿವು/ಕಲಾಬೋಧನೆ- ಪ್ರಯೋಗಜೀವಿ ಕಲೆಗಳ ಮೂಲಭೂತ ಘಟಕಗಳ ಕುರಿತು ಅರಿವನ್ನು ಪ್ರತಿಪಾದಿಸುವದು.<br>2) ಸಾದರ ಪಡಿಸುವಿಕೆ- ಪ್ರಯೋಗಜೀವಿ ಕಲೆಯ ವಿವಿಧ ಪ್ರಕಾರಗಳ ಮೂಲಭೂತ ಘಟಕಗಳ ಉಪಯೋಗಮಾಡಿ ಸಾದರ ಪಡಿಸುವಿಕೆಯ ಕ್ಷಮತೆಯನ್ನು ಪ್ರತಿಪಾದಿಸುವದು.<br>3) ಅಭಿವ್ಯಕ್ತಿ- ಸ್ವಂತದ ವಿಚಾರ, ಭಾವನೆ ಮತ್ತು ಅನುಭವವನ್ನು ಪ್ರಯೋಗಜೀವಿ ಕಲೆಗಳ ಮಾಧ್ಯಮದಿಂದ ವ್ಯಕ್ತ ಮಾಡಲು ಬರುವ ಕ್ಷಮತೆಯನ್ನು ಪ್ರತಿಪಾದಿಸುವದು.<br>4) ಸೃಜನಶೀಲತೆ-ಯಾವುದೇ ಪ್ರಯೋಗಜೀವಿ ಕಲೆಯಲ್ಲಿ, ಸ್ವಂತದ ಸೃಜನ ಶೀಲತೆಯ ಆಧಾರದಿಂದ ನವನಿರ್ಮಿತಿಯನ್ನು ಮಾಡಲು ಬರುವ ಕ್ಷಮತೆಯನ್ನು ಪ್ರತಿಪಾದಿಸುವದು.<br>5) ಸೌಂದರ್ಯದೃಷ್ಟಿ ನಿರ್ಮಾಣ ವಾಗುವದು-<br>ಅ) ಯಾವುದೇ ಕಲಾವಿಷ್ಕಾರದ ನಿರೀಕ್ಷಣೆ ಮಾಡಿ, ಅದರಲ್ಲಿಯ ಸ್ವಂತಕ್ಕೆ ಹಿಡಿಸುವ ಘಟಕಗಳ ವರ್ಣನೆಯನ್ನು ಸ್ವಂತದ ಶಬ್ದಗಳಲ್ಲಿ ಮಂಡಿಸುವ ಕ್ಷಮತೆಯನ್ನು ಪ್ರತಿಪಾದಿಸುವದು.<br>ಇ) ಪ್ರಯೋಗಜೀವಿ ಕಲೆಗಳ ಸಾದರಪಡಿಸುವಿಕೆಯಲ್ಲಿಯ, ಘಟಕಗಳಲ್ಲಿಯ ವಿವಿಧತೆಯನ್ನು ಸ್ವೀಕರಿಸುವದು ಮತ್ತು ಅದರ ಮಹತ್ವವನ್ನು ತಿಳಿದುಕೊಂಡು ಅದರ ಸಮರ್ಥನೆ ಮಾಡುವ ಕ್ಷಮತೆಯನ್ನು ಪ್ರತಿಪಾದಿಸುವದು. |

## ಶಿಕ್ಷಕರಿಗಾಗಿ

ಗೆಳೆಯರೆ,

'ಸ್ವ-ವಿಕಾಸ ಮತ್ತು ಕಲಾ ರಸಾಸ್ವಾದ' ಈ ವಿಷಯವನ್ನು ಕಲಿಸುವ ಅತ್ಯಂತ ಮಹತ್ವದ, ಆಹ್ವಾನಾತ್ಮಕ ಆದರೆ ಅಷ್ಟೇ ಆನಂದದಾಯಕವಾದ ಜವಾಬ್ದಾರಿಯನ್ನು ನಿಮಗೆ ಒಪ್ಪಿಸಲಾಗಿದೆ. ಈ ಕುರಿತು ಮೊದಲು ನಿಮಗೆ ಅಭಿನಂದನೆ. ಒಂಬತ್ತನೆಯ ಇಯತ್ತೆಯಲ್ಲಿ ಈ ವಿಷಯದ ಪರಿಚಯವಾಗಿದ್ದರಿಂದ ಮತ್ತು ಅದನ್ನು ಕಲಿಸುವ ಅನುಭವ ದೊರಕಿದ್ದರಿಂದ ಈ ವಿಷಯವನ್ನು ಕಲಿಸಲು ತಾವು ಹೆಚ್ಚು ಸಿದ್ಧರಾಗಿರಬಹುದು ಎಂಬ ಆಶೆಯಿದೆ.

**ಹತ್ತನೇ ವರ್ಗದಲ್ಲಿಯ ರಚನೆಃ**

1. ಒಂಬತ್ತನೇ ಇಯತ್ತೆಯಲ್ಲಿ ವಿದ್ಯಾರ್ಥಿಗಳಿಗೆ ಸ್ವಂತದ ಪರಿಚಯವಾಗುವದು, ಸ್ವಂತದ ಕ್ಷಮತೆ, ಆಯ್ಕೆ, ಇಷ್ಟ, ಮಿತಿ ಇವುಗಳ ಅರಿವು ಆಗುವ ಉದ್ದಿಷ್ಟಗಳನ್ನು ಕಣ್ಣುಮುಂದೆ ಇಟ್ಟುಕೊಂಡು ಪ್ರಕರಣಗಳ ರಚನೆಯನ್ನು ಮಾಡಲಾಗಿತ್ತು. ಹತ್ತನೇ ಇಯತ್ತೆಯಲ್ಲಿ ಇದಕ್ಕಿಂತಲೂ ಒಂದು ಹೆಜ್ಜೆಯನ್ನು ಮುಂದಿಟ್ಟು ವಿದ್ಯಾರ್ಥಿಗಳಿಗೆ ಅವರ ಸುತ್ತಮುತ್ತಲಿನ ಪರಿಸ್ಥಿತಿಯ ಅರಿವು ಬರುವುದು, ಅವರ ಕಿವಿಗೆ ಬೀಳುವ ಮಾಹಿತಿಯ ಚಿಕಿತ್ಸೆಯನ್ನು ಅವರಿಗೆ ಮಾಡಲು ಬರುವದು. ಅದರಿಂದ ಸ್ವಂತ ನಿಷ್ಕರ್ಷವನ್ನು ಮಾಡಲು ಬರುವದು, ಒಬ್ಬ ನಾಗರಿಕನೆಂದು ಸಮಾಜದಲ್ಲಿ ತಿರುಗುವಾಗ ಮಹತ್ವದ್ದಾಗಿರುವ ಮೌಲ್ಯಗಳನ್ನು ತಿಳಿದುಕೊಳ್ಳುವದು, ಹಾಗೆಯೆ ಕಲಿಅರದ ದೃಷ್ಟಿಯಿಂದ ಹೆಚ್ಚು ಸ್ಪಷ್ಟತೆ ಬರುವದು ಮತ್ತು ಧ್ಯೇಯ ನಿಶ್ಚಿತಮಾಡಲು ಬರುವದು. ಈ ಉದ್ದಿಷ್ಟಗಳನ್ನು ಕಣ್ಣುಮುಂದೆ ಇಟ್ಟುಕೊಂಡು ಮಾಡಲಾಗಿದೆ.
2. ಪ್ರತಿಯೊಬ್ಬ ವ್ಯಕ್ತಿಯ ಶಾರೀರಿಕ, ಭಾವನಾತ್ಮಕ, ವೈಚಾರಿಕ ಮತ್ತು ವರ್ತನೆಯ ಕುರಿತಾದ ಪ್ರವೃತ್ತಿಗಳಿರುವವು. ಆದರಿಂದ ನಿರ್ಧರಿಸುವದೇನೆಂದರೆ, ಅವನು ಯಾವುದೇ ಸಾಮಾಜಿಕ, ರಾಜಕೀಯ ಪರಿಸ್ಥಿತಿಯಲ್ಲಿ ಯಾವ ರೀತಿಯಿಂದ ವರ್ತಿಸುವನು, ಮಾಧ್ಯಮಗಳ ಮೂಲಕ ದೊರೆಯುವ ಸಂಕೇತಗಳ, ಮಾಹಿತಿಯ ಅರ್ಥವನ್ನು ಹೇಗೆ ಹಚ್ಚುವನು, ಕಲಿಅರದ ಪ್ರಚಲಿತ ಪ್ರವಾಹಗಳಕಡೆಗೆ ಹೇಗೆ ನೋಡುವನು. ಇವೆಲ್ಲವುಗಳ ಒಂದು ಅರಿವು ವಿದ್ಯಾರ್ಥಿಗಳಲ್ಲಿ ಬರಬೇಕೆಂಬುದು ಕೂಡ ಈ ಪಾಠ್ಯಪುಸ್ತಕದ ಮಹತ್ವದ ಉದ್ದಿಷ್ಟವಾಗಿದೆ.
3. ಹತ್ತನೇ ಇಯತ್ತೆಯಲ್ಲಿ ಕಲೆಯ ರಸಾಸ್ವಾದದ ಒತ್ತು ಇದು ಕೌಶಲ್ಯವನ್ನು ವಿಕಾಸ ಮಾಡುವುದರ ಮೇಲಿರದೆ ದೃಷ್ಟಿ ವಿಕಾಸವನ್ನು ಹೆಚ್ಚು ಮಾಡುವುದರ ಮೇಲಿದೆ. ಕಲೆಯಲ್ಲಿಯ ವಿವಿಧ ಪ್ರವಾಹಗಳು, ಘಟಕಗಳನ್ನು ತಿಳಿದುಕೊಳ್ಳುವದು. ಸೌಂದರ್ಯ ನಿರ್ಮಿತಿಯ ಕೆಲವು ತಂತ್ರಗಳನ್ನು ತಿಳಿದುಕೊಳ್ಳುವದು. ಕಲೆಯಲ್ಲಿಯ ವೈವಿಧ್ಯತೆಯನ್ನು ತಿಳಿಯುವದು. ಕಲೆಯ ಕುರಿತು ಇದ್ದ ವಿಚಾರಗಳನ್ನು ತಿಳಿದು ಕೊಳ್ಳುವದು, ಕಲೆಯನ್ನು ನಿರ್ಮಾಣ ಮಾಡುವ ಪ್ರಕ್ರಿಯೆಯಲ್ಲಿಯ ಆನಂದವನ್ನು ಅನುಭವಿಸುವದು. ಮತ್ತು ಸ್ವಂತದ ಕಲ್ಪಕತೆಯನ್ನು ಉಪಯೋಗಿಸಿ ನವನಿರ್ಮಿತಿಯನ್ನು ಮಾಡುವದು ಇವುಗಳ ಅಂತರ್ಭಾವವನ್ನು ಪ್ರಾಮುಖ್ಯವಾಗಿ ಮಾಡಲಾಗಿದೆ.

ಈ ರೀತಿಯಿಂದ **ಶಾಲೆಯ ಜೀವನದಿಂದ ಹೊರಗಿನ ವಿಶ್ವದಲ್ಲಿ ಹೆಜ್ಜೆಯನ್ನಿಡುವ ವಿದ್ಯಾರ್ಥಿಗಳಿಗೆ, ಹೊರಗಿನ ಜಗತ್ತಿನಲ್ಲಿ ಆತ್ಮವಿಶ್ವಾಸದಿಂದ ಜೀವಿಸಲು ಸುಸಜ್ಜಿತ ಗೊಳಿಸುವ ಉದ್ದೇಶದಿಂದ ನಿರ್ಮಾಣಮಾಡಲಾದ ಒಂದು ಸೇತುವೆಯಾಗಿದೆ ಈ ದೃಷ್ಟಿಯಿಂದ ಈ ವಿಷಯದ ಕಡೆಗೆ ನೋಡಬಹುದು.**

**ಅಧ್ಯಯನ-ಅಧ್ಯಾಪನ ಪ್ರಕ್ರಿಯೆ:**

ಈ ವಿಷಯವನ್ನು ಕಲಿಸುವ ಪದ್ಧತಿ ಮತ್ತು ಅದರಿಂದ ಅಪೇಕ್ಷಿತವಾದ ಪರಿಣಾಮಗಳು ಇತರ ಶಾಲಾ ವಿಷಯಗಳಿಗಿಂತ ಭಿನ್ನವಾಗಿದ್ದರಿಂದ ಈ ಪದ್ಧತಿಯನ್ನು ಸರಿಯಾಗಿ ತಿಳಿದುಕೊಂಡು ಆ ಪದ್ಧತಿಯಿಂದ ಅದರ ಆಚರಣೆಮಾಡುವುದು ಅನಿವಾರ್ಯವಾಗಿದೆ.

1. ಈ ಪುಸ್ತಕದಲ್ಲಿಯ ಎಲ್ಲ ಆಶಯಗಳು ರಚನಾವಾದದ ಪದ್ಧತಿಯಿಂದ ಕಲಿಸುವದಿದ್ದು ಅದಕ್ಕಾಗಿ ಯೋಗ್ಯವಾದ ಉಪಕ್ರಮ, ಪ್ರಶ್ನೆಗಳು ಮತ್ತು ಸೂಚನೆಗಳನ್ನು ಪುಸ್ತಕದಲ್ಲಿ ಕೊಡಲಾಗಿದೆ. ಯಾವುದೇ ಪ್ರಕರಣವನ್ನು **ಕಲಿಸುವ ಮುಂಚೆ**

ಅದರ ಸಂಪೂರ್ಣ ಅಭ್ಯಾಸವನ್ನು ಶಿಕ್ಷಕರು ಮಾಡುವದು ಅಪೇಕ್ಷಿತವಿದ್ದು ಅದರಲ್ಲಿಯ ಉಪಕ್ರಮಗಳ ನಿಯೋಜನೆ ಮಾಡುವುದಿದೆ. ಅವಶ್ಯವಿದ್ದಾಗ ಮಾತ್ರ ಶಿಕ್ಷಕರು ವಿದ್ಯಾರ್ಥಿಗಳ ಎದುರಿಗೆ ಪುಸ್ತಕವನ್ನು ತೆರೆದು ಓದಬೇಕು.

2. ಈ ವಿಷಯದ ಯಶಸ್ಸು ಇಲ್ಲಿನ ಯಾವುದೇ 'ಮಾಹಿತಿ'ಯನ್ನು ವಿದ್ಯಾರ್ಥಿಗಳವರೆಗೆ ಮುಟ್ಟಿಸುವದರಲ್ಲಿರದೆ ವಿದ್ಯಾರ್ಥಿಗಳಿಗೆ ಸ್ವಂತದ ಕುರಿತು, ಇತರರಕುರಿತು ವಿಚಾರ ಮಾಡಲು ಪ್ರೇರೆಪಿಸುವದರ ಮೇಲೆ ಅವಲಂಬಿಸಿದೆ, ವರ್ಗದಲ್ಲಿ ಘಟಿಸುವ ಪ್ರಕ್ರಿಯೆಗಳು ಉಪಕ್ರಮಗಳು, ಆಗುವ ಸಂವಾದಗಳು, ಗುಂಪುಕಾರ್ಯಗಳು, ವಿದ್ಯಾರ್ಥಿಗಳ ಆತ್ಮಪರೀಕ್ಷಣೆ ಇದೇ ವಿದ್ಯಾರ್ಥಿಗಳ ನಿಜವಾದ ಶಿಕ್ಷಣವಾಗಿದೆ. ಈ ಪ್ರಕ್ರಿಯೆಯನ್ನು ಘಟಿಸುವದೇ ಈ ವಿಷಯದ ಸಾಧ್ಯವಾಗಿದೆ. ಎಲ್ಲ ಉಪಕ್ರಮಗಳನ್ನು ಯೋಗ್ಯ ರೀತಿಯಿಂದ ತಗೆದುಕೊಂಡು ಸ್ವಚ್ಛಂದವಾದ ಮತ್ತು ಅರ್ಥಪೂರ್ಣವಾಗಿ ಚರ್ಚೆ ಮಾಡಿಸುವದೇ ಶಿಕ್ಷಕರ ಕಾರ್ಯವಾಗಿದೆ. ಈ ವಿಷಯದ ಸಂದರ್ಭದಲ್ಲಿ ಶಿಕ್ಷಕರ ಮುಖ್ಯ ಕರ್ತವ್ಯವು 'ಸುಲಭಗೊಳಿಸುವ'ದಿಷ್ಟೇ ಆಗಿದೆ.

3. ಈ ವಿಷಯದಲ್ಲಿ ವಿಧ್ಯಾರ್ಥಿಗಳು ಸ್ವಂತದಕುರಿತು, ಸ್ವಂತದ ತೊಂದರೆಗಳ ಕುರಿತು ಸ್ವಚ್ಛಂದವಾಗಿ ಮಾತನಾಡುವದು ಅಪೇಕ್ಷಿತವಿದೆ, ಇದಕ್ಕಾಗಿ ವರ್ಗದ ವಾತಾವಾರಣವು ವಿದ್ಯಾರ್ಥಿಗಳಿಗೆ ವಿಶ್ವಾಸಾತ್ಮಕ ಮತ್ತು ಸೌಹಾರ್ದವುಳ್ಳದ್ದಾಗಿರುವದು ಅವಶ್ಯಕವಿದೆ. ಅದಕ್ಕಾಗಿ ಶಿಕ್ಷಕರು ಜಾಗರೂಕರಾಗಿರುವದು ಅತ್ಯಂತ ಮಹತ್ವದ್ದಾಗಿದೆ. ವಿದ್ಯಾರ್ಥಿಗಳ ಮೇಲೆ ಯಾವುದೇ ರೀತಿಯ ಒತ್ತಡ, ಅಂಜಿಕೆ ಇದ್ದರೆ ಸಂಪೂರ್ಣ ಶಿಕ್ಷಣ ಪ್ರಕ್ರಿಯೆಯು ಅರ್ಥಹೀನವಾಗಬಹುದು. ವಿದ್ಯಾರ್ಥಿಗಳು ಹೇಳಿದ ಸಮಸ್ಯೆಗಳು, ತೊಂದರೆಗಳನ್ನು ಗಾಂಭಿರ್ಯವಾಗಿ ತಗೆದಕೊಂಡು ಅದರ ಕುರಿತು ವರ್ಗದಲ್ಲಿ ಅವನ ಚೇಷ್ಟೆ ಯಾಗಲಾರದು ಎಂಬುದರ ಕಡೆಗೆ ಲಕ್ಷ್ಯ ಕೊಡಬೇಕು.

4. ಪುಸ್ತಕದಲ್ಲಿಯ ಪ್ರತಿಯೊಂದು ಉಪಕ್ರಮಕ್ಕೆ ನ್ಯಾಯ ಕೊಟ್ಟು ಆನಂತರದ ಚರ್ಚೆ/ಗುಂಪುಕಾರ್ಯಗಳನ್ನು ಅರ್ಥಪೂರ್ಣ ಪದ್ದತಿಯಿಂದ ಘಟಿಸುವಂತೆ ಶಿಕ್ಷಕರು ಪ್ರಯತ್ನಿಸಬೇಕು. ವಿಷಯದ ತಿರುಳು, ಅದರಲ್ಲಿಯ ಉಪಕ್ರಮ, ಚರ್ಚೆಗಳು, ಗುಂಪುಕಾರ್ಯದಲ್ಲಿಯೇ ಇದೆ ಎಂಬುದನ್ನು ಸದಾ ಲಕ್ಷ್ಯದಲ್ಲಿಡಬೇಕು. ಯಾವುದೇ ಕಾರಣದಿಂದ, ವಿಶೇಷ ವಾಗಿ ಅಭ್ಯಾಸಕ್ರಮವನ್ನು ಪೂರ್ಣಗೊಳಿಸುವ ಅವಸರ ಮಾಡಿ ಚರ್ಚೆ/ಗುಂಪುಕಾರ್ಯಗಳಿಗೆ ತಡೆ ಹಾಕಬಾರದು.

5. ಬಹಶಃ ಎಲ್ಲ ಉಪಕ್ರಮಗಳಮೇಲೆ ಮುಕ್ತ ಚರ್ಚೆಯಾಗುವದು ಆಪೇಕ್ಷೀತವಾಗಿದ್ದು ಅದರಲ್ಲಿ ಯಾವುದೇ ಒಂದು ತಪ್ಪು ಇಲ್ಲವೇ ಸರಿ ಉತ್ತರವಿಲ್ಲ ಎಂಬುದನ್ನು ಲಕ್ಷ್ಯದಲ್ಲಿಡಬೇಕು. ವಿದ್ಯಾರ್ಥಿಗಳು ಸ್ವಂತ ವಿಚಾರಮಾಡುವದು, ತರ್ಕಬದ್ಧವಾಗಿ ಉತ್ತರ ಕೊಡುವದು ಮತ್ತು ಅವರ ಉತ್ತರಗಳನ್ನು ಅವರ ರೀತಿಯಿಂದ ಸಮರ್ಥನೆ ಮಾಡಲು ಬರು ವದು ಇಷ್ಟೇ ಅಪೇಕ್ಷೆಯಾಗಿದೆ.

6. ಶಿಕ್ಷಕರು ಸಾಧ್ಯವಾದಷ್ಟು ವಿದ್ಯಾರ್ಥಿಗಳಿಗೆ ಪ್ರಶ್ನೆಗಳ/ಪರಿಸ್ಥಿತಿಯ ಎಲ್ಲ ಬದಿಯಿಂದ ಆಕಲನೆಯಾಗಬಹುದು ಎಂಬುದಕ್ಕಾಗಿ ಎರಡೂ ಬದಿಯಿಂದ ಪ್ರಶ್ನೆಗಳನು ಕೆಳಿ ಅವರಿಗೆ ಆಳವಾಗಿ ವಿಚಾರಮಾಡುವಂತೆ ಮಾಡುವದು ಅಪೇಕ್ಷೆಯಾಗಿದೆ.

**ಅಂಕಗಳ ನಿಯೋಜನೆ:**

1. ಈ ವಿಷಯಕ್ಕಾಗಿ ಯಾವುದೇ ಲೇಖಿ ಪರೀಕ್ಷೆ ಇಲ್ಲ. ಆದರೆ ವರ್ಗದಲ್ಲಿಯ ಶೈಕ್ಷಣಿಕ ಪ್ರಕ್ರಿಯೆಯ ಸತತವಾದ ಮೂಲ್ಯ ಮಾಪನ ಮತ್ತು ನೋಂದಿ ಬರೆದು ಇಡುವದು ಅಪೇಕ್ಷಿತವಿದೆ.

2. ವಿದ್ಯಾರ್ಥಿಗಳು ಈ ವಿಷಯಕ್ಕಾಗಿ ಒಂದು ಎರಡುನೂರು ಪೇಜಿನ ನೋಟಬುಕ್ಕನ್ನು ಇಡಬೇಕು ಮತ್ತು ಯಾವ ಉಪಕ್ರಮಗಳು ನೋಟಬುಕ್ಕಿನಲ್ಲಿ ಬರೆಯುವದು ಅಪೇಕ್ಷೀತವಿದೆಯೋ ಅದನ್ನು ಅದರಲ್ಲಿ ಬಿಡಿಸಬೇಕು. ಯಾವುದೇ ಪ್ರಕಾರದ ಇತರ ಸಾಹಿತ್ಯಗಳನ್ನು ಅದಕ್ಕಾಗಿ ಉಪಯೋಗಿಸಬಾರದು.

3. ಪ್ರತಿಯೊಂದು ಪ್ರಕರಣದ ನಂತರ ಒಂದು ಮೂಲ್ಯಮಾಪನ ರೂಪರೇಷೆಯನ್ನು ಕೊಡಲಾಗಿದೆ. ಶಿಕ್ಷಕರು ಹಾಗೆ ವಿದ್ಯಾರ್ಥಿಗಳ ಸತತ ಮೂಲ್ಯಮಾಪನ ಮಾಡಿ ಅದರ ರೇಕಾರ್ಡ ಸ್ವಂತದ ಕಡೆಗೆ ಇಡುವದು ಆಪೇಕ್ಷಿತವಿದೆ. ವಿದ್ಯಾರ್ಥಿಗಳು ನೋಟಬುಕ್ಕಿನಲ್ಲಿ ಮಾಡಿದ ಕೆಲಸವನ್ನು ಪರೀಕ್ಷಿಸಿ ಅವನಿಗೆ ಪುಸ್ತಕದಲ್ಲಿ ಕೊಟ್ಟಹಾಗೆ ಅಂಕಗಳನ್ನು ಕೊಡುವ ಆಪೇಕ್ಷೆ ಇದೆ. ವರ್ಷದ ಕೊನೆಗೆ ವಿದ್ಯಾರ್ಥಿಗಳಿಗೆ ದೊರಕಿದ ಅಂಕಗಳ ಬೇರೀಜು ಮಾಡಿ ಅದರ ಮೇಲಿಂದ ಅವನ ಶ್ರೇಣಿಯನ್ನು ನಿರ್ಧರಿಸಬೇಕು.

# ಅನುಕ್ರಮಣಿಕೆ


6. ನಾನು ಮತ್ತು ಪ್ರಯೋಗ ಕಲೆ — ಪುಟ 87

5. ನಾನು ಮತ್ತು ನನ್ನ ಕರಿಅರ — ಪುಟ 67

4. ನಾನು ಮತ್ತು ಮಾಧ್ಯಮಗಳು -2 — ಪುಟ 52

3. ನಾನು ಮತ್ತು ದೃಶ್ಯ ಕಲೆ — ಪುಟ 35

2. ನಾನು ಮತ್ತು ಮಾಧ್ಯಮಗಳು -1 — ಪುಟ 18

1. ನಾನೊಬ್ಬ ನಾಗರಿಕ — ಪುಟ 1





ಈ ಮೊದಲು ನಾವು, ನೋಡಿದ್ದೇವೆ- ನಿಶಾ, ಪ್ರತಾಪ, ಲೋಬೊ, ರಾಘವ ಮತ್ತು ಸಮೀನಾ ಇವರ ಗೆಳೆತನವಿದೆ.
ಧೈರ್ಯಧರ ಮತ್ತು ಧೈರ್ಯಶೀಲಾ ಇವರು ಎಲ್ಲರಿಗೆ ಮೌಲ್ಯಗಳ ಕುರಿತು, ಕಲೆಯ ಕುರಿತು ಸಂಘರ್ಷವನ್ನು ಬಗೆ ಹರಿಸುವ ಕುರಿತು ಮೇಲಿಂದ ಮೇಲೆ ಸಲಹೆಯನ್ನು ಕೊಡುತ್ತಿದ್ದರು.
ಈ ಎಲ್ಲ ಹುಡುಗಹುಡುಗಿಯರು ಸ್ವಂತದ ಜವಾಬದಾರಿಯನ್ನು ಈಗ ಸ್ವಂತವೇ ತೆಗೆದು ಕೊಳ್ಳಬೇಕಾಗುವದು.
ಅವರಿಗೆ ಈಗ ಧೈರ್ಯಧರ ಮತ್ತು ಧೈರ್ಯ ಶೀಲಾಳ ಅವಶ್ಯಕತೆ ಇಲ್ಲವೆಂದು ಹೇಳಿ ಒಂದುದಿವಸ ಅವರಿಬ್ಬರೂ ಹೊರಟು ಹೋಗುತ್ತಾರೆ
ರಾಘವ ಈಗ ಯಾವುದೇ ಅಪಾಯಕಾರಕ ಕೃತಿ ಮಾಡುವ ಮೊದಲು "ಅದರ ಪರಿಣಾಮವನ್ನು- ಅನುಭವಿಸಲು ನಾವು ಸಮರ್ಥರಿದ್ದೇವೆಯೆ"? ಎಂದು ವಿಚಾರ ಮಾಡುತ್ತಾನೆ.
GO SLOW
ತಂದೆತಾಯಿಯೊಂದಿಗೆ ಈಗ ಸಮೀನಾಳ ಜಗಳ ವಾಗುತ್ತಿಲ್ಲ. ಅವರ ವಿಚಾರ ತಿಳಿದುಕೊಂಡು ಆಕೆ ವಿನ್‌ವಿನ್ ಮಾರ್ಗವನ್ನು ಶೋಧಿಸುವ ಪ್ರಯತ್ನವನ್ನು ಮಾಡುತ್ತಿದ್ದಾಳೆ.
ನಿಮ್ಮ ಮೌಲ್ಯಗಳಂತೆ ನಾವು ವರ್ತಿಸುತ್ತೇವೆಯೆ ಎಂಬುದನ್ನು ಪ್ರತಾಪನು ಸತತವಾಗಿ ಪರೀಕ್ಷಿಸು ತ್ತಿರುವನು
ಲೋಬೊನಿಗೆ ಚಿಕ್ಕ-ಚಿಕ್ಕ ಘಟನೆಗಳಲ್ಲಿ ಅಡಗಿದ ಕಲೆ ಈಗ ತಿಳಿಯಹತ್ತಿದೆ, ಅವನ ಸೌಂದರ್ಯ ದೃಷ್ಟಿಯೆಲ್ಲ ಮೆಲ್ಲನೆ ವಿಕಾಸಗೊಳ್ಳಹತ್ತಿದೆ
ಅತ್ಯಂತ ನಿಶ್ಚಿಂತೆಯುಳ್ಳ ನಿಶಾಕೂಡ ಈಗ ತನ್ನ ಕರಿಅರದ ಕುರಿತು ಗಂಭೀರವಾಗಿ ವಿಚಾರ ಮಾಡಹತ್ತಿದ್ದಾಳೆ.
ಇನ್ನು ಮುಂದೆ....



ರಾಘವ ಮತ್ತು ಪ್ರತಾಪ ಜಗಳವಾಡುತ್ತಿರುತ್ತಾರೆ. ಸಮೀನಾ ಜಗಳ ಬಿಡಿಸಲು ಬರುವಳು
ಆರೇ ನಿಲ್ಲಿರಿ ನಿಲ್ಲಿರಿ... ಏನಾಗಿದೆ?
ನಮ್ಮವರಲ್ಲಿ ನಮ್ಮ ದೇಶದಮೇಲೆ ಯಾರಪ್ರೇಮ ಹೆಚ್ಚಾಗಿ ಇದೆ ಎಂಬುದರ ಮೇಲೆ ನಮ್ಮ ವಾದ ವಿವಾದ ನಡೆದಿದೆ.
ನಾನು ಪ್ರತಿ 15 ಆಗಷ್ಟು ಮತ್ತು 26 ಜಾನೇವಾರಿ ಯಂದು ಧ್ವಜವಂದನಕ್ಕೆ ಹೋಗುತ್ತೇನೆ.
ನಾನು ಎಲ್ಲ ಮಹಾಪುರುಷರ ಜಯಂತಿಯನ್ನು ಆಚರಿಸುತ್ತೇನೆ
(ಮತ್ತೇ ಜಗಳಮಾಡಲು ಪ್ರಾರಂಭಿಸುವರು)
ಇಷ್ಟೇನಾ?.... ನಾನು ಕೂಡಲೆ ನಿಮ್ಮ ಜಗಳವನ್ನು ಬಿಡಿಸುವೆ. ನಿಮ್ಮಲ್ಲಿ ಯಾರು ಎಂದೂ ದಾರಿಯ ಮೇಲೆ ಕಸ ಚಲ್ಲುವದಿಲ್ಲ?
ದಾರಿಯಮೇಲೆ ಕಸ ಹಾಕುವದಕ್ಕೂ ಮತ್ತು ದೇಶಪ್ರೇಮಕೂ ಏನು ಸಂಬಂಧ?
ನಾವು...

# 1 ನಾನೊಬ್ಬ ನಾಗರಿಕ



ಹೊಣೆಗಾರನಾದ ಪ್ರತಿಯೊಬ್ಬ ನಾಗರಿಕನು ದೇಶದ ಸಾಮರ್ಥ್ಯವನ್ನು ಹೆಚ್ಚಿಸುವನು.

**ಉದ್ದೇಶಗಳು:**

1. ಹೊಣೆಗಾರನಾದ ನಾಗರಿಕನಾರು ಇದನ್ನು ಸ್ವಂತ ಶಬ್ದಗಳಲ್ಲಿ ಹೇಳಲು ಬರುವುದು.
2. ಹೊಣೆಗಾರ ನಾಗರಿಕನ ವರ್ತನೆಯನ್ನು ಗುರುತಿಸಲು ಬರುವುದು.
3. ನಿಯಮಗಳ ಅವಶ್ಯಕತೆ ಮತ್ತು ನಿಯಮಗಳು ಹೇಗೆ ನಿರ್ಮಾಣ ವಾಗುವವು ಎಂಬುದನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವುದು
4. ಪ್ರಜಾಪ್ರಭುತ್ವ ಜೀವನಶೈಲಿಯ ಮೂಲ್ಯಗಳು ಮತ್ತು ಅವುಗಳ ಮಹತ್ವವನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವುದು.
5. ತಮ್ಮ ಸುತ್ತಮುತ್ತಲು ಘಟಿಸುವ ಘಟನೆಗಳ ವಿಶ್ಲೇಷಣೆ ಮಾಡಿ ಪ್ರಜಾಪ್ರಭುತ್ವಕ್ಕೆ ಬಾಧೆಯನ್ನುಂಟು ಮಾಡುವ ಘಟಕಗಳನ್ನು ಗುರುತಿಸಲು ಬರುವುದು ಮತ್ತು ಏನನ್ನ ಮಾಡಿದರೆ ಆ ಘಟನೆಯನ್ನು ತೊಲಗಿಸಬಹುದು ಎಂಬುದರ ಉಪಾಯ ಶೋಧಿಸಲು ಬರುವುದು.
6. ತಮ್ಮ ಮನೆಯಲ್ಲಿಯ ಮತ್ತು ಶಾಲೆಯಲ್ಲಿಯ ವ್ಯವಹಾರ ಮತ್ತು ವಾತಾವರಣವು ಪ್ರಜಾಪುಭುತ್ವ ಜೀವನಶೈಲಿಯಂತೆ ಇದೆಯೇ? ಎಂಬುದರ ಕುರಿತು ಆತ್ಮ ಪರೀಕ್ಷಣೆ ಮಾಡಲು ಬರುವುದು ಮತ್ತು ಇಲ್ಲದಿದ್ದರೆ ಅದರ ಮೇಲೆ ಉಪಾಯ ಶೋಧಿಸಲು ನಿಯೋಜನೆಯನ್ನು ಮಾಡಲು ಬರುವುದು.

## 1. ನಾಗರಿಕನೆಂದರೆ ಏನು?

ನಾಗರಿಕ ಈ ಶಬ್ದವನ್ನು ನೀವು ಯಾವಾಗಲೂ ಕೇಳುತ್ತಿರಬಹುದು.

- 'ಭಾರತದ ನಾಗರಿಕ' ನೆಂದಾಗ ನಿಮ್ಮ ಮನಸ್ಸಿನಲ್ಲಿ ಯಾವ ಚಿತ್ರ ಮೂಡುವುದು?
- ಯಾವ ಯಾವ ಶಬ್ದಗಳು ನಿಮಗೆ ನೆನಪಿಸುವವು?
- ಭಾರತದ ಒಬ್ಬ ಹೊಣೆಗಾರ ನಾಗರಿಕನು ಹೇಗಿರಬೇಕು ಎಂಬುದರ ಕುರಿತು ನಿಮ್ಮ ಶಬ್ದಗಳಲ್ಲಿ ಬರೆಯಿರಿ.
- ನಿಮಗೆ ಸಾಧ್ಯವಾದರೆ ಮತ್ತು ಹಿಡಿಸಿದರೆ ನೀವು ಹೊಣೆಗಾರ ನಾಗರಿಕನ ಚಿತ್ರವನ್ನು ಸಹ ತೆಗೆಯಬಹುದು.

ವಿದ್ಯಾರ್ಥಿಗಳಿಗೆ ಅವರ ಮನಸ್ಸಿನಲ್ಲಿಯ ಸಂಕಲ್ಪನೆಯನ್ನು ಶಬ್ದಗಳಲ್ಲಿ ಮಂಡಿಸಲು ಸಹಾಯ ಮಾಡಿರಿ. ಪ್ರತಿಯೊಬ್ಬರ ಕಲ್ಪನೆ ಬೇರೆಯಾಗಿರಬಹುದು. ಅವರಿಗೆ ಪ್ರೋತ್ಸಾಹನೆ ಕೊಡಿರಿ. ಈ ಉಪಕ್ರಮದ ಸಂದರ್ಭವು ಈ ಪಾಠದಲ್ಲಿ ಮುಂದೆ ಪುನಃ ಬರಬಹುದು.

## 2. ಭಾರತದಲ್ಲಿ ಪ್ರಜಾಪ್ರಭುತ್ವ?



ಪ್ರಜಾಪ್ರಭುತ್ವವೆಂದರೇನು? ದೇಶದ ಆಡಳಿತವನ್ನು ನಡೆಸಲು ಅಸ್ತಿತ್ವದಲ್ಲಿದ್ದ ಅನೇಕ ಶಾಸನ ಪದ್ಧತಿಗಳಲ್ಲಿಯ ಒಂದು ಪದ್ಧತಿಯೆಂದರೆ ಪ್ರಜಾಪ್ರಭುತ್ವ. ಪ್ರಜಾಪ್ರಭುತ್ವ ವೆಂದರೆ–

- ಜನರ ರಾಜ್ಯ: ಜನಪ್ರತಿನಿಧಿಗಳನ್ನು ಜನರೇ ಆರಿಸಿ ಕೊಟ್ಟಿರುತ್ತಾರೆ. ಅಂತೆಯೇ ರಾಜ್ಯವು ಒಂದು ರೀತಿಯಿಂದ ಜನರದ್ದೇ ಇರುವುದು.
- ಜನರಿಗಾಗಿ ನಡೆಸಿರುವ ರಾಜ್ಯ– ದೇಶದಲ್ಲಿಯ ಎಲ್ಲ ಕಾಯ್ದೆಗಳು ನಿಯಮಗಳು ಕೇವಲ ಜನರ ಹಿತವೇ ಸರ್ವೋಚ್ಚವೆಂದು ತಿಳಿದು ಮಾಡಿರುತ್ತವೆ.
- ಜನರು ಕೂಡಿ ನಡೆಸಿರುವ ರಾಜ್ಯ – ಆರಿಸಿ ಕಳುಹಿಸಿದ ಜನಪ್ರತಿನಿಧಿಗಳು ಸಹ ಜನರೊಳಗಿಂದಲೇ ಆರಿಸಿಹೋಗುವವರು ಅಂತೆಯೇ ಒಂದು ರೀತಿಯಿಂದ ಜನರು ಕೂಡಿ ನಡೆಸಿರುವ ರಾಜ್ಯ ಅನ್ನಬಹುದು.

ನಮ್ಮ ರಾಜ್ಯವ್ಯವಸ್ಥೆಯು ಇತರ ದೇಶಗಳ ರಾಜ್ಯವ್ಯವಸ್ಥೆಗಿಂತ ಹೇಗೆ ಭಿನ್ನ ವಾಗಿದೆ ಎಂಬುದನ್ನು ತಿಳಿದುಕೊಳ್ಳಲು ಕೆಳಗಿನ ದೇಶಗಳಲ್ಲಿಯ ರಾಜ್ಯವ್ಯವಸ್ಥೆಯ ಕುರಿತು ಸ್ವಲ್ಪದರಲ್ಲಿ ಮಾಹಿತಿ ಪಡೆದು ಕೊಂಡು ಬರೆಯಿರಿ.

- ಉತ್ತರ ಕೋರಿಯಾ
- ಸೌದಿ ಅರೇಬಿಯಾ
- ಚೀನ

ಸ್ವಲ್ಪದರಲ್ಲಿ ಪ್ರಜಾಪ್ರಭುತ್ವ ವೆಂದರೆ ಒಂದು ವೇಳೆ ಜನರ, ಜನರಿಗಾಗಿ ನಡೆಸಿದ, ಜನರು ಒಟ್ಟಿಗೆ ನಡೆಸಿದ ರಾಜ್ಯ ವಿದ್ದರೆ, ಹಾಗಾದರೆ **ಪ್ರತಿಯೊಬ್ಬ ಮನುಷ್ಯನು ತನ್ನ ಮನಸ್ಸಿಗೆ ಬಂದಂತೆ ವರ್ತಿಸಬಹುದೇ?**

ಕೆಳಗಿನ ಅಂಶಗಳ ಮೇಲೆ ವಿದ್ಯಾರ್ಥಿಗಳೊಂದಿಗೆ ಚರ್ಚೆ ಮಾಡಿರಿ- ಪ್ರಜಾಪ್ರಭುತ್ವ ಮತ್ತು ಇತರ ದೇಶಗಳಲ್ಲಿಯ ರಾಜ್ಯವ್ಯವಸ್ಥೆ ಇವುಗಳ ಲಾಭ ಮತ್ತು ಹಾನಿಗಳು ವಿದ್ಯಾರ್ಥಿಗಳಿಗೆ ಅವರ ಅಭಿಪ್ರಾಯವನ್ನು ಸ್ವಚ್ಛಂದವಾಗಿ ಮಂಡಿಸಲು ಬಿಡಿ. ಅವರಿಗೆ ಯಾವುದೇ ಒಂದು ಉತ್ತರದ ಕಡೆಗೆ ಒಯ್ಯುವ ಪ್ರಯತ್ನ ಮಾಡಬೇಡಿರಿ.

## 3. ನಿಯಮಗಳ ಅವಶ್ಯಕತೆ


### ಸ್ವಲ್ಪ ಮೋಜು ಮಾಡೋಣ

ಶಿಕ್ಷಕರು ಹೇಳಿದ ಕೃತಿಯ ಪಾಲನೆ ಮಾಡಿರಿ.

ಒಂದು ಕೈಚೀಲದಲ್ಲಿ ಕೆಲವು ಗುಳಿಗೆಗಳನ್ನು/ಚಾಕಲೇಟಗಳನ್ನು (ವಿದ್ಯಾರ್ಥಿಗಳ ಸಂಖ್ಯೆಗಿಂತ ಕಡಿಮೆ) ಇಡಿರಿ. ಈ ಕೈಚೀಲನ್ನು ವರ್ಗದ ಎದುರಿಗಿದ್ದ ಬೆಂಚದ ಮೇಲೆ ಇಡಿರಿ. ಮತ್ತು ಅವರಿಗಾಗಿ ಕೈಚೀಲ ದಲ್ಲಿ ಗುಳಿಗೆಗಳು/ಚಾಕಲೇಟಗಳು ಇವೆ. ಅವುಗಳನ್ನು ಎಲ್ಲರೂ ತಗೆದುಕೊಳ್ಳಬೇಕು. ಎಂದು ವಿದ್ಯಾರ್ಥಿಗಳಿಗೆ ಹೇಳಿರಿ. ಇಷ್ಟೇ ಸೂಚನೆ ಕೊಡಿರಿ. ಮುಂದೆ ಏನು ಘಟಿಸುವದು ಎಂಬುದನ್ನು ಯಾವುದೇ ಹಸ್ತಕ್ಷೇಪ ಮಾಡದೇ ನಿರೀಕ್ಷಣೆ ಮಾಡಿರಿ.

ಎಲ್ಲ ಗುಳಿಗೆಗಳು/ ಚಾಕಲೇಟಗಳು ಮುಗಿದ ನಂತರ ವಿದ್ಯಾರ್ಥಿ-ಗಳೊಂದಿಗೆ ಕೆಳಗಿನ ಅಂಶಗಳ ಮೇಲೆ ಚರ್ಚೆ ಮಾಡಿರಿ:

1. ಇಟ್ಟ ಗುಳಿಗೆಗಳು/ಚಾಕಲೇಟಗಳು ಎಲ್ಲರಿಗೆ ಸಮಪ್ರಮಾಣದಲ್ಲಿ ದೊರಕಿವೆಯೇ?
2. ವಿದ್ಯಾರ್ಥಿಗಳ ಸಂಖ್ಯೆಗಿಂತ ಗುಳಿಗೆಗಳು/ಚಾಕಲೇಟಗಳು ಕಡಿಮೆ ಇವೆ ಎಂಬುದು ಯಾವ ವಿದ್ಯಾರ್ಥಿಗಳು ಗುಳಿಗೆಗಳು/ ಚಾಕಲೇಟಗ ತಗೆದು ಕೊಂಡಿದ್ದಾರೆ, ಅವರಿಗೆ ಗುರುತು ಇತ್ತೇ?
3. ಪ್ರತಿಯೊಬ್ಬರಿಗೆ ಅದರಲ್ಲಿಯ ಕೆಲಭಾಗ ದೊರಕಬೇಕೆಂದು - ಯಾರಾದರೂ, ಏನಾದರೂ ಪ್ರಯತ್ನ ಮಾಡಿದ್ದೀರಾ?
4. ಯಾವ ವಿದ್ಯಾರ್ಥಿಗಳಿಗೆ ಎಲ್ಲಕ್ಕೂ ಹೆಚ್ಚು ಗುಳಿಗೆಗಳು/ಚಾಕಲೇಟಗಳು ದೊರೆತಿವೆ ಅವರ ಕುರಿತು ಕೆಳಗಿನ ಅಂಶಗಳನ್ನು ನೊಂದಾಯಿಸಿಕೊಳ್ಳಿರಿ.
   - ಆ ವಿದ್ಯಾರ್ಥಿಗಳು ಎಲ್ಲಿ ಕುಳಿತಿದ್ದರು? ಕೈಚೀಲದ ಬಳಿಯಲ್ಲಿ ಕುಳಿತ ವಿದ್ಯಾರ್ಥಿಗಳಿಗೆ ಏನಾದರೂ ಲಾಭವಾಗಿದೆ?
   - ಅದರಲ್ಲಿ ಎಷ್ಟು ಹುಡುಗಿಯರಿದ್ದರು, ಎಷ್ಟು ಹುಡುಗರಿದ್ದರು? ಹುಡುಗಿಯರ ಸಂಖ್ಯೆ ಕಡಿಮೆ ಇದ್ದರೆ ಏಕೆ? ಹೆಚ್ಚಿದ್ದರೆ ಏಕೆ?
5. ಗುಳಿಗೆಗಳು /ಚಾಕಲೇಟಗಳು ಎದುರಿಗಿದ್ದ ಬೆಂಚ ಮೇಲೆ ಇಟ್ಟಿದ್ದರಿಂದ ಮುಂದೆ ಕುಳಿತ ವಿದ್ಯಾರ್ಥಿಗಳಿಗೆ ಅದರ ಮೇಲೆ ಹಕ್ಕು ಹೆಚ್ಚು ಇತ್ತೇ? ಇಲ್ಲವೆ ಎಲ್ಲರಿಗೂ ಸಮಾನ ಹಕ್ಕು ಇತ್ತೇ?



**ತಿಳಿದು ಕೊಳ್ಳಿರಿ**

ಯಾವುದೇ ನಿಯಮಗಳಿರದಿದ್ದರೆ ಬಹುಶಃ ಎಲ್ಲ ವಿದ್ಯಾರ್ಥಿಗಳಿಗೆ ಸಮಾನಗುಳಿಗೆಗಳು ಸಿಗಲಾರವು ಎಂಬುದನ್ನು ನಾವು ನೋಡಿದೆವು. ಹಾಗೆಯೇ ಒಂದುವೇಳೆ ಯಾವುದೇ ನಿಯಮವಿರದಿದ್ದರೆ, ನಮ್ಮ ದೇಶದಲ್ಲಿಯ ಎಲ್ಲ ನಾಗರಿಕರಿಗೆ ಸಮಪ್ರಮಾಣದಲ್ಲಿ ಸಂಸಾಧನಗಳು ಅಂದರೆ ನೀರು, ವಿದ್ಯುತ್ ವೈದ್ಯಕೀಯ ಸೌಲಭ್ಯಗಳು ಸಿಗಲಾರವು. ಅಂತೆಯೇ ಯಾವಾಗ ನಮಗೆ ಕೆಲವು ಸಂಸಾಧನೆಗಳು ಒಟ್ಟಿಗೆ ಉಪಯೋಗ ಮಾಡುವದಿರುವದೋ, ಆಗ ಅದಕ್ಕಾಗಿ ಕೆಲವು ನಿಶ್ಚಿತ ವ್ಯವಸ್ಥೆ ಇರುವದು ಬಹಳ ಅವಶ್ಯಕವಾಗಿರುವದು.

## 4. ನಿಯಮಗಳು ಹೇಗೆ ತಯಾರಾಗುವವು?

**ಸ್ವಲ್ಪ ಮೋಜು ಮಾಡೋಣ**

ತಿಳಿಯಿರಿ, ನೀವು ಇತರ ಕೆಲವು ಜನರೊಂದಿಗೆ ಮೂರು ದೋಣಿಯಲ್ಲಿ ಸಮುದ್ರ ಮಾರ್ಗದಿಂದ ಜೊತೆಯಲ್ಲಿ ನಡೆದಿದ್ದೀರಿ ಮತ್ತು ಅಕಸ್ಮಾತ ಬಿರುಗಾಳಿ ಬರುತ್ತದೆ. ನಿಮ್ಮ ದೋಣಿಯು ಹೊಯ್ದಾಡಹತ್ತಿತು ಮತ್ತು ನೀವು ಯಾವುದೋ ಒಂದು ಗುರುತಿಲ್ಲದ ದ್ವೀಪಕ್ಕೆ ಬಂದು ತಲುಪುವಿರಿ. ಅಲ್ಲಿಂದ ಹೊರಬೀಳುವ ಎಲ್ಲ ಸಾಧ್ಯತೆಗಳನ್ನು ಅವಲೋಕಿಸಿದಾಗ ನಿಮ್ಮ ಗಮನಕ್ಕೆ ಬರುವದೇನಂದರೆ, ಹೊರಗೆ ಬರುವದು ಅಸಾಧ್ಯವಿದೆ ಮತ್ತು ನಿಮ್ಮ ಗುಂಪಿಗೆ ಮುಂದಿನ ಎಲ್ಲ ಜೀವನವನ್ನು ಅದೇ ದ್ವೀಪದ ಮೇಲೆ ಕಳೆಯಬೇಕಾಗುವದು. ಆಗ ಒಕ್ಕಟ್ಟಿನಿಂದ ಬದುಕಲು, ಕೆಲಸ ಮಾಡಲು ಮತ್ತು ಆನಂದಿತರಾಗಿರಲು ನೀವು ಏನು ವ್ಯವಸ್ಥೆ ಮಾಡುವಿರಿ?

ವಿದ್ಯಾರ್ಥಿಗಳ ಗುಂಪು ಮಾಡಿರಿ. ಪ್ರತಿಯೊಂದು ಗುಂಪಿಗೆ ಚರ್ಚೆ ಮಾಡಲು ಪ್ರೋತ್ಸಾಹಿಸಿರಿ. ಅದಕ್ಕಾಗಿ 10 ನಿಮಿಷಗಳ ಸಮಯ ಕೊಡಿರಿ. ಕೊನೆಗೆ ಪ್ರತಿಯೊಂದು ಗುಂಪುಮುಂದೆ ಬಂದು ತಮ್ಮ ಮಂಡನೆಯನ್ನು ಮಂಡಿಸಬೇಕು.



ತಿಳಿಯಿರಿ, ಯಾವುದೇ ದ್ವೀಪದ ಮೇಲೆ ಒಬ್ಬ ಮನುಷ್ಯನು ಹೇಳಿದಂತೆ ನಡೆಯುವದು, ಎರಡನೆಯ ದ್ವೀಪದ ಮೇಲೆ ಯಾವುದೇ ನಿಮಯ ವಿರುವದು ಅವಶ್ಯಕವಾಗಿಲ್ಲ ಎಂದು ನಿರ್ಧರಿಸಲಾಯಿತು. ಮತ್ತು ಪ್ರತಿಯೊಬ್ಬನು ಬೇಕಾದ ಹಾಗೆ ವರ್ತಿಸಬೇಕು. ಮೂರನೇ ದ್ವೀಪದ ಮೇಲೆ ಪ್ರತಿಯೊಬ್ಬರಿಗೆ ಬೇಕಾದ ಹಾಗೆ ವರ್ತಿಸುವ ಸ್ವಾತಂತ್ರವಿದೆ ಆದರೆ ಅದಕ್ಕೆ ಕೆಲವು ನಿಯಮಗಳ ಚೌಕಟ್ಟು ಬೇಕು ಎಂದು ನಿರ್ಧರಿಸಲಾಯಿತು. ಅಂದರೆ ಮೂರರಲ್ಲಿ ಯಾವ ದ್ವೀಪದ ಜನರು ಹೆಚ್ಚು ಸಂತೋಷದಿಂದ ಇರಬಹುದು ಎಂದು ನಿಮಗೆ ಅನಿಸುವದು? ಏಕೆ?

ಚರ್ಚೆ ಮಾಡಿರಿ–

1. ಯಾರು ನಿಮಮವನ್ನು ಮಾಡಿದರೋ ಅದಕ್ಕೆ ಆಧಾರವೇನಿತ್ತು?
2. ಮಾಡಿದ ನಿಯಮಗಳು ಕೆಲವು ಮೂಲ್ಯಗಳಮೇಲೆ ಆಧರಿಸಿದ್ದವೆ?
3. ಎಲ್ಲ ಗುಂಪಿನಲ್ಲಿಯ ನಿಯಮಗಳಲ್ಲಿ ಕೆಲವು ಸಮಾನತೆಗಳು ಕಂಡು ಬರುತ್ತವೆಯೇ?
4. ಯಾವ ಗುಂಪಿನಲ್ಲಿಯ ಜನರು ಹೆಚ್ಚು ಸಂತೋಷ ಉಳ್ಳವರಾಗಿರಬಹುದು.

**ತಿಳಿದು ಕೊಳ್ಳಿರಿ**

ಯಾವುದೇ ವ್ಯವಸ್ಥೆಯು ಪ್ರಭಾವಶಾಲಿಯಾಗಿ ನಡೆಯಬೇಕಾದರೆ ಅದಕ್ಕೆ ನಿಯಮಗಳ ಚೌಕಟ್ಟು ಬೇಕಾಗುವದು. ಈ ನಿಯಮಗಳ ಹಿಂದೆ ಕೆಲವು ಮೌಲ್ಯಗಳ ವಿಚಾರ ಇರಬೇಕಾಗುವದು. ಮೂಲ್ಯಗಳ ಕುರಿತು ನಾವು ಕಳೆದ ವರ್ಷ ಕಲಿತಿದ್ದೇವೆ. ಹೇಗೆ ವೈಯಕ್ತಿಕ ಮೂಲ್ಯಗಳಿರುವವೋ ಹಾಗೆಯೇ ಕೆಲವು ಸಾರ್ವಜನಿಕ, ಎಲ್ಲ ಸಮಾಜದ ಮೂಲ್ಯ ಗಳಿರುವವು. ಒಟ್ಟಿಗೆ ಸೇರಿ ಆನಂದದಿಂದ ಇರಲು ಆ ಮೂಲ್ಯಗಳು ಬಹಳ ಮಹತ್ವದ್ದಾಗಿರುವವು.

## ಸ್ವಲ್ಪ ವಿಚಾರ ಮಾಡಿರಿ

ಈ ಮೊದಲಿನ ಉಪಕ್ರಮದಲ್ಲಿ ನೋಡಿದ ಹಾಗೆ, ನಮಗೆ ಒಂದು ವೇಳೆ ನಮ್ಮ ಮನಸ್ಸಿನ ಹಾಗೆ ವರ್ತಿಸುವ ಸ್ವಾತಂತ್ರ್ಯ ಬೇಕಾಗಿದ್ದರೆ ಆದರೂ ಕೆಲವು ನಿಮಯಗಳನ್ನು ಹಾಕಿಕೊಳ್ಳುವದಿದ್ದರೆ ಆ ನಿಮಯಗಳು ಯಾವ ಮೂಲ್ಯಗಳಮೇಲೆ ಆಧರಿಸಿರಬೇಕು?

ಹಿಂದಿನಂತೆಯೇ ವಿದ್ಯಾರ್ಥಿಗಳನ್ನು ಗುಂಪಿನಲ್ಲಿ ಕುಳಿತುಕೊಳ್ಳಲು ಹೇಳಿರಿ. ಕೆಳಗಿನ ಅಂಶಗಳ ಮೇಲೆ ಚರ್ಚೆ ಮಾಡಲು ಹೇಳಿರಿ.

**ಯಾವ ಐದು ಮೂಲ್ಯಗಳನ್ನು ಆಧರಿಸಿದ ನಿಯಮವನ್ನು ಮಾಡಿದರೆ ಜನರಿಗೆ ಹೊಂದಿಕೊಂಡು ಆನಂದದಿಂದ ಇರಲು ಬರಬಹುದು ಮತ್ತು ಕೆಲಸ ಮಾಡಲು ಬರಬಹುದು? ನಿಮ್ಮ ನೋಟಬುಕ್ಕಿನಲ್ಲಿ ಬರೆಯಿರಿ.**

ಕೆಳಗಿನ ಅಂಶಗಳ ಮೇಲೆ ಚರ್ಚೆ ಮಾಡಿರಿ–

- ಕೊಟ್ಟ ಘಟನೆಗಳಲ್ಲಿ, ಆಯಾ ವ್ಯಕ್ತಿಯ ಅಪಮಾನವಾಗಿದೆ ಎಂದು ವಿದ್ಯಾರ್ಥಿಗಳಿಗೆ ಅನಿಸುವದೇ?
- ಒಂದು ವೇಳೆ ಹೀಗೆ ಅಪಮಾನವಾಗುತ್ತ ಇದ್ದರೆ ಆ ವ್ಯಕ್ತಿಯು ಅಪಮಾನ ಮಾಡುವವರ ಜೊತೆಗೆ ಕೂಡಿ ಕೊಂಡು ಹೊಂದಾಣಿಕೆಯಿಂದ ಕೆಲಸ ಮಾಡಬಲ್ಲನೇ? ಒಕ್ಕಟ್ಟಾಗಿ ಇರಬಲ್ಲನೆ?
- ಸಮಾಜದಲ್ಲಿ ಒಟ್ಟಿಗೆ ಸಂಚರಿಸುವಾಗ ಪ್ರತಿಯೊಬ್ಬರೊಡನೆ ಆದರದಿಂದ ವರ್ತಿಸಬೇಕು ಎಂದು ವಿದ್ಯಾರ್ಥಿಗಳಿಗೆ ಅನಿಸುವದೇ?

## 5. ನಿಯಮಗಳ ಹಿಂದೆ ಇದ್ದ ಮೂಲ್ಯಗಳು

**ಕೆಳಗಿನ ಘಟನೆಗಳ ಕುರಿತು ನಿಮಗೆ ಏನು ಅನಿಸುವದು?**

- ನಿಶಿಗಂಧಳ ತಂದೆಯು ಆಕೆಗೆ ಬಿರುನುಡಿಯನ್ನಾಡಿದರು.
- ಎಲ್ಲರೆದುರಿಗೆ ಮಿತ್ರನು ಮನಮಿತನ ಅಪಮಾನ ಮಾಡಿದನು.
- ಪಾಲಕರು ನೆಂಟರ ಎದುರಿಗೆ ಶೋಏಬನಿಗೆ ಬೆದರಿಸಿದರು.
- ಅಗನೆಸಳ ಗೆಳತಿಯು ಎಲ್ಲರ ಎದುರಿಗೆ ಆಕೆಯ ಪರಿಹಾಸ್ಯ ಮಾಡಿದಳು.

## ತಿಳಿದು ಕೊಳ್ಳಿರಿ

ಸಮಾಜದಲ್ಲಿ ಕೂಡಿ ಒಕ್ಕಟಿನಿಂದ, ಅನಂದದಿಂದ ಇರುವದಿದ್ದರೆ. ಪ್ರತಿಯೊಬ್ಬನು ಇತರರ ಆದರ ಮಾಡುವದು ಬಹಳ ಮಹತ್ವದ್ದಾಗಿದೆ. **ಅಂತೆಯೆ 'ಆದರ' ಈ ಮೂಲ್ಯವನ್ನು ರಕ್ಷಿಸುವದು ಅವಶ್ಯಕವಾಗಿದೆ. ನಮಗೆ ಯಾವುದೇ ವ್ಯಕ್ತಿಯ ವಿಚಾರ ಹಿಡಿಸದಿದ್ದರೂ ಸಹ ಅವನ ಆದರ ಮಾಡಬೇಕಾಗುವದು.**

**ಕೆಳಗಿನವುಗಳಲ್ಲಿಯ ಯಾವ ಕೃತಿಯಿಂದ ಆದರ ವ್ಯಕ್ತವಾಗುವದು ಮತ್ತು ಯಾವ ಕೃತಿಯಿಂದ ಆಗುವದಿಲ್ಲ ಎಂದು ನಿಮಗೆ ಅನಿಸುವದು.**

- ಎದುರಿಗೆ ಸಿಹಿ ಮಾತನಾಡುವದು ಆದರೆ ಹಿಂದೆ ಇತರರ ಮುಂದೆ ಆ ವ್ಯಕ್ತಿಯ ನಿಂದೆ ಮಾಡುವದು.
- ಹಿರಿಯರಿಗೆ ಕುಳಿತುಕೊಳ್ಳಲು ಸ್ಥಳವನ್ನು ಕೊಡದೇ ಇರುವದು.
- ಇಬ್ಬರು ವ್ಯಕ್ತಿಗಳು ಎದುರುಬದಿರು ಬಂದಾಗ ಒಬ್ಬನು ಇನ್ನೊಬ್ಬನಿಗೆ ಹೋಗಲು ದಾರಿಕೊಡುವದು.
- ಯಾವುದೊಬ್ಬನ ಕೊರತೆಯ ಕುರಿತು ಚೇಷ್ಟೆಮಾಡುವದು, ಚುಡಾಯಿಸುವದು.
- ಯಾರೊಬ್ಬರು ಮಾತನಾಡುತ್ತಿರುವಾಗ ಅವನಿಗೆ/ಅವಳಿಗೆ ಮಧ್ಯದಲ್ಲಿಯೇ ನಿಲ್ಲಿಸುವದು/ಮಾತು ಮುರಿಯುವದು.
- ಯಾರೊಬ್ಬರ ಅನ್ನುವಿಕೆಯನ್ನು ಹಾರಿಸಿಬಿಡುವದು.
- ಯಾರೋಬ್ಬರು ಮಾತಾಡಲು ಪ್ರಯತ್ನಿಸುತ್ತಿದ್ದರೂ ಆಕಡೆಗೆ ದುರ್ಲಕ್ಷ ಮಾಡುವದು.
- ಮುಖ ತಿರುಗಿಸುವದು, ಗೋಣು ಮರಿಯುವದು, ದಿಟ್ಟಿಸಿ ನೋಡುವದು
- ನಿಮ್ಮೊಂದಿಗೆ ಯಾರೊಬ್ಬರು ಮಾತನಾಡುತ್ತಿದ್ದರೆ ಮೊಬಾಯಿಲ-ದೊಂದಿಗೆ ಆಟವಾಡುತ್ತಿರುವದು.

**ಮೇಲಿನ ಉದಾಹರಣೆಗಳಂತಹ ಇನ್ನು ಕೆಲವು ಉದಾಹರಣೆಗಳನ್ನು ನಿಮಗೆ ಹೇಳಲು ಬರಬಹುದೇ?**

ವಿದ್ಯಾರ್ಥಿಗಳೊಂದಿಗೆ ಒಂದೊಂದು ವಾಕ್ಯದ ಮೇಲಿಂದ ಚರ್ಚೆ ಮಾಡಿರಿ. ಆದರವು ಅನೇಕ ಕೃತಿಗಳಿಂದ ವ್ಯಕ್ತವಾಗುವದು ಎಂಬುದರ ಅರಿವು ಮಾಡಿ ಕೊಡಿರಿ. ಹಾಗೆ ಅನಾದರ ಕೂಡ ಹಲವಾರು ಕೃತಿಗಳಿಂದ ವ್ಯಕ್ತವಾಗುವದು.ಯಾವುದೇ ವ್ಯಕ್ತಿಯ ಅನಾದರ (ಅಪಮಾನ) ಮಾಡಿದರೆ ಆ ವ್ಯಕ್ತಿಯ ಮೇಲೆ ಪರಿಣಾಮವಂತೂ ಆಗೇ ಆಗುವದು ಅದರಿಂದ ನಮ್ಮ ಮೇಲೂ ಕೆಲವು ಪರಿಣಾಮಗಳಾಗಬಹುದೇ?

### ನಿರ್ಜೀವ ವಸ್ತುಗಳಿಗೆ ತೋರಿಸಿದ ಆದರ

ಕೆಳಗಿನ ಘಟನೆ, ಘಟಕಗಳ ಆದರವಿಡುವದು ಅಂದರೆ ಏನೆಂಬದರ ವಿಚಾರ ಮಾಡಿರಿ

- ಅನ್ನ
- ನದಿ, ಕೆರೆ, ಸಮುದ್ರ
- ಬಸ್ಸು, ರೈಲು, ಮುಂತಾದ ಸಾರಿಗೆಯ ಸಾಧನಗಳು
- ಅರಣ್ಯಗಳು, ನಿಮ್ಮ ಸುತ್ತ ಮುತ್ತಲಿನ ಪರಿಸರ

ಕೆಳಗಿನ ಅಂಶಗಳ ಮೇಲೆ ಚರ್ಚೆ ಮಾಡಿರಿ

1. ಕೊಟ್ಟ ಸಂಸಾಧನೆಗಳ ಅನಾದರವು ನಮ್ಮಿಂದ ಆಗುವದೆ ಹೇಗೆ?
2. ಈ ಸಂಸಾಧನೆಗಳ ಆದರವನ್ನು ಕಾಯಲು ನಾವು ಏನು ಮಾಡಬೇಕಾಗುವದು?



## ತಿಳಿದು ಕೊಳ್ಳಿರಿ

ಯಾವುದೇ ಸಂಸಾಧನೆಯ ಅನಾದರ ಮಾಡುವದು ಅಂದರೇನೆ ಅದರ ಮೂಲ್ಯವನ್ನು ತಿಳಿಯದಿರುವದು, ಅದರ ಬೆಲೆ ಕಟ್ಟದಿರುವದು, ವ್ಯಕ್ತಿಗಳ ಅನಾದರ ಮಾಡಿದರೆ ಅವರ ಮೇಲೆ ಮತ್ತು ನಮ್ಮ ಮೇಲೂ ಪರಿಣಾಮವಾಗುವದು. ಹಾಗೆಯೇ ನಮ್ಮ ದೇಶದಲ್ಲಿಯ ಸಂಸಾಧನಗಳು, ಸೌಲಭ್ಯಗಳು. ಹೇಗೆಂದರೆ ಅರಣ್ಯ, ನೀರು, ಭೂಮಿ, ವಿದ್ಯುತ್, ಶಿಕ್ಷಣ, ಆರೋಗ್ಯ ಮುಂತಾದವುಗಳ ಅನಾದರ ಮಾಡಿದರೆ ಅದರ ಪರಿಣಾಮವು ನಮ್ಮ ಜೀವನದ ಮೇಲಾಗುವದು. ಆ ಸಂಸಾಧನೆಗಳು ಕೆಟ್ಟು ಹೋಗುವವು ಇಲ್ಲವೆ ಮುಗಿದು ಹೋಗುವವು. ಎಲ್ಲರಿಗೂ ಸಮ ಪ್ರಮಾಣದಲ್ಲಿ ಸಿಗುವದಿಲ್ಲ.

## ಸ್ವಲ್ಪ ಮೋಜು ಮಾಡೋಣ

ಇಂಥ ಯಾವುದೊಂದು ಕೃತಿಯನ್ನು ಶೋಧಿಸಿರಿ, ಅದು ನಿಮಗೊಬ್ಬರಿಗೆ ಮಾಡಲು ಬರಬಹುದು. ಅದಕ್ಕಾಗಿ ಯಾವುದೇ ಸಜೀವ ಇಲ್ಲವೆ ನಿರ್ಜೀವ ಘಟಕದ ಸಹಾಯ ನಿಮಗೆ ತಗೆದುಕೊಳ್ಳಬೇಕಾಗುವದಿಲ್ಲ.

- ವಿದ್ಯಾರ್ಥಿಗಳಿಗೆ ನಿಜವಾಗಿಯೂ ಯಾವುದೇ ಇಂಥ ಕೃತಿ ದೊರಕಿದೆಯೇ?
- ಈ ಕೃತಿಯನ್ನು ಮಾಡಲು ನಿಜವಾಗಿಯೂ ಯಾವುದೇ ಸಜೀವ ಇಲ್ಲವೇ ನಿರ್ಜೀವ ಘಟಕದ ಅವಶ್ಯಕತೆ ಬೀಳುವುದಿಲ್ಲವೇ?
- ಇಂಥ ಎಷ್ಟು ಕೃತಿಗಳು ದೊರಕಿವೆ?
- ಇದರಿಂದ ಯಾವ ನಿಷ್ಕರ್ಷ ತಗೆಯಲು ಬರಬಹುದು?

## ಸ್ವಲ್ಪ ವಿಚಾರ ಮಾಡಿರಿ



ಒಂದುವೇಳೆ ನಿಮಗೆ ಚಾಕಲೇಟ ತಿನ್ನುವದಿದ್ದರೆ, ಅದಕ್ಕಾಗಿ ನೀವು ಯಾರ ಮೇಲೆ ಅವಲಂಬಿಸಿ ಇರುವಿರಿ? ಆ ಚಾಕಲೇಟನ್ನು ತಯ್ಯಾರಿಸಲು ಬೇಕಾಗುವ ಕಚ್ಚಾ ಸರಕಿನ ಉತ್ಪಾದನೆ ಮಾಡುವ ಜನರು, ಅದಕ್ಕಾಗಿ ಬೇಕಾಗುವ ಸಂಸಾಧನಗಳು, ಕಾರಖಾನೆಯಲ್ಲಿ ಕೆಲಸ ಮಾಡುವ ಮನುಷ್ಯರ, ಸರಕಿನ ಸಾಗಾಣಿಕೆ ಮಾಡುವ ಜನರು, ಅದರ ಮಾರಾಟಗಾರರು ಮತ್ತು ಅದನ್ನು ಕೊಂಡುಕೊಳ್ಳಲು ಹಣ ಗಳಿಸುವವರು ಮತ್ತು ಹಣ ಕೊಡುವ ಪಾಲಕ ಮುಂತಾದವರು.

ಇದೆ ಪದ್ದತಿಯಿಂದ, ಕೆಳಗೆ ಕೊಟ್ಟ ಕೃತಿಗಳಿಗಾಗಿ ನೀವು ಯಾವ ಸಂಗತಿಗಳ ಮೇಲೆ ಅವಲಂಬಿಸಿ ಇರುವಿರಿ ಎಂಬುದರ ಸೂಕ್ಷ್ಮ ಯಾದಿ ತಯಾರಿಸಿರಿ.


1. ನಿಮಗೆ ಶಾಲೆಯ ಬಿಡುವಿನಲ್ಲಿ ಆಟವನ್ನು ಆಡುವದಿದೆ.

2. ನಿಮಗೆ ಹಾಡನ್ನು ಕೇಳುವದಿದೆ.

3. ನಿಮಗೆ ಮಳೆಯಲ್ಲಿ ತೋಯಿಸಿಕೊಳ್ಳುವದಿದೆ.

**ಕೆಳಗೆ ಕೊಟ್ಟ ಚಿತ್ರದಲ್ಲಿ ಯಾವ ಘಟಕವು ಇಲ್ಲದಿದ್ದರೂ ನಡೆಯಬಹುದು ಎಂದು ನಿಮಗೆ ಅನಿಸುವದು?**








## ಸ್ವಲ್ಪ ವಿಚಾರ ಮಾಡಿರಿ



ನಮ್ಮ ವೈಯಕ್ತಿಕ ಬೇಡಿಕೆಗಳನ್ನು ಪೂರ್ಣ ಮಾಡಿಕೊಳ್ಳಲು ಸಹ ನಾವು ಸಮಾಜದಲ್ಲಿಯ ವಿವಿಧ ಘಟಕಗಳನ್ನು ಅವಲಂಬಿಸಿರುತ್ತೇವೆ ಎಂಬುದು ನಿಮ್ಮ ಗಮನಕ್ಕೆ ಬಂದಿರಬಹುದು. ನಾವು ಒಳ್ಳೆಯ ಜೀವನ ನಡೆಸಲು ಸಮಾಜದಲ್ಲಿಯ ಪ್ರತಿಯೊಂದು ಘಟಕದ ಅವಶ್ಯಕತೆ ಇರುವದು. ಈ ಬೇಡಿಕೆಯನ್ನು ನಾವು ಹೇಗೆ ಪೂರೈಸಿ ಕೊಳ್ಳಬಹುದು?

ತಿಳಿಯಿರಿ, ನಿಮಗೆ ನಿಮ್ಮ ಪ್ರಕಲ್ಪವನ್ನು ಪೂರ್ಣಗೊಳಿಸಲು ಒಂದು ಪುಸ್ತಕದ ಅವಶ್ಯಕತೆ ಇದೆ. ಆ ಪುಸ್ತಕವು ಬೇರೊಬ್ಬ ವ್ಯಕ್ತಿಯ ಹತ್ತಿರ ಇದೆ. ನೀವು ಏನು ಮಾಡಬಲ್ಲಿರಿ?

- ಆ ಪುಸ್ತಕ ಕೊಡುವಂತೆ ವಿನಂತಿ ಮಾಡಬಹುದು.
- ಆ ಪುಸ್ತಕವನ್ನು ಒತ್ತಾಯದಿಂದ ಕಸಿದುಕೊಳ್ಳುವಿರಾ?

ಕೆಳಗಿನ ಅಂಶಗಳ ಬಗ್ಗೆ ಚರ್ಚೆ ಮಾಡಿರಿ–

1. ಈ ಎರಡೂ ಮಾರ್ಗಗಳ ಪರಿಣಾಮ ಏನಾಗಬಹುದು?
2. ಇವುಗಳಲ್ಲಿ ಯಾವ ಮಾರ್ಗವು ದೀರ್ಘಕಾಲ ನಡೆಯುವ, ಆನಂದಕೊಡುವ ಸಂಘರ್ಷವಿಲ್ಲದ ಮತ್ತು ಎರಡೂ ಬದಿಗಳ ಹಿತವನ್ನು ಬಯಸುವದ್ದಾಗಿದೆ ಎಂದು ನಿಮಗೆ ಅನಿಸುವದೇ?
3. ಒಂದುವೇಳೆ ಹೀಗೆಯೇ ಪ್ರತಿಯೊಬ್ಬನು ಬೇಕಾದದ್ದನ್ನು ಕಸಿದು ಕೊಳ್ಳಲು ಪ್ರಾರಂಭಿಸಿದರೆ ಮುಂದೆ ಅದರ ಪರಿಣಾಮವೇನಾಗಬಹುದು?
4. ಸಮಾಜವು ಆನಂದದಿಂದ, ಒಕ್ಕಟ್ಟಿನಿಂದ ಇರಬಹುದೇ?

**ತಿಳಿದು ಕೊಳ್ಳಿರಿ**

ಒಬ್ಬರೊಬ್ಬರಲ್ಲಿ ಬೆರೆತು ಒಕ್ಕಟಿನಿಂದ ಇರಲು 'ಒಬ್ಬರಿಗೊಬ್ಬರು ಸಹಕಾರರು ಮಾಡುವದು' ಇದು ಅತ್ಯಂತ ಮಹತ್ವದ್ದಾಗಿದೆ. ಅಂತೆಯೆ 'ಪ್ರತಿಯೊಬ್ಬರೊಡನೆ ಸಹಕಾರ ಮಾಡುವ' ಮೂಲ್ಯವನ್ನು ರಕ್ಷಿಸುವದು. ಅವಶ್ಯಕವಾಗಿದೆ.

**ಕೆಳಗಿನ ಅಂಶಗಳ ಕುರಿತು ವಿಚಾರ ಮಾಡಿರಿ. ಇಂಥ ಪ್ರಸಂಗಗಳಲ್ಲಿ ನಿಮಗೆ ಏನು ಅನಿಸುವದು?**

- ಮನೆಯಲ್ಲಿ ಒಬ್ಬರದ್ದೇ ಇಷ್ಟವಾದ ಟಿ. ವ್ಹಿ. ಚ್ಯಾನಲ್ ಹಚ್ಚಲಾಗುವದು.
- ಮನೆಯಲ್ಲಿ ಮಾಡಿದ ಯಾವುದೇ ಇಷ್ಟವಾದ ಪದಾರ್ಥವನ್ನು ಮನೆಯಲ್ಲಿಯ ಒಬ್ಬನೇ ತಿಂದು ಮುಗಿಸಿದ್ದಾನೆ. ಅಂತೆಯೇ ನಿಮಗೆ ಅದು ದೊರಕಿಲ್ಲ.
- ಗ್ಯಾದರಿಂಗದಲ್ಲಿ ನಿಶ್ಚಿತ ವಿದ್ಯಾರ್ಥಿಗಳಿಗೆ ಮಾತ್ರ ಸಾದರಪಡಿಸುವ ಅವಕಾಶ ದೊರಕಿದೆ.

1. ವಿದ್ಯಾರ್ಥಿಗಳಿಗೆ ಅವರ ಉತ್ತರಗಳ ಸ್ಪಷ್ಟೀಕರಣ ಮಾಡಲು ಹೇಳಿರಿ.
2. ಸರಿಯಾಗಿ ನೀಡಿದ ಅಂಶಗಳಿದ್ದರೆ ಅವರಿಗೆ ಹಿಡಿಸಬಹುದೇ?
3. ಹಿಡಿಸದಿದ್ದರ ನಿಶ್ಚಿತವಾಗಿ ಯಾವುದರ ತೊಂದರೆ ಯಾಗುತ್ತದೆ. ಈ ಕುರಿತು ಚರ್ಚಿಸಿರಿ.

**ಕೆಲವು ಪ್ರಶ್ನೆಗಳು**

ಇಷ್ಟವಾದ ಚ್ಯಾನಲ್ ನೋಡಲು ಬರುವದು, ಇಷ್ಟವಾದ ಪದಾರ್ಥ ತಿನ್ನಲು ಸಿಗುವದು ಮತ್ತು ಸಾದರಪಡಿಸಲು ಅವಕಾಶ ದೊರಕುವದು ಇವೆಲ್ಲವುಗಳು ನಿಮಗೆ ನಿಮ್ಮ ಹಕ್ಕುಗಳೆನಿಸುವವೆ? ನಿಮ್ಮ ಹಕ್ಕುಗಳನ್ನು ಬದಿಗಿರಿಸಿದರೆ ನಿಮಗೆ ಅದರ ತೊಂದರೆ ಯಾಗುವುದೇ? ನಿಮಗೆ ನಿಮ್ಮ ಯಾವ ಹಕ್ಕುಗಳಿವೆ ಎಂದು ಅನಿಸುವದು? ಇಂಥ ಕೆಲವು ವ್ಯಕ್ತಿಗತವಾದ ಹಕ್ಕುಗಳ ಯಾದಿಯನ್ನು ನಿಮ್ಮ ನೋಟಬುಕ್ಕಿನಲ್ಲಿ ತಯ್ಯಾರಿಸಿರಿ.

| ಅ.ಕ್ರ | ಹಕ್ಕುಗಳ ಹೆಸರು | ಅದರಲ್ಲಿ ಯಾವುದರ ಸಮಾವೇಶವಿದೆ |
|---|---|---|
| 1. | ಉದಾ. ಒಳ್ಳೆಯ ಶಿಕ್ಷಣದ ಹಕ್ಕು | ಎಲ್ಲ ವಿಷಯ ತಿಳಿಯುವದು, ಸರ್ವಾಂಗೀಣ ವಿಕಾಸವಾಗುವದು. |
| ...... | ............................................. | ................................................. |

ಇವುಗಳಲ್ಲಿಯ ಯಾವ ಹಕ್ಕುಗಳು ಇತರರಿಗೂ ಇವೆ ಎಂದು ನಿಮಗೆ ಅನಿಸುವದೆ?

ಈಗ ನಾವು ಇಂಥ ಕೆಲವು ಹಕ್ಕುಗಳ ಕುರಿತು ತಿಳಿದು ಕೊಳ್ಳೋಣ ಅವು ಎಲ್ಲರಿಗೂ ಸಮಾನವಾಗಿವೆ

- ಸುರಕ್ಷಿತತೆಯ ಹಕ್ಕು
- ಶಿಕ್ಷಣದ ಹಕ್ಕು
- ನಿರೋಗಿ ಅಯುಷ್ಯದ ಹಕ್ಕು
- ಶುದ್ಧ ಹವೆ, ನೀರು ಮತ್ತು ಅನ್ನ ದೊರಕಿಸುವ ಹಕ್ಕು



**ಸ್ವಲ್ಪ ವಿಚಾರ ಮಾಡಿರಿ**

ಮೇಲಿನ ಹಕ್ಕುಗಳು ಎಲ್ಲರಿಗೂ ಸಿಗಬೇಕೆಂದರೆ ತಮ್ಮ ಮೇಲೆ ಕೆಲವು ಹೊಣೆಗಾರಿಕೆ ಬರುವವೆ?

ಉದಾ. ಎಲ್ಲರಿಗೆ ಸುರಕ್ಷಿತತೆಯ ಹಕ್ಕು ಇದ್ದರೆ ಬರ ಹೋಗುವ ದಾರಿಯ ಇಲ್ಲವೆ ಸುರಕ್ಷಿತತೆಯ ನಿಯಮ ಪಾಲಿಸುವದು ತಮ್ಮ ಹೊಣೆಯಾಗಿದೆ. ಎಲ್ಲರಿಗೆ ನಿರೋಗಿ ಆಯುಷ್ಯ ದೊರೆಯುವದು ಇದು ಹಕ್ಕು ಇದ್ದರೆ ವ್ಯಸನ ಮಾಡದೇ ಇರುವದು, ಯೋಗ್ಯ ಆಹಾರ ಮತ್ತು ವ್ಯಾಯಾಮ ಮಾಡುವದು, ಸಾರ್ವಜನಿಕ ಸ್ವಚ್ಛತೆಯ ನಿಯಮ ಪಾಲಿಸುವದು ಇವು ನಮ್ಮ ಜವಾಬ್ದಾರಿಯಾಗಿವೆ. ಶುದ್ಧ ನೀರು ದೊರಕುವದು ಇದು ಹಕ್ಕಾಗಿದ್ದರೆ ನದಿಯಲ್ಲಿ ಕಸ ಚೆಲ್ಲದೆ ಇರುವದು ನಮ್ಮ ಹೊಣೆಯಾಗಿದೆ.

ಇನ್ನೂ ಒಂದು ಉದಾಹರಣೆ ನೋಡೋಣ

ಒಬ್ಬ ಡ್ರಾಯವ್ಹರನು ಸಿಗ್ನಲ ಪಾಲಿಸಿದನು ಇದರ ಹಿಂದೆ ಎರಡು ಸಾಧ್ಯತೆ ಗಳಿರಬಹುದು.

1. ಟ್ರಾಫಿಕ್ ಪೋಲಿಸ ಮುಂದೆ ನಿಂತಿದ್ದಾರೆ.
2. ಕೆಂಪು ಸಿಗ್ನಲ ಇದೆ. ಇದರ ಅರ್ಥ ನಿಲ್ಲುವದು.

ಮೊದಲನೆಯ ಸಾಧ್ಯತೆಯಲ್ಲಿ ಡ್ರೈವ್ಹರನು ತಪ್ಪ ಮಾಡಿದ್ದರೆ, ಅವನಿಗೆ ಶಿಕ್ಷೆಕೊಡುವ ಅಧಿಕಾರಉಳ್ಳ ವ್ಯಕ್ತಿ ಎದುರಿಗೆ ಇದ್ದಾನೆ. ಎರಡನೆಯ ಸಾಧ್ಯತೆಯಲ್ಲಿ ಸುರಕ್ಷಿತತೆ ಇದು ಎಲ್ಲರ ಹಕ್ಕಾಗಿದೆ. ಅದ್ದರಿಂದ ರಸ್ತೆಯ ನಿಮಯವನ್ನು ಪಾಲಿಸಬೇಕು. ಇದು ಅಂತರ್ಗತ ಪ್ರೇರಣೆಯಾಗಿದೆ.

ಇತರರ ಹಕ್ಕು ಸುರಕ್ಷಿತವಾಗಿ ಇರಲು ಯೋಗ್ಯವಾದ ಪರ್ಯಾಯ ಅಂತರಿಕ ಪ್ರೇರಣೆಯಿಂದ ಆರಿಸಬೇಕಾಗುವದು.

**ತಿಳಿದು ಕೊಳ್ಳಿರಿ**

ಪ್ರಜಾ ಪ್ರಭುತ್ವ ಇದೊಂದು ಶಾಸನ ಪದ್ದತಿಯಾಗಿದೆ ಎಂಬುದನ್ನು ನಾವು ಈ ಹಿಂದೆಯೇ ನೋಡಿದ್ದೇವೆ. ಆದರೆ ಪ್ರಜಾಪ್ರಭುತ್ವವು ಸಾಮರ್ಥ್ಯಶಾಲಿ ಯಾಗಲು ನಮ್ಮ ಜೀವನಶೈಲಿಯು ಕೂಡ ಪ್ರಜಾ ಪ್ರಭುತ್ವದ ಮೌಲ್ಯಗಳ ಮೇಲೆ ಆಧರಿಸಿ ಇರುವದು ಅವಶ್ಯಕವಾಗಿದೆ.
ಪ್ರಜಾ ಪ್ರಭುತ್ವ ಮೌಲ್ಯಗಳನ್ನಾಧರಿಸಿದ ಜೀವನ ಶೈಲಿ ಅಂದರೆ ಪ್ರತಿಯೊಬ್ಬ ವ್ಯಕ್ತಿಯ ಕುರಿತು ಆದರವನ್ನಿಡುವದು, ಸಹಕಾರ್ಯ ಮಾಡುವದು. ಸಹಕಾರ ಪಡೆಯುವದು, ಪ್ರತಿಯೊಬ್ಬರಿಗೂ ಆದರ ಮತ್ತು ಸನ್ಮಾನದಿಂದ ಜೀವಿಸುವ ಸಮಾನ ಹಕ್ಕು ಇದೇ ಎಂಬ ಅರಿವನ್ನು ಇಡುವದು, ಹಕ್ಕುಗಳ ಜೊತೆಗೆ ಬರುವ ಹೊಣೆಗಾರಿಕೆಯನ್ನು ಸ್ವೀಕರಿಸುವದು ಮತ್ತು ಅದಕ್ಕಾಗಿ ಅವಶ್ಯಕವಿರುವ ರಚನಾತ್ಮಕ ಕೃತಿ, ಇದು ಅಂತರಿಕ ಪ್ರೇರಣೆಯಿಂದ ಮಾಡುವದು. ನಿಮ್ಮ ಪುಸ್ತಕದಲ್ಲಿಯ ಪ್ರತಿಜ್ಞೆಯನ್ನು ಓದಿರಿ ಅದರಲ್ಲಿ ಏನು ಕಂಡುಬರುವದು?

## 6. ಪ್ರಜಾಪ್ರಭುತ್ವಕ್ಕೆ ಅಡಚಣೆ

ಪ್ರತಿಯೊಬ್ಬ ವ್ಯಕ್ತಿಯ ಕುರಿತು ಆದರಭಾವನೆ, ಸಹಕಾರ್ಯ, ಪ್ರತಿಯೊಬ್ಬ ವ್ಯಕ್ತಿಗೆ ಸಮಾನ ಹಕ್ಕು ಮತ್ತು ರಚನಾತ್ಮಕ ಕೃತಿ ಇವು ಅಂತರಿಕ ಪ್ರೇರಣೆಯಿಂದ ಮಾಡುವದು. ಈ ನಾಲ್ಕಕ್ಕೆ ಒಂದು ವೇಳೆ ಬಾಧೆ ಉಂಟಾದರೆ ಅದರ ಪರಿಣಾಮವಾಗಿ ಪ್ರಜಾಪ್ರಭುತ್ವಕ್ಕೆ ಅಡಚಣೆ ಉಂಟಾಗುವದು. ಆದ್ದರಿಂದ ನಾಗರಿಕನೆಂದು ಈ ನಾಲ್ಕು ಸಂಗತಿಗಳಿಗೆ ಧಕ್ಕೆಯುಂಟಾಗದಂತೆ ನಾವು ಲಕ್ಷ್ಯ ಕೊಡಬೇಕಾಗುವದು.


### ಪ್ರಜಾ ಪ್ರಭುತ್ವಕ್ಕೆ ಅಡಚಣೆಯನ್ನುಂಟು ಮಾಡುವ ಘಟಕಗಳು

### 1. ವ್ಯಕ್ತಿ-ವ್ಯಕ್ತಿಗಳಲ್ಲಿ ಭೇಧಭಾವ ಮಾಡುವದು.

**ಕಾಲ್ಪನಿಕ ಪ್ರಯೋಗ:**

ತಿಳಿಯಿರಿ, ನಿಮಗೆ ಒಂದು ಸಂಪೂರ್ಣವಾದ ನಿರ್ಜನವಾದ ದ್ವೀಪದ ಮೇಲೆ ಶಾಶ್ವತವಾಗಿ ವಾಸಮಾಡಲು ಹೋಗುವದಿದೆ. ನಿಮ್ಮ ಜೊತೆಗೆ ಐದು ಜನರನ್ನು ಕರೆದುಕೊಂಡು ಹೋಗಲು ನಿಮಗೆ ವ್ಯವಸ್ಥೆ ಮಾಡಿಲಾಗಿದೆ. ಹಾಗಾದರೆ ನೀವು ಯಾವ-ಯಾವ ವೈಶಿಷ್ಟ್ಯವುಳ್ಳ ಜನರನ್ನು ಕರೆದೊಯ್ಯುವಿರಿ?

ಆ ವೈಶಿಷ್ಟ್ಯಗಳ ಒಂದು ಯಾದಿಯನ್ನು ಮಾಡಿ ನಿಮ್ಮ ನೋಟಬುಕ್ಕಿನಲ್ಲಿ ಬರೆಯಿರಿ.



- ಪ್ರತಿಯೊಬ್ಬನು ಸ್ವಂತದ ಹಾಗೆಯೇ ವೈಶಿಷ್ಟ್ಯವುಳ್ಳ ಐದು ಜನರನ್ನು ಆರಿಸಿದರೆ ಅದರಲ್ಲಿ ಬೇರೆತನ ಬರುವುದೆ?
- ಒಂದು ವೇಳೆ ಪ್ರತಿಯೊಬ್ಬ ವ್ಯಕ್ತಿಗೆ ನಿಮಗೆ ಬರುವ ಕೌಶಲ್ಯಗಳೇ ಬಂದರೆ, ಪ್ರತಿಯೊಬ್ಬರು ಒಂದೇ ಪ್ರಕಾರದ ವ್ಯವಸಾಯ ಮಾಡುತ್ತಿದ್ದರೆ ಜಗತ್ತು ನಡೆಯುವುದೇ?
- ಯಾವುದೇ ಕೆಲಸ ಶ್ರೇಷ್ಠ ಮತ್ತು ಯಾವುದೇ ಕೆಲಸ ಕನಿಷ್ಠವೆಂದು ನಿರ್ಧರಿಸಲು ಬರುವುದೇ?
- ನೀವು ಯಾವುದೇ ಕೆಲಸದ ಮೌಲ್ಯವನ್ನು ಹೇಗೆ ನಿರ್ಧರಿಸುವಿರಿ?

ವಿದ್ಯಾರ್ಥಿಗಳ ಯಾದಿ ಮಾಡಿದ ನಂತರ ಅವರೊಂದಿಗೆ ಕೊಟ್ಟ ಅಂಶಗಳ ಮೇಲೆ ಚರ್ಚೆಮಾಡಿರಿ.
ಪ್ರತಿಯೊಬ್ಬ ವ್ಯಕ್ತಿ ತನ್ನ ಸ್ಥಾನದಲ್ಲಿ ಮಹತ್ವದ ಕೆಲಸ ಮಾಡುತ್ತಿರುತ್ತಾನೆ ಮತ್ತು ಈ ವಿವಿಧತೆಯಿಂದಲೇ ನಮ್ಮದೇಶ ಮತ್ತು ಪರ್ಯಾಯವಾಗಿ ನಮ್ಮ ಜಗತ್ತು ನಡೆದಿದೆ ಎಂಬ ಮಾತನ್ನು ವಿದ್ಯಾರ್ಥಿಗಳಿಗೆ ಅರಿಕೆ ಮಾಡಿ ಕೊಡಿರಿ.
ಇದರಿಂದ ಪ್ರತಿಯೊಬ್ಬ ವ್ಯಕ್ತಿಗೆ ಆದರದಿಂದ ಮತ್ತು ಆತ್ಮಸನ್ಮಾನದಿಂದ ಜೀವಿಸುವ ಸಮಾನ ಹಕ್ಕು ಇರುತ್ತದೆ. ಇದರ ಅರಿವು ಸತತವಾಗಿ ಇಡಬೇಕಾಗಿದೆ.

## 2. ವಿವಿಧ ಜೀವನ ಶೈಲಿಗಳಲ್ಲಿ ಭೇದ-ಭಾವ ಮಾಡುವದು.

ವಿದ್ಯಾರ್ಥಿಗಳ ಯಾದಿಯಾದನಂತರ, ಅದರಲ್ಲಿ ಎಷ್ಟು ಅಂಶಗಳು ಇಲ್ಲವೆ ವ್ಯಕ್ತಿಗಳು ಅವರ ಪರಿಸರದವರಾಗಿಲ್ಲ, ಇತರ ಭೂ ಭಾಗ ರಾಜ್ಯಗಳು ಇಲ್ಲವೆ ದೇಶಗಳಿಂದ ಬಂದಿವೆ ಎಂಬುದರ ಬಗ್ಗೆ ಚರ್ಚೆ ಮಾಡಿರಿ.
ಇತರ ಜನರ ಜೀವನ ಶೈಲಿಯಲ್ಲಿಯ ಎಷ್ಟು ಸಂಗತಿಗಳು ತಮಗೆ ಹಿಡಿಸಿವೆ ಎಂದು ತಾವು ಸ್ವೀಕರಿಸಿದ್ದೇವೆ? ಆಗ ತಮ್ಮದೆ ಜೀವನಶೈಲಿ ಶ್ರೇಷ್ಠವೆಂದು ತಮಗೆ ಅನ್ನಲು ಬರಬಹುದೇ?

ನಿಮಗೆ ಹಿಡಿಸುವ/ಇಷ್ಟವಾದ ಕೆಳಗಿನ ಅಂಶಗಳ ಯಾದಿ ಸಿದ್ದಪಡಿಸಿರಿ

1. ಅನ್ನ ಪದಾರ್ಥ- (ಇದರಲ್ಲಿ ರುಚಿ, ಕಾರ ಹಾಗೆಯೆ ಎಲ್ಲಪ್ರಕಾರದ ಅಡುಗೆ ಕೃತಿಗಳ ವಿಚಾರವಾಗಬೇಕು)
2. ಸಂಗೀತ ಪ್ರಕಾರ, ವಾದ್ಯಗಳ ಪ್ರಕಾರ
3. ಬಟ್ಟೆಗಳ ಪ್ರಕಾರ
4. ಹಬ್ಬ ಉತ್ಸವ
5. ಸಿನೇಮಾ/ನಾಟಕಗಳ ಪ್ರಕಾರ
6. ಆಟಗಳ ಪ್ರಕಾರ
7. ಕಲಾವಿದ/ಕಲಾವಿದೆ/ಗಾಯಕ/ಗಾಯಿಕೆ
8. ಚಿತ್ರಕಲೆ, ಶಿಲ್ಪಕಲೆ

## 3. ಸಾರ್ವಜನಿಕ ಆಸ್ತಿಯ ಹಾನಿ ಮತ್ತು ಜನ ಸಂದಟ್ಟನೆಯ ಮಾನಸೀಕತೆ

**ಸುದ್ದಿಗಳನ್ನು ಶೋಧಿಸಿರಿ:**

ಹಳೆಯ ವೃತ್ತಪತ್ರಿಕೆಯಲ್ಲಿಯ ಕತ್ತರಿಸಿದ ಗಲಭೆಯ, ಹಿಂಸಾತ್ಮಕ ಆಂದೋಲನಗಳಲ್ಲಿಯ ಸುದ್ದಿಗಳನ್ನು ಹುಡುಕಿ ಅದರಲ್ಲಿ ಎಷ್ಟು ವಾಹನಗಳು, ಬಸ್ಸುಗಳ ಹಾನಿಯಾಯಿತು, ಸಾರ್ವಜನಿಕ ಆಸ್ತಿಯು ಎಷ್ಟು ಹಾಳಾಯಿತು. ಇದರಿಂದ ಎಷ್ಟೊಂದು ಹಣ ವ್ಯರ್ಥ ಹಾಳಾಯಿತು ಎಂಬುದರ ಅಂದಾಜು ತೆಗೆಯಿರಿ.

ಜನರು ಹೀಗೇಕೆ ವರ್ತಿಸುವರು? ಸಾರ್ವಜನಿಕ ಆಸ್ತಿಯ ಹಾನಿಯನ್ನು ಏಕೆ ಮಾಡುವರು? ಅದಕ್ಕಾಗಿ ನಾವು ಜನದಟ್ಟನೆಯ ಮಾನಸಿಕತೆಯನ್ನು ತಿಳಿದುಕೊಳ್ಳೋಣ

- ನಾಶವಾದ ಸುದ್ದಿಗಳಿಂದ ವಿದ್ಯಾರ್ಥಿಗಳಿಗೆ ಹಾನಿಯ ಅಂದಾಜು ಕಟ್ಟಲು ಸಹಾಯ ಮಾಡಿರಿ.
- ಸರಕಾರದ ಹಣವೆಂದರೆ ಜನತೆಯ ಹಣ ವೆಂಬುದನ್ನು ತಿಳಿಸಿ ಹೇಳಿರಿ.
- ಜನದಟ್ಟನೆಯ ಮಾನಸಿಕತೆಯ ಮತ್ತಷ್ಟು ಉದಾಹರಣೆಗಳನ್ನು ಶೋಧಿಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಿರಿ.

**ಜನದಟ್ಟಣೆಯ ಮಾನಸೀಕತೆ:**

ಬಹಳ ಸಲ ಕಂಡು ಬರುವದೇನಂದರೆ, ಜನರ ಮನಸ್ಸಿನಲ್ಲಿ ಕೆಲವು ಅಂಶಗಳಕುರಿತು ಒಂದು ಸುಪ್ತವಾದ ಸಿಟ್ಟು ಇರುವದು ಗಲಭೆ ಇಲ್ಲವೆ ಆಂದೋಲನಗಳ ಕಾರಣದಿಂದ ಅದು ಹೊರಬೀಳುವದು. ಹಾಗೆಯೇ ಹಲವಾರು ಸಲ ಕೆಲವು ವ್ಯಕ್ತಿಗಳು, ಜನರ ಭಾವ ನೆಗಳನ್ನು ಕೆಣಕುವಂತೆ ಭಾಷಣೆ ಮಾಡುವರು. ಅದನ್ನು ಕೇಳಿ ಜನರು ಕ್ರೋಧಿತರಾಗಿ ಇಂಥ ಕೃತಿಗಳನ್ನು ಮಾಡುವ ಸಾಧ್ಯತೆ ಇರುವದು.

ಗಲಭೆಗಳಲ್ಲಿ ಬಹಳಷ್ಟು ಜನರು ಭಾಗವಹಿಸುವದರಿಂದ ಘಟಿಸುವ ಹಾನಿಗೆ ತಾವು ಹೊಣೆಗಾರರಲ್ಲ ಎಂದು ಪ್ರತಿಯೊಬ್ಬರಿಗೆ ಅನಿಸುವದು. ಗದ್ದಲದಲ್ಲಿ ತಮ್ಮ ಮುಖ, ತಮ್ಮ ಪರಿಚಯ ಸಹಜವಾಗಿ ಮುಚ್ಚಿ ಹೋಗುವದು ಇದರಿಂದ ಇದು ಒಂದು ರೀತಿಯಿಂದ ಸುರಕ್ಷಿತ ವೆನಿಸುವದು, ಅಂತೆಯೇ ಕ್ರೂರ ಕೃತ್ಯಮಾಡಲು ಧೈರ್ಯವೂ ಹೆಚ್ಚುವದು.

- ಹೀಗೆ ಸಾರ್ವಜನಿಕ ಆಸ್ತಿಪಾಸ್ತಿಯ ಹಾನಿಮಾಡುವದು ನಿಮಗೆ ಯೋಗ್ಯವೆನಿಸುವದೇ?
- ಪ್ರಾಚೀನ ಕಟ್ಟಡಗಳು, ಕೋಟೆಗಳ ಮೇಲೆ ಇಲ್ಲಸಲ್ಲದ ವಿಷಯಗಳನ್ನು ಕೆತ್ತುವದು, ಬಸ್ಸುಗಳಲ್ಲಿಯ ಸೀಟುಗಳನ್ನು ಹರಿಯುವದು, ದಾರಿಯ ಮೇಲೆ ಒಳ್ಳೆಯ ಸ್ಥಳದಲ್ಲಿ ಉಗುಳುವದು, ನೈಸರ್ಗಿಕ ವಿಧಿಗಳನ್ನು ಮಾಡುವದು. ಇವೆಲ್ಲ ಸಾರ್ವಜನಿಕ ಆಸ್ತಿಪಾಸ್ತಿಯ ಹಾನಿಮಾಡುವ ಉದಾಹರಣೆಗಳಾಗಿವೆ
- ನಿಮ್ಮ ನೋಡುವಿಕೆಯಲ್ಲಿ ಇಂಥ ಕೆಲವು ಉದಾಹರಣೆಗಳು ಬಂದಿವೆಯೇ?
- ಸಾರ್ವಜನಿಕ ಆಸ್ತಿಪಾಸ್ತಿಯ ಹಾನಿ ಮಾಡಿದ್ದರಿಂದ ಪ್ರಜಾಪ್ರಭುತ್ವದ ಯಾವ ಮೂಲಭೂತ ಮೂಲ್ಯಕ್ಕೆ ಧಕ್ಕೆ ತಗಲುವದು?

## 4. ಸತ್ಯ ಮತ್ತು ವೈಯಕ್ತಿಕ ಅಭಿಪ್ರಾಯ

ನವೀನ ಮತ್ತು ಜಾರ್ಜ ಇವರಿಬ್ಬರು ಮಿತ್ರರಿರುತ್ತಾರೆ ಒಂದು ದಿವಸ ನವೀನ ನೆನ್ನುವನು, ಭಾರತದಲ್ಲಿಯ ‘ಅ’ ಆಟಗಾರನು ಜಗತ್ತಿನಲ್ಲಿಯೇ ಎಲ್ಲಕ್ಕೂ ಶ್ರೇಷ್ಠನಾಗಿದ್ದಾನೆ. ಅದನ್ನು ಕೇಳಿ ಜಾರ್ಜನೆನ್ನುವನು ಹಾಗೇನ್ನಿಲ್ಲ ಆಷ್ಟ್ರೇಲಿಯಾದ ‘ಬ’ ಆಟಗಾರನು ಜಗತ್ತಿನಲ್ಲಿ ಎಲ್ಲಕ್ಕೂ ಶ್ರೇಷ್ಠನಾಗಿದ್ದಾನೆ. ಇದನ್ನು ಕೇಳಿ ನವೀನ ದುಃಖಿಯಾಗುವನು. ಭಾರತದ ಮೇಲೆ ಜಾರ್ಜನ ಪ್ರೇಮವಿಲ್ಲ, ಅವನು ಸುಳ್ಳುಗಾರ ನಾಗಿದ್ದಾನೆ ಎಂದು ಅವನಿಗೆ ಅನಿಸುವದು ಅವನ ಮತ್ತು ಜಾರ್ಜನ ನಡುವೆ ದೊಡ್ಡ ಜಗಳ ವಾಗುತ್ತದೆ.

‘ಜಗತ್ತಿನಲ್ಲಿಯ ಎಲ್ಲಕ್ಕೂ ಶ್ರೇಷ್ಠ ಆಟಗಾರನಾರು?’ ಈ ಕುರಿತು ಪ್ರತಿಯೊಬ್ಬರ ವೈಯಕ್ತಿಕ ಮತವು ಭಿನ್ನವಾಗಿರಬಹುದು. ಈ ಬಗ್ಗೆ ಒಂದೇ ಶಾಶ್ವತ ಸತ್ಯ ಇರುತ್ತದೆಂದಲ್ಲ. ಸರ್ವಶ್ರೇಷ್ಠ ಆಟಗಾರನೆಂದು ವಿಶಿಷ್ಟ ಒರೆಗಲ್ಲಿನಿಂದ ನಿರ್ಧರಿಸಲಾಗುವದು.

## 5. ಮಾಹಿತಿಯನ್ನು ಪರೀಕ್ಷಿಸದೇ ನಿರ್ಧಾರ ತಗೆದುಕೊಳ್ಳುವದು

ಪವನನ ಹೊಲಕ್ಕೆ ಬೆಂಕಿ ಹತ್ತುವದು. ಆ ಬೆಂಕಿಯನ್ನು ಬೇರೆಯವರು ಹಚ್ಚಿದ್ದಾರೆಂದು ಅವನಿಗೆ ತಿಳಿಯಿತು. ಅವನು ತನ್ನ ಜನರನ್ನು ಕರೆತಂದು ಬೇರೆಯವರ ಹೊಲದ ಹಾನಿ ಮಾಡುವನು. ಪೋಲಿಸರಬಳಿ ತಕರಾರು ಬರುವದು. ಕೊನೆಗೆ ವಿಚಾರಣೆನಡೆಸಿದಾಗ ಪವನನ ಹೊಲಕ್ಕೆ ಕಾಡಬೆಂಕಿಯಿಂದ ಉರಿಹತ್ತಿದ್ದು ನಿಷ್ಪನ್ನವಾಯಿತು ಪವನನಿಗೆ ಶಿಕ್ಷೆಯಾಯಿತು. ತಮಗೆ ದೊರಕಿದ ಮಾಹಿತಿಯನ್ನು ಪರೀಕ್ಷಿಸದೆ ಕೇವಲ ಕೇಳಿಕೆಯ ಮಾಹಿತಿಯ ಮೇಲೆ ವಿಶ್ವಾಸ ವಿಡುವದರಿಂದ ನಾವು ಎರಡನೆಯವರ ಮೇಲೆ ಅನ್ಯಾಯ ಮಾಡುವ, ಕಠಿಣ ನಿರ್ಣಯ ತಗೆದು ಕೊಳ್ಳುವ, ಕೃತಿ ಮಾಡುವ ಸಾಧ್ಯತೆ ನಿರ್ಮಾಣವಾಗುವದು.

## 7. ವೈಯಕ್ತಿಕ ಚಿಕ್ಕ ಕೃತಿ ಮತ್ತು ಅದರ ವ್ಯಾಪಕ ಪರಿಣಾಮ

ಕಂಡುಬಂದ ಸಂಗತಿಯಂದರೆ, ವಿವಿಧ ಮಾಧ್ಯಮಗಳಿಂದ ಮತ್ತು ಶಾಲೆಯಲ್ಲಿ ಮಾಡಿದ ಜನಜಾಗೃತಿಯಿಂದ ಪಟಾಕಿ ಸಿಡಿಸುವ ಪ್ರಮಾಣವು ಮತ್ತು ಅದರಿಂದಾಗುವ ಪ್ರದೂಷಣೆ ಮೆಲ್ಲ ಮೆಲ್ಲನೆ ಕಡಿಮೆ ಯಾಗುತ್ತಿದೆ. ಅಂದರೇನೆ ಪ್ರತಿಯೊಬ್ಬ ನಾಗರಿಕನು ತನ್ನ ಪರಿಯಿಂದ ಮಾಡಿದ ಚಿಕ್ಕ ಚಿಕ್ಕ ಕೃತಿಗಳಿಂದ ಕೂಡ ರಾಷ್ಟ್ರಮಟ್ಟದ ಮೇಲೂ ದೊಡ್ಡ ಪರಿಣಾಮ ಘಟಿಸುವದು ಇಲ್ಲವೆ ಘಟಿಸುವಂತೆ ಮಾಡಲು ಬರುವದು.

### ವೈಯಕ್ತಿಕ ಚಿಕ್ಕ ಕೃತಿ ಮತ್ತು ಅದರ ವ್ಯಾಪಕ ಪರಿಣಾಮ - ಕೆಲವು ಉದಾಹರಣೆಗಳು



- ಎಲ್ಲಿ ವಿದ್ಯುತ್, ನೀರು ಇಂಥ ಸೌಲಭ್ಯಗಳು ಸಾಕಷ್ಟವೆ. ಅವರು ಅವುಗಳ ಉಳಿತಾಯ ಮಾಡಿದರೆ ಆ ಸಂಸಾಧನೆಗಳು ಪ್ರತಿಯೊಬ್ಬರಿಗೆ ಸಾಕಷ್ಟು ಪ್ರಮಾಣದಲ್ಲಿ ಸಿಗುವವು.
- ನಮಗೆ ಬಹಳ ಕಡಿಮೆ ದರದಲ್ಲಿ ಸಾರ್ವಜನಿಕ ಸಾರಿಗೆ ಸಂಪರ್ಕ ಸಾಧನಗಳು (ಬಸ್ಸು, ರೈಲು, ಮುಂತಾದವು) ದೊರೆಯುತ್ತವೆ. ನಾವು ಆ ಸಾಧನಗಳ ಹೆಚ್ಚೆಚ್ಚು ಉಪಯೋಗ ಮಾಡಿದರೆ ವ್ಯವಸ್ಥೆಗೆ ಅದರಿಂದ ಅರ್ಥಿಕ ಲಾಭವಾಗಬಹುದು ಮತ್ತು ಅದರಿಂದ ನಮಗೆ ಹೆಚ್ಚು ಒಳ್ಳೆಯ ಸಾಧನಗಳು ದೊರಕಬಹುದು.
- ನಾವು ಕರವನ್ನು ಕೊಡುತ್ತೇವೆ. ಮತದಾನ ಮಾಡುತ್ತೇವೆ. ಇವು ಕೂಡಾ ಪ್ರತಿಯೊಬ್ಬನು ಪ್ರಾಮಾಣಿಕವಾಗಿ ಮಾಡಿದರೆ ದೇಶದ ಏಳ್ಗೆಯಾಗಲು ಸಹಾಯವಾಗುವದು.

## 8. ಹೊಣೆಗಾರ ನಾಗರಿಕರಾರು?

ಇಲ್ಲಿಯವರೆಗೆ ಆದ ಚರ್ಚೆಯಿಂದ ಕೆಳಗಿನವುಗಳಲ್ಲಿ ಯಾವ ವ್ಯಕ್ತಿಗೆ ನೀವು ಹೊಣೆಗಾರ ನಾಗರಿಕರೆನ್ನುವಿರಿ?

- ಯಾವ ವ್ಯಕ್ತಿಯು ಮತದಾನ ಮಾಡುವದಿಲ್ಲ.
- ಯಾವ ವ್ಯಕ್ತಿಯು ಪ್ರಾಮಾಣಿಕವಾಗಿ ತನ್ನ ದಿನನಿತ್ಯದ ಕೆಲಸಗಳನ್ನು ನಿಯಮದಂತೆ ಮಾಡುವನು.
- ಇಂಥ ವ್ಯಕ್ತಿಯು ದೇಶಕುರಿತು ಬಹಳ ಪ್ರೇಮ ವಿದ್ದದನ್ನು ಹೇಳುವನು ಆದರೆ ರಸ್ತೆಯ ಮೇಲೆ ಉಗುಳುವನು.
- ಯಾವ ವ್ಯಕ್ತಿ ಸಿಗ್ನಲನ್ನು ಪಾಲಿಸುವದಿಲ್ಲ.
- ಯಾವ ವ್ಯಕ್ತಿಯು ಒಂದು ಗುಂಪಿನ ವಿರುದ್ಧ ಎರಡನೆಯವರಲ್ಲಿ ಅಸಂತೋಷ ಪಸರಿಸುವನು, ಒಡಕನ್ನುಂಟು ಮಾಡುವ ಪ್ರಯತ್ನ ಮಾಡುವನು.
- ಒಬ್ಬ ವ್ಯಕ್ತಿಯು ತನ್ನ ಕಡೆಗೆ ಕೆಲಸಮಾಡುವ ಸಿಬ್ಬಂದಿಯನ್ನು ತುಚ್ಚವೆಂದು ತಿಳಿಯುವನು.
- ಒಬ್ಬ ವ್ಯಕ್ತಿಯು ಎಲ್ಲರೊಡನೆ ಕೂಡಿ ಪ್ರೇಮದಿಂದ ವರ್ತಿಸುವನು.



**ತಿಳಿದುಕೊಳ್ಳಿರಿ**

ಕೇವಲ ದೇಶದ ನಾಗರಿಕರೆಂದಿಷ್ಟೇಲ್ಲಿಲ್ಲ, ಮನೆಯಲ್ಲಿಯ ಸದಸ್ಯರು, ಶಾಲೆಯ ವಿದ್ಯಾರ್ಥಿಗಳು ಸಹ ನಾವು ಸಮಾಜದ ಅಂಗ ವಾಗಿರುತ್ತೇವೆ. ಅಲ್ಲಿಯೂ ಕೂಡ ನಮಗೆ ಎಲ್ಲರೊಡನೆ ಬೆರೆತು ಇರಬೇಕಾಗುತ್ತದೆ.

ಹಾಗಾದರೆ, ಈ ಎಲ್ಲ ಸ್ಥಳಗಳಲ್ಲಿಯೂ ಪ್ರಜಾಪ್ರಭುತ್ವದ ಮೂಲ್ಯಗಳು ಮಹತ್ವದ್ದೆಂದು ನಿರ್ಧರಿಸಲಾಗುವದಿಲ್ಲವೆ? ಸ್ವಲ್ಪದರಲ್ಲಿ ಹೇಳುವುದಾದರೆ. ಪ್ರಜಾಪ್ರಭುತ್ವವು ಕೇವಲ ರಾಜ್ಯವ್ಯವಸ್ಥೆಯ ಮಟ್ಟಿಗೆ ಸೀಮಿತವಾಗಿರದೆ. ಅದು ಒಂದು ಜೀವನಶೈಲಿ ಯಾಗಿರಬೇಕು.

## 9. ಮನೆಯಲ್ಲಿಯ ಪ್ರಜಾಪ್ರಭುತ್ವ

ಪ್ರತಿಯೊಬ್ಬ ವಿದ್ಯಾರ್ಥಿಯು ಕೆಳಗಿನ ಪ್ರಶ್ನಾವಳಿಯನ್ನ ಸ್ವತಃ ಪ್ರಾಮಾಣಿಕವಾಗಿ ಬಿಡಿಸಿ ತಮ್ಮ ಮನೆಯ ಕುರಿತು ಯಾವ ಚಿತ್ರ ಮುಂದೆ ಬರುವದು. ಅದರ ಮೇಲೆ ವಿಚಾರ ಮಾಡಿರಿ. ನಿಮಗೆ ಅನಿಸಿದರೆ ಈ ಪ್ರಶ್ನಾವಳಿಯನ್ನು ಗುಪ್ತವಾಗಿಇರಿಸಬಹುದು.

| ಮನೆಯಲ್ಲಿಯ ಪ್ರಜಾ ಪ್ರಭುತ್ವ | ಪೂರ್ಣತಃ ಮಾನ್ಯತೆ | ಮಾನ್ಯತೆ | ಅಮಾನ್ಯತೆ | ಪೂರ್ಣತಃ ಅಮಾನ್ಯತೆ |
|---|---|---|---|---|
| ಯಾರು ಯಾರ ಅಪಮಾನ ಮಾಡುವದಿಲ್ಲ | | | | |
| ದೊಡ್ಡ ನಿರ್ಣಯ ತಗೆದು ಕೊಳ್ಳುವಾಗ ಎಲ್ಲರ ಅಭಿಪ್ರಾಯ ಕೇಳಲಾಗುವದು, ಕಡಿಮೆಯಂದರೂ ಕೇಳಲಾಗುತ್ತದೆ | | | | |
| ಆರ್ಥಿಕ ನಿಯೋಜನೆಯಲ್ಲಿ ನೀವು ಚಿಕ್ಕವರಾದರೂ ಸಹಭಾಗವಿದೆ. | | | | |
| ಮನೆಯಲ್ಲಿಯ ಪುರುಷರೂ ಕೂಡಾ ಅಡುಗೆಯಲ್ಲಿ, ಮನೆಗೆಲಸದಲ್ಲಿ ಸಾಧ್ಯವಾದಷ್ಟು ಸಹಾಯ ಮಾಡುವರು. | | | | |
| ಮನೆಯಲ್ಲಿಯ ಹೆಣ್ಣು ಮಕ್ಕಳು ಸಹ ಸಾಧ್ಯವಾದಷ್ಟು ಹೊರಗಿನ ಕೆಲಸ ಮಾಡುವರು. | | | | |
| ಮನೆಯಲ್ಲಿರಲು ಕೆಲವು ನಿರ್ಧರಿಸಿದ ನಿಮಯಗಳಿವೆ, ಅವು ನಿಮ್ಮ ತಂದೆತಾಯಿ ಸಹಿತ ಎಲ್ಲರಿಗೂ ಸಮಾನವಾಗಿವೆ. | | | | |
| ಯಾವುದೇ ವಿಷಯದ ಮೇಲೆ ಭಿನ್ನಾಭಿಪ್ರಾಯವಿದ್ದರೆ ಅದನ್ನು ಸಾಮಂಜಸ್ಯದಿಂದ ಬಿಡಿಸಲಾಗುವದು. | | | | |
| ನಿಮ್ಮ ಸಹೋದರ/ಸಹೊದರಿಯವರಿಗೆ ನಿಮ್ಮಂತೆ ವರ್ತಿಸಲಾಗುವದು ಎಲ್ಲ ಹುಡುಗ/ಹುಡುಗಿಯರಿಗೆ ಸಮಾನವೆಂದು ತಿಳಿಯಲಾಗುತ್ತದೆ. | | | | |
| ಮನೆಯಲ್ಲಿಯ ಉಪಲಬ್ಧಿಗಳನ್ನು ಉಪಯೋಗಿಸುವ ಹಕ್ಕು ಎಲ್ಲರಿಗೂ ಸಮಾನವಾಗಿದೆ. | | | | |

### ಸ್ವಲ್ಪ ಮೋಜು ಮಾಡೋಣ

ಇಂಥದ್ದೇ ಪ್ರಶ್ನಾವಳಿಯನ್ನು ತಮ್ಮ ಶಾಲೆಯ ಕುರಿತು ಮಾಡಲು ಬರಬಹುದೆ? ಗುಂಪಿನಲ್ಲಿ ವಿಭಾಗಿಸಿ ಪ್ರಶ್ನಾವಳಿಯನ್ನು ತಯ್ಯಾರಿಸಿರಿ. ನಿಮ್ಮಲ್ಲಿ ಸ್ವಂತದರಲ್ಲಿ, ಸ್ವಂತದ ಮನೆಯಲ್ಲಿ ಇಲ್ಲವೆ ಶಾಲೆಯ ವಾತಾವರಣದಲ್ಲಿ ಕೆಲವು ಬದಲಾವಣೆ ಮಾಡುವ ಅವಶ್ಯಕತೆ ಅನಿಸುತ್ತದೆಯೆ?

ಪ್ರಜಾಪ್ರಭುತ್ವ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು.

# 1. ತಿಳಿದು ಕೊಳ್ಳಿರಿ

ಪ್ರಜಾಪ್ರಭುತ್ವ ಜೀವನಶೈಲಿಯ ನಾಲ್ಕು ಮೂಲ್ಯಗಳನ್ನು ಸರಿಯಾಗಿ ತಿಳಿದುಕೊಳ್ಳಿರಿ (ಅದರಲ್ಲಿ ಏನಾದರೂ ಪ್ರಶ್ನೆ ಇದ್ದರೆ ಶಿಕ್ಷಕರಿಗೆ ಕೇಳಿರಿ)

# 2. ಗುರುತಿಸಿರಿ

ನೀವು ಬರೆದ ಪ್ರಶ್ನಾವಳಿಯಿಂದ ಸ್ವಂತದರಲ್ಲಿ ಏನಾದರೂ ಬದಲಾವಣೆ ತರುವ ಅವಶ್ಯಕತೆ ಅನಿಸುವದೆ? ಮನೆಯಲ್ಲಿಯ ವಾತಾವರಣ ಇಲ್ಲವೆ ಶಾಲೆಯಲ್ಲಿಯ ವಾತಾವರಣವನ್ನು ಪ್ರಜಾಪ್ರಭುತ್ವ ಪದ್ದತಿಯಂತೆ ಬದಲಿಸುವ ಅವಶ್ಯಕತೆ ಅನಿಸುತ್ತದೆಯೆ?

# 3. ಆವ್ಹಾನ ಕೊಡಿರಿ

ಕುಟುಂಬದಲ್ಲಿ ಏನಾದರೂ ಬದಲಾವಣೆ ತರುವದಿದ್ದರೆ ನಿಮ್ಮ ಪಾಲಕರೊಂದಿಗೆ ಪ್ರಜಾಪ್ರಭುತ್ವ ತತ್ವಗಳ ಕುರಿತು ಚರ್ಚೆ ಮಾಡಿರಿ. ಶಾಲೆಯ ಸಂದರ್ಭದಲ್ಲಿ ಬದಲಾವಣೆ ಮಾಡಲು ಶಿಕ್ಷಕರೊಂದಿಗೆ, ಮುಖ್ಯಗುರುಗಳೊಂದಿಗೆ ಮಾತನಾಡಿರಿ. ಸ್ವಾತಂತ್ರ್ಯ ಮತ್ತು ಹೊಣೆಗಾರಿಕೆ ಇವುಗಳ ಜೊತೆ ಗೊಳಿಸುವಿಕೆಯನ್ನು ಹೇಗೆ ಮಾಡಲು ಬರಬಹುದೆಂಬ ವಿಚಾರ ಮಾಡಿರಿ.

# 4. ಕಾರ್ಯರೂಪಕ್ಕೆ ತನ್ನಿರಿ

ನೀವು ನಿರ್ಧರಿಸಿದ ಬದಲಾವಣೆಯನ್ನು ಕಾರ್ಯರೂಪಕ್ಕೆ ತನ್ನಿರಿ. ಒಂದು ವೇಳೆ ಪ್ರಯೋಗವು ಯಶಸ್ವಿಯಾಗದಿದ್ದರೆ ಅದರ ಮೇಲೆ ಚರ್ಚೆ ಮಾಡಿ ಸರ್ವರ ಅನುಮತಿಯಿಂದ ಅದರಲ್ಲಿ ಬದಲಾವಣೆ ಮಾಡಿರಿ.

F9664I

## ಮೌಲ್ಯಮಾಪನ (ಭಾರಾಂಶ 15%)

| ಒರೆಗಲ್ಲು | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಅಂಕಗಳು |
|---|---|---|---|---|
| ಸ್ವಂತದ ಮನೆಯಲ್ಲಿಯ ಪರಿಸ್ಥಿತಿಯ ಬಗ್ಗೆ ಪ್ರಶ್ನಾವಳಿ | ಸ್ವಂತದ ಮನೆಯಲ್ಲಿಯ ಪರಿಸ್ಥಿತಿಯ ಬಗ್ಗೆ ಪ್ರಶ್ನಾವಳಿಯನ್ನು ಪ್ರಾಮಾಣಿಕವಾಗಿ ತುಂಬಲಾಯಿತು. ಎಲ್ಲಿ ಪ್ರಜಾಪ್ರಭುತ್ವ ಜೀವನಶೈಲಿ ಪಾಲಿಸಲಾಗಲಿಲ್ಲ, ಆಕುರಿತು ಏನು ಬದಲಾವಣೆ ಮಾಡಬಹುದು ಎಂಬುದರ ನಿಯೋಜನೆ ಮಾಡಲಾಯಿತು | ಪ್ರಶ್ನಾವಳಿ ತುಂಬಲಾಯಿತು ಆದರೆ ಅಲ್ಲಿ ಪ್ರಜಾಪ್ರಭುತ್ವ ಜೀವನಶೈಲಿ ಪಾಲಿಸಲಾಗಲಿಲ್ಲ ಆದರ ಕುರಿತು ಏನೇನೂ ಮಾಡಲಿಲ್ಲ | ಪಶ್ನಾವಳಿ ತುಂಬಲಿಲ್ಲ | |
| ಇತರ ದೇಶಗಳ ರಾಜ್ಯ ವ್ಯವಸ್ಥೆ | ಇತರ ದೇಶಗಳ ರಾಜ್ಯವ್ಯವಸ್ಥೆಯ ಬಗ್ಗೆ ಸ್ಪಷ್ಟ ಶಬ್ದಗಳಲ್ಲಿ ಬರೆಯಲು ಬಂದಿತು. ಹಾಗೆಯೇ ಅವುಗಳಲ್ಲಿಯ ಅಂತರ ಗುರುತಿಸಲಾಯಿತು. | ಇತರ ದೇಶಗಳ ರಾಜ್ಯವ್ಯವಸ್ಥೆಯ ಕುರಿತು ಬರೆಯಲು ಬಂದಿತು ಆದರೆ ಅವುಗಳಲ್ಲಿಯ ಅಂತರ ಗುರುತಿಸಲಾಗಲಿಲ್ಲ. | ಉತ್ತರಗಳನ್ನು ಅರ್ಧಮರ್ದ ಬರೆಯಲಾಯಿತು | |
| ಪ್ರಜಾಪ್ರಭುತ್ವಕ್ಕೆ ಧಕ್ಕೆಯನ್ನುಂಟು ಮಾಡುವ ಘಟಕಗಳು | ಪ್ರಜಾಪ್ರಭುತ್ವಕ್ಕೆ ಧಕ್ಕೆಯನ್ನುಂಟು ಮಾಡುವ ಘಟಕಗಳ ಚರ್ಚೆಯಲ್ಲಿ ಸಕ್ರಿಯ ಸಹಭಾಗವಹಿಸಿ ಸ್ಪಷ್ಟ ಶಬ್ದಗಳಲ್ಲಿ ವಿಚಾರ ಮಂಡಿಸಲಾಯಿತು | ಚರ್ಚೆಯಲ್ಲಿ ಸಹಭಾಗ ವಹಿಸಲಾಯಿತು | ಕೇಳಿದಾಗ ಸಂಧಿಗ್ದ ಉತ್ತರಗಳನ್ನು ಹೇಳಲಾಯಿತು. | |
| ವರ್ಗಕೃತಿಯಲ್ಲಿ ಸಹಭಾಗ | ಪಾಠದಲ್ಲಿಯ ಎಲ್ಲ ಕೃತಿಗಳನ್ನ ಉತ್ಸಾಹದಿಂದ ಪೂರ್ತಿಗೊಳಿಸಲಾಯಿತು (ಸಕ್ರಿಯ ಸಹಭಾಗ) ಎಲ್ಲ ವರ್ಗಕೃತಿಯನ್ನು ನೋಟಬುಕ್ಕಿನಲ್ಲಿ ಪೂರ್ಣಗೊಳಿಸಲಾಯಿಯತು | ಪಾಠದಲ್ಲಿಯ ಎಲ್ಲ ಕೃತಿಗಳನ್ನು ಪೂರ್ಣ ಮಾಡಲಾಯಿತು | ಎರಡನೆಯ ವಿದ್ಯಾರ್ಥಿಯ ನೋಟಬುಕ್ಕನ್ನು ನೋಡಿಕೃತಿ ಪೂರ್ಣ ಮಾಡಲಾಗಿದೆ. | |


ಒಂದು ದಿನ ನಿಶಾಳಿಗೆ ದವಾಖಾನೆಯಲ್ಲಿ ಸೇರಿಸಬೇಕಾಗಿ ಬಂತು
ಯಾರೋ ಅವಳಿಗೆ ಅವಳ ತೂಕದಿಂದ ಅಣುಕಿಸಿದರು ಮತ್ತು ಅವಳು ಡಾಎಟ ಮಾಡ ಹತ್ತಿದಳು. ತಲೆ ಸುತ್ತಿಬಿದ್ದಳು
ಆದರೆ ಇಷ್ಟೊಂದು ಅತೀ ಉಪವಾಸವನ್ನು ಮಾಡುವುದೇಕೆ
ಅನ್ನುತ್ತಾಳೆ, ನನಗೆ ಒಮ್ಮೆಲೆ ಆದರ್ಶ ಹುಡುಗಿಯ ಹಾಗೆ ಕಾಣಿಸುವದಿದೆ. -ಸ್ಥೂಲವಲ್ಲದ ಶರೀರ
ಅಬ್ಬಾ! ಮತ್ತು ಆದರ್ಶ ಹುಡುಗ ಹೇಗೆ ಕಾಣಿಸುವನು
ಧೈರ್ಯವಂತ ಮತ್ತು ದಷ್ಟಪುಷ್ಠ..... ಹೀಗೆಯೆ ನಿರ್ಧರಿಸಲಾಗಿದೆ
ನಿರ್ಧರಿಸಲಾಗಿದೆ...? ಆದರೆ ಯಾರು ನಿರ್ಧರಿಸಿದ್ದಾರೆ?
ಆಂ.... ಸತ್ಯವಾಗಿಯೂ.... ಯಾರು ನಿರ್ಧರಿಸಿದ್ದಾರೆ?

# 2 ನಾನು ಮತ್ತು ಮಾಧ್ಯಮಗಳು -1




ಮಾಧ್ಯಮಗಳ ಮೇಲೆ ಯಾರ ಅಂಕುಶವಿರುವದೋ, ಸ್ವಂತದ ಮನಸ್ಸಿನ ಮೇಲೆ ಅವರ ಅಂಕುಶ ವಿರುವರು

**ಉದ್ದೇಶಗಳು:**

1. ವಿದ್ಯಾರ್ಥಿಗಳಿಗೆ ಮಾಹಿತಿ ಮತ್ತು ಪ್ರಸಾರ ಮಾಧ್ಯಮಗಳು ಅಂದರೇನು ಎಂಬುದನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವದು.
2. ಮಾಹಿತಿ ಮತ್ತು ಪ್ರಸಾರ ಮಾಧ್ಯಮಗಳಿಂದ ಆಗುವ ಪರಿಣಾಮಗಳನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವದು.
3. ಮಾಹಿತಿ ಮತ್ತು ಪ್ರಸಾರ ಮಾಧ್ಯಮಗಳಿಂದ ಆಗುವ ಉಪಯೋಗವನ್ನು ಗುರುತಿಸಲು ಬರುವದು.
4. ಕಿಶೋರ ವಯಸ್ಸಿನ ಮೆದುಳಿನ ಬೇರೆತನವನ್ನು ಸ್ವಂತದ ಶಬ್ದಗಳಲ್ಲಿ ಮಂಡಿಸಲು ಬರುವದು.
5. ವ್ಯಸನ ವೆಂದರೇನು, ಅದರ ಶಾರೀರಿಕ, ಭಾವನಿಕ ಮತ್ತು ಆರ್ಥಿಕ ಪರಿಣಾಮಗಳು ಯಾವವು ಎಂಬುದನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವದು.
6. ವ್ಯಸನಾಧೀನತೆಯೊಂದಿಗೆ ಹೋರಾಟ ಮಾಡುವ ಕೆಲವು ಮಾರ್ಗಗಳ ಮಾಹಿತಿ ಯಾಗುವದು.

## 1. ಮಾಧ್ಯಮಗಳು ಅಂದರೇನು?

'ಮಾಧ್ಯಮ' ಈ ಶಬ್ದವನ್ನು ನೀವು ಯಾವಾಗಲೂ ಕೇಳುತ್ತ ಬಂದಿದ್ದೀರಿ. ನಿಮ್ಮ ಅಭಿಪ್ರಾಯದಂತೆ ಯಾವುದಕ್ಕೆ 'ಮಾಧ್ಯಮ' ಅನ್ನುವರು? ನಿಮ್ಮ ದಿನನಿತ್ಯದ ಆಯುಷ್ಯದಲ್ಲಿ 'ಮಾಧ್ಯಮ' ಈ ಶಬ್ದವನ್ನು ಯಾವ ಸ್ಥಳದಲ್ಲಿ ಉಪಯೋಗಿಸಲಾಗುವದು? ಕೆಳಗೆ (ಕೊಟ್ಟ ಹಾಗೆ) ಒಂದು ಚಿತ್ರಕೃತಿ ಕೊಡಲಾಗಿದೆ. ಕೆಲವೊಂದು ಉದಾಹರಣೆಗಳನ್ನು ನಿಮ್ಮ ನೋಟಬುಕ್ಕಿನಲ್ಲಿ ತಯ್ಯಾರಿಸಿರಿ.

1. 'ಮಾಧ್ಯಮ' ವೆಂದರೆ ಏನು ಈ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚೆ ಮಾಡಿರಿ ಮತ್ತು ಕೆಳಗಿನ ಚಿತ್ರಕೃತಿ ತಯ್ಯಾರಿಸಿರಿ.
2. ವಿವಿಧ ಮಾಧ್ಯಮಗಳ ವ್ಯಾಖ್ಯೆಯಿಂದ ಪ್ರಾರಂಭಿಸಿ ವಿದ್ಯಾರ್ಥಿಗಳ ಗಮನ ವನ್ನು ಮಾಹಿತಿ ಮತ್ತು ಪ್ರಸಾರ ಮಾಧ್ಯಮ ಕಡೆಗೆ ಸೆಳೆಯಿರಿ.

**ಮಾಧ್ಯಮ**

**1. ಶಬ್ದದ ಅರ್ಥ**
...............................

**2. ಎಲ್ಲಿ ಉಪಯೋಗಿಸಲು ಬರುವದು**
ಉದಾ. ಕನ್ನಡ ಮಾಧ್ಯಮದ ಶಾಲೆ
...............................

**3. ಪ್ರಕಾರಗಳು**
ಉದಾ. ಚಿತ್ರ, ಕವಿತೆ, ಭಾಷೆ ಇವು ಅಭಿವ್ಯಕ್ತಿಯ ಮಾಧ್ಯಮಗಳಾಗಿವೆ.
...............................

**4. ಮಾಧ್ಯಮಗಳ ಮಹತ್ವ**
ಉದಾ. TV ಯಿಂದ ಜಗತ್ತಿನಲ್ಲಿಯ ಸುದ್ದಿ ಮತ್ತು ದೃಶ್ಯಗಳು ಕಾಣಿಸುತ್ತವೆ.
...............................

**5. ಇತರ**
ಉದಾ. ಚೆಕ್, ಡಿಮಾಂಡಡ್ರಾಫ್ಟ್ ಇವು ಆರ್ಥಿಕ ಕೊಡತಗೆದು ಕೊಳ್ಳುವಿಕೆಯ ಮಾಧ್ಯಮವಾಗಿವೆ
...............................

**ತಿಳಿದು ಕೊಳ್ಳಿರಿ**


ಮಾಹಿತಿ ಪ್ರಸಾರ ಮಾಧ್ಯಮಗಳು ಅಂದರೆ, ಅವುಗಳಿಂದ ಮಾಹಿತಿಯನ್ನು ಜನರವರೆಗೆ ಮುಟ್ಟಿಸಲಾಗುವದು. ಇಂಥ ಮಾಧ್ಯಮಗಳು, ಉದಾ. ವರ್ತಮಾನ ಪತ್ರ, ಮಾಸಿಕಗಳು, ಟಿ.ವ್ಹಿ, ಇಂಟರನೆಟ್, ರೇಡಿಯೊ, ಡಾಕ್ಯುಮೆಂಟರಿ, ಭಿತ್ತಿ ಪತ್ರಿಕೆಗಳು ಮುಂತಾದವುಗಳು. ಈ ಮಾಧ್ಯಮಗಳ ಉಪಯೋಗ ಪ್ರಾಮುಖ್ಯವಾಗಿ ಜನರವರೆಗೆ ಮಾಹಿತಿ, ವಿಚಾರಗಳನ್ನು ಮುಟ್ಟಿಸಲು ಮಾಡಲಾಗುತ್ತದೆ.

## ಮಾಹಿತಿಯು ನಿಮ್ಮ ವರೆಗೆ ಹೇಗೆ ತಲುಪುವದು?

1. ಜಗತ್ತಿನಲ್ಲಿ ಘಟಿಸುವ ಘಟನೆಗಳು ನಿಮಗೆ ಹೇಗೆ ತಿಳಿಯುವವು?
2. ಮಾರುಕಟ್ಟೆಯಲ್ಲಿ ಬಂದ ಹೊಸಹೊಸ ಉತ್ಪಾದನೆಗಳು, ವಸ್ತುಗಳು ನಿಮಗೆ ಹೇಗೆ ತಿಳಿಯುವವು?
3. ಸಧ್ಯ ಜನಪ್ರೀಯವಾಗಿರುವ ಫ್ಯಾಶನವು ನಿಮಗೆ ಹೇಗೆ ತಿಳಿಯುವದು?
4. ದೇಶದಲ್ಲಿಯ ವಿವಿಧ ಪ್ರಸಿದ್ಧ ವ್ಯಕ್ತಿಗಳ ವಿಚಾರಗಳು ನಿಮಗೆ ಹೇಗೆ ತಿಳಿಯುವವು?

ಕೊಟ್ಟ ಪ್ರಶ್ನೆಗಳ ಮೇಲೆ ವಿದ್ಯಾರ್ಥಿಗಳೊಂದಿಗೆ ಚರ್ಚೆ ಮಾಡಿರಿ. ಮತ್ತು ನೋಟಬುಕ್ಕಿನಲ್ಲಿ ಉತ್ತರಗಳನ್ನು ಬರೆಯಲು ಹೇಳಿರಿ.

ಯಾವ ಪ್ರಸಾರ ಮಾಧ್ಯಮಗಳನ್ನು ಹೆಚ್ಚು ಉಪಯೋಗಿಸುತ್ತಾರೆ ಎಂಬುದರ ಕುರಿತು ಅವರೊಂದಿಗೆ ಚರ್ಚೆಮಾಡಿರಿ. ಉದಾ. ಅವರು ವರ್ತಮಾನ ಪತ್ರ ಓದುತ್ತಾರೆಯೇ?




## ಮಾಧ್ಯಮಗಳ ಕುರಿತು ಸ್ವಲ್ಪ ವಿಚಾರ ಮಾಡೋಣ ಬನ್ನಿ

ಮಾಹಿತಿ ಮತ್ತು ಪ್ರಸಾರಮಾಧ್ಯಮಗಳು ಕೇವಲ ಮಾಹಿತಿಯನ್ನು ಪೂರೈಸುವ ಕೆಲಸವನ್ನು ಮಾಡುತ್ತವೆಯೇ?

1. ವರ್ತಮಾನ ಪತ್ರದಲ್ಲಿ ಸುದ್ಧಿಗಳ ಹೊರತಾಗಿ ಏನೇನು ಮುದ್ರಿಸಿರುತ್ತವೆ? ವರ್ತಮಾನ ಪತ್ರದಲ್ಲಿಯ ಅಗ್ರಲೇಖದಲ್ಲಿ ಏನು ಕೊಟ್ಟಿರುತ್ತಾರೆ?
2. ಟಿ.ವ್ಹಿ ಮೇಲೆ ಮನೋರಂಜನೆಯ ಕಾರ್ಯಕ್ರಮ ಬಿಟ್ಟು ಇತರ ಯಾವ ಯಾವ ಕಾರ್ಯಕ್ರಮಗಳನ್ನು ತೋರಿಸಲಾಗುತ್ತದೆ?
3. ಸಿನೇಮಾದ ಪ್ರಾರಂಭಕ್ಕೆ ಪ್ರಾಯೋಜಕ ಈ ತಲೆಬರಹದಲ್ಲಿ ಕೆಲವು ಹೆಸರುಗಳನ್ನು ಕೊಟ್ಟಿರುತ್ತಾರೆ. ಅವರ ನಿಜವಾದ ಕೆಲಸ ಮತ್ತು ಆ ಕೆಲಸದ ಮಹತ್ವವೇನು?
4. ನೀವು ಎಂದಾದರೂ ಒಂದೇ ಸುದ್ಧಿಯನ್ನು ಬೇರೆ ಬೇರೆ ನ್ಯೂಜ ಚ್ಯಾನಲ್ಸಗಳ ಮೇಲೆ ನೋಡಿದ್ದಿರಾ? ಆ ಸುದ್ದಿಗಳು ಒಂದೇ ತರಹದ ಪದ್ಧತಿಯಿಂದ ತೋರಿ ಸಲಾಗುತ್ತದೆಯೋ, ಬೇರೆ ಬೇರೆ ಪದ್ಧತಿಯಿಂದ ತೋರಿಸಲಾಗುತ್ತದೆ?

ವಿದ್ಯಾರ್ಥಿಗಳಿಗೆ ಕೊಟ್ಟ ಪ್ರಶ್ನೆಗಳನ್ನು ಕೇಳಿ ಸ್ವಂತದ ಉತ್ತರ ಬರೆಯಲು ಹೇಳಿರಿ. ಯಾರ ಇಚ್ಛೆ ಇದೆಯೋ ಅವರು ಮುಂದೆ ಬಂದು ಹೇಳಬೇಕು.

ಮಾಧ್ಯಮಗಳು ನಮ್ಮ ವರೆಗೆ ಕೇವಲ ಮಾಹಿತಿಯನ್ನು ಮಾತ್ರ ಮುಟ್ಟಿಸುವದಿಲ್ಲ ವಿಶಿಷ್ಟವಾದ ಸಂದೇಶಗಳನ್ನು ಮುಟ್ಟಿಸುತ್ತವೆ ಎಂಬುದರ ಅರಿವನ್ನು ವಿದ್ಯಾರ್ಥಿಗಳಿಗೆ ಮಾಡಿ ಕೊಡಬೇಕು.

## ಸ್ವಲ್ಪ ಮೋಜು ಮಾಡೋಣ

### ನೀವು ಆಯ್ಕೆಯನ್ನು ಹೇಗೆ ಮಾಡುವಿರಿ?

1. ನಿಮ್ಮ ಮನೆಯಲ್ಲಿ ಯಾವ ಸಾಬೂನು, ಪೇಸ್ಟ, ಎಣ್ಣೆ, ಕ್ರೀಮ ತರಲಾಗುತ್ತದೆ?
2. ನಿಮಗೆ ಯಾವ ಪ್ರಕಾರದ ಬಟ್ಟೆ ಹಾಕಿ ಕೊಳ್ಳುವದು ಸ್ಟೈಲಿಷ್ ಅನಿಸುವದು?
3. ನೀವು ಸುಂದರವಾಗಿ ಕಾಣಿಸಲು ನಿಮ್ಮ ಹತ್ತಿರ ಯಾವ ಯಾವ ವಸ್ತುಗಳು ಇರಲೇಬೇಕು ಎಂದು ನಿಮಗೆ ಅನಿಸುವದು?
4. ಯಾವುದೇ ತರುಣ ಹುಡುಗರಲ್ಲಿ/ಹುಡುಗಿಯರಲ್ಲಿ ಯಾವ ಯಾವ ಗುಣ ಗಳು ಇರುವದು ಅವಶ್ಯಕ ವೆಂದು ನಿಮಗನಿಸುವದು?

ವಿದ್ಯಾರ್ಥಿಗಳಿಗೆ ಕೊಟ್ಟ ಪ್ರಶ್ನೆಗಳನ್ನುಕೇಳಿ ಸ್ವಂತದ ಉತ್ತರ ಬರೆಯಲು ಹೇಳಿರಿ ಯಾರ ಇಚ್ಛೆ ಇದೆಯೋ ಅವರು ಮುಂದೇ ಬಂದು ಹೇಳಬೇಕು.

ನಮ್ಮ ಇಷ್ಟವಾದ ಆಯ್ಕೆಯ ಮೇಲೆ ಜಾಹಿರಾತಿನ, ಪ್ರಸಾರ ಮಾಧ್ಯಮಗಳ ಬಹು ದೊಡ್ಡ ಪ್ರಭಾವ ವಿರುವದು. ಈ ವಿಷಯದ ಕಡೆಗೆ ವಿದ್ಯಾರ್ಥಿಗಳ ಗಮನ ಸೆಳೆಯಿರಿ.

**ಮೇಲಿನ ಪ್ರತಿಯೊಂದು ಅಂಶಗಳ ಕುರಿತು ನಿಮಗೆ ಹೇಗೆ ತಿಳಿಯಿತು? ಅದನ್ನು ನೀವು ಎಲ್ಲಿ ನೋಡಿದ್ದೀರಿ? ಅದೇ ಅಂಶವನ್ನು ನೀವು ಏಕೆ ಆರಿಸಿದ್ದಿರಿ? ನಾವು ಹೀಗೆಯೇ ಇರಬೇಕೆಂದು ನೀವು ಹೇಗೆ ನಿಶ್ಚಯಿಸಿದ್ದೀರಿ?**

### ಮಾಧ್ಯಮಗಳ ಪ್ರಭಾವ

ವಿವಿಧ ಮಾಹಿತಿ ಮತ್ತು ಪ್ರಸಾರ ಮಾಧ್ಯಮಗಳ ಪರಿಣಾಮ ನಮ್ಮ ಮೇಲೆ ತಿಳಿದೂ ತಿಳಿಯದ ಹಾಗೆ ಬಹಳಷ್ಟು ಆಗುತ್ತದೆ. ಜಾಹೀರಾತಿನಲ್ಲಿ ತೋರಿಸಿದ ಅಂಶಗಳು ನಮಗೆ ಬೇಕೆನಿಸುವವು. ವರ್ತಮಾನ ಪತ್ರದಲ್ಲಿಯ ಅಗ್ರಲೇಖ, ಟಿ.ವ್ಹಿ ಮೇಲೆ ತೋರಿಸಿದ ಸುದ್ಧಿಗಳು ಮತ್ತು ವಿಚಾರಗಳಿಂದ ನಾವು ಬಹಳಷ್ಟು ಪ್ರಭಾವಿತರಾಗುತ್ತೇವೆ. ಸಿನೇಮಾದಲ್ಲಿ ತೋರಿಸಿದ ನಟ-ನಟಿಯರ ಬಟ್ಟೆಗಳ, ವರ್ತನೆಯ ಅನುಕರಣೆ ತಿಳಿದೂ ತಿಳಿಯದೇ ಮಾಡಲು ಹೋಗುವೆವು. ಈ ಪ್ರಭಾವ ಮಿತಿಯ ಹೊರಗೆ ಹೋಯಿತು ಮತ್ತು ಆಕುರಿತು ನಾವು ನಮಗೆ ಗೊತ್ತಿರದ ಹಾಗೆ ಇತರರಿಗೆ ಬೇಕಾದ ಹಾಗೆ ನಿರ್ಣಯ ತಗೆದು ಕೊಡವೆವು ಮತ್ತು ನಮ್ಮ ಜೀವನದ ಸೂತ್ರಗಳು ನಮ್ಮ ಕೈಯಿಂದ ಜಾರಿ ಹೋಗಬಹುದು.



### ಮಾಧ್ಯಮಗಳಿಂದ ನಮ್ಮ ಮೇಲಾಗುವ ಪರಿಣಾಮಗಳು

**1. ಕಡಿಮೆತನದ ಭಾವನೆ ನಿರ್ಮಾಣ ವಾಗುವದು**

## ಸ್ವಲ್ಪ ಮೋಜು ಮಾಡೋಣ

ನಿಮ್ಮ ತಂದೆ ತಾಯಿಯರಿಗೆ, ಅಜ್ಜ ಅಜ್ಜಿಯವರಿಗೆ ಕೆಳಗಿನ ಪ್ರಶ್ನೆಗಳನ್ನು ಕೇಳಿರಿ.

1. ಅವರು ತಲೆಗೊದಲಿಗಾಗಿ ಯಾವ ಶಾಂಪೂ ಉಪಯೋಗಿಸುತ್ತಿದ್ದರು?
2. ಅವರು ಯಾವ ಕಂಡಿಶನರ ಉಪಯೋಗಿಸುತ್ತಿದ್ದರು?
3. ಅವರ ಟುಥಪೇಸ್ಟದಲ್ಲಿ ನಿಜವಾಗಿ ಯಾವ ಯಾವ ಘಟಕಗಳು ಇರುತ್ತಿದ್ದವು?
4. ಅವರಿಗೆ ಯಾವಾಗಾದರೂ ಕಪ್ಪುತನದ, ಮುಖದ ಮೇಲಿನ ಪಿಂಪಲ್‌ಗಳ ಚಿಂತೆ ಉಂಟಾಗಿದೆಯೇ?

ಬದಿಯಲ್ಲಿ ಕೊಟ್ಟ ಸಮಸ್ಯೆಗಳು ಮಹತ್ವದ್ದಾಗಿವೆ ಎಂದು ಈಗ ನಿಮಗೆ ಅನಿಸುವುದೇ? ಇದ್ದರೆ ಏಕೆ? ಎಂದು ವಿದ್ಯಾರ್ಥಿಗಳೊಂದಿಗೆ ಚರ್ಚೆ ಮಾಡಿರಿ.

ಕೆಳಗಿನ ಮಾದರಿಯ ಜಾಹೀರಾತನ್ನು ಓದಿರಿ ಮತ್ತು ಅದರಿಂದ ಯಾವ ಸಂದೇಶವನ್ನು ಕೊಡಲಾಗುವದು ಎಂಬುದನ್ನು ಹೇಳಿರಿ.

1. ಒಬ್ಬ ಹುಡುಗನು ಸಾಧಾರಣ ಬಟ್ಟೆಯನ್ನು ಉಪಯೋಗಿಸುವನು ಆಗ ಗೂಂಡ ರೊಂದಿಗೆ ಹೋರಾಡಲು ಬರುವದಿಲ್ಲ. ಅದೇ ಅವನು 'ಅಬಕ' ಕಂಪನಿಯ ಬಟ್ಟೆ ಉಪಯೋಗಿಸುವನೋ ಆಗ ಅವನ ಶರೀರದಲ್ಲಿ ಧೈರ್ಯ ಬರುವದು.
2. ಒಬ್ಬ ಹುಡುಗನು ಶೀತಪೇಯ (ತಂಪು ಪಾನಿಯ) ಕುಡಿಯುವದಿಲ್ಲ ಆಗ ಯಾರೂ ಅವನಕಡೆಗೆ ನೋಡುವದಿಲ್ಲ. ಆದರೆ ಅದೇ ಹುಡುಗನು 'ಕಖಗ' ಶೀತಪೇಯ ಕುಡಿಯುವನೋ ಆಗ ಎಲ್ಲರೂ ಅವನ ಗೆಳೆಯರಾಗುತ್ತಾರೆ.
3. ಒಂದು ಕುಟುಂಬದ ಹತ್ತಿರ ಚಿಕ್ಕ ವಾಹನವಿರುವದು ಆಗ ಅವರಿಗೆ ಕಾಲೋನಿ ಯಲ್ಲಿ ಯಾರೂ ಮಹತ್ವ ಕೊಡುವದಿಲ್ಲ. ಆಗ ಅವರು ಬೆಲೆಯುಳ್ಳ ದೊಡ್ಡ ವಾಹನ ತಗೆದುಕೊಳ್ಳುವರೋ ಆಗ ಅವರ ಕಡೆಗೆ ಜನರ ಬರ ಹೋಗುವಿಕೆ ಹೆಚ್ಚಾಗುವದು.

ಕೊಟ್ಟ ಜಾಹಿರಾತುಗಳಿಂದ ಯಾವ ಸಂದೇಶವು ನಮ್ಮ ವರೆಗೆ ಮುಟ್ಟಿಸಲಾಗು ವದು? ಧೈರ್ಯ ಬರುವದು, ಗೆಳೆಯರಾಗುವದು, ಪರಿಚಯ ಹೆಚ್ಚಿಸುವದು ಹೀಗೆ ಯಾವುದೇ ಉತ್ಪಾದ ನೆಯನ್ನು ಕೊಂಡುಕೊಂಡು/ ಉಪಯೋ ಗಿಸಿ ಸಾಧ್ಯಗೊಳಿಸಲು ಬರುವದೇ? ಇದರ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚೆ ಮಾಡಿರಿ.



## ಸ್ವಲ್ಪ ಮೋಜು ಮಾಡೋಣ

ಈ ಸಾಮಾನ್ಯ ವಸ್ತುಗಳ ಜಾಹಿ ರಾತು ಮಾಡುವಾಗ ಅವರಿಗೆ ಯಾವ ಅನುಭವ ಬಂದಿತು? ಎಂಬುದರ ಕುರಿತು ವಿದ್ಯಾರ್ಥಿಗ ಳೊಂದಿಗೆ ಚರ್ಚೆ ಮಾಡಿರಿ.

ವಿದ್ಯಾರ್ಥಿಗಳ ಗುಂಪು ಮಾಡಿರಿ. ಅವರಿಗೆ ಸೇಫ್ಟಿ ಪಿನ್, ಹಣಿಗೆ, ಕಾಯಿಪಲ್ಲೆ, ಹಣ್ಣುಗಳು ಮುಂತಾದವುಗಳ ಜಾಹಿರಾತು ತಯ್ಯಾರಿಸಲು ಹೇಳಿರಿ. ಅವುಗಳನ್ನು ಸಾದರಪಡಿಸಲು ಹೇಳಿರಿ.

### ತಿಳಿದು ಕೊಳ್ಳಿರಿ

ಬಹಳ ಸಲ ಜಾಹಿರಾತಿನ ಮಾಧ್ಯಮದಿಂದ ನಮ್ಮ ಜೀವನ ಹೇಗೆ ನಿಕೃಷ್ಟ ದರ್ಜೆಯದ್ದಾಗಿದೆ. ನಮ್ಮಲ್ಲಿ ಹೇಗೆ ಕೊರತೆ ಇದೆ. ಇದನ್ನೇ ಬಿಂಬಿಸಲಾಗುವದು. ಇದರಿಂದ ನಮಗೆ ಅವಶ್ಯಕತೆ ಇರದಿದ್ದರೂ ಅವುಗಳನ್ನು ಕೊಂಡುಕೊಳ್ಳಬೇಕೆನಿಸುವದು. ಹಾಗೆಯೇ ಈ ಅವಶ್ಯಕತೆ ಇಲ್ಲದ ಅಂಶಗಳನ್ನು ನಿರ್ಮಾಣಮಾಡಲು ನಿಸರ್ಗದಲ್ಲಿಯ ಬಹಳ ಸಂಸಾಧನೆಗಳು ವ್ಯರ್ಥ ಖರ್ಚಿಗೆ ಬೀಳುವವು. ಅವಶ್ಯಕತೆ ಇಲ್ಲದ ವಸ್ತು/ಘಟಕಗಳು ಕೊಂಡುಕೊಂಡಿದ್ದರಿಂದ ನಿಸರ್ಗದ ಮೇಲೆ ಅದರ ಪರಿಣಾಮವೇನಾಗುವದು ಎಂಬುದನ್ನು ತಿಳಿದುಕೊಳ್ಳಲು ಇಂಟರನೇಟದ ಸಹಾಯ ಪಡೆದು ಕೊಳ್ಳಿರಿ.

ಇದರಿಂದ ಯಾವುದೇ ಹೊಸ ವಸ್ತು ಕೊಂಡು ಕೊಳ್ಳುವಾಗ ಸ್ವಂತಕ್ಕೆ ಕೆಳಗಿನ ಪ್ರಶ್ನೆಗಳನ್ನು ಕೇಳಿರಿ.

1. ನಿಜವಾಗಿಯೂ ನಮಗೆ ಈ ವಸ್ತುಗಳ ಅವಶ್ಯಕತೆ ಇದೆಯೇ?
2. ಇವುಗಳನ್ನು ಕೊಂಡುಕೊಳ್ಳದಿದ್ದರೆ ನಮಗೆ ಏನಾದರೂ ತೊಂದರೆಯಾಗಬಹುದೇ
3. ಈ ಉತ್ಪಾದನೆಯಿಂದ ನಿಸರ್ಗದ ನಾಶವಾಗುವದಿಲ್ಲವೆ? ಹಾಗೆ ಆಗುವದಿದ್ದರೆ ಈ ಉತ್ಪಾದನೆಗೆ ಏನಾದರೂ ಪರ್ಯಾಯವಿದೆಯೇ?
4. ನಾವು ಈ ಉತ್ಪಾದನೆಯ ಜಾಹಿರಾತನ್ನು ನೋಡಿ ಆ ವಸ್ತುಗಳನ್ನು ಕೊಂಡು ಕೊಳ್ಳುತ್ತಿಲ್ಲವಲ್ಲವೆ?

'ಸ್ಟೋರಿ ಆಫ್ ಸ್ಟಫ್' ಈ ಚಿತ್ರಪಟವನ್ನು ವಿದ್ಯಾರ್ಥಿಗಳಿಗೆ ತೋರಿಸಿ, ಅದರ ಮೇಲೆ ಚರ್ಚೆ ಮಾಡಿರಿ.

ನಾವು ಏನು ಮಾಡ ಬಲ್ಲೆವು ಎಂಬುದರ ಕುರಿತು ಚರ್ಚೆ ಮಾಡಲು ಬಿಡಿರಿ.

## ಸ್ವಲ್ಪ ಮೋಜು ಮಾಡೋಣ

ಚರ್ಚೆ ಮಾಡಿರಿ–

1. ಕೊಟ್ಟ ಸುದ್ದಿಗಳಲ್ಲಿ ಯಾವ ಅಂತರ ಕಂಡು ಬರುವದು?
2. ಕೊಟ್ಟ ಸುದ್ದಿಗಳ ಆ ವಿಶಿಷ್ಟ ಸುದ್ದಿಗಳ ಓದುವವರ ಮೇಲೆ ಏನು ಪರಿಣಾಮವಾಗಬಹುದು.

"ಫೀ ಹೆಚ್ಚಳದ ಪರಿಣಾಮ : ಇಂಜಿನಿಯರಿಂಗ ಶಾಖೆಯ ಸೀಟುಗಳು ರಿಕ್ತ/ಬರಿದಾಗಿವೆ"

"ಮಕ್ಕಳ ಸೆಳೆತ ಕಲಾ ಮತ್ತು ವಾಣಿಜ್ಯ ಶಾಖೆಯ ಕಡೆಗೆ, ಇಂಜಿನಿಯರಿಂಗ ಕಡೆಗೆ ಬೆನ್ನು ತಿರುಗಿಸಿದರು".

"ಇಂಜಿನಿಯರಿಂಗ ಕಾಲೇಜುಗಳಲ್ಲಿಯ ಪ್ರವೇಶ ಕಡಿಮೆಯಾಗಿವೆ,"

ಒಂದೇ ಘಟನೆಯ ಕುರಿತು ಈ ಸುದ್ದಿಗಳ ಹೊಂದಾಣಿಕೆ ಮಾಡಿರಿ.

## 2. ನಮ್ಮವರೆಗೆ ಮುಟ್ಟುವ ಸುದ್ದಿಗಳು

### ಮಾಡಿ ನೋಡಿರಿ

ಮೂರರಿಂದ ನಾಲ್ಕು ಬೇರೆ ಬೇರೆ ವರ್ತಮಾನ ಪತ್ರಗಳಲ್ಲಿಯ ಒಂದೇ ಸುದ್ದಿಯ ಕುರಿತು ವಾರ್ತಾಂಕನೆ/ಅಗ್ರಲೇಖ ಓದಿರಿ. ಅವುಗಳಲ್ಲಿ ಕೆಲವು ಅಂತರ ಕಾಣಿಸುತ್ತವೆಯೇ ಇವುಗಳನ್ನು ನೋಂದಾಯಿಸಿರಿ.

ಚರ್ಚೆ ಮಾಡಿರಿ–

1. ವಾರ್ತಾಂಕನದಲ್ಲಿ / ಅಗ್ರಲೇಖಗಳಲ್ಲಿ ಏನಾದರೂ ಅಂತರ ಕಂಡು ಬಂದಿತೇ?
2. ಉತ್ತರ ಹೌದು ಇದ್ದರೆ, ಯಾವ ಪ್ರಕಾರದ ಅಂತರ ಇತ್ತು?
3. ಈ ಅಂತರದಿಂದ ಓದುಗರ ಮೇಲೆ ಯಾವ ಪರಿಣಾಮವಾಗಬಹುದು ಎಂದು ಅನಿಸುವದು?

## ತಿಳಿದು ಕೊಳ್ಳಿರಿ

ಭಾರತದಲ್ಲಿ ದೂರದರ್ಶನದ ಹಾಗೇ ಸುದ್ಧಿಯನ್ನು ಕೊಡುವ ಇತರ ಖಾಸಗಿ ಮಾಲಿಕತ್ವದ ವೃತ್ತ ಪತ್ರಗಳು, ಮಾಸಿಕಗಳು, ಪಾಕ್ಷಿಕಗಳು ಕೂಡ ಪ್ರಕಾಶನ ವಾಗುತ್ತಲಿವೆ. ಇವುಗಳಲ್ಲಿಯ ಪ್ರತಿಯೊಬ್ಬರಿಗೆ ತಮ್ಮದೇ ಆದ ರಾಜಕೀಯ, ಸಾಮಾಜಿಕ ಪಾತ್ರ ಇಲ್ಲವೆ ಆರ್ಥಿಕ ಹಿತಸಂಬಂಧ ಇರಬಹುದು. ಅದನ್ನು ಅವು ಉಪಲಬ್ದವಿರುವ ಮಾಧ್ಯಮದಿಂದ ಮಂಡಿಸುತ್ತವೆ. ಇದರಿಂದ ನಮಗೆ ಅತ್ಯಂತ ಜಾಗರೂಕತೆಯಿಂದ ಇರುವದು ಅವಶ್ಯಕವಾಗಿದೆ. ಕೇವಲ ಮಾಧ್ಯಮಗಳಲ್ಲಿ ಬರುವ ಮಾಹಿತಿಯ ಮೇಲೆ ವಿಶ್ವಾಸವಿಡದೆ, ವಸ್ತುನಿಷ್ಠವಾಗಿ, ಯಾವುದೇ ಸುದ್ಧಿಯ ಕಡೆಗೆ ನೋಡುವದು ಮತ್ತು ವಿಶ್ಲೇಷಣೆ ಮಾಡಿ ಸ್ವಂತಕ್ಕಾಗಿ ಅರ್ಥ ತಗೆಯುವದು ನಮಗೆ ಬರಬೇಕಾಗಿದೆ.

### 3. ಪುರುಷರ ಪ್ರತಿಮೆ

## ಸ್ವಲ್ಪ ಮೋಜು ಮಾಡೋಣ

ನೀವು ಇಲ್ಲಿಯವರೆಗೆ ನೋಡಿದ ಸಿನೇಮಾಗಳನ್ನು ನೆನಪಿಸಿಕೊಳ್ಳಿ ಮತ್ತು ಅದರಲ್ಲಿಯ ಈ ಅನುಭವ ನಾಯಕ (ಹಿರೋ) ನೆನಪಿಸಿರಿ. ನಿಮಗೆ ಸಿನೇಮಾದಲ್ಲಿಯ ನಾಯಕನ ಹಾಗೆ ಆಗಬೇಕು ಎಂದು ಮನಸ್ಸಿನಿಂದ ಅನಿಸು ವದೇ? ನೀವು ಎಂದಾದರೂ ಯಾವುದೇ ಹಿರೋನ ಹಾಗೆ ವರ್ತಿಸುವ, ಅವನ ನಕಲು ಮಾಡುವ ಪ್ರಯತ್ನ ಮಾಡಿದ್ದೀರಾ? ಯಾವುದೇ ಹೀರೋನ ಯಾವ ನಕಲು ಮಾಡುವದು ನಿಮಗೆ ಹಿಡಿಸುವದು?

ವಿದ್ಯಾರ್ಥಿಗಳೊಂದಿಗೆ ಕೊಟ್ಟ ಅಂಶಗಳಮೇಲೆ ಚರ್ಚೆ ಮಾಡಿರಿ. ಅದರಲ್ಲಿಯ ಯಾವ ವಿದ್ಯಾರ್ಥಿಗಳು ಮುಂದೆ ಬಂದು ತನ್ನ ಅನುಭವವನ್ನು ಹೇಳಲು ಇಚ್ಛಿಸುವರೋ, ಅವರಿಗೆ ಅವಕಾಶ ಮಾಡಿ ಕೊಡಿ. ಒತ್ತಾಯ ಮಾಡಬೇಡಿರಿ. ತಮ್ಮ ನೋಟಬುಕ್ಕಿನಲ್ಲಿ ವಿದ್ಯಾರ್ಥಿಗಳು ಬರೆದರೂ ಅದು ನಡೆಯಬಹುದು.

ಸಿನೇಮಾದಲ್ಲಿಯ ನಾಯಕನು ಸಾಮಾನ್ಯವಾಗಿ ಕೆಳಗಿನವುಗಳಲ್ಲಿ ಏನೇನು ಮಾಡುತ್ತಾನೆ. ಅದರ ಮೇಲೆ ಗೀಟು ಹಾಕಿರಿ–

1. ಸಿಗರೇಟು ಸೇದುವದು
2. ಸೆರೆ ಕುಡಿಯುವದು
3. ನಶೆತರುವ ಪದಾರ್ಥಗಳ ಸೇವನೆ ಮಾಡುವದು
4. ಹೊಡೆದಾಡುವದು.
5. ಹುಡುಗಿಯ ಗಮನವನ್ನು ಸೆಳೆಯುವ ಪ್ರಯತ್ನ ಮಾಡುವದು.
6. ಅತಿ ವೇಗವಾಗಿ ವಾಹನವನ್ನು ಓಡಿಸುವದು.
7. ಜೀವವನ್ನು ಅಪಾಯದಲ್ಲಿಟ್ಟು ಸ್ಟಂಟ ಮಾಡುವದು.



8. ಸಾರಿಗೆಯ ನಿಯಮ ಮುರಿಯುವದು

9. ಬೆಲೆಯುಳ್ಳ ಬಟ್ಟೆ ಗಾಗಲ್, ಗಡಿಯಾರವನ್ನು ಹಾಕಿಕೊಳ್ಳುವದು

10. ಇನ್ನಿತರ (ಬರೆಯಿರಿ)

1. ವಿದ್ಯಾರ್ಥಿಗಳಿಗೆ ಅವರ ನೋಟಬುಕದಲ್ಲಿ ಗೀಟು ಹೊಡೆದ ಅಂಶಗಳನ್ನು ಬರೆಯಲು ಹೇಳಿರಿ.
2. ಹೀರೋ ಎಲ್ಲ ಸಂಗತಿಗಳನ್ನು ಸಿನೇಮಾದಲ್ಲಿ ಏಕೆ ಮಾಡುತ್ತಿರಬೇಕು ಎಂಬುದರ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚೆ ಮಾಡಿರಿ.
3. ಹೀಗೆ ಏನೇನೂ ಮಾಡದ ಹಿರೋ ಅವರಿಗೆ ಹಿಡಿಸಬಹುದೇ? ಏಕೆ ?

## ತಿಳಿದು ಕೊಳ್ಳಿರಿ

ಹಿರೊ ಎಂದು, ಮಗನೆಂದು, ನಮ್ಮೆದುರು ಹಿರೋನ ಪ್ರತಿಮೆಯನ್ನು ಸಾಮರ್ಥ್ಯವಂತ, ವರ್ಚಸ್ವವನ್ನು ಪ್ರಸ್ಥಾಪಿಸುವ, ಅಂಜದೆ ಇರುವ, ಎರಡನೆಯವರ ಭಾವನೆಗಳನ್ನು ಗಣನೆಗೆ ತಗೆದುಕೊಳ್ಳದ, ಅವನ ಕಡೆಗೆ ಎಲ್ಲ ಸಮಸ್ಯೆಗಳ ಮೇಲೆ ಉಪಾಯಗಳಿವೆ, ಅವನು ಎಂದಿಗೂ ಅಯಶಸ್ವಿಯಾಗುವದಿಲ್ಲ, ಹೀಗೆ ನಿರ್ಮಾಣ ಮಾಡಲಾಗುತ್ತದೆ. ಇಂಥ ಪ್ರತಿಮೆ ತರುಣರಿಗೆ ಹಿಡಿಸುವದು. ಬೇಕು ಬೇಕೆನಿಸುವದು. ಈ ಪ್ರತಿಮೆಯನ್ನು ನಿರ್ಮಾಣ ಮಾಡಲು ನಶಯ ಪದಾರ್ಥ, ಸಿಗರೇಟು ಸೇದುವದು, ನಿಯಮ ಮುರಿಯುವದು, ಬೆನ್ನುಹತ್ತುವದು ಇಂಥ ಕೃತಿಗಳ ಸಮಾವೇಶ ವಿರುವದು. ಹಾಗೆಯೆ ಹಿರೋನಿಗೆ ಬೇಕಾಗಿದ್ದದ್ದು ಯಾವಾ ಗಲೂ ಸಿಗಲೇಬೇಕು ಎಂಬ ಚಿತ್ರ ನಿರ್ಮಾಣ ಮಾಡಲಾಗುತ್ತದೆ.

## ಸ್ವಲ್ಪ ಮೋಜು ಮಾಡೋಣ

ಕೆಳಗಿನ ಜಾಹಿರಾತು ಓದಿರಿ:

1. ‘ಪಫಬ’ ಬಾಯಿಕ್ಸ್, ಉನ್‌ಕೆ ಲಿಯೇ ಜಿನ್ಹೆ ಡರ್ ನಹಿ ಲಗತಾ!
2. ‘ಟಠಡ’ ಘಡಿಯಾ..... ಖೂಬ್ ಜಮೇಗಾ ಇಂಪ್ರೆಶನ್!
3. ‘ಅಬಕ’..... ಸಿರ್ಫ್ ಹೋಷಿಯಾರ್ ಬಚ್ಚೊಂಕೇಲಿಯೆ!

ನೀವು ನೋಡಿದ ಈ ಪ್ರಕಾರದ ಜಾಹಿರಾತುಗಳ ಯಾದಿಯನ್ನು ತಯ್ಯಾರಿಸಿರಿ.

ವಿದ್ಯಾರ್ಥಿಗಳೊಂದಿಗೆ ಕೆಳಗಿನ ಅಂಶಗಳ ಆಧಾರದಿಂದ ಚರ್ಚೆ ಮಾಡಿರಿ.

1. ಪ್ರತಿಯೊಂದು ಜಾಹಿರಾತುಗಳಿಂದ ಏನನ್ನು ಸೂಚಿಸುವ ಪ್ರಯತ್ನ ಮಾಡಲಾಗಿದೆ?
2. ಈ ಜಾಹಿರಾತುಗಳ ಪರಿಣಾಮ ನೋಡುವವರ ಮೇಲೆ ಹೇಗೆ ಆಗಬಹುದು?
3. ಈ ಜಾಹಿರಾತುಗಳಲ್ಲಿ ಹೇಳಿದ ಸಂಗತಿಗಳು ನಿಜವಿರಬಹುದು?
4. ನಿಮಗೆ ಗೊತ್ತಿದ್ದಂತೆ ಇಂಥ ಇನ್ನೂ ಯಾವ ಯಾವ ಜಾಹಿರಾತುಗಳಿವೆ?




**ಸ್ವಲ್ಪ ವಿಚಾರ ಮಾಡಿರಿ.**

**ನಮ್ಮ ದೇಶದಲ್ಲಿ ಹಲವಾರು ಹೆಸರಾಂತ ಸ್ತ್ರೀ-ಪುರುಷರಾಗಿ ಹೋಗಿದ್ದಾರೆ. ಅವರು ಕೇವಲ ನಿರ್ಭಿಡ ಸಾಮರ್ಥ್ಯವಂತರಷ್ಟೆ ಅಲ್ಲ ಆದರೆ ನ್ಯಾಯದ ಪಕ್ಷವುಳ್ಳವರು. ಜನರ ರಕ್ಷಣೆ ಮಾಡುವವರು ಕೂಡ ಇದ್ದರು. ಹಾಗಾದರೆ ಶಕ್ತಿಶಾಲಿ ಸಕ್ಷಮ ಸ್ತ್ರೀ/ಪುರುಗರಾಗಲು ವಿವಿಧ ಮಾಧ್ಯಮಗಳಿಂದ ತೋರಿಸಿದ ಅಂಶಗಳನ್ನು ಅನುಸರಿಸುವ ಅವಶ್ಯಕತೆಯು ನಿಜವಾಗಿಯೂ ಇದೆಯೇ?**

ನಿಮ್ಮ ಅಭಿಪ್ರಾಯದಂತೆ ಯಾವುದೇ ಆದರ್ಶ ಸ್ತ್ರೀ-ಪುರುಷರಲ್ಲಿ ಇರುವ ಗುಣವೈಶಿಷ್ಟ್ಯಗಳನ್ನು ಕುರಿತು ಬರೆಯಿರಿ.

## 4. ಸ್ತ್ರೀಯರ ಪ್ರತಿಮೆ



ನೀವು ನೋಡಿದ ಚಿತ್ರಪಟ, ದೂರದರ್ಶನದ ಮೇಲಿನ ಸಿರಿಯಲನ್ನು ನೆನಪಿಸಿಕೊಳ್ಳಿರಿ. ಅದರಲ್ಲಿ ನಾಯಕಿಯ (ಹಿರೋಯಿನ್) ಪ್ರತಿಮೆಯನ್ನು ಕೆಳಗಿನವುಗಳಲ್ಲಿ ಯಾವ ಪ್ರಕಾರಗಳಲ್ಲಿ ತೋರಿಸಿದ್ದಾರೆ ಎಂದು ನಿಮಗೆ ಅನಿಸುವುದು.

1. ಹಾಡು ಹಾಡುವುದು.
2. ನೃತ್ಯ ಮಾಡುವುದು.
3. ಸತತವಾಗಿ ಸಂದರ ಕಾಣಿಸುವುದು. ಬೆಲೆಯುಳ್ಳ ಬಟ್ಟೆ, ಬೂಟು, ಆಭರಣ ಧರಿಸಿ ತಿರಿಗಾಡುವುದು.
4. ಸಂಕಟದಲ್ಲಿ ಸಿಲುಕುವದು, ನಾಯಕನಿಂದ ಸಂರಕ್ಷಣೆ
5. ಕಾರ್ಯಕ್ರಮ (ಮಾಲಿಕೆ)ದಲ್ಲಿ ಇತರ ಸ್ತ್ರೀಯರ ವಿರುದ್ಧ ಕಾರ ಸ್ಥಾನ ಮಾಡುವುದು.
6. ಕುಟುಂಬದಲ್ಲಿಯ ಪುರುಷರ (ತಂದೆ, ಅಣ್ಣ) ಹೇಳಿಕೆಯಂತೆ ವರ್ತಿಸುವುದು.
7. ಕಠಿಣ ಪರಿಸ್ಥಿತಿಯನ್ನು ಎದುರಿಸಿ ಯಶಸ್ಸಿನ ಶಿಖರ ಮುಟ್ಟುವುದು
8. ಇನ್ನಿತರ (ಬರೆಯಿರಿ)

1. ವಿದ್ಯಾರ್ಥಿಗಳಿಗೆ ಅಂಶಗಳನ್ನು ನೋಟಬುಕ್ಕಿನಲ್ಲಿ ಬರೆಯಲು ಹೇಳಿರಿ.
2. ಈ ಹಿಂದೆ ಬರೆದ ನಾಯಕ-ನಾಯಕಿಯರ ಕೆಲ ಸಗಳ ಹೊಂದಾಣಿಕೆ ಮಾಡಿರಿ. ನಿಮಗೆ ಏನು ಕಾಣಿಸುವುದು.
3. ಸಿನೇಮಾ ಮತ್ತು ಸಿರಿಯಲ್‌ಗಳಿಂದ ಸ್ತ್ರೀಯರ ಕುರಿತು ಯಾವ ಸಂದೇಶ ಕೊಡಲಾಗುವುದು.

ಚರ್ಚೆ ಮಾಡಿರಿ- ಸ್ತ್ರೀಯರು ನಿಜವಾಗಿ ಹೀಗೆ ಇರುವರೇ? ಸ್ತ್ರೀಯರ ಈ ರೀತಿಯ ಪ್ರತಿಮೆ ತೋರಿಸುವುದರಿಂದ ನೋಡುಗರ ಮನಸ್ಸಿನ ಮೇಲೆ ಏನು ಪರಿಣಾಮವಾಗಬಹುದು?

### ತಿಳಿದು ಕೊಳ್ಳಿರಿ

ಹಿಂದಿನಿಂದ ನಡೆದುಬಂದ ತಿಳುವಳಿಕೆಯಂತೆ ಹಲವು ಶತಕಗಳಿಂದ ಸ್ತ್ರೀಯರಿಗೆ ಗೌಣ ಮತ್ತು ಅಬಲೆಯೆಂದು ತಿಳಿಯುತ್ತ ಬರಲಾಗಿದೆ. ಒಂದು ಕಡೆಗೆ ಸ್ತ್ರೀಗೆ ಸ್ವಂತದ ಅಭಿಪ್ರಾಯವಿಲ್ಲ ಮತ್ತು ಇರಕೂಡದು, ಆಕೆಗೆ ಸತತವಾಗಿ ಪುರುಷರ ಆಧಾರದ ಅವಶ್ಯಕತೆ ಇದೆ ಅಲ್ಲದೆ ಇನ್ನೊಂದು ಕಡೆಗೆ ಸ್ತ್ರೀಯು ಅತ್ಯಂತ ಒಳಸಂಚಿನ ಕಾರಸ್ಥಾನಗಳನ್ನು ಮಾಡುವವಳಿರುವಳು ಎಂಬ ಪ್ರತಿಮೆಯು ಕಾಣಿಸುವುದು.

### ಸ್ವಲ್ಪ ವಿಚಾರ ಮಾಡಿರಿ.

1. ಸಿನೇಮಾದಲ್ಲಿಯ ನಾಯಕಿಯು ಬಹಳ ವೇಳೆ ಕಡಿಮೆ ಬಟ್ಟೆಧರಿಸಿ ತಿರುಗುತ್ತಿರುವದು ಕಾಣಿಸುವದು.
2. ಜಾಹಿರಾತುಗಳಲ್ಲಿ ಸ್ತ್ರೀಯರು ಕೆಂಪಾಗಿ ಕಾಣಿಸಿದರೆ ಮಾತ್ರ ಅವರ ಲಗ್ನವಾಗಬಹುದು ಎಂಬುದನ್ನು ತೋರಿಸುವರು.
3. ಸ್ತ್ರೀಯರ ಮುಖದ ಮೇಲೆ, ಶರೀರದ ಮೇಲೆ ಸ್ವಲ್ಪವೆ ಮಚ್ಚೆ ಇದ್ದರೂ ಅದು ಅವಳ ಜೀವನ ಮರಣದ ಪ್ರಶ್ನೆಯಾಗಿದೆ ಎಂದು ಜಾಹಿರಾತು ನೋಡಿದಾಗ ಅನಿಸುವದು.
4. ಭಾರ ಕಡಿಮೆ ಮಾಡುವ ಜಾಹಿರಾತಿನಲ್ಲಿ ಸಾಧ್ಯವಾದ ಮಟ್ಟಿಗೆ ಸ್ತ್ರೀಯರನ್ನೇ ಗುರಿಮಾಡುವರು ನೀವು ನೋಡಿದ ಇಂಥ ಪ್ರಕಾರದ ಜಾಹಿರಾತುಗಳ ಯಾದಿ ತಯ್ಯಾರಿಸಿರಿ.


ವಿದ್ಯಾರ್ಥಿಗಳೊಂದಿಗೆ ಕೆಳಗಿನ ಅಂಶಗಳ ಆಧಾರದಿಂದ ಚರ್ಚೆ ಮಾಡಿರಿ–

1. ಕೊಟ್ಟ ಎಲ್ಲ ಅಂಶಗಳಮೂಲಕ ಜಾಹಿರಾತುಗಳಿಂದ ಏನನ್ನು ಸೂಚಿಸಲಾಗುತ್ತದೆ?
2. ಈ ಜಾಹಿರಾತುಗಳ ಪರಿಣಾಮವು ಜಾಹಿರಾತು ನೋಡುವವರ ಮೇಲೆ ಹೇಗಾಗಬಹುತ್ತಿರಬಹುದು.
3. ಈ ಜಾಹಿರಾತುಗಳಲ್ಲಿ ಹೇಳಿದ ಅಂಶಗಳು ನಿಜವಾಗಿರಬಹುದೇ?
4. ನಿಮಗೆ ಗೊತ್ತಿದ್ದಂತೆ ಇಂಥ ಇನ್ನು ಯಾವ ಯಾವ ಜಾಹಿರಾತುಗಳಿವೆ?

### ತಿಳಿದು ಕೊಳ್ಳಿರಿ

ನಾಯಕಿಎಂದು ಸ್ತ್ರೀಯ ಪ್ರತಿಮೆ ಕೆಂಪು, ಸಂದರ, ತಿಳುವು ಮೈ, ಎತ್ತರಹೀಗೆ ತೋರಿಸಲಾಗುವದು. ಅದು ಆಧಾರಕ್ಕಾಗಿ ನಾಯಕನಮೇಲೆ ಅವಲಂಬಿಸಿರುವದು. ಆಕೆ ಸುಂದರಳಾಗಿರದಿದ್ದರೆ ಆಕೆಗೆ ಆಯುಷ್ಯದಲ್ಲಿ ಏನು ದೊರಕುವದಿಲ್ಲ ಆಕೆಯು ಅತ್ಯಂತ ಭಾವನಾಶೀಲ, ಕೋಮಲ ಮೃದು ಸ್ವಭಾವ ಇದ್ದರೇನೆ ನಾಯಕನಿಗೆ ಅವಳು ಹಿಡಿಸುವಳು. ಇಂಥ ಪ್ರತಿಮೆ ಕಂಡು ಬರುವದು. ಇದರಿಂದ ಸುಂದರವಾಗಿ ಕಾಣಿಸುವದೇ ಸ್ತ್ರೀಯ ಪ್ರಮುಖ ಕೆಲಸವಾಗಿದೆ. ಅವಳು ಹೇಗೆ ಕಾಣುವಳು ಇದರ ಮೇಲೆಯೇ ಸಮಾಜದಲ್ಲಿಯ ಅವಳ ಸ್ಥಾನ ಮತ್ತು ಮಹತ್ವ ನಿರ್ಧರಿಸಲಾಗುವದು ಎಂಬ ಅಪನಂಬಿಕೆ ತರುಣ ಹುಡುಗಿ ಯರದ್ದಾಗಿದೆ.

## 5. ಸುಂದರ ವಾಗುವದು ಮತ್ತು ಸುಂದರ ಕಾಣಿಸುವದು




**ಮೇಲೆ ಕೊಟ್ಟ ಎರಡು ಮಾರ್ಗಗಳ ಮೇಲೆ ಚರ್ಚೆ ಮಾಡಿರಿ.**

### ಮಾಧ್ಯಮಗಳ ಪರಿಣಾಮ ಮತ್ತು ಕಿಶೋರ ವಯಸ್ಸಿನ ಮಕ್ಕಳು

ಹಿಂದಿನ ವರ್ಷ ನಾವು ಕಿಶೋರ ವಯಸ್ಸಿನ ಮೆದುಳು ಕೆಲವೊಂದು ವಿಷಯಗಳಲ್ಲಿ ವೈಶಿಷ್ಟ್ಯಪೂರ್ಣ ವಾಗಿರುತ್ತದೆ, ಎಂಬುದನ್ನು ಕಲಿತಿದ್ದೇವೆ. ಅದರಲ್ಲಿಯ ಮಹತ್ವಪೂರ್ಣ ಅಂಶಗಳು ಕೆಳಗಿನಂತೆ ಇವೆ–

1. **ಕಿಶೋರ ವಯಸ್ಸಿನಲ್ಲಿ ಭಾವನಾತ್ಮಕ ಮೆದುಳಿನ ವಿಕಾಸ ವಾಗಿರುತ್ತದೆ. ಆದರೆ ಸಾರಾಸಾರ ವಿಚಾರ ಮಾಡುವ ಭಾಗವು ಇನ್ನು ವಿಕಸನಶೀಲ ಇರುವದು. ಇದರಿಂದ ಕಿಶೋರವಯಸ್ಸಿನ ವಿದ್ಯಾರ್ಥಿಗಳ ಭಾವನೆ ತೀವ್ರವಾಗಿರುವದು. ಅವರಿಗೆ ಸಮೀಪದ ಲಾಭಗಳು ಕೊಡಲೇ ಮತ್ತು ದೊಡ್ಡದಾಗಿ ಕಾಣಿಸುವವು. ಆದರೆ ದೀರ್ಘಕಾಲದ ಹಾನಿಗಳು ಕಾಣಿಸುವದಿಲ್ಲ.**
2. **ಇದರಿಂದ ಅವರು ಅಪಾಯಕಾರಕ ಕೃತಿ ಮಾಡಲು ಸಹಜವಾಗಿ ಪ್ರವೃತ್ತರಾಗುವರು.**
3. **ಅವರ ಸ್ವನಿಯಂತ್ರಣ ಕೇಂದ್ರ ಸಂಪೂರ್ಣವಾಗಿ ವಿಕಾಸ ವಾಗಿರುವದಿಲ್ಲ ವಾದ್ದರಿಂದ ಅವರಿಗೆ ಸ್ವಂತದ ಮನಸ್ಸಿಗೆ ತಡೆಹಿಡಿಯಲಾಗುವದಿಲ್ಲ ಮತ್ತು ಅವರು ಭಾವನೆಯ ಪ್ರಭಾವದಲ್ಲಿ ಹರಿದು ಹೋಗುವರು.**

ಅವರ ವರ್ತನೆಯಿಂದ ಕಿಶೋರ ವಯಸ್ಸಿನ ಮೆದುಳಿನ ಬದಿಗೆ ಕೊಟ್ಟ ವೈಶಿಷ್ಟ್ಯಗಳು ಕಂಡು ಬರುತ್ತವೆಯೇ? ಎಂಬುದರ ಕುರಿತು ವಿದ್ಯಾರ್ಥಿ–ಗಳೊಂದಿಗೆ ಚರ್ಚೆ ಮಾಡಿರಿ.

ಕಿಶೋರ ವಯಸ್ಸಿನ ಹುಡುಗ ಹುಡುಗಿಯರಿಗೆ ಹೆಚ್ಚು ಅಪಾಯ ಹೇಗೆ ಸಂಭವಿಸುವದು ಎಂಬುದನ್ನು ನಾವು ಸ್ವಲ್ಪದರಲ್ಲಿ ನೋಡೋಣ

**ವ್ಯಸನಗಳ ಉದಾತ್ತೀಕರಣ:** ಚಿತ್ರಪಟ, ಸಿರಿಯಲ, ಜಾಹಿರಾತುಗಳಲ್ಲಿ ತೋರಿಸಿದ ವ್ಯಸನಗಳ ಉದಾತ್ತೀಕರಣದಿಂದ ಕಿಶೋರ ವಯಸ್ಸಿನ ಮಕ್ಕಳು ವ್ಯಸನಕ್ಕೆ ಆಧೀನರಾಗುವ ಸಾಧ್ಯತೆ ಹೆಚ್ಚಿನ ಪ್ರಮಾಣದಲ್ಲಿದೆ. ಆದ್ದರಿಂದ ಮೊದಲು ನಾವು ವ್ಯಸನದ ಕುರಿತು ತಿಳಿದುಕೊಳ್ಳೋಣ



## ವ್ಯಸನ/ಆಸಕ್ತಿ (ವ್ಯಸನಾಧೀನತೆ)

ಯಾವುದೇ ಚಟಗಳ ಗುಲಾಮನಾಗುವದು ಇಲ್ಲವೆ ಆ ಪದಾರ್ಥದ ಸೇವನೆ ಇಷ್ಟೊಂದು ಮಾಡುವದು, ಅದರ ಹೊರತಾಗಿ ಜೀವಿಸುವದು ಅಸಾಧ್ಯವೆನಿಸುವದು. ಈ ಸ್ಥಿತಿಗೆ 'ವ್ಯಸನ ಹತ್ತುವದು' ಎಂದು ಕರೆಯುವರು.

### 1. ವ್ಯಸನ ಆಸಕ್ತಿಯ ಶಾರೀರಿಕ ದುಷ್ಪರಿಣಾಮಗಳು:


ಬಾಯಿಯಲ್ಲಿ ತಂಬಾಕು ಹಿಡಿಯುದು, ಮೆಲೆಯುವದು, ಮಶೇರಿ, ಪಾನ ಮಸಾಲಾ, ಗುಟಖಾ ಮತ್ತು ಧೂಮ್ರಪಾನದ ದುಷ್ಪರಿಣಾಮಗಳು.



### 2. ಮಾದಕ ಪದಾರ್ಥಗಳಿಂದ ಶರೀರದ ಮೇಲಾಗುವ ದುಷ್ಪರಿಣಾಮಗಳು.

ನಶೆ ತರುವ ಔಷಧಗಳು/ಮಾದಕ ಪದಾರ್ಥಗಳ ಸೇವನೆಯ ಪರಿಣಾಮ ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ. ನಿಮ್ಮ ನೋಟಬುಕ್ಕಿನಲ್ಲಿ ಮಾನವ ಶರೀರದ ಆಕೃತಿ ತಗೆಯಿರಿ. ಆಕೃತಿಯ ಪಕ್ಕಕ್ಕೆ ತೋರಿಸಿದ ಪರಿಣಾಮ ಯಾವ ಅವಯಗಳ ಮೇಲಾಗಬಹುದು ಎಂಬುದನ್ನು ಆಕೃತಿಯಲ್ಲಿ ತೋರಿಸಿರಿ.

## 3. ಸ್ವವಿಕಾಸವೋ ಅಥವಾ ಸ್ವವಿಕಾಸವೋ?




**ಮೇಲೆ ಕೊಟ್ಟ ಎರಡು ಮಾರ್ಗಗಳ ಬಗ್ಗೆ ಚರ್ಚೆ ಮಾಡಿರಿ.**

## 4. ವ್ಯಸನ ಅಂಟಿಕೊಳ್ಳುವ ಪ್ರಕಿಯೆ

- ಮೋಜು ಎಂದು ವ್ಯಸನ ಮಾಡುವದು ವ್ಯಸನದ ಮೇಲೆ ಹಿಡಿತವಿದೆ ಅನಿಸುವದು
- ವ್ಯಸನದ ಮೇಲಿನ ಅವಲಂಬನೆ ಹೆಚ್ಚುವದು
- ನೈಸರ್ಗಿಕವಾಗಿ ಆನಂದಿತ ವಾಗಿರಲು ಮೆದುಳಿನ ಕ್ಷಮತೆ ಕಡಿಮೆಯಾಗುವದು
- ಆನಂದಿತನಾಗಿರಲು ವ್ಯಸನವು ಅವಶ್ಯಕ ವೆನಿಸುವದು
- ವ್ಯಕ್ತಿಯು ವ್ಯಸನಗಳ ಗುಲಾಮ ನಾಗುವನು

ಆನಂದ ದೊರಕಿಸುವದು ಇದು ಮನುಷ್ಯನ ನೈಸರ್ಗಿಕ ಪ್ರವೃತ್ತಿ ಯಾಗಿದೆ. ವ್ಯಸನ ಮಾಡುವದರಿಂದ ಮೆದುಳಿನ ಈ ನೈಸರ್ಗಿಕ ಪ್ರವೃತ್ತಿ ಕಡಿಮೆ ಯಾಗುವದು ಮತ್ತು ಮನುಷ್ಯನಿಗೆ ಆನಂದಿತನಾಗಿರಲು ನಶೆಯ ಪದಾರ್ಥಗಳದ್ದೇ ಅವಶ್ಯಕತೆ ಎನಿಸುವದು. ವ್ಯಸನಮಾಡುವದು ಒಂದು ರೋಗವಾಗಿದೆ.

### ಸ್ವಲ್ಪ ವಿಚಾರ ಮಾಡಿರಿ.

- ಇತ್ತಿತ್ತಲಾಗಿ ತಂಬಾಕು, ಸಿಗರೇಟ, ಸೆರೆ, ಮಾದಕ ಔಷಧಗಳು ಇವುಗಳ ವ್ಯಸನ ಸ್ತ್ರೀ-ಪುರುಷರಲ್ಲಿ ಹೆಚ್ಚುತ್ತಲಿದೆ. ಒಂದು ಸರ್ವೆಕ್ಷಣದಂತೆ ಭಾರತದಲ್ಲಿ ಹೋದ ಹತ್ತು ವರ್ಷಗಳಲ್ಲಿ ಆತ್ಮಹತ್ಯೆಯ ಕಾರಣಗಳಲ್ಲಿ ದಾರಿದ್ರ್ಯ, ಸಾಲ, ವರದಕ್ಷಣೆ ಇವುಗಳಿಗಿಂತ ವ್ಯಸನಾಧೀನತೆ ಈ ಕಾರಣದಿಂದಲೂ ಆತ್ಮಹತ್ಯೆಗಳ ಪ್ರಮಾಣ ಹೆಚ್ಚಿದೆ.
- ವ್ಯಸನಮಾಡುವ ವ್ಯಕ್ತಿಗಳ ವ್ಯಸನಕ್ಕಾಗಿ ಪ್ರತಿದಿನದ ಖರ್ಚು ಅರವತ್ತು ರೂಪಾಯಿಗಳು ಅಂದರೆ ವರ್ಷಕ್ಕೆ 21,900 ರೂಪಾಯಿ. ಈ ಹಣ ಶಿಕ್ಷಣಕ್ಕಾಗಿ, ಮನೆಯ ಅವಶ್ಯಕತೆಗಾಗಿ ಇಲ್ಲವೆ ಇತರ ಒಳ್ಳೆಯ ಕೆಲಸಕ್ಕಾಗಿ ಉಪಯೋಗಿಸಲು ಬರಬಹುದು.
- ಯಾವುದೇ ವ್ಯಕ್ತಿಗೆ 14 ರಿಂದ 18 ಈ ವಯಸ್ಸಿನಲ್ಲಿ ಮಾದಕ ಪದಾರ್ಥಗಳ ಸೇವನೆಯ ಚಟ ಸೇರಿದರೆ, ಆ ವ್ಯಕ್ತಿಮುಂದೆ ವ್ಯಸನಉಳ್ಳವಗುವ ಸಾಧ್ಯತೆ 60% ರಷ್ಟು ಇದೆ. ಆದರೆ ಎರಡನೆಯ ಕಡೆಗೆ ವ್ಯಸನಮುಕ್ತಿಯ ಪ್ರಮಾಣವು ಜಗತ್ತಿನಲ್ಲಿ 5-6% ಇಷ್ಟು ಕಡಿಮೆ ಇದ್ದುದರಿಂದ ಮಾದಕ ಪದಾರ್ಥಗಳ ಕುರಿತು ಉಪಚಾರಕ್ಕಿಂತ ಪ್ರತಿಬಂಧ ಉತ್ತಮ, ಇದೇ ಯೋಗ್ಯವೆನಿಸುವದು. ಅಂದರೇನೆ ನಶೆಯ ಪಧಾರ್ಥದ ಮೊದಲನೆಯ ರುಚಿ ನೋಡದೇ ಇರುವದು ಎಲ್ಲಕ್ಕೂ ಒಳ್ಳೆಯದು

### 5. 'ಒಲ್ಲೆ' ಎನ್ನುವ ಕಲೆ

ವ್ಯಸನ ಮಾಡುವ ಜನರ ಆಗ್ರಹಕ್ಕೆ 'ಒಲ್ಲೆ' ಅನ್ನುವದನ್ನು ಕಲಿಯಿರಿ.

**ಗೆಳೆಯ/ ಗೆಳತಿಯರ ಒತ್ತಡಕ್ಕೆ ಇಲ್ಲ ಎನ್ನುವದು**

- ಕಣ್ಣಲ್ಲಿ ಕಣ್ಣು ಹಾಕಿ ಇಲ್ಲವೆನ್ನಿರಿ
- ಅಂಜಬೇಡಿ ನೀವು ಏನೇನೂ ತಪ್ಪನ್ನು ಮಾಡುತ್ತಿಲ್ಲ
- ನಿಮ್ಮ ಅಭಿಪ್ರಾಯ ಎರಡನೆಯವರಿಗೆ ಒತ್ತಿ ಹೇಳಬೇಡಿ ಅದು ನಿಮ್ಮ ಜವಾಬ್ದಾರಿ ಅಲ್ಲ.
- ನೀವು ಗಳೆತನಕ್ಕೆ ಇಲ್ಲವೆಂದು ಹೇಳುತ್ತಿಲ್ಲ ಕೇವಲ ಆ ಕೃತಿಗೆ ಒಲ್ಲೆನೆನ್ನುತ್ತೇನೆ ಎಂದು ಹೇಳಿರಿ.
- ಯಾವುದೋ ಪ್ರಸಂಗದಲ್ಲಿ ಬಹಳ ವಾದವು ಹೆಚ್ಚುತ್ತಿದ್ದರೆ, ಆ ವೇಳೆಗೆ ಅಲ್ಲಿಂದ ಹೊರಟು ಹೋಗಿರಿ.
- ನಿಮ್ಮ ನಿಜವಾದ ಮಿತ್ರರು ಯಾವುತ್ತು ತಿಳಿದುಕೊಳ್ಳುವರು
- ನೀವು ಒಲ್ಲೆನೆಂದರೂ ನಿಮ್ಮ ಮಿತ್ರರು ಮೇಲಿಂದ ಮೇಲೆ ಒತ್ತಾಯ ಮಾಡುತ್ತಿದ್ದರೆ, ಅವನ ಗೆಳೆತನ ಬಿಟ್ಟು ಬಿಡಿ. ನಿಮಗೆ ಇಂಥ ಗೆಳೆಯರ ಅವಶ್ಯಕತೆ ಇಲ್ಲ.

### 6. ವ್ಯಸನದ ಮೇಲೆ ಉಪಾಯ

ನಿಮಗೆ ಇಲ್ಲವೆ ನಿಮ್ಮ ಪರಿಚಯದವರಿಗೆ ವ್ಯಸನ ಯಾರಿಗಾದರೂ ಇದ್ದ ,ರಿ

- ವ್ಯಸನಮುಕ್ತಿ ಕೇಂದ್ರಕ್ಕೆ ಭೆಟ್ಟಿ ಕೊಡಿರಿ
- ವ್ಯಸನವುಳ್ಳ ವ್ಯಕ್ತಿಗೆ ಒಂಟಿಯಾಗಿ ಬಿಡಬೇಡಿ. ಅವನಿಗೆ ಮಾನಸಿಕ ಆಧಾರ ಕೊಡಿರಿ.
- ತಜ್ಞರ ಸಹಾಯ ಪಡೆದುಕೊಳ್ಳಿರಿ.
- ಒಳ್ಳೇ ಹವ್ಯಾಸದಲ್ಲಿ ಮನಸ್ಸನ್ನು ತೊಡಗಿಸಿರಿ.
- ವ್ಯಸನವುಳ್ಳ ಗೆಳೆಯ ಗೆಳತಿಯರ ಸಂಗತಿ ಬಿಡಿರಿ.

ನಿಮ್ಮ ಆರೋಗ್ಯ ಸುರಕ್ಷಿತತೆ, ಆಯುಷ್ಯದ ಜವಾಬ್ದಾರಿ ನಿಮ್ಮದೆ ಇದೆ.

ನೀವು ಇಲ್ಲವೆ ನಿಮಗೆ ಗುರುತು ಇದ್ದ ವ್ಯಕ್ತಿಗೆ ವ್ಯಸನದಿಂದ ಮುಕ್ತಿ ದೊರೆಯಲು ಸಹಾಯ ಬೇಕಾಗಿದೆಯೇ? ಮುಂದಿನ ಶುಲ್ಕವಿಲ್ಲದ ಟೆಲಿಫೋನ ನಂಬರಿನ ಮೇಲೆ ಫೋನ ಮಾಡಿರಿ.

1800-11-0031

ವೇಳೆ

ಮುಂಜಾನೆ 9-30ದಿಂದ ಸಂಜೆಯ 6.00

(ರವಿವಾರ ಬಿಟ್ಟು)

ಭಾರತ ಸರಕಾರದ ವತಿಯಿಂದ ಈ ಸಹಾಯ ನಿಃಶುಲ್ಕವಾಗಿ ಸಿಗುವದು

**ಮಾಡಿ ನೋಡಿರಿ.**

ವರ್ಗದಲ್ಲಿಯ ವಿದ್ಯಾರ್ಥಿಗಳ ನಾಲ್ಕು-ನಾಲ್ಕು ಜನರ ಗುಂಪು ಮಾಡಿರಿ. ವ್ಯಸನದ ಆಸಕ್ತಿಯುಳ್ಳ ವ್ಯಕ್ತಿಗಳ ಲಕ್ಷಣಗಳ, ಚಟಗಳ ವೈಶಿಷ್ಟ್ಯಗಳನ್ನು ಪರಸ್ಪರರಿಗೆ ಹೇಳಿರಿ. ಹಾಗೆಯೆ ಆ ವ್ಯಸನಿ ವ್ಯಕ್ತಿಯಿಂದ ಅವನ ಮತ್ತು ಕುಟುಂಬದ ಸಾಮಾಜಿಕ- ಆರ್ಥಿಕ ಪರಿಸ್ಥಿತಿಯ ಮೇಲೆ ಮತ್ತು ಭಾವನಿಕತೆಯ ಮೇಲೆ (ಭಾವನಿಕ ಸ್ಥಿತಿ) ಹೇಗೆ ಪರಿಣಾಮ ವಾಯಿತು ಅದರ ಚರ್ಚೆ ಮಾಡಿರಿ. ಅದರ ಮೇಲೆ ಪೋಸ್ಟರ ತಯ್ಯಾರಿಸಿರಿ.

## ಮಾಧ್ಯಮಗಳ ಪ್ರಭಾವವನ್ನು ಯಶಸ್ವಿಯಾಗಿ ನಿರ್ವಹಿಸುವುದು

## 1. ತಿಳಿದು ಕೊಳ್ಳಿರಿ

ನಿಮ್ಮ ಮೇಲೆ ಮಾಧ್ಯಮಗಳಿಂದಾಗುವ ಪ್ರಭಾವದ ಕುರಿತು ಜಾಗರೂಕರಾಗಿರಿ. ಅದನ್ನು ಸರಿಯಾಗಿ ತಿಳಿದುಕೊಳ್ಳಿರಿ.

## 2. ಗುರುತಿಸಿರಿ.

ನಿಮ್ಮ ಮೇಲೆ ಮಾಧ್ಯಮಗಳ ಪ್ರಭಾವ ಎಷ್ಟು ಹೇಗೆ ಆಗುತ್ತದೆ, ಇದರ ಬಗ್ಗೆ ವಿಚಾರ ಮಾಡಿ ಅದನ್ನು ಗುರುತಿಸುವದನ್ನು ಕಲಿಯಿರಿ. ನಿಮಗೆ ಯಾವುದೇ ನಶೆಯ ಪದಾರ್ಥದ ಚಟ ಹತ್ತುತ್ತಲಿದೆಯೇ? ನಿಮ್ಮ ಗೆಳೆಯ/ಗೆಳತಿಗೆ ಇಂಥ ಚಟ ಹತ್ತುತ್ತಲಿದೆಯೇ?

## 3. ಆಹ್ವಾನಿಸಿರಿ

ನಿಮಗೆ ಯಾವುದೇ ಪದಾರ್ಥದ ಚಟ ಹತ್ತುತ್ತಿದ್ದರೆ ಈ ಪ್ರಕರಣದಲ್ಲಿ ಹೇಳಿದ ಮಾರ್ಗವನ್ನು ಅವಲಂಬಿಸಿ ನೋಡಿರಿ

## 4. ಕಾರ್ಯರೂಪಕ್ಕೆ ತನ್ನಿರಿ

ನೀವು ನಿರ್ಧರಿಸಿದ ಬದಲಾವಣೆಯನ್ನು ಅಮಲಿನಲ್ಲಿ ತನ್ನಿರಿ. ಯಶಸ್ವಿಯಾಗದಿದ್ದರೆ, ಅದರ ಮೇಲೆ ಪುನಃ ವಿಚಾರ ಮಾಡಿರಿ. ಪಾಲಕರ, ತಜ್ಞರ ಸಹಾಯ ಪಡೆಯಿರಿ.

### ಮೂಲ್ಯಮಾಪನ (ಭಾರಾಂಶ 15%)

| ಒರೆಗಲ್ಲು | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಅಂಕಗಳು |
|---|---|---|---|---|
| ಹೊಸ ಅಂಶಗಳನ್ನು ಕೊಂಡು ಕೊಳ್ಳುವದು | ನಾವು ಯಾವ ಹೊಸ ಅಂಶವನ್ನು ಕೊಂಡು ಕೊಳ್ಳುತ್ತೇವೆ ಮತ್ತು ಅದರಲ್ಲಿ ಎಷ್ಟು ಅನಾವಶ್ಯಕತೆ ಇವೆ. ಇವುಗಳ ಯಾದಿಯನ್ನು ಪ್ರಾಮಾಣಿಕವಾಗಿ ಮಾಡಲಾಯಿತು ಅವು ಕಡಿಮೆ ಮಾಡುವ ನಿಯೋಜನೆ ಮಾಡಲಾಯಿತು | ಕೇವಲ ಯಾದಿಯನ್ನು ಮಾಡಲಾಯಿತು. ಅನಾವಶ್ಯಕ ಅಂಶಗಳನ್ನು ಬೇರೆ ತಗೆಯಲಾಗಿಲ್ಲ | ಯಾದಿಯನ್ನು ಮಾಡಿಲ್ಲ | |
| ನಿಮ್ಮ ಆಯ್ಕೆಯ ಕುರಿತು ಬರೆಯುವದು. | ಕೊಟ್ಟ ಐದು ಪ್ರಶ್ನೆಗಳ ಉತ್ತರಗಳನ್ನು ವಿಚಾರ ಮಾಡಿ ಬರೆಯಲಾಯಿತು | ಕೊಟ್ಟ ಐದು ಪ್ರಶ್ನೆಗಳ ಉತ್ತರಗಳನ್ನು ಅತ್ಯಂತ ಅಂದಾಜಿನಿಂದ ಬರೆಯಲಾಯಿತು | ಉತ್ತರಗಳ ನಕಲು ಮಾಡಿದೆ/ಅರ್ಧಮರ್ಧ ಕೆಲಸ ಮಾಡಿಲಾಗಿದೆ | |
| ವ್ಯಸನಾಧೀನ ವ್ಯಕ್ತಿಯ ಕುರಿತು ಚರ್ಚೆ | ಚರ್ಚೆಯಲ್ಲಿ ಸಕ್ರೀಯ ಸಹಭಾಗ ತಗೆದುಕೊಳ್ಳಲಾಯಿತು ಪಾಠದಲ್ಲಿಯ ಆಧಾರದಿಂದ ಚರ್ಚೆ ಮಾಡಲಾಯಿತು | ಚರ್ಚೆಯಲ್ಲಿ ಸಹಭಾಗ ವಹಿಸಿದೆ. | ಸಹಭಾಗವಿಲ್ಲ. | |

F9F266


ದೃಶ್ಯಕಲೆಯ ತಾಸು ಮುಗಿಯಿತು
ಇದೇನರಿ ಸರ್... ನಾನು ಎದುರಿಗೆ ಕಂಡಂತೆ ಹೇಗಿದೆಯೋ ಹಾಗೆ ಚಿತ್ರ ತಗೆದಿದ್ದೇನೆ ಮತ್ತು ಲೇಬೊನು ಕೇವಲ ತ್ರಿಕೋಣ ತಗೆದಿದ್ದರೂ ನೀವು ಇಬ್ಬರಿಗೂ ಉತ್ತಮ ವೆಂಬ ರಿಮಾರ್ಕ ಮಾಡಿದ್ದೀರಿ
ಏಕೆಂದರೆ ಎರಡೂ ಚಿತ್ರಗಳು ನನಗೆ ಹಿಡಿಸಿವೆ
ಆದರೆ ವರ್ಗದಲ್ಲಿ ನನ್ನ ಚಿತ್ರ ಬಹಳ ಹೆಚ್ಚು ಸುಂದರವಾಗಿ ಇದೆಯಂದು ಎಲ್ಲರೂ ಅಂದಿದ್ದಾರೆ. ಅವನ ಚಿತ್ರ ತಪ್ಪಾಗಿದೆ.
ಅರೇ, ಕಲೆಯಲ್ಲಿ ಸರಿ, ತಪ್ಪು ಹೀಗೆನೂ ಇರುವದಿಲ್ಲ. ನಿಮಗೆ ಯಾವುದೋ ಅಂಶ ಹಿಡಿಸುವದು ಇಲ್ಲವೆ ಹಿಡಿಸಲಾರದು, ಇಷ್ಟೇ!
ಆದರೆ ಅವನಂತೂ ಕೇವಲ ತ್ರಿಕೋಣ ತಗೆದಿದ್ದಾನೆ!
ನನಗೆ ಅನಿಸುತ್ತದೆ, ಈಗ ನಿನಗೆ ಚಿತ್ರಿಕಲೆಯಲ್ಲಿಯ ವಿವಿಧ ಶೈಲಿ ಕಲಿಸಲೇಬೇಕು

# 3 ನಾನು ಮತ್ತು ದೃಶ್ಯ ಕಲೆ

''ಕಲಾಕಾರನು ಎಂದಿಗೂ ಅಯಶಸ್ವಿ ಆಗಲಾರನು, ಸ್ವಂತದರಲ್ಲಿ ಕಲಾಕಾರ ಇರುವದೇ ಒಂದು ಯಶಸ್ಸಾಗಿದೆ.''



**ಉದ್ದೇಶಗಳು:**

1. ವಿದ್ಯಾರ್ಥಿಗಳಿಗೆ ಕಲೆಯ ಮಹತ್ವ ಸ್ವಂತದ ಶಬ್ದಗಳಲ್ಲಿ ಹೇಳಲು ಬರುವದು.
2. ದೃಶ್ಯ ಕಲೆಯಲ್ಲಿಯ ಕೆಲವು ಪ್ರವಾಹಗಳ ಹೆಸರುಗಳು, ಅದರಲ್ಲಿಯ ಪ್ರಸಿದ್ಧ ಕಲಾಕಾರರ ಮತ್ತು ಆ ಶೈಲಿಯ ವೈಶಿಷ್ಟ್ಯಗಳನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವುದು.
3. ಕೆಲವೊಂದು ಬೇರೆ ಕಲಾಪ್ರಕಾರಗಳ ಪರಿಚಯ ಮಾಡಿಕೊಳ್ಳುವದು ಮತ್ತು ಅವುಗಳ ಮಾಧ್ಯಮದಿಂದ ನವನಿರ್ಮಿತಿ ಮಾಡುವದು.
4. ಕಲೆಯ ಕುರಿತು ಮತ್ತು ಮಾನವೀ ಜೀವನದಲ್ಲಿಯ ಅದರ ಸ್ಥಾನದ ಕುರಿತು ವಿಚಾರ ಮಾಡುವದು.

## ಸ್ವಲ್ಪ ಮೋಜು ಮಾಡೋಣ

ನಿಮ್ಮ ಹೆಸರಿನ ಮೊದಲನೆಯ ಅಕ್ಷರ ಬರೆಯಿರಿ. ಆ ಅಕ್ಷರದಿಂದ ಯಾವುದೋ ಪ್ರಾಣಿ, ಪಕ್ಷಿ, ಆಕಾರ ಇಲ್ಲವೆ ವಸ್ತು ನಿಮಗೆ ತಗೆಯಲು ಬರುವದೇ? ಇಲ್ಲವೆ ಆ ಅಕ್ಷರದಲ್ಲಿ ನಕ್ಷಿ ತುಂಬಲು ಬರಬಹುದೇ? ಉದಾಹರಣಾಗಿ ಕೆಳಗಿನ ಚಿತ್ರಗಳನ್ನು ನೋಡಿರಿ.

ವಿದ್ಯಾರ್ಥಿಗಳಿಗೆ ಬೇಕಾದ ಅಕ್ಷರಗಳಿಂದ ಪ್ರಾರಂಭಿಸಲು ಬಿಡಿ. ಕಲ್ಪನೆಗಳಿಗೆ ಪ್ರೋತ್ಸಾಹಿಸಿರಿ.



ಕೆಳದ ವರ್ಷ ನಾವು ದೃಶ್ಯ ಕಲೆಯ ಕುರಿತು ಸ್ವಲ್ಪ ಮಾಹಿತಿಯನ್ನು ಪಡೆದುಕೊಂಡಿದ್ದೇವೆ. ಈ ವರ್ಷ ನಾವು ದೃಶ್ಯ ಕಲೆಗಳಮಹತ್ವ, ಅದರಲ್ಲಿಯ ವಿವಿಧ ಪ್ರವಾಹ ಮತ್ತು ಅದರಲ್ಲಿಯ ಕರಿಅರದ ಸಾಧ್ಯತೆಯ ಕುರಿತು ಮಾಹಿತಿ ಪಡೆದುಕೊಳ್ಳೋಣ.

### ಕಲೆಯ ಮಹತ್ವ

**''ನಿಮ್ಮ ಕಡೆಗೆ ಎರಡು ರೂಪಾಯಿಗಳಿದ್ದರೆ, ಒಂದರಿಂದ ಅನ್ನವನ್ನು ಕೊಂಡುಕೊಳ್ಳಿರಿ ಮತ್ತು ಎರಡನೆಯದನ್ನು ಕಲೆಯ ಮೇಲೆ ಖರ್ಚು ಮಾಡಿರಿ. ಅನ್ನ ನಿಮಗೆ ಬದುಕಿಸಬಹುದು ಆದರೆ ಹೇಗೆ ಬದುಕಬೇಕೆಂಬುದನ್ನು ಕಲೆಯು ಕಲಿಸಬಲ್ಲದು.''** ಈ ಸುವಿಚಾರ ಕಲಿಗೆ ಮಾನವೀ ಜೀವನದಲ್ಲಿ ಇರುವ ಅನನ್ಯಸಾಧಾರಣ ಮಹತ್ವವನ್ನು ಅಧೋರೇಖಿತ ಗೊಳಿಸುವದು.


ಕಲೆಯು, ನಮ್ಮ ಜೀವನಕ್ಕೆ ಅನೇಕ ಮಟ್ಟದಲ್ಲಿ ಸಮೃದ್ಧ ಮಾಡುವದು.

- ಯಾವ ಭಾವನೆಗಳು, ಯಾವ ವಿಚಾರಗಳನ್ನು ಶಬ್ದಗಳಲ್ಲಿ ಹೇಳಲು ಬರುವದಿಲ್ಲ, ಮಂಡಿಸಲು ಬರುವದಿಲ್ಲ ಅವು ಅನೇಕ ವೇಳೆ ಕಲೆಯಿಂದ ಮಂಡಿಸಲು, ವ್ಯಕ್ತ ಗೊಳಿಸಲು ಹೆಚ್ಚು ಸಹಜ ಮತ್ತು ಪರಿಣಾಮಕಾರಕ ವಾಗುವವು

- ಕಲೆಯ ಮಾಧ್ಯಮದಿಂದ ನಾವು ಸುಂದರ ವಸ್ತುಗಳು (ಉದಾ. ಶೋಭಿಸುವಂತ ವಸ್ತುಗಳು, ಹೂವಿನ ಕುಂಡಲ), ಸುಂದರ ಕಲಾ ಕೃತಿ (ಚಿತ್ರ, ಶಿಲ್ಪ), ಸುಂದರ ಅನುಭವ (ಉದಾ. ಚಿತ್ರಪಟ) ನಿರ್ಮಾಣ ಮಾಡಬಹುದು. ಅದರಿಂದ ನಮ್ಮ ಜೀವನ ಹೆಚ್ಚು ಆನಂದಿತ ವಾಗುವದು, ಸಮೃದ್ಧವಾಗುವದು.
- ಯಾವುದೇ ಸಾಮಾಜಿಕ ಸಂದೇಶ ಕೊಡಲು ದೃಶ್ಯಕಲೆಯ ಅತಿ ಪ್ರಭಾವಶಾಲಿ ಉಪಯೋಗ ಮಾಡಲು ಬರುವದು. ಉದಾ. ಕೇವಲ ಭಾಷಣಕ್ಕಿಂತ ಯಾವುದೋ ಸಂವೇದನಶೀಲವುಳ್ಳ ಚಿತ್ರಪಟ ಇಲ್ಲವೆ ಫೋಟೊ ಇದು ಜನರ ಮನಸ್ಸಿಗೆ ಕೂಡಲೇ ಆಕರ್ಷಿಸಬಹುದು.
- ಜನರಿಗೆ ಪ್ರೇರಿತಗೊಳಿಸಲು ಕೂಡ ದೃಶ್ಯಕಲೆಯ ಉಪಯೋಗವನ್ನು ಪ್ರಭಾವಶಾಲಿಯಾಗಿ ಮಾಡಬಹುದು ಹಿರಿಯ ಪುರುಷರಮೇಲಿನ, ಧೈರ್ಯವುಳ್ಳ ಕಾರ್ಯದ ಮೇಲಿನ ಚಿತ್ರಪಟ, ಶಿಲ್ಪ, ಚಿತ್ರ ಜನರಿಗೆ ಮೊದಲಿನಿಂದಲೇ ಪ್ರೇರಣೆ ಕೊಡುತ್ತ ಬಂದಿವೆ.



- ಹಿಂದಿನ ಕಾಲದಲ್ಲಿಯ ಕಲಾಕೃತಿಗಳ ಅಭ್ಯಾಸ ಮಾಡಿದಾಗ ನಮಗೆ ಆಕಾಲದ ಸಮಾಜ ಜೀವನ ತಿಳಿದುಕೊಳ್ಳಲು ಸಹಾಯವಾಗುವದು. ನಮ್ಮಲ್ಲಿಯ ಪುರಾತನ ವಾಸ್ತುಗಳ ಮೇಲಿನ ಚಿತ್ರ, ಶಿಲ್ಪ, ಉತ್ಖನನ ದೊರಕಿದ ಪಾತ್ರೆಗಳು, ಆಟದ ಸಾಮಾನುಗಳು, ಶಿಲಾಲೇಖ ಮುಂತಾದವುಗಳು, ಆ ಹಿಂದಿನ ಕಾಲದ ಒಂದು ರೀತಿಯ ಸಾಕ್ಷಿಯನ್ನು ಕೊಡುವವು.
- ಕಲೆಯ ಮಾಧ್ಯಮದಿಂದ ಜನರು ಒಂದೆಡೆ ಬರುವರು ಮತ್ತು ಪರಸ್ಪರರ ಕುರಿತು ಆದರದ ಭಾವನೆ ಹೆಚ್ಚುವದು. ಯಾವಾಗ ನಾವು ಇತರ ಪ್ರಾಂತಗಳಲ್ಲಿಯ, ದೇಶಗಳಲ್ಲಿಯ ಕಲೆಯನ್ನು ನೋಡುವೆವೋ, ಕೇಳುವೊವೋ ಆಗ ಅವರ ಸಂಸ್ಕೃತಿಯ ಕುರಿತು, ಜನರ ಕುರಿತು ನಮ್ಮ ಮನಸ್ಸಿನಲ್ಲಿ ಆದರ, ಪ್ರೇಮ, ಸಹಭಾವನೆ ನಿರ್ಮಾಣ ವಾಗುವದು. ಯಾವಾಗ ನಾವು ಇತರ ದೇಶಗಳಲ್ಲಿಯ ಚಿತ್ರ ಶಿಲ್ಪ, ಸಂಗೀತ, ಖಾದ್ಯ ಪದಾರ್ಥಗಳ ಅನುಭವ ಪಡೆಯುತ್ತೇವೆಯೋ ಆಗ ನಾವು ಒಂದು ರೀತಿಯಿಂದ ಅವರೊಂದಿಗೆ ಸಂಬಂಧ ನಿರ್ಮಾಣ ಮಾಡುತ್ತೇವೆ.
- ಕಲೆಯ ಆಸ್ವಾದವನ್ನು ಪಡೆದುಕೊಳ್ಳುವ ವೃತ್ತಿ ಇರುವವರ ಮನಸ್ಸಿನಲ್ಲಿ ಗೊತ್ತಿರದ ಹಾಗೆ ಸೌಂದರ್ಯ ಶೋಧಿಸುವ ವೃತ್ತಿಯು ನಿರ್ಮಾಣವಾಗುವದು. ಕಲೆಯ ಆದರ ಮಾಡುವ ಜನರು ಹೆಚ್ಚು ಶಾಂತಿಪ್ರಿಯ ಅಹಿಂಸಕ ಮತ್ತು ಹೆಚ್ಚು ಹೊಂದಾಣಿಕೆ ಮಾಡಿಕೊಳ್ಳುವವರಾಗಿರುವ ಸಾಧ್ಯತೆ ಇರುವದು.
- ಹೀಗೆನ್ನಲಾಗುತ್ತದೆ, ಏನೆಂದರೆ ಜಗತ್ತಿನಲ್ಲಿಯ ಸರ್ವೋತ್ತಮ ಕಲೆಯು ನಿಸರ್ಗದಲ್ಲಿ ಕಂಡು ಬರುವದು. ನಿಸರ್ಗದಲ್ಲಿ ಅಸ್ತಿತ್ವದಲ್ಲಿರುವ ಬಣ್ಣ, ಆಕಾರ, ನಕ್ಷಿ, ಧ್ವನಿ, ಮಾನವನಿಗೆ ಪ್ರೇರಣೆ ಕೊಡುತ್ತ ಬಂದಿವೆ ಮತ್ತು ಮಾನವೀ ಕಲಾಕೃತಿಗಳಲ್ಲಿ ಬಹಳಸಲ ಅದು ನೋಡಲು ಸಿಗುವದು. ಸ್ವಲ್ಪದರಲ್ಲಿ ಹೇಳುವದಾದರೆ, ಕಲೆಯೊಂದಿಗೆ ಹೊಂದಿಕೊಳ್ಳುವದೆಂದರೆ ಒಂದು ರೀತಿಯಲ್ಲಿ ನಿಸರ್ಗದೊಂದಿಗೆ ಹೊಂದಿಕೊಳ್ಳುವದೇ ಆಗಿದೆ.



- ಯಾವಾಗ ನಾವು ಯಾವುದೋ ಕಲಾಕೃತಿಯನ್ನು ನಿರ್ಮಾಣ ಮಾಡುತ್ತೇವೆ ಇಲ್ಲವೆ ಯಾವದೇ ಕಲಾಕೃತಿಯ ಅಸ್ವಾದ ಪಡೆದುಕೊಳ್ಳುತ್ತೇವೆ, ಅಗ ನಮಗೆ ಏನು ಹಿಡಿಸುವುದು ಮತ್ತು ಏನು ಹಿಡಿಸುವದಿಲ್ಲ ವೆಂಬುದು ನಮಗೆ ಗೊತ್ತಿರದ ಹಾಗೆ ಘಟಿಸಿರುತ್ತದೆ. ಅಂದರೇನೆ ಕಲೆಯ ಮೂಲಕ ನಾವು ಸ್ವಂತಕ್ಕೆ ಹೆಚ್ಚು ಒಳ್ಳೆಯ ರೀತಿಯಿಂದ ತಿಳಿದು ಕೊಳ್ಳಬಹುದು.

* ಮಾನವ ಜೀವನದಲ್ಲಿ ಕಲೆಗೆ ಇಷ್ಟೊಂದು ಅನನ್ಯಸಾಧಾರಣ ಮಹತ್ವವಿದೆ ಇದರಿಂದ ಕಲೆಯ ಹೊರತಾಗಿ ಮಾನವ ಜೀವನ ಒಂದು ರೀತಿಯಿಂದ ಪ್ರಾಣಿಗಳ ಆಯುಷ್ಯದಂತೆಯೇ ನಿರ್ಧರಿಸಬಹುದು. ಪರಿಪೂರ್ಣ ಸಮೃದ್ಧ ಮಾನವಿ ಜೀವನ ಜೀವಿಸಲು ಯಾವುದೇ ಕಲೆಯೊಂದಿಗೆ ಹೊಂದಿಕೊಂಡಿರುವದು. ಯಾವಾಗಲೂ ಉಪಯುಕ್ತವಾಗಿದೆ.

**ಸ್ವಲ್ಪ ನೆನಪಿಸಿ ನೋಡಿ !**


ನಿಮಗೆ ಎಂದಾದರೂ ಯಾವುದೇ ಕಲಾಕೃತಿಯು ಸ್ಫೂರ್ತಿ ಕೊಟ್ಟಿದೆಯೇ? ಹಾಡು, ಶಿಲ್ಪ, ಕಥೆ, ಕವಿತೆ, ಚಿತ್ರಪಟ, ನೃತ್ಯ, ನಾಟಕ ಮುಂತಾದವುಗಳ ವಿಚಾರ ಮಾಡಿರಿ. ಇದ್ದರೆ ಆ ಕುರಿತು ಸ್ವಲ್ಪದರಲ್ಲಿ ನಿಮ್ಮ ನೋಟಬುಕ್ಕಿನಲ್ಲಿ ಬರೆಯಿರಿ.


### ಕೆಲವು ಬೇರೆ ದೃಷ್ಯಕಲೆಗಳು

ಹೋದ ವರ್ಷ ನಾವು ಪ್ರಚಲಿತವಿದ್ದ ಕಲಾಪ್ರಕಾರಗಳ ಕುರಿತು ಮಾಹಿತಿಯನ್ನು ಪಡೆದು ಕೊಂಡಿದ್ದೇವೆ. ಈ ವರ್ಷ ನಾವು ಕೆಲವು ಬೇರೆ ದೃಶ್ಯಕಲಾ ಪ್ರಕಾರಗಳ ಮಾಹಿತಿಯನ್ನು ಪಡೆದು ಕೊಳ್ಳೋಣ

### ಆದಿವಾಸಿ ಕಲೆ

ಆದಿವಾಸಿ ಜನಸಮುದಾಯವು ಭಾರತದಂತೆಯೇ ಇತರ ದೇಶಗಳಲ್ಲಿಯೂ ನೋಡಲು ಸಿಗುವವು. ಆದಿವಾಸಿ ಚಿತ್ರಗಳಲ್ಲಿ ಬಹಳ ವೇಳೆ ನಿಸರ್ಗದಲ್ಲಿಯ ಘಟಕಗಳ ಚಿತ್ರವನ್ನು ನೋಡಬಹುದು. ಸಾಧಾರಣ ಸರಳವಾದ ಆಕಾರ ಉಪಯೋಗಿಸಿಯೂ ಅತೀ ಸುಂದರವಾದ ಚಿತ್ರಗಳನ್ನು ನಿರ್ಮಿಸುವದು. ಆದಿವಾಸಿ ಕಲೆಯ ವೈಶಿಷ್ಟ್ಯವಾಗಿದೆ. ಆಷ್ಟ್ರೇಲಿಯಾ ಖಂಡದಲ್ಲಿಯ ಆದಿವಾಸಿ ಸಮಾಜದ ಚಿತ್ರಕಲೆಯು ಕೂಡಾ ಮಹಾರಾಷ್ಟ್ರದಲ್ಲಿಯ ವಾರಲಿ ಚಿತ್ರಕಲೆಯ ಹಾಗೆ ಕೆಲವು ನಿಶ್ಚಿತ ಆಕಾರವನ್ನು ಉಪಯೋಗಿಸಿ ಮಾಡಿದ್ದನ್ನು ಕಾಣಬಹುದು.






### ಆಷ್ಟ್ರೇಲಿಯಾದಲ್ಲಿಯ ಆದಿವಾಸಿ ಚಿತ್ರಗಳು

ಆಷ್ಟ್ರೇಲಿಯಾದಲ್ಲಿಯ ಆದಿವಾಸಿ ಚಿತ್ರಗಳು ಮುಖ್ಯವಾಗಿ ಬಿಂದುಗಳ ಉಪಯೋಗ ಮಾಡಿ ತಯ್ಯಾರಿಸಲ್ಪಟ್ಟಿರುತ್ತವೆ. ಈ ಬಿಂದು ಗಳು ಆಕಾರದಿಂದ ಚಿಕ್ಕ ಇಲ್ಲವೆ ದೊಡ್ಡವಾಗಿ ಇರಬಹುದು. ಬಿಂದುಗಳ ಉಪಯೋಗಮಾಡಿ ಇತರ ವಿವಿಧ್ಧ ಆಕಾರಗಳನ್ನು ತಯ್ಯಾರಿಸಿದ್ದು ನಮಗೆ ಕಂಡು ಬರುವದು. ಕಡ್ಡಿಗಳ ಸಹಾಯದಿಂದ ಈ ಬಿಂದುಗಳನ್ನು ರಚಿಸಲಾಗುತ್ತದೆ.

### ಶೋಧಿಸಿರಿ ನೋಡೋಣ

ನಿಮ್ಮ ಭಾಗದಲ್ಲಿ ಹೀಗೆಯೇ ಯಾವುದೇ ಆದಿವಾಸಿ ಇಲ್ಲವೆ ಜನಪದಕಲೆ ಪ್ರಸಿದ್ಧವಾಗಿದೆಯೇ? ಅವುಗಳ ಶೋಧಮಾಡಿರಿ. ಅದನ್ನು ನಿರ್ಮಿಸುವ ಮತ್ತು ಜೋಪಾನವಾಗಿ ಇಡುವ ಕಲಾಕಾರರೊಂದಿಗೆ ಮಾಡನಾಡಿರಿ. ಅವರ ತಂತ್ರವನ್ನು ತಿಳಿದು ಕೊಳ್ಳಿರಿ. ನೋಟಬುಕ್ಕಿನಲ್ಲಿ ಬರೆಯಿರಿ.

## ಕೋಳಮ ರಂಗೋಲಿ ಕಲೆ





ನಮ್ಮ ದಿನನಿತ್ಯದ ರಂಗೋಲಿಗಿಂತ ಕೋಳಮ ರಂಗೋಲಿ ಕಲೆಯು ಭಿನ್ನವಾಗಿರುವದು. ಎಷ್ಟೋ ಸಮಾಂತರ ಬಿಂದುಗಳ ಒಂದು ರಚನೆಯನ್ನು ಮಾಡಿ, ಅದರ ಸುತ್ತಮುತ್ತಲೂ ವಕ್ರಾಕಾರ ಇಲ್ಲವೆ ಸರಳ ರೇಷೆಗಳಿಂದ ನಕ್ಷೆ ತೆಗೆಯುತ್ತ ಹೋಗಿ ಎಲ್ಲ ಬಿಂದುಗಳಸುತ್ತಲೂ ನಕ್ಷಿ ತಗೆದ ಮೇಲೆ ನಿಲ್ಲುವದು ಇದು ಈ ರಂಗೋಲಿಯ ಪದ್ಧತಿಯಾಗಿದೆ. ಇದರಿಂದ ಬೇರೆ ಬೇರೆ ಪ್ರಕಾರಗಳ ರಂಗೋಲಿ ತಗೆಯಲು ಬರುವದು. ಈ ರಂಗೋಲಿಯು ಹಿಂದಿನಕಾಲದಲ್ಲಿ ಅಕ್ಕಿಯ ಹಿಟ್ಟಿನಲ್ಲಿ ನೀರು ಹಾಕಿ ತಗೆಯ ಲಾಗುತ್ತಿತ್ತು.


### ಮಾಡಿ ನೋಡಿರಿ!

ಎರಡು-ಎರಡು ಗುಂಪು ಮಾಡಿರಿ. ಒಬ್ಬ ವಿದ್ಯಾರ್ಥಿಯು ಎರಡನೆಯವನಿಗೆ ನಿಶ್ಚಿತ ಬಿಂದುಗಳ ಒಂದು ರಚನೆಯನ್ನು ತಗೆದು ಕೊಡಬೇಕು. ಎರಡನೆಯವನು. ಆ ರಚನೆಯ ಸುತ್ತಮುತ್ತಲೂ ನಕ್ಷಿ ನಿರ್ಮಾಣ ಮಾಡಬೇಕು. ಅದು ಸಂದರವಾಗಿ ಕಾಣಬೇಕು ಮತ್ತು ಎಲ್ಲ ಬಿಂದುಗಳ ಉಪವಾಗಬಹುದು, ಈ ರೀತಿಯಾಗಿ ಮಾಡಬೇಕು. ನಂತರ ಎರಡನೆಯವನು ರಚನೆ ಮಾಡಬೇಕು ಮತ್ತು ಮೊದಲನೆಯವನು ನಕ್ಷಿ ತಗೆಯಬೇಕು. ಈ ಉಪಕ್ರಮವನ್ನು ನೋಟಬುಕ್ಕಿನಲ್ಲಿ ಪೆನ್ನಿನಿಂದಲೂ ಮಾಡಬಹುದು.

## ರೇಖಾಟನೆ (ಡೂಡಲ)








ಡೂಡಲ ಅಂದರೆ ಕೈಯಲ್ಲಿಯ ಪೆನ್ನು, ಪೆನ್ಸಿಲ್, ಸ್ಕೆಚ್‌ಪೆನ್ ಮುಂತಾದವುಗಳ ಮಾಧ್ಯಮದ ಉಪಯೋಗ ಮಾಡಿ ಯಾವುದೇ ಕಾಗದದ ಮೇಲೆ ಸ್ಫೂರ್ತಿಯಿಂದ, ಏನನ್ನೂ ನಿರ್ಧರಿಸದೆ, ಬಂದ ಆಕಾರದಿಂದ ತಗೆದ ರೇಖಾಟನೆ. ಇದು ನೋಟ ಬುಕ್ಕಿನ ಮೂಲೆಗೆ, ಹಿಂದಿನ ಪೇಜಿನ ಮೇಲೆ, ಪುಸ್ತಕದಲ್ಲಿಯ ಚಿತ್ರಗಳ ಮೇಲೆ, ವರ್ತಮಾನ ಪತ್ರಿಕೆಯಲ್ಲಿಯ ಸುದ್ದಿಗಳ ಮೇಲೆ ಇಲ್ಲವೆ ಸ್ವಚ್ಛ ಬರಿದಾದ ಕಾಗದದ ಮೇಲೂ ಇರಬಹುದು. ನೀವು ಒಂದಿಲ್ಲ, ಒಂದು ಸಲ ಇಂಥ ರೇಖಾಟನೆಯನ್ನು ನಿಶ್ಚಿತವಾಗಿ ಮಾಡಿರಬಹುದು. ಹೀಗೆ ಮಾಡುವದರಿಂದ ಮನಸ್ಸಿನ ಮೇಲಿನ ಒತ್ತಡವು ಕಡಿಮೆಯಾಗುವದು ಎಂಬುದು ಗೊತ್ತಿದೆಯೆ ನಿಮಗೆ? ಮಾಡಿ ನೋಡಿರಿ.

ಪ್ರತಿಯೊಬ್ಬರ ಡೂಡಲ ತಗೆಯುವ ಪದ್ಧತಿ ಬೇರೆಯಾಗಿರುವದು ಯಾರೊಬ್ಬರು ಸ್ವಂತದ ಒಳ್ಳೆಯ ಶೈಲಿಯುಳ್ಳ ಚಿತ್ರ ತಗೆಯಬಹುದು ಬೇರೊಬ್ಬರು ಯಾವುದಾದರೂ ನಕಲು ಮಾಡಬಹುದು.

## ನಿಲ್ಲಿಸುವದು (ಇನ್‌ಸ್ಟಾಲೇಶನ)

ನಿಲ್ಲಿಸುವ ಶಿಲ್ಪ ಕಲಾಪ್ರಕಾರದಲ್ಲಿ ಉಪಲಬ್ಧವಿರುವ ತ್ರಿಮಿತಿಯ ಸ್ಥಳವನ್ನು ಉಪಯೋಗಿಸಿ ಬೇಕಾದ ವಸ್ತುಗಳ ಉಪಯೋಗ ಮಾಡಿ ರಚನೆ ತಯ್ಯಾರಿಸಲಾಗಿರುತ್ತದೆ. ಕೆಲವು ಕಲಾಕಾರರು ಶಾಶ್ವತ ಸ್ವರೂಪದ ನಿಲ್ಲಿಸಿದ ಶಿಲ್ಪ ಮಾಡುತ್ತಾರೆ, ಕೆಲವು ಕಲಾವಿದರು ಬಹಳ ಬಾಳಲಾರದು ಇಂಥ ಮಾಧ್ಯಮಗಳಿಂದ ನಿಲ್ಲಿಸುತ್ತಾರೆ. ಆ್ಯಂಡಿ ಗೊಲ್ಡಸವರ್ದಿ ಈ ಬ್ರಿಟಿಶ ನಿಲ್ಲಿಸುವ ಶಿಲ್ಪಕಾರನು ಈ ಕಲಾಪ್ರಕಾರದಲ್ಲಿ





ಬಹಳ ಒಳ್ಳೆಯ ಕೆಲಸ ಮಾಡಿದ್ದಾನೆ. ಅವನ ಬಹಳಷ್ಟು ನಿಲ್ಲಿಸಿದ ಶಿಲ್ಪಗಳು ನಿಸರ್ಗದಲ್ಲಿ ಹೋಗಿ ದೊರೆತ ಸಾಮಗ್ರಿಗಳನ್ನು ಉಪಯೋಗಿಸಿ ಮಾಡಿದ್ದು ಕಾಣಬಹುದು. ಕೆಲವು ದೊರೆತ ಸಾಮಗ್ರಿಗಳನ್ನು ಉಪಯೋಗಿಸಿ ಮಾಡಿದ್ದು ಕಾಣಬಹುದು. ಕೆಲವು ವೇಳೆಗೆ ಶಿಲ್ಪಗಳನ್ನು ನಿಲ್ಲಿಸುವಾಗಲೇ ಅವು ಮುರಿದು ಕೂಡಾ ಬೀಳುತ್ತಿದ್ದವು. ಆದರೆ ಕಲೆಯ ಪ್ರಕ್ರಿಯೆಯ ಮೇಲೆ ಧೃಢ ವಿಶ್ವಾಸವಿರುವ ಈ ಶಿಲ್ಪಕಾರನಿಗೆ 'ಮುರಿದು ಬೀಳುವದೆಂದರೆ ಸಮತೋಲ ಸಾಧಿಸುವದು'. (Collapsing is balance)ಎಂದು ಅನಿಸಿತು.

## ದೃಶ್ಯ ಕಲೆಯಲ್ಲಿಯ ಕೆಲವು ಪ್ರವಾಹಗಳು

ಕಲೆಗಾಗಿ ಪ್ರೇರಣೆಯನ್ನು ಮನುಷ್ಯನು ನಿಸರ್ಗದಿಂದ ಹಾಗೆಯೆ ಅವನ ದೈನಂದಿನ ಜೀವನದಿಂದ ತಗೆದುಕೊಳ್ಳುತ್ತಾನೆ. ಅಂತೆಯೆ ಅಕ್ಕಪಕ್ಕದ ರಾಜಕೀಯ, ಸಾಮಾಜಿಕ ವಾತಾವರಣದ, ಘಟನೆಗಳ ಪ್ರತಿಕ್ರಿಯೆ ಅವನ ಕಲೆಯಲ್ಲಿದ್ದದ್ದು ಕಂಡುಬರುವದು. ಇದರಿಂದಲೇ ಪ್ರತಿಕಲೆಯಲ್ಲಿ ಬೇರೆ ಬೇರೆ ವಿಚಾರಗಳು ಮುಂದೆ ಬರುತ್ತವೆ, ಪ್ರಯೋಗ ಮಾಡಿ ನೋಡಲಾಗುತ್ತದೆ. ಬೇರೆ ಬೇರೆ ಶೈಲಿ, ಅಭಿವ್ಯಕ್ತಿಯ ಪದ್ದತಿ, ಕಲೆಯ ಕುರಿತಾದ ಹೊಸ ತತ್ವಜ್ಞಾನ ನಿರ್ಮಾಣವಾಗುತ್ತ ಹೋಗುತ್ತವೆ. ಇದಕ್ಕೆ ಕಲೆಯಲ್ಲಿಯ ಪ್ರವಾಹವೆಂದು ಕರೆಯುತ್ತಾರೆ. ದೃಶ್ಯ ಕಲೆಯಲ್ಲಿಯ ಇಂಥ ಕೆಲವು ಆಯ್ದ ಪ್ರವಾಹದ ಕುರಿತು ಮಾಹಿತಿಯನ್ನು ಪಡೆಯೋಣ. ಇದರ ಹೊರತಾಗಿ ಇತರ ಅನೇಕ ಪ್ರವಾಹಗಳ ಮಾಹಿತಿಯು ಇಂಟರನೆಟಮೇಲೆ ಸಿಗುವದು.

ವಿದ್ಯಾರ್ಥಿಗಳಿಗೆ ಮೊದಲು ಪ್ರತಿಯೊಂದು ಶೈಲಿಯ ಚಿತ್ರವನ್ನು ಸರಿಯಾಗಿ ನೋಡಿ ಅದರ ಆಕುರಿತಾದ ನಿರೀಕ್ಷಣೆಯನ್ನು ನೋಂದಾಯಿಸಲು ಹೇಳಿರಿ.

ಆನಂತರ ಅವರಿಗೆ ಪ್ರತಿಯೊಂದು ಪ್ರವಾಹದಕುರಿತು ಮಾಹಿತಿ ಹೇಳಬೇಕು.

### ಇಂಪ್ರೇಶನಿಝುಮ (ಪ್ರಭಾವವಾದ)



ಮೊನೆ (Monet) – 55.3 ಸೆಮಿ × 64.7 ಸೆಮಿ
ಕ್ಯಾನವ್ಹಸ್ ಮೇಲೆ ತಗೆದ ತೈಲಚಿತ್ರ



ವ್ಯಾನ್ ಗಾ (Van Gogh) – 74 ಸೆಮಿ × 94 ಸೆಮಿ
ಕ್ಯಾನವ್ಹಸ್ ಮೇಲೆ ತಗೆದ ತೈಲಚಿತ್ರ



ಈ ಶೈಲಿಯ ಉದಯವು ಫ್ರಾನ್ಸದಲ್ಲಿ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಮತ್ತು ಇಪ್ಪತ್ತನೆಯ ಶತಕದ ಪ್ರಾರಂಭದಲ್ಲಾಯಿತು. ಈ ಹಿಂದಿನ ಚಿತ್ರಗಳಲ್ಲಿ ಐತಿಹಾಸಿಕ, ಧಾರ್ಮಿಕ ವಿಷಯ, ನಿಸರ್ಗ ಚಿತ್ರ ಇಲ್ಲವೆ ವ್ಯಕ್ತಿಚಿತ್ರಗಳನ್ನು ಬಿಡಿಸಲಾಗುತ್ತಿತು. ಆದರೆ ಅದರಲ್ಲಿ ಅಕ್ಕಪಕ್ಕದ ಪರಿಸ್ಥಿತಿಯ ಇಲ್ಲವೆ ಸಮಾಜಜೀವನದ ಅಂತರ್ಭಾವ ವಿರುತ್ತಿರಲಿಲ್ಲ. ಹಾಗೆಯೇ ಈ ಚಿತ್ರಗಳನ್ನು ಪೂರ್ಣವಾಗಿ ನಾಲ್ಕು ಗೋಡೆಗಳಲ್ಲಿದ್ದು ತಗೆಯಲಾಗುತ್ತಿತ್ತು. ಆದರೆ ಹತ್ತೊಂಬತ್ತನೆಯ ಶತಕದ ಮಧ್ಯದಲ್ಲಿ ಇಂಪ್ರೆಶನಿಝುಮ್ ಶೈಲಿಯ ಉದಯವಾದ ನಂತರ ಸುತ್ತಲಿನ ಪ್ರಸಂಗಗಳ ವಾಸ್ತವವಾದಿ ಚಿತ್ರವನ್ನು ಕಲಾಕಾರರಿಂದ ಬಿಡಿಸಲಾಗಹತ್ತಿದವು. ಹಾಗೆಯೇ ನಾಲ್ಕು ಗೊಡೆಗಳ ಹೊರಗೆ ಹೋಗಿ, ನಿಸರ್ಗದಲ್ಲಿ ಕುಳಿತು ಚಿತ್ರಬಿಡಿಸಲು ಸಾಧ್ಯವಾಯಿತು, ಈ ಶೈಲಿಯ ವಿಚಾರ ಮಾಡುವಾಗ ಚಿಕ್ಕ ಚಿಕ್ಕ ಬಿಂದುಗಳ ಮತ್ತು ರೇಷೆಗಳ ಉಪಯೋಗ ಮಾಡಿ ಮೂಲಬಣ್ಣವನ್ನು ಒಂದರ ಮುಂದೆ ಒಂದು ಹಚ್ಚಲಾಗುತ್ತದೆ ಯಾವಾಗ ಪ್ರೇಕ್ಷಕನು ಒಂದು ವಿಶಿಷ್ಟ ಅಂತರದಿಂದ ಆ ಚಿತ್ರವನ್ನು ನೋಡುವನೋ ಆಗ ಆ ಬಣ್ಣ ಒಂದರಳಗೊಂದು ಸೇರಿದಂತೆ ಅನಿಸುತ್ತವೆ. ಈ ಶೈಲಿಯ ಒಂದು ಮಹತ್ವದ ಮುಖ ಅಂದರೆ, ಚಿತ್ರದಲ್ಲಿಯ ಆಕೃತಿಬಂಧದ ಪೃಷ್ಠ ಭಾಗದ ಮೇಲೆ ಧೃತಗತಿಯಿಂದ ಅಲುಗಾಡುವ ಪ್ರಕಾಶ ಮತ್ತು ವಾತಾವರಣದಲ್ಲಿಯ ಬದಲಿಸುತ್ತಿರುವ ಪರಿಸ್ಥಿತಿಯ ಚಿತ್ರ. ಹಾಗೆಯೇ ಸಮಕಾಲಿನ ಜೀವನದ ಅರಿವನ್ನು ಮಾಡಿಕೊಳ್ಳುವ ಮತ್ತು ಪ್ರಕಾಶದ ಅಸಂಖ್ಯ ಛಾಯೆಯನ್ನು ಈ ಚಿತ್ರಗಳು ತೊರಿಸುವವು. ಈ ಶೈಲಿಯಲ್ಲಿ ಚಿತ್ರ ತೆಗೆಯುವ ಕೆಲವು ಪ್ರಮುಖ ಚಿತ್ರಕಾರರೆಂದರೆ ಮೋನೆ ಮತ್ತು ವ್ಹಾ ಗಾ (Van Gogh) ಇವರಾಗಿದ್ದಾರೆ.

## ಕ್ಯೂಬಿಝುಮ (ಘನವಾದ)



ಪೌಲ ಸೆಝಾನ (Paul Cezanne)
81 ಸೆಮಿ ✕ 65 ಸೆಮಿ
ಕ್ಯಾನ್ವ್ಹಸಮೇಲೆ ತಗೆದ ಚಿತ್ರ



ಪಾಬ್ಲೊ ಪಿಕಾಸೊ (Pablo Picasso)
126 ಸೆಮಿ ✕ 73 ಸೆಮಿ ✕ 41 ಸೆಮಿ
ಬಣ್ಣಬಳಿದ ತಗಡಿ ನಿಂದ ತಯ್ಯಾರಿಸಿದ ಶಿಲ್ಪ




ಪಾಬ್ಲೊ ಪಿಕಾಸೊ (Pablo Picasso)
60 ಸೆಮಿ ✕ 49 ಸೆಮಿ
ಕ್ಯಾನವ್ಹಸ ಮೇಲೆ ತಗೆದ ಚಿತ್ರ




ಘನವಾದ ವೈಭವದ ಕಾಲ ಸಾಮಾನ್ಯವಾಗಿ 1907ರಿಂದ 1914 ಎಂದು ತಿಳಿಯಲಾಗುತ್ತದೆ. ಈ ಶೈಲಿಯ ಪ್ರಮುಖ ಕೇಂದ್ರ ಪ್ಯಾರಿಸ್ ಇತ್ತು. ಕ್ಯುಬಿಝುಮಕ್ಕೆ ಇಪ್ಪತ್ತೊಂದನೆಯ ಶತಕದಲ್ಲಿಯ ಎಲ್ಲಕ್ಕೂ ಪ್ರಭಾವಶಾಲಿ ಚಿತ್ರಶೈಲಿಗಳಲ್ಲಿ ಒಂದು ಎಂದು ತಿಳಿಯಲಾಗುತ್ತದೆ. ಈ ಶೈಲಿಯಲ್ಲಿ ಯಾವ ಅಂಶದ ಚಿತ್ರ ತಗೆಯುವದಿದೆಯೊ, ಅದರ ವಿಶ್ಲೇಷಣೆ ಮಾಡಿ ಅದರ ವಿವಿಧ ಭೌಮಿತಿಕ ಆಕಾರದಲ್ಲಿ ತುಂಡುಗಳನ್ನು ಮಾಡಿ ಆ ತುಂಡುಗಳನ್ನು ಪುನಃ ಜೋಡಿಸಿ ಒಂದು ಪೂರ್ಣ ಆಕೃತಿಯನ್ನು ನಿರ್ಮಾಣ ಮಾಡಲಾಗುವದು. ಯಾವುದೇ ವಸ್ತು, ವ್ಯಕ್ತಿಯ ಚಿತ್ರ ಇವು ಒಂದೇ ದೃಷ್ಟಿಕೋನದಿಂದ ನೋಡಿ ತಗೆಯದೇ ವಿವಿಧ ದೃಷ್ಟಿ ಕೋನದಿಂದ ನೋಡಿ ತೆಗೆಯುವದರ ಮೇಲೆ ಈ ಶೈಲಿಯ ಒತ್ತು ಇರುವದು ಸೃಷ್ಟಿಯಲ್ಲಿಯ ಪ್ರತ್ಯಕ್ಷ ಆದರೂ ತ್ರಿಮಿತಿಕ ಆಕಾರ

ಚಿತ್ರದಲ್ಲಿಯ ಸಪಾಟಾದ ಪ್ರತಲದ ಮೇಲೆ ಹೇಗೆ ಪರಿವರ್ತಿತ ಮಾಡುವದು ಇದಕ್ಕಾಗಿ ಬೆಳಕು ಮತ್ತು ಕತ್ತಲೆಗಳ ಮಾದರಿಯ ಉಪಯೋಗ ಆಕಾರ ಅಧೋರೇಖೆ ಗೊಳಿಸಲು ಮಾಡಲಾಗುವದು. ಈ ಶೈಲಿಯ ಪ್ರಸಿದ್ಧ ಚಿತ್ರಕಾರರಾಗಿದ್ದರು ಪಾಬ್ಲೊ ಪಿಕಾಸೊ (Pablo Picasso) ಮತ್ತು ಪೌಲ ಸೆಝಾನ (Paul Cezanne)

## ಸರ್‍ರಿಅಲಿಝಮ (ಅತಿವಾಸ್ತವವಾದ)



ಸೆಲ್ವೆಡಾರದಾಲಿ (Salvador Dali)
24 ಸೆಮಿ × 33 ಸೆಮಿ
ಕ್ಯಾನವ್ಹಸ ಮೇಲೆ ತಗೆದ ಚಿತ್ರ



ಜಾನ ಮಿರೊ (Joan Miro)
355 ಸೆಮಿ × 270 ಸೆಮಿ
ಕ್ಯಾನವ್ಹಸ ಮೇಲೆ ತಗೆದ ಚಿತ್ರ



ಜಾನ ಮಿರೊ
(Joan Miro)
10 ಮಿಟರಿನ ಮೇಲಿನ ಶಿಲ್ಪ



ಈ ಪ್ರವಾಹದ ಪ್ರಾರಂಭ 1920ರ ಪೂರ್ವಾರ್ಧದಲ್ಲಿ ಆಯಿತು ದೈನಂದಿನ ಜೀವನದಲ್ಲಿ ನಾವು ಯಾವ ವಸ್ತು, ವ್ಯಕ್ತಿ, ಘಟನೆಯನ್ನು ನೋಡುತ್ತೇವೆ, ಅವುಗಳ ನಮ್ಮ ಅಂತರ್ಮನದಮೇಲೆ ಗೊತ್ತಿಲ್ಲದ ಹಾಗೆ ಪ್ರತಿಸಾದವು ಮೂಡುತ್ತಿರುತ್ತದೆ. ನಮ್ಮ ಮನಸ್ಸಿನಲ್ಲಿ ಆ ವಸ್ತು, ವ್ಯಕ್ತಿ, ಘಟನೆಗಳ ಬೇರೆಯೇ ಪ್ರತಿಮೆ, ಕಲ್ಪನೆ ನಿರ್ಮಾಣ ವಾಗುತ್ತಿರುತ್ತವೆ. ಅವು ವಾಸ್ತವಕತೆಗಿಂತ ಬೇರೆ ಯಾಗಿರುತ್ತವೆ. ಹೀಗೆ ಈ ಶೈಲಿಯ ಮೂಲ ತತ್ವಜ್ಞಾನವಾಗಿದೆ. ಈ ಅಂತರ್ಮನದಲ್ಲಿಯ ಪ್ರತಿಮೆಯನ್ನು ಕಾಗದದ ಮೇಲೆ ರಚಿಸಲು ಮನಸ್ಸಿಗೆ ಸ್ವಚ್ಛಂದವಾಗಿ ಬಿಡಬೇಕು ಎಂಬುದು ಈ ಚಿತ್ರಶೈಲಿಯ ಚಿತ್ರಕಾರರ ಮತವಾಗಿದೆ. ಈ ಪ್ರಕಾರದ ಚಿತ್ರಗಳಲ್ಲಿ ಅನೇಕ ವೇಳೆ ವಾಸ್ತವದಲ್ಲಿಯ ಘಟನೆ, ಪ್ರಸಂಗ, ಭಾವನೆ ವ್ಯಕ್ತಿಗೊಳಿಸಲು ಪ್ರತಿಕಗಳನ್ನು ಉಪಯೋಗಿಸಲಾಗುವದು. ಈ ಶೈಲಿಯಲ್ಲಿಯ ಮುಖ್ಯ ಚಿತ್ರಕಾರ ಸೇಲ್ವೆಡಾರ ದಾಲಿ ಮತ್ತು ಜಾನ್ ಮಿರೊ ಆಗಿದ್ದಾರೆ.


## ಆ್ಯಬ್‌ಸ್ಟ್ರಕ್ಟ್ ಎಕ್ಸ್‌ಪ್ರೆಶನಿಝಮ್ (ಅಮೂರ್ತ ಅಭಿವ್ಯಕ್ತಿವಾದ)



ವಿಲ್ಲಿಯಂ ಡಿ. ಕುನಿಂಗ (William De Kooning)
ಕ್ಯಾನವ್ಹಸ ಮೇಲೆ ತಗೆದ ತೈಲಚಿತ್ರ



ರೋಥಕೊ (Rothko) 212 ಸೆಮಿ × 239 ಸೆಮಿ
ಕ್ಯಾನವ್ಹಸ ಮೇಲೆ ತಗೆದ ತೈಲಚಿತ್ರ



ಈ ಪ್ರವಾಹದ ಪ್ರಾರಂಭವು 1940ರ ದಶಕದಲ್ಲಿ ಅಮೇರಿಕೆಯ ನ್ಯೂಯಾರ್ಕ ಈ ಪಟ್ಟಣದಲ್ಲಿ ಆಯಿತು, ಈ ಶೈಲಿಯೂ ಕೂಡ ಮೇಲೆ ಹೇಳಿದ ಅತೀ ವಾಸ್ತವವಾದಿ ಶೈಲಿಯ ಸಮೀಪಕ್ಕೆ ಹೋಗುವದಿದೆ. ಒಂದು ಅರ್ಥದಿಂದ ಅತೀ ವಾಸ್ತವ ವಾದಿಯಿಂದ ಪ್ರೇರಿತವಾಗಿದೆ. ಈ ಶೈಲಿಯಲ್ಲಿ ಬಣ್ಣಗಳ ಬಹಳಷ್ಟು ಉಪಯೋಗ ಮಾಡಿದ್ದು ಕಂಡು ಬರುವದು. ಈ ಶೈಲಿಯಲ್ಲಿ ಎರಡು ಪ್ರಕಾರದ ಚಿತ್ರಕಾರರ ಸಮಾವೇಶವಾಗುವದು. ಒಬ್ಬ ರೆಂದರೆ ತನ್ನ ಮನಸ್ಸಿನಲ್ಲಿಯ ಪ್ರತಿಮೆಯನ್ನು ಕ್ಯಾನವ್ವಸದ ಮೇಲೆ ವಿವಿಧ ಬಣ್ಣಗಳ ಸ್ಪಷ್ಟವಾದ ಗೆರೆಗಳಿಂದ ಚಿತ್ರಿಸುವವರು. ಇದರಲ್ಲಿ ಪ್ರಾಮುಖ್ಯವಾಗಿ ವಿಲಿಯಂ ಡಿ ಕುನಿಂಗ್ (William De Kooning) ಇವರ ಹೆಸರನ್ನು ತಗೆದುಕೊಳ್ಳಲಾಗುವದು ಮತ್ತು ಎರಡನೆಯವರೆಂದರೆ ಮಾರ್ಕ ರೋಥಕೊ (Rothko) ರಂತಹ ಬಹಳ ಸರಳವಾಗಿ ರೇಖಾಟನೆ ಮಾಡುವವರು. ಅವರ ಕ್ಯಾನವ್ವಸದ ಮೇಲೆ ಒಂದು ಪ್ರಕಾರದ ಬಣ್ಣದಿಂದ ದೊಡ್ಡ ಭಾಗ ಬಣ್ಣ ಬಳೆಯುವವರು. ಈ ಎರಡನೆಯ ಪ್ರಕಾರದ ಚಿತ್ರಕಾರರು ಹೆಚ್ಚು ಧಾರ್ಮಿಕ, ಅಧ್ಯಾತ್ಮಕ ಪ್ರವೃತ್ತಿಯವರಾಗಿದ್ದರಿಂದ, ತಮ್ಮ ಚಿತ್ರದಿಂದ ನೋಡುವವರಿಗೆ ಚಿಂತನೆ, ಮನನ ಮಾಡುವ ಅನುಭವ ದೊರಕಬೇಕು ಎಂಬ ಅವರ ಅಪೇಕ್ಷೆ ಇರುತ್ತಿತ್ತು.

### ಸ್ವಲ್ಪ ಮೋಜು ಮಾಡೋಣ

ಅಭ್ಯಾಸಿಸಿದ ಎಲ್ಲ ಶೈಲಿಗಳಲ್ಲಿಯ ಅಂತರ ಮತ್ತು ಸಾಮ್ಯತೆ ಶೋಧಿಸಿರಿ ಮತ್ತು ಅದನ್ನು ನೋಟಬುಕ್ಕಿನಲ್ಲಿ ಬರೆಯಿರಿ. ಯಾವುದಾದರೊಂದು ಶೈಲಿಯನ್ನು ಹುಡುಕಿ ಅದರ ಹಾಗೆ ಚಿತ್ರತಗೆಯುವ ಪ್ರಯತ್ನ ಮಾಡಿರಿ.

ವಿವಿಧ ಶೈಲಿಯಲ್ಲಿಯ ಇನ್ನೂ ಅನೇಕ ಚಿತ್ರ ಗಳನ್ನು ವಿದ್ಯಾರ್ಥಿಗಳಿಗೆ ಇಂಟರನೆಟದ ಮೇಲೆ ತೋರಿಸಿರಿ. ಅವರಿಗೆ ವಿವಿಧ ಶೈಲಿಗಳಲ್ಲಿಯ ಅಂತರ ಮತ್ತು ಸಾಮ್ಯಗ ಳನ್ನು ಶೋಧಿಸಲು ಪ್ರವೃತ್ತ ಮಾಡಿರಿ. ಶೈಲಿ ಯಂತೆ ಅವರಗುಂಪು ಮಾಡಿ ಆ ಶೈಲಿಯಲ್ಲಿ ಚಿತ್ರ ತಗೆಯಲು ಮಾರ್ಗದರ್ಶನ ಮಾಡಿರಿ.


ವಿದ್ಯಾರ್ಥಿಗಳಿಗೆ ಮೊದಲು ಪ್ರತಿಯೊಬ್ಬ ಕಲಾಕಾರನ ಚಿತ್ರಗಳ ನಿರೀಕ್ಷಣೆ ಮಾಡಲು. ಬಿಡಿ. ಆ ಚಿತ್ರಕಾರರ ಕೆಲವು ವಿಶಿಷ್ಟ ಶೈಲಿ ಅವರಿಗೆ ತಿಳಿಯುತ್ತದೆ ಇಲ್ಲ. ಅವರೊಂದಿಗೆ ಚರ್ಚೆ ಮಾಡಿರಿ ನಂತರ ಅವರಿಗೆ ಕೊಟ್ಟ ಮಾಹಿತಿಯನ್ನು ಓದಲು ಹೇಳಿರಿ.

### ಕೆಲವೊಂದು ಭಾರತೀಯ ಕಲಾಕಾರರು

ಚಿತ್ರಕಲೆಯಲ್ಲಿಯ ವಿವಿಧ ಪ್ರವಾಹ ಮತ್ತು ಆ ಕಾರಣದಿಂದ ಕೆಲವು ಜಾಗತಿಕ ಕಲಾಕಾರರ ಪರಿಚಯವನ್ನು ನಾವು ಮಾಡಿಕೊಂಡೆವು. ಹಾಗೆಯೇ ಕೆಲವೊಂದು ಪ್ರಸಿದ್ಧ ಭಾರತೀಯ ಕಲಾಕಾರರ ಪರಿಚಯವನ್ನೂ ಕೂಡ ಮಾಡಿಕೊಳ್ಳೋಣ

### ಜಮಿನಿ ರಾಯ (1887-1972

ಜಮಿನಿ ರಾಯ ಇವರು ಪಾಶ್ಚಾತ್ಯ ಶೈಲಿ ಬಿಟ್ಟು ಭಾರತೀಯ ಪರಂಪರೆ ಮತ್ತು ಜನಜೀವನ ಮತ್ತು ಆದಿವಾಸಿ ಜೀವನಶೈಲಿಯಿಂದ ಪ್ರೇರಣೆ ಪಡೆದು ಸ್ವಂತದ ಶೈಲಿ ನಿರ್ಮಾಣ ಮಾಡುವ ಪ್ರಥಮ ಕಲಾಕಾರರಲ್ಲಿ ಒಬ್ಬರಾಗಿದ್ದರು. ಅವರ ಶಿಕ್ಷಣ ಪಾಶ್ಚಿಮಾತ್ಯ ಚಿತ್ರಶೈಲಿಯಲ್ಲಿ ಆಗಿತ್ತು. ಆದರೆ 'ಕಾಲಿಘಾಟ' ಈ ಭಾರತೀಯ ಚಿತ್ರಶೈಲಿಯಿಂದ ಅವರು ಬಹಳ ಪ್ರಭಾವಿತರಾಗಿದ್ದರು. ದೊಡ್ಡ ಬದಾಮಿ ಕಣ್ಣು, ದುಂಡಾದ ಮುಖ, ಒಳ್ಳೆಯ ಮೈಕಟ್ಟು ಇವು ಈ ಶೈಲಿಯ ವೈಶಿಷ್ಟ್ಯವಾಗಿದೆ. ಪ್ರಾರಂಭದಲ್ಲಿ ಕಾಲಿಘಾಟ ಶೈಲಿಯಲ್ಲಿ ಚಿತ್ರ ತೆಗೆಯುವವರಾಯ ಇವರು ನಂತರ ಸ್ವಂತದ ಒಂದು ಶೈಲಿಯನ್ನು ವಿಕಾಸಗೊಳಿಸಿದರು ಯುರೋಪಿನ ಬಣ್ಣಗಳ ತ್ಯಾಗಮಾಡಿ ಸಾವಕಾಶವಾಗಿ ಅವರು ಮಣ್ಣು, ಬೀಜ, ಕಲ್ಲು, ಹೂಗಳು, ನೀಲಿ ಇತ್ಯಾದಿಗಳಿಂದ ನಿರ್ಮಿಸಿದ ನೈಸರ್ಗಿಕ ಬಣ್ಣಗಳ ಕಡೆಗೆ ಹೊರಳಿದರು. ಅವರ ಚಿತ್ರಗಳಲ್ಲಿ ಪ್ರಮುಖವಾಗಿ ವಿಶಿಷ್ಟ ಪ್ರಕಾರದ ಕೆಂಪು, ಹಸಿರು, ಬೂದಿ, ನೀಲಿ ಮತ್ತು ಬಿಳಿಯ ಬಣ್ಣ ಉಪಯೋಗಿಸಿರುವದು ಕಂಡು ಬರುವದು. ಅವರ ಚಿತ್ರಗಳಲ್ಲಿ ಗ್ರಾಮೀಣ ಜನಜೀವನದಲ್ಲಿ ಇರುವ ಸರಳತೆಯನ್ನು ಬಿಡಿಸುವ ಪ್ರಯತ್ನ ಕಂಡು ಬರುವದು.





ಹಾಗೆಯೇ ಕಲೆ ಇದು ಹೆಚ್ಚೆಚ್ಚು ಜನರವರೆಗೆ ಮುಟ್ಟಬೇಕು, ಅವರಿಗೆ ಅದು ತಮ್ಮದೆನಿಸಬೇಕು ಮತ್ತು ಭಾರತೀಯ ಕಲೆಯ ಸ್ವಂತದ ಒಂದು ಪರಿಚಯ ನಿರ್ಮಾಣವಾಗಬೇಕೆಂಬುದು ಅವರ ವಿಚಾರವಾಗಿತ್ತು. ಅವರಿಗೆ 1955ರಲ್ಲಿ ಪದ್ಮಭೂಷಣ ಈ ಸನ್ಮಾನದಿಂದ ಗೌರವಿಸಲಾಯಿತು.

## ರಾಮಕಿಂಕರ ಬೈಜ (1906-1980)


ಮಿಲಕಾಲ (ಮಿಲ್ ಪ್ರಾರಂಭವಾಗುವ - ಸಂಕೇತ)


ಸಂಥಾಲ ಪರಿವಾರ


ದಾಂಡಿ ಯಾತ್ರೆ

ಬೈಜ ಇವರು ಬಂಗಾಲದ ಒಬ್ಬ ಪ್ರಸಿದ್ದ ಶಿಲ್ಪಕಾರರಾಗಿದ್ದರು. ಅವರ ಕಲಾಕೃತಿಗಳು ಬಂಗಾಲದಲ್ಲಿಯ ದಲಿತ ಮತ್ತು ಆದಿವಾಸಿ ಸಮಾಜದ ಜೀವನಶೈಲಿಯಿಂದ ಪ್ರೇರಿತವಾದದ್ದು ಕಂಡುಬರುವದು. ಅವರಿಗೆ ಚಿಕ್ಕಂದಿನಿಂದಲೇ ಪರಿಸರದಲ್ಲಿಯ ಸ್ಥಾನಿಕ ಚಿತ್ರಕಾರ, ಮೂರ್ತಿಕಾರ ಇವರ ಕೆಲಸದ ನಿರೀಕ್ಷಣೆ ಮಾಡಿ ಸ್ವತಃ ಸಣ್ಣ ಕಲಾಕೃತಿಗಳನ್ನು ನಿರ್ಮಾಣಮಾಡುವ ಹವ್ಯಾಸ ವಿತ್ತು. ಮುಂದಿನ ಆಯುಷ್ಯದಲ್ಲಿ ಅವರು ನಿರ್ಮಾಣಮಾಡಿದ ಶಿಲ್ಪಗಳು ಅವರ ವಿಷಯಗಳಿಂದ ಮತ್ತು ಶೈಲಿಯಿಂದ ಅತ್ಯಂತ ಬೇರೆ ಮತ್ತು ವೈಶಿಷ್ಟ್ಯಪೂರ್ಣವಾದವು. ಆಕಾಲದಲ್ಲಿ ನಿರ್ಮಾಣ ಮಾಡಲಾಗುವ ಶಿಲ್ಪಗಳು ಮುಖ್ಯವಾಗಿ ದೇವರ ಮತ್ತು ರಾಜ್ಯಕರ್ತರದ್ದಾಗಿರುತ್ತಿದ್ದವು. ಆದರೆ 1938ರಲ್ಲಿ ಅವರು ಸಂಥಾಲ (ಒಂದು ಆದಿವಾಸಿ ಜನಾಂಗ) ರೈತ ಪರಿವಾರದ ಶಿಲ್ಪವನ್ನು ನಿರ್ಮಾಣಮಾಡಿ, ಈ ಪರಂಪರೆಯಿಂದ ಬಿಡುಗಡೆ ತೆಗೆದುಕೊಳ್ಳಲು ಪಾರಂಭಿಸಿದರು. ಕಷ್ಟಮಾಡುವ ಜನರ ಆಯುಷ್ಯದಲ್ಲಿಯ ಸೌಂದರ್ಯವನ್ನು ತಮ್ಮ ಶಿಲ್ಪಗಳಿಂದ ತೋರಿಸುವ ಅವರ ಪ್ರಯತ್ನವಿರುತ್ತಿತ್ತು.


ಮಿಲ ಕಾಲ ಇವರು 1956ರಲ್ಲಿ ಶಾಂತಿನಿಕೇತನದಲ್ಲಿ ಚಿತ್ರಿಸಿದ ಶಿಲ್ಪವು ಅತ್ಯಂತ ಮಹತ್ವದೆಂದು ತಿಳಿಯಲಾಗುವದು. ಮಿಲ್ ಪ್ರಾರಂಭವಾಗುವ ಸಂಕೇತ ಕೇಳಿ ಗಡಿಬಿಡಿಯಿಂದ ನಡೆಯುವ ಸ್ತ್ರೀಯರು ಮತ್ತು ಅವರ ಹಿಂದೆ ಓಡುತ್ತ ಬರುವ ಮಕ್ಕಳು ಇವು

ಈ ಶಿಲ್ಪದಲ್ಲಿ ಕಂಡುಬರುವದು. ಆ ಗಡಿಬಿಡಿಯಲ್ಲಿ ಹಾರುವ ಧೂಳಿನ ಅಸ್ತಿತ್ವವೂ ಸಹ ಶಿಲ್ಪದಲ್ಲಿ ಕಂಡು ಬರುವದು. ಜಾಂಭಾಶಿಲೆ ಮತ್ತು ಸಿಮೆಂಟ್ ಉಪಯೋಗಿಸಿ ಶಿಲ್ಪ ನಿರ್ಮಾಣ ಮಾಡುವದು ಅವರ ಶೈಲಿಯಾಗಿತ್ತು.

## ನಾರಾಯಣ ಶ್ರೀಧರ ಬೇಂದ್ರೆ (1910-1992)



ಮುಳ್ಳು



ಪ್ರಸಾಧನೆ



ನಿಸರ್ಗಚಿತ್ರ

ನಾರಾಯಣ ಶ್ರೀಧರ ಬೆಂದ್ರೇ ಇವರ ಜನ್ಮವು ಇಂದೋರದಲ್ಲಿ ಆಯಿತು. ಒಬ್ಬ ನಿಸರ್ಗ ಚಿತ್ರಕಾರರೆಂದು ಬಹಳ ಹೆಸರು ಪಡೆದರು. ಅವರ ಚಿತ್ರದಲ್ಲಿಯ ಬಣ್ಣಗಳ ಉಪಯೋಗ ವೈಶಿಷ್ಟ್ಯಪೂರ್ಣವೆಂದು ತಿಳಿಯಲಾಗುವದು. ಅವರಿಗೆ ಭಾರತದ ತುಂಬೆಲ್ಲ ಮತ್ತು ವಿವಿಧ ದೇಶಗಳಲ್ಲಿ ಪ್ರವಾಸ ಮಾಡುವ ಹವ್ಯಾಸವಿದ್ದುದರಿಂದ, ಅವರ ಕಲೆಯಲ್ಲಿ ಭಾರತೀಯ ಮತ್ತು ಪಾಶ್ಚಿಮಾತ್ಯ ಶೈಲಿಯ ವೈಶಿಷ್ಟ್ಯಪೂರ್ಣ ಸಂಗಮವು ಕಂಡು ಬರುವದು. ಅವರ ಚಿತ್ರಗಳಲ್ಲಿ ನಾವು ಈ ಮೊದಲು ನೋಡಿದ ಪ್ರಭಾವವಾದಿ, ಘನವಾದಿ ಶೈಲಿಯ ಉಪಯೋಗ ಮಾಡಿದ್ದು ಕಂಡು ಬರುವದು. ವಿವಿಧ ಮಾಧ್ಯಮಗಳು ಮತ್ತು ಶೈಲಿಗಳ ಉಪಯೋಗ ಮಾಡಿ ಚಿತ್ರಕಲೆಯಲ್ಲಿ ಅವರು ಅನೇಕ ಪ್ರಯೋಗಗಳನ್ನು ಮಾಡಿದರು. ಯಾವುದೇ ಒಂದೇ ಪ್ರಕಾರದ ಶೈಲಿಗೆ ಇಲ್ಲವೆ ವಿಷಯಕ್ಕೆ ಅಂಟಿಕೊಂಡು ಇರುವದು ಅವರಿಗೆ ಮಾನ್ಯವಾಗಿರಲಿಲ್ಲ. ದಿನದ ಆಯುಷ್ಯದಲ್ಲಿಯ ಘಟನೆಗಳಿಂದ ಅಮೂರ್ತ ವಿಷಯಗಳವರೆಗೆ ಅವರು ವಿವಿಧ ಚಿತ್ರಗಳನ್ನು ಬಿಡಿಸಿದರು. ಅವರ ಚಿತ್ರಗಳಲ್ಲಿ ಬಹಳಸಲ ಒಂದು ಶಾಂತಭಾವ ಕಂಡು ಬರುವದು. 1992ರಲ್ಲಿ ಅವರಿಗೆ ಪದ್ಮಭೂಷಣ ಈ ಪುರಸ್ಕಾರದಿಂದ ಗೌರವಿಸಲಾಯಿತು.

## ದೀನಾನಾಥ ದಾಮೋಧರ ದಲಾಲ (1916-1971)

ಜನಸಾಮಾನ್ಯರಿಂದ ಜಾಣರವರೆಗೆ ಜನಪ್ರೀಯರಾದವರು ಮತ್ತು ಪುಸ್ತಕಗಳ ಮುಖಪೃಷ್ಠಗಳು, ಕಥಾ ಚಿತ್ರಗಳು, ವ್ಯಂಗ್ಯಚಿತ್ರಗಳು, ದಿನದರ್ಶಿಕೆ, ಮತ್ತು ದೀಪಾವಳಿ ಅಂಕಗಳಲ್ಲಿಯ ಚಿತ್ರಮಾಲಿಕೆಗಳ ಮಾಧ್ಯಮದಿಂದ ದೃಶ್ಯಗಳ ಅರಿವು ಸಮೃದ್ಧ ಮಾಡುವ ಚಿತ್ರಕಾರರೆಂದು ದೀನಾನಾಥ ದಲಾಲ ಎಲ್ಲರಿಗೂ ಪರಿಚಿತರಾಗಿದ್ದಾರೆ. ಬದಿಗೆ ಕೊಟ್ಟ ಚಿತ್ರವು ದೀನಾನಾಥ ದಲಾಲರ ನಮ್ಮೆಲ್ಲರಿಗೂ ಪರಿಚಯದ ಚಿತ್ರವಾಗಿದೆ.



## ಬಿ. ಪ್ರಭಾ (1933-2001)





ಬಿ. ಪ್ರಭಾ ಇವರು ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ ಮುಂಬೈ ಇಲ್ಲಿಂದ ಕಲೆಯ ಶಿಕ್ಷಣವನ್ನು ಪೂರ್ಣಗೊಳಿಸಿದರು. ಬಿ. ಪ್ರಭಾ ಇವರು ಯಾವಾಗ ತನ್ನ ಕಾರ್ಯವನ್ನಾರಂಭಿಸಿದರೋ, ಆಗ ಭಾರತದಲ್ಲಿ ಬಹಳಷ್ಟು ಸ್ತ್ರೀ ಚಿತ್ರಕಾರರಿರಲಿಲ್ಲ, ಅವರ ಮೇಲೆ ಅಮೃತಾ ಶೆರಗಿಲ ಇವರ ಪ್ರಭಾವ ಬಹಳಷ್ಟು ಇತ್ತು. ಪ್ರಭಾ ಇವರ ಬಹಳಷ್ಟು ಚಿತ್ರಗಳಲ್ಲಿ ಉದಾಸೀನ ಗ್ರಾಮೀಣ ಸ್ತ್ರೀಯರ ಉದ್ದವಾದ ಆಕೃತಿ ನೋಡಲು ಸಿಗುವವು. ಬಹಳಷ್ಟು ವೇಳೆ ಒಂದು ಚಿತ್ರದಲ್ಲಿ ಒಂದೇ ಎದ್ದುಕಾಣುವ ಬಣ್ಣವನ್ನು ಉಪಯೋಗಿಸುವದು ಅವರ ಶೈಲಿಯಾಗಿತ್ತು. ಮುಖ್ಯವಾಗಿ ಅವರು ತೈಲಚಿತ್ರಗಳನ್ನೇ ಬಿಡಿಸಿದರು. ಸ್ತ್ರೀಯರ ಸಾಮಾಜಿಕ ಪರಿಸ್ಥಿತಿ. ಅವರಿಗೆ ಮಾಡಬೇಕಾದ ಕಷ್ಟ, ಸಹಿಸಬೇಕಾದ ತೊಂದರೆ, ಅವರಲ್ಲಿಯ ಧೈರ್ಯ ಇವೆಲ್ಲವುಗಳ ಚಿತ್ರ ಅವರ ಕಲೆಗಳಲ್ಲಿ ನಾವು ನೋಡ ಬಹುದು. ಸ್ತ್ರೀಯರ ಒತ್ತಿಟ್ಟ ಭಾವನೆಗಳ ಚಿತ್ರ ಅವರು ತೆಗೆಯುತ್ತಿದ್ದರು. ''ನಾನು ಇನ್ನೂ ಒಂದಾದರೂ ಆನಂದಿತ ಸ್ತ್ರೀಯನ್ನು ನೋಡಿಲ್ಲ'' ಹೀಗೆ ಅವರು ಒಮ್ಮೆ ಅಂದಿದ್ದರು ಪ್ರಭಾ ಇವರ ಚಿತ್ರಗಳು ಭಾರತದ ತುಂಬೆಲ್ಲ ಮತ್ತು ಭಾರತದ ಹೊರಗೆ ಸಹ ವಿವಿಧ ಪ್ರದರ್ಶನಗಳಲ್ಲಿ ಪ್ರದರ್ಶಿತವಾದವು.

### ಸ್ವಲ್ಪ ಕಲ್ಪನೆಗೆ ಅನುವು

ಕೆಳಗಿನ ಚಿತ್ರಪ್ರಕಾರಗಳಲ್ಲಿ ಮೂರು ನಿಯಮಗಳನ್ನು ಗಮನದಲ್ಲಿಡಿರಿ-

1. ನೀವು ಕೃತಿಮಾಡುತ್ತಿರುವಾಗ ಕೃತಿಯ ಆನಂದ ಪಡೆಯಿರಿ. ಚಿತ್ರವನ್ನು ಸಂದರವಾಗಿ ಮಾಡುವದು ಉದ್ದೇಶ ಇದರಲ್ಲಿ ಇಲ್ಲ. ಇದಕ್ಕೆ ಪ್ರಕ್ರಿಯಾ ಚಿತ್ರ (ಪ್ರೊಸೆಸ ಆರ್ಟ) ಅನ್ನುವರು. ಈ ಚಿತ್ರವನ್ನು ನೀವು ಸ್ವಂತದ ಆನಂದಕ್ಕಾಗಿ ಮಾಡುತ್ತಿರುವಿರಿ. ಆದ್ದರಿಂದ ಯಾರಿಗೂ ತೊರಿಸದಿದ್ದರೂ ನಡೆಯಬಹುದು.
2. ಬಹಳ ವಿಚಾರ ಮಾಡುತ್ತ ಕೂಡ ಬೇಡಿರಿ. ಸಹಜವಾಗಿ ಏನು ಆಗುವುದೋ ಅದು ಆಗಲಿ. (ಇದರಲ್ಲಿ ಏನೆನೂ ತಪ್ಪು ಇರುವದಿಲ್ಲ)
3. ಏನೇ ಆದರೂ ಮಾಡುತ್ತ ಇರಿ. ಮಾಡಿ ನೋಡುವದನ್ನು ನಿಲ್ಲಿಸಬೇಡಿರಿ.

### ಮಾಡಿ ನೋಡಿರಿ

**1. ವಸ್ತುಗಳ ಸ್ಥರ ಮಾಡುವದು.**

ಎಲ್ಲಕ್ಕೂ ಕೆಳಗೆ ಫರಸಿ, ಆ ಮೇಲೆ ಇಟ್ಟ ಚಾದರು, ಆದರ ಮೇಲೆ ಪುಸ್ತಕ, ಅದರ ಮೇಲೆ ಚಹಾದ ಕಪ್, ಅದರ ಮೇಲೆ ಇನ್ನೊಂದು ಪುಸ್ತಕ, ಅದರ ಮೇಲೆ ಮಡಿಕೆಹಾಕಿದ ಬಟ್ಟೆ, ಅದರ ಮೇಲೆ ವರ್ತಮಾನಪತ್ರಿಕೆ, ಅದರ ಮೇಲೆ ಬಕೆಟು ಅದರ ಮೇಲೆ ಪ್ಲೇಟು, ಅದರ ಮೇಲೆ ಬೆಕ್ಕು ಇತ್ಯಾದಿ. ಹೀಗೆ ಈ ಸ್ಥರವನ್ನು ವಾಸ್ತವವಾಗಿ ತೆಗೆಯುವದು. (ಉದಾ.-ಬಟ್ಟೆ ಇದ್ದರೆ ಅದು ಕೆಳಗೆ ಬೀಳಬಹುದು. ಕಾಗದ ಸರಳವಾಗಿ ಇರಬಹುದು ಇತ್ಯಾದಿ) ಏನು ಸರಳ ಸರಳವಾಗಿ ತೆಗೆಯುವದು ಇದನ್ನು ನೀವು ನಿರ್ಧರಿಸಿರಿ. ನಿಮಗೆ ಕಾಗದ ಅಂಟಿಸಿ ಕೋಲಾಜ ಮಾಡುವಂತೆ ಅನಿಸಿದರೂ ನಡೆಯುವದು.

ಪ್ರತ್ಯಕ್ಷದಲ್ಲಿ ಯಾವ ವಸ್ತುಗಳು ಒಂದರೊಂದರ ಮೇಲೆ ಇರಲಾರವು ಇವುಗಳು ಚಿತ್ರದಲ್ಲಿ ನಿಶ್ಚಿತವಾಗಿ ಸಾಧ್ಯವಾಗುವವು.

### 2. ಕಾಲಿನಿಂದ ಚಿತ್ರ ತಗೆಯುವದು

ನಿಮ್ಮ ಪೆನ್ಸಿಲ್ ಇಲ್ಲವೆ ಪೆನ್ನನ್ನು ಕಾಲಿನ ಬೆರಳುಗಳಲ್ಲಿ ಹಿಡಿದು ಚಿತ್ರ ತಗೆಯಿರಿ. ಎರಡೂ ಕಾಲುಗಳ ಹಿಂಬಡದಲ್ಲಿ ಪೆನ್ಸಿಲ್ ಹಿಡಿದು ಸಹ ತಗೆದು ನೋಡಿರಿ. ಹಾಗೆಯೇ ಪೆನ್ಸಿಲ್ ಬಾಯಲ್ಲಿ ಹಿಡಿದು ಚಿತ್ರ ತಗೆದು ನೋಡಿರಿ.

### 3. ಕಸದಿಂದ ಚಿತ್ರ ನಿರ್ಮಾಣ

ಚೆಲ್ಲಬೇಕೆನಿಸಿದ ಯಾವುದೇ ಉಪಯೋಗದಲ್ಲಿರದ ಅಂಶಗಳಿಂದ ಮುಖ ಚರ್ಯೆ ತಯ್ಯಾರಿಸಿರಿ. ಯಾವಾಗ ನಿಮಗೆ ಅವಕಾಶ ವಿರಬಹುದೋ, ಅಭ್ಯಾಸದಿಂದ ಸ್ವಲ್ಪ ವಿಶ್ರಾಂತಿ ಬೇಕಾಗಿದ್ದರೆ ನೀವು ಈ ಕೃತಿ ಮಾಡಬಹುದು!

### 4. ಧೂಳಿನಿಂದ ಚಿತ್ರ ತಗೆಯುವದು



ಕಾಗದವನ್ನು ಒದ್ದೆ ಮಾಡಿರಿ ಮತ್ತು ಅದನ್ನು ಧೂಳಿಯ ಮೇಲೆ, ಹೊಲಸಾದ ಮನೆ ಯಜೇಡರಬಲೆ ಇಲ್ಲವೆ ಮಣ್ಣಿನ ಮೇಲೆ ಹಾಕಿರಿ. ಸ್ವಲ್ಪವೇ ಒತ್ತಡ ಹೇರಿ ಮತ್ತು ಏನು ಚಿತ್ರ ಕಾಣಿಸುವದು ಎಂಬುದನ್ನು ನೋಡಿರಿ. ನಿಮ್ಮ ಕಡೆಗೆ ಇದ್ದ ಪೆನ್ಸಿಲ್, ಪೆನ್ನು ಬಣ್ಣ ಇವುಗಳಿಂದ ಅದರಲ್ಲಿ ಉಪಯೋಗಿಸಿ ಕೆಲವು ಬೇರೆ ಚಿತ್ರ ತಯ್ಯಾರಿಸಲು ಬರುವದೇ? ಎಂಬುದನ್ನು ನೋಡಿರಿ.




### 5. ಕೇವಲ ಕಪ್ಪು ಬಣ್ಣದಿಂದ ಚಿತ್ರ ತಗೆಯುವದು.

ಕಪ್ಪು ಬಣ್ಣದ ಕುರಿತು ಜನರ ಮನಸ್ಸಿನಲ್ಲಿ ಬಹಳಸಲ ಕೆಲವು ಪೂರ್ವಗ್ರಹ ಇರುವವು. ಕಪ್ಪು ಬಣ್ಣ ಹಲವಾರು ಜನರಿಗೆ ಹಿಡಿಸುವದಿಲ್ಲ ಆದರೆ ಅದರ ಯೋಗ್ಯ ಉಪಯೋಗವಾದರೆ ಕಪ್ಪು ಬಣ್ಣ ಇತರ ಬಣ್ಣಗಳಂತೆ ಇಷ್ಟೇ ಅಲ್ಲ , ಅದಕ್ಕಿಂತ ಹೆಚ್ಚು ಸುಂದರವಾಗಿ ಕಾಣಿಸಬಹುದು. ನಿಮ್ಮ ಕಲ್ಪನಾಶಕ್ತಿಗೆ ಚಾಲನೆ ಹೆಚ್ಚಾಗಿ ಕೊಡಿರಿ. ಕೇವಲ ಕಪ್ಪು ಬಣ್ಣ ಮತ್ತು ಅದರ ಛಾಯೆಯನ್ನು ಉಪಯೋಗಿಸಿ ನೀವು ಚಿತ್ರ ತಗೆಯ ಬಹುದೇ?


### 6. ಭೌಮಿತಿಕ ನಕ್ಷೆ- ಕರ್ತವ್ಯ ಭೂಮಿತಿ

ಗಣಿತದ ಪಾಠ್ಯಪುಸ್ತಕಗಳ ಆಧಾರ ಪಡೆದು ಭೌಮಿತಿಕ ರಚನೆ ಹೇಗೆ ನಿರ್ಮಾಣ ಮಾಡಬಹುದು, ಹಾಗೆ ವಿವಿಧ ಭೌಮಿತಿಕ ಆಕಾರ ನಿಮ್ಮ ಅಕ್ಕಪಕ್ಕದಲ್ಲಿ ಎಲ್ಲಾದರೂ ಸಿಗುತ್ತವೆ ಎಂಬುದರ ಚರ್ಚೆ ಮಾಡಿರಿ.

**ಚತುಷ್ಕೋನಾಕೃತಿ ಘನ**





**ಗೋಲ**



## 7. ಕಲರಿಂಗ್ ಥೇರಪಿ

ಥೇರಪಿ ಅಂದರೆ ಉಪಚಾರ ಪದ್ಧತಿ. ಕಲೆ ಇದು ಒಂದು ಪ್ರಕಾರದ ಉಪಚಾರ ಪದ್ಧತಿಯೂ ಆಗಬಲ್ಲದು. ಕಲರಿಂಗ ಥೇರಪಿಯಲ್ಲಿ ಕಣ್ಣಿಗೆ ಆಕರ್ಷಕ ವೆನಿಸಬಹುದು ಇಂಥ ಪಡೆಯಚ್ಚು, ನಕ್ಷಿಗಳ ಸಮಾವೇಶ ವಿರುವದು. ಅವುಗಳ ಸ್ವರೂಪ ಕ್ಲಿಷ್ಟವಾಗಿರುವದು. ಇಂಥ ಪ್ರಕಾರದ ಸಣ್ಣ ಕೆಲಸಕ್ಕೆ ಬಣ್ಣ ಬಳೆಯುವದಾಗಿರುತ್ತದೆ. ಮನಸ್ಸು ಅದರಲ್ಲಿ ಸೇರಿಸಿದರೆ, ಒತ್ತಡದ, ವೇದನೆಯ ನೆನಪು ಹಾರುವದು, ಎಂಬುದು ಅದರ ಭೂಮಿಕೆ ಯಾಗಿರುವದು. ಕೆಳಗಿನ ಚಿತ್ರ ನೋಡಿರಿ. ಅದನ್ನು ನಿಮ್ಮ ಮನಸ್ಸಿನಿಂದ ಪೂರ್ಣವಾಗಿ ಬಣ್ಣ ಹಚ್ಚಿರಿ.



## ಕ್ಷೇತ್ರ ಭೇಟ್ಟಿ





ನಿಮ್ಮ ಪರಿಸರದಲ್ಲಿಯ ಐತಿಹಾಸಿಕ ವಾಸ್ತುಗಳಿಂದ ನಿಮಗೆ ಆಕಾಲದ ಜನರ ಜೀವನಶೈಲಿ ಸಂಸ್ಕೃತಿ ಮತ್ತು ಕಲಾದೃಷ್ಟಿ ನೋಡಲು ಸಿಗುವದು. ಇದರಿಂದಲೂ ನಮ್ಮ ಕಲೆಯ ಅರಿವು ಪ್ರಗಲ್ಭವಾಗುವವು. ಮಹಾರಾಷ್ಟ್ರದಲ್ಲಿ ಔರಂಗಾಬಾದದಿಂದ ಉತ್ತರಕ್ಕೆ ಸುಮಾರು 60 ಮೈಲುಗಳ ಮೇಲೆ ಅಜಂತಾ ಪರ್ವತ ಶ್ರೇಣಿಯಲ್ಲಿ ಬೌದ್ಧ ಧರ್ಮದ ಗುಹೆಗಳನ್ನು ಕೆತ್ತಲಾಗಿದೆ. ಕಾರ್ಲೆದಲ್ಲಿಯ ಬೌದ್ಧ ಗುಹೆಗಳು ಸ್ಥಾಪತ್ಯಕಲೆಗಾಗಿ ಪ್ರಸಿದ್ಧವಾಗಿವೆ. ನಿಮ್ಮ ಪರಿಸರದಲ್ಲಿಯ ಇಂತಹ ಯಾವುದೇ ಪ್ರಾಚೀನ ವಾಸ್ತುವಿಗೆ ಭೇಟಿ ಕೊಡಿರಿ ಮತ್ತು ನಿಮ್ಮ ನಿರೀಕ್ಷಣೆಯನ್ನು ಬರೆಯಿರಿ.

### ನಮಗೆ ಏನು ಹಿಡಿಸುವದು

ಕಲೆ ಇದು ಅತ್ಯಂತ ವೈಯಕ್ತಿಕ ಅಭಿವ್ಯಕ್ತಿ ಇರುವದು. ಒಬ್ಬ ವ್ಯಕ್ತಿಗೆ ಅದು ಒಳ್ಳೆಯ ಇಲ್ಲವೆ ಸುಂದರವೆನಿಸಬಹುದು ಆದರೆ ಎರಡನೆಯವನಿಗೆ ಹಾಗೆನ್ನಿಸುವದಿಲ್ಲ. ಅಂತೆಯೇ ಕಲೆಗೆ ಒಳ್ಳೆಯ/ಕೆಟ್ಟ ಎಂಬ ವರ್ಗೀಕರಣ ಮಾಡುವದು ಯೋಗ್ಯವಾಗುವದಿಲ್ಲ. ಯಾವುದೇ ಕಲಾಕೃತಿ ನಮಗೆ ಹಿಡಿಸಿದಿದ್ದರೆ ಅದು ಸುಂದರವಾಗಿಲ್ಲವೆಂದು ಅರ್ಥವಾಗುವದಿಲ್ಲ ಅದು ನಮಗೆ ಹಿಡಿಸಿಲ್ಲ ಇಷ್ಟೇ ಅನ್ನುವದು ಯೋಗ್ಯವಾಗಬಹುದು. ಯಾವಾಗ ನಾವು ಯಾವುದೇ ಕಲಾಕೃತಿಯನ್ನು ನೋಡುವೆವು, ಆಗ ಅದು ಒಳ್ಳೆಯ ಇಲ್ಲವೆ ಕೆಟ್ಟ ಎಂದು ಅದರ ಮೇಲೆ ಮುದ್ರೆಯನ್ನು ಒತ್ತುವದನ್ನು ಬಿಡಬೇಕು. ನಮಗೆ ಅದರಕುರಿತು ನಮ್ಮ ಮತವನ್ನು ವ್ಯಕ್ತ ಮಾಡುವದಿದ್ದರೆ ಅದು ನಮಗೆ ಹಿಡಿಸಿದೆ ಇಲ್ಲವೆ ಇಲ್ಲ ಮತ್ತು ಏಕೆ ಇಷ್ಟೇ ಹೇಳಬೇಕು.

ನಮಗೆ ಯಾವುದೇ ಕಲಾಕೃತಿ ಏಕೆ ಹಿಡಿಸಿತು ಇಲ್ಲವೆ ಏಕೆ ಹಿಡಿಸಲಿಲ್ಲ ಇದನ್ನು ಹೇಳಲು ಬರುವದು ಸಹ ಮಹತ್ವದ್ದಾಗಿದೆ. ಯಾವುದೇ ಕಲಾಕೃತಿಯಲ್ಲಿ ನಮಗೆ ನಿಶ್ಚಿತವಾಗಿ ಏನು ಹಿಡಿಸಿತು, ಏನು ಹಿಡಿಸಲಿಲ್ಲ ಇದನ್ನು ಶಬ್ದಗಳಲ್ಲಿ ಮಂಡಿಸಲು ಬರುವದರಿಂದ ನಮ್ಮ ಕಲೆಯ ಕುರಿತಾದ ಅರಿವು ಹೆಚ್ಚಾಗಲು ಸಹಾಯವಾಗುವದು. ಕಲಾಕೃತಿಗಳಲ್ಲಿ ಇದ್ದ ಸೌಂದರ್ಯಸ್ಥಳಗಳನ್ನು ನಾವು ನೋಡುವದನ್ನು ಕಲಿಯುತ್ತೇವೆ.

### ಮಾಡಿ ನೋಡಿರಿ

ನಿಮಗೆ ಹಿಡಿಸಿದ ವರ್ತಮಾನ ಪತ್ರಗಳಲ್ಲಿಯ, ಮಾಸಿಕಗಳಲ್ಲಿಯ, ಪುಸ್ತಕಗಳಲ್ಲಿಯ ಚಿತ್ರಗಳನ್ನು ನೋಡಿರಿ. ಅದರಲ್ಲಿ ನಿಮಗೆ ನಿಶ್ಚಿತವಾಗಿ ಏನು ಹಿಡಿಸುತ್ತದೆ. ಎಂಬುದನ್ನು ಸಾಧ್ಯವಾದಷ್ಟು ಸ್ಪಷ್ಟವಾಗಿ ಬರೆಯುವ ಪ್ರಯತ್ನಮಾಡಿರಿ ಸುಮಾರು ಐದು ಚಿತ್ರಗಳನ್ನು ಈ ರೀತಿಯಿಂದ ವಿಶ್ಲೇಷಣ ಮಾಡಿರಿ. ನೀವು ಕೆಳಗಿನ ಅಂಶಗಳಿಂದ ವಿಚಾರಮಾಡಬಹುದು. ಅದರಲ್ಲಿ ಇನ್ನಷ್ಟು ಹೆಚ್ಚಳ ಮಾಡಿರಿ.

1. ವಿಷಯ
2. ರಂಗ- ಸಂಗತಿ
3. ರಚನೆ
4. ಶೈಲಿ
5. ಕಲ್ಪನೆ
6. ಛಾಯಾ ಪ್ರಕಾಶದ ಉಪಯೋಗ ಮುಂತಾದವು.

F9NX7T

### ದೃಶ್ಯ ಕಲಾ ಕ್ಷೇತ್ರದಲ್ಲಿಯ ಕರಿಅರ

ದೃಶ್ಯಕಲೆಗಳಲ್ಲಿ ಕರಿಅರ ಮಾಡುವ ಸಲುವಾಗಿ ಹಂಚಿಕೆ ಹತ್ತನೇ ಮತ್ತು ಹನ್ನೆರಡನೇ ಹೀಗೆ ಎರಡು ಹಂತಗಳಿಂದ ನಿರ್ಮಾಣ ವಾಗುವವು.

ಹತ್ತನೇ ನಂತರ ಫೌಂಡೇಶನ ಇಲ್ಲವೆ ಜಿ.ಡಿ. ಆರ್ಟ ಹೀಗೆ ಎರಡು ಅಭ್ಯಾಸಕ್ರಮಗಳಿಗೆ ಪ್ರವೇಶ ಪಡೆಯಲು ಬರುವದು. ಬಹಳ ಜನರು ಫೌಂಡೇಶನ ಆದನಂತರ ಆರ್ಟ ಟೀಚರ ಡಿಪ್ಲೋಮಾ (ಕಲಾ ಶಿಕ್ಷಕ ಪದವಿ) ಮಾಡುವದಕ್ಕೆ ಒಪ್ಪಿಕೊಳ್ಳುತ್ತಾರೆ. ಆದರೆ ಜಿ.ಡಿ.ಆರ್ಟ ಇದು ನಾಲ್ಕು ವರ್ಷಗಳ ಅಭ್ಯಾಸಕ್ರಮವಿದ್ದು ಆನಂತರ ಅಪ್ಲಾಯಿಡ ಆರ್ಟ ಇಲ್ಲವೆ ಫಾಯಿನ ಆರ್ಟದಲ್ಲಿ ಮುಂದಿನ ಶಿಕ್ಷಣ ಪಡೆಯಲು ಬರುವದು. ಹನ್ನೆರಡನೇ ನಂತರ ಕಲಾಶಿಕ್ಷಣದಲ್ಲಿ ಕೂಡ ಡಿಪ್ಲೋಮಾ ಮಾಡಲು ಬರುವದು.

ಜಾಗತಿಕೀಕರಣದ ಈ ಕಾಲದಲ್ಲಿ ಚಿತ್ರಕಲಾ, ಶಿಲ್ಪಕಲಾ ಇವುಗಳ ಜೊತೆಗೆ ಫ್ಯಾಶನ್, ಆರ್ಕಿಟೆಕ್ಚರ್ (ಸ್ಥಾಪತ್ಯ ಕಲಾ), ಜ್ವೇಲರಿ ಡಿಝಾಈನ್, ಆ್ಯನಿಮೇಶನ, ಇಂಟಿರಿಅರ ಡಿಕೋರೇಶನ್, ಫೋಟೊಗ್ರಾಫಿ, ಮುಂತಾದ ಶಾಖೆಗಳಲ್ಲಿಯಾ ಕರಿಅರ ಘಟಿಸಲು ಬಹಳ ಅವಕಾಶಗಳು ನಿರ್ಮಾಣವಾಗಿವೆ.

ಈ ಕುರಿತು ಹೆಚ್ಚಿನ ಮಾಹಿತಿಯು www.mahacareermitra.in ಈ ಸಂಕೇತ ಸ್ಥಳದ ಮೇಲೆ ಉಪಲಬ್ದವಿದೆ.

### ದೃಶ್ಯ ಕಲೆಯ ಕುರಿತು ಕೆಲವು ವಿಚಾರಗಳು

ಕಲೆಯ ಮಾನವೀ ಆಯುಷ್ಯದಲ್ಲಿಯ ಮಹತ್ವ ಇದರ ಮೇಲೆ ಎಷ್ಟೊಂದು ಮಾತನಾಡಿದರೂ ಅದು ಕಡಿಮೆಯೆ ಆಗಿದೆ. ಕಲೆಯ ಕುರಿತು ಅನೇಕ ಜನರ ಅನೇಕ ಮತಗಳು, ವಿಚಾರಗಳು ಇವೆ, ಕಲೆಯ ಕುರಿತು ಇದ್ದ ಕೆಳಗಿನ ಸೂವಿಚಾರಗಳ ಅರ್ಥವನ್ನು ನೀವು ಹೇಗೆ ಹಚ್ಚುವಿರಿ?

- ''ಕಲೆಯ ಉದ್ದೇಶವು ದಿನದ ಆಯುಷ್ಯದಲ್ಲಿಯ ಧೂಳನ್ನು ನಮ್ಮ ಮನಸ್ಸಿನಿಂದ ಝಾಡಿಸುವದಾಗಿದೆ.''
- ''ಚಿತ್ರ ಇದು ಶಬ್ದಗಳ ಹೊರತಾಗಿ ಮಾಡಿದ ಕವಿತೆಯಾಗಿದೆ''
- ''ಆಯುಷ್ಯವು ಒಂದು ಕ್ಯಾನವ್ಹಸ ಆಗಿದೆ ಮತ್ತು ನೀವು ಚಿತ್ರಕಾರರು''
- ''ಕಲೆಯಲ್ಲಿ ನಾವು ಸ್ವಂತಕ್ಕೆ ಸಿಗುವೆವು ಮತ್ತು ಅದೇ ವೇಳೆಗೆ ಸ್ವತಃ ಕಳೆದು ಕೊಳ್ಳುವೆವು.''
- ''ಪ್ರತಿಯೊಬ್ಬ ಹುಡುಗನಲ್ಲಿ ಒಬ್ಬ ಕಲಾಕಾರ ನಿರುವನು. ಪ್ರಶ್ನೆಯಂದರೆ ಆ ಕಲಾಕಾರನು ದೊಡ್ಡವನಾದ ಮೇಲೆ ಅವನು ಹೇಗೆ ಜೀವಂತನಾಗಿರಬಹುದು ಇದು.''

### ಮೂಲ್ಯ ಮಾಪನ (ಭಾರಾಂಶ 20%)

| ಒರೆಗಲ್ಲು | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಅಂಕಗಳು |
|---|---|---|---|---|
| ಕಲಾವಿಷ್ಕಾರದಲ್ಲಿಯ ಕಲ್ಪಕತೆ | ಪಾಠದಲ್ಲಿ ಕೊಟ್ಟ ಕಲಾವಿಷ್ಕಾರವನ್ನು ಕಲ್ಪಕತೆಯಿಂದ ಪೂರ್ಣಮಾಡಿದೆ ಮತ್ತು ಸಕ್ರೀಯ ಸಹಭಾಗ ವಹಿಸಿದ್ದಾನೆ | ಪಾಠದಲ್ಲಿ ಕೊಟ್ಟಿ ಕಲಾವಿಷ್ಕಾರ ಕೃತಿ ಎಂದು ಪೂರ್ಣ ಮಾಡಲಾಗಿದೆ. | ಕೆಲವೊಂದು ಕೃತಿಗಳಲ್ಲಿ ಸಹಭಾಗವಿದೆ. ಆದರೆ ಆ ಕೃತಿಗಳನ್ನು ಅರ್ಧಮರ್ಧ ಪೂರ್ಣ ಮಾಡಲಾಗಿದೆ. | |
| ಚಿತ್ರಗಳ ಕುರಿತು ಬರೆಯುವದು. | ಆರಿಸಿದ ಐದು ಚಿತ್ರಗಳ ಕೊಟ್ಟ ಆರು ಅಂಶಗಳ ಸಹಾಯದಿಂದ ವಿಶ್ಲೇಷಣೆ ಮಾಡಿ ಸ್ಪಷ್ಟ ಶಬ್ದಗಳಲ್ಲಿ ಬರೆಯಲಾಗಿದೆ. | ಆರಿಸಿದ ಐದು ಚಿತ್ರಗಳ ಅಂದಾಜಿನಂತೆ ವಿಶ್ಲೇಷಣೆ ಮಾಡಲಾಗಿದೆ. ಆದರಲ್ಲಿ ಕೊಟ್ಟ ಆರು ಅಂಶಗಳ ಸಮಾವೇಶವನ್ನು ಕೆಲವೊಂದು ಪ್ರಮಾಣದಲ್ಲಿ ಮಾಡಲಾಗಿದೆ. | ಚಿತ್ರದ ಆಯ್ಕೆ ಮತ್ತು ವಿಶ್ಲೇಷಣೆ ಅರ್ಧಮರ್ಧ ಪೂರ್ಣ ಮಾಡಲಾಗಿದೆ. | |


ಐದು ಜನರು ಗಹನವಾದ ಚರ್ಚೆಯಲ್ಲಿ ಇದ್ದಂತೆ ಕಾಣುವರು
ದಿನಾಲು ಶಾಲೆಗೆ ಬರುವಾಗ ಹರಪ್ರೀತಳಿಗೆ ಕೆಲಹುಡುಗರು ದಾರಿಯಲ್ಲಿನಿಂತು ಕೆಣಕುವರು
ಮತ್ತು ಮರಿಯಾಳಿಗೆ ಅವಳ ಮನೆಹತ್ತಿರ ಇರುವ ಒಬ್ಬ ಹುಡುಗ ದಿನಾಲು ತೊಂದರೆ ಕೊಡುತ್ತಾನೆ
ಆದರೆ ಇದನ್ನೆಲ್ಲ ಅವರು ಮನೆಯಲ್ಲಿ ಇಲ್ಲವೆ ಶಿಕ್ಷಕರಿಗೆ ಹೇಳುವದಿಲ್ಲವೇ?
ಅವರಿಗೆ ಬಹುಶಃ ಸಂಕೋಚ ವೆನಿಸುತ್ತಿರಬೇಕು.
ಆದರೆ ಏನಾದರೂ ಮಾಡಲೇಬೇಕು! ಇದನ್ನು ನಿಲ್ಲಿಸಲೇ ಬೇಕು!
ನನಗೆ ಗೊತ್ತಿದೆ ಈ ಕುರಿತು ಏನು ಮಾಡಲು ಬರುವದು ಎಂಬುದು... ಒಂದು ಫೋನ ಮಾಡಬೇಕು!
ಯಾರಿಗೆ?
ಬನ್ನಿರಿ ಇತ್ತಕಡೆ ಹೇಳುವೆನು

# 4 ನಾನು ಮತ್ತು ಮಾಧ್ಯಮಗಳು -2




ಆಯುಷ್ಯವು ಜೀವಿಸಲು ಇರುವದು, ಜನರಿಗೆ ತೋರಿಸಲು ಇಲ್ಲ.

## ಉದ್ದೇಶಗಳು:

1. ವಿದ್ಯಾರ್ಥಿಗಳಿಗೆ ಸಮಾಜ ಮಾಧ್ಯಮಗಳು ಎಂದರೇನು ಎಂಬುದನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವದು.
2. ಸಮಾಜ ಮಾಧ್ಯಮಗಳಿಂದ ಆಗುವ ಪರಿಣಾಮಗಳನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವದು.
3. ಸಮಾಜ ಮಾಧ್ಯಮಗಳ ಸ್ವಂತದ ಆಯುಷ್ಯದ ಮೇಲೆ ಆಗುವ ಪರಿಣಾಮಗಳನ್ನು ಗುರುತಿಸಲು ಬರುವದು.
4. ಸ್ತ್ರೀಯರ ಕುರಿತು ನಿರ್ಮಾಣವಾಗುವ ಅನಾದರದ ಕಾರಣಗಳು ಮತ್ತು ಅದರ ಮೇಲಿನ ಉಪಾಯಗಳು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವದು.
5. ಸ್ವಂತದ ಇಲ್ಲವೆ ಇತರರ ಹಿಂಸೆಯಾಗುತ್ತಿದ್ದರೆ ಸಹಾಯ ಬೇಡುವ ಪರ್ಯಾಯವನ್ನು ತಿಳಿದುಕೊಳ್ಳುವದು
6. ಭಿನ್ನಲಿಂಗಿ ವ್ಯಕ್ತಿಯ ಕುರಿತು ಸ್ವಂತದ ವರ್ತನೆಯ ವಿಶ್ಲೇಷಣೆಯನ್ನು ಮಾಡಲು ಬರುವದು ಮತ್ತು ಅದರಲ್ಲಿ ಬದಲಾವಣೆಯನ್ನು ತರಲು ನಿಯೋಜನೆಯನ್ನು ಮಾಡಲು ಬರುವದು.
7. ನಿರೋಗಿ, ನಿರ್ವ್ಯಸನಿ, ಶಿಕ್ಷಣದ ಮೇಲೆ ಲಕ್ಷ ಕೇಂದ್ರಿಕರಿಸುವ ವಿದ್ಯಾರ್ಥಿಗಳ ಪ್ರಗತಿಯ ಸಾಧ್ಯತೆಯ ವ್ಯಸನಿ ಇಲ್ಲವೆ ಮಾಧ್ಯಮಗಳ ಬಲೆಗೆ ಬಿದ್ದ ವ್ಯಕ್ತಿಗಳಿಗಿಂತ ಹೆಚ್ಚು ಇರುವದು ಈ ನಿಷ್ಕರ್ಷದ ವರೆಗೆ ತಲುಪುವದು.

ಕೆಲವು ಜಾಹೀರಾತುಗಳು, ಸಿನೇಮಾ ಮತ್ತು ಸಿರಿಯಲ್‌ಗಳಲ್ಲಿಯ ಕೆಲವು ಪ್ರಸಂಗಗಳಿಂದ ಬಹಳಸಲ ನಮ್ಮ ಮನಸ್ಸಿನಲ್ಲಿ ಸ್ತ್ರೀಯರ ಕುರಿತು ಅನಾದರ, ನ್ಯೂನತೆಯ ಭಾವನೆ ನಿರ್ಮಾಣವಾಗುವದು. ಇದನ್ನು ನಾವು ನೋಡಿಯೆ ಇದ್ದೇವೆ. ಇದಲ್ಲದೇ ಬೇರೆ ಕೆಲವು ಆಯಾಮಗಳ ಕುರಿತು ನಾವು ತಿಳಿದುಕೊಳ್ಳೋಣ.

### ಶೋಧಿಸಿರಿ ನೋಡೋಣ

ಖಾದ್ಯ ಎಣ್ಣೆಯ, ಮಸಾಲೆಯ, ಬಟ್ಟೆ ಒಗೆಯುವ ಸಾಬೂನಿನ ಇಂಥ ಜಾಹೀರಾತುಗಳು, ಅದರಲ್ಲಿ ಪುರುಷನು ಅಡುಗೆ ಮಾಡುತ್ತಿದ್ದಾನೆ ಇಲ್ಲವೆ ಬಟ್ಟೆ ತೊಳೆಯುತ್ತಿದ್ದಾನೆ.

- ಇಂಥ ಸಿನೇಮಾ, ಅದರಲ್ಲಿ ನಾಯಿಕೆಯು ನಾಯಕನ ಪ್ರಾಣ ಉಳಿಸುತ್ತಾಳೆ ಇಲ್ಲವೆ ನಾಯಕನನ್ನು ಸೋಲಿಸುತ್ತಾಳೆ.
- ಮಕ್ಕಳ ಸಂಗೋಪನೆಯ ಇಂಥ ಜಾಹಿರಾತುಗಳನ್ನು, ಅದರಲ್ಲಿ ಪುರುಷನು ಜವಾಬ್ದಾರಿಯನ್ನು ಹೊರುತ್ತಿದ್ದಾನೆ.
- ಎಲ್ಲಿ ಹೆಚ್ಚು ವಯಸ್ಸಿನ ನಾಯಕಿ ಮತ್ತು ಕಡಿಮೆ ವಯಸ್ಸಿನ ನಾಯಕರಿರುವರು ಅಂಥ ಚಿತ್ರಪಟಗಳು
- ಯಾವುದರಲ್ಲಿ ಸ್ತ್ರೀಯರು ಕಾರ, ಮೋಟರ ಸಾಯಕಲ ನಡೆಸುತ್ತಿದ್ದಾರೆ ಅಂತಹ ಜಾಹೀರಾತುಗಳು



• ಯಾವುದರಲ್ಲಿ ಏನಾದರೂ ವೇಗವಾದ, ಧೈರ್ಯದ ಚಿತ್ತವನ್ನು ಕೆದಕುವಂಥದನ್ನು ಮಾಡುವದಿದೆಯೋ ಮತ್ತು ಇದನ್ನು ಸ್ತ್ರೀ ಮಾಡುತ್ತಿದ್ದಾಳೆ ಎಂಬ ಜಾಹೀರಾತು



ವಿದ್ಯಾರ್ಥಿಗಳಿಗೆ ಇಂಥ ಜಾಹೀರಾತುಗಳನ್ನು ಶೋಧಿಸಲು ಒಂದು ವಾರದ ಸಮಯ ಕೊಡಿರಿ. ಅವರಿಗೆ ಪ್ರತಿಗುಂಪಿನಲ್ಲಿಯ ಎಷ್ಟು ಜಾಹಿರಾತುಗಳು ಸಿನೇಮಾಗಳು ದೊರಕಿದವು ಎಂಬುದನ್ನು ಕೇಳಿರಿ. ಅವರಿಗೆ ಶೋಧಿಸಲು ಸರಳವಾಯಿತೋ ಇಲ್ಲವೆ ಕಠಿಣ? ಏಕೆ? ಇದರಿಂದ ಅವರ ಗಮನಕ್ಕೆ ಏನು ಬಂದಿತು?
ಕಾರ, ಮೋಟಾರಸೈಕಲ ನಡೆಸುವದು, ವೇಗವಾಗಿ ಚಿತ್ತವನ್ನು ಕೆದಕುವ ಏನಾದರೂ ಮಾಡುವದು ಈ ಎಲ್ಲ ಅಂಶಗಳು ಸ್ತ್ರೀಯರಿಗೆ ಆಗುವದಿಲ್ಲವೇ? ಅಡುಗೆ ಮಾಡುವದು, ಮಕ್ಕಳನ್ನು ಸಂಭಾಳಿಸುವದು, ಒಟ್ಟೆ ಒಗೆಯುವದು ಇದು ಕೇವಲ ಸ್ತ್ರೀಯ ಕೆಲಸವಾಗಿಯೇ?

## ಕೆಳಗಿನ ಅಂಶಗಳಿಂದ ಯಾವ ಸಂದೇಶವನ್ನು ಕೊಡಲಾಗುವದು?

1. ಯಾವುದೋ ನಾಯಕನು ಯಾವುದೋ ನಾಯಕಿಯ ಬೆನ್ನುಹತ್ತಿದ್ದಾನೆ, ಅವಳಿಗೆ ತೊಂದರೆ ಕೊಡುತ್ತಾನೆ. ಅವನಿಗೆ ಶಿಕ್ಷೆಯಾಗುವದಿಲ್ಲ.

2. ನಾಯಕಿ ಯಾರವಳು ಈ ಕುರಿತು ನಾಯಕ ಮತ್ತು ಖಲನಾಯಕ ತಮ್ಮ ತಮ್ಮಲ್ಲಿ ಜಗಳಾಡುವರು

ವಿದ್ಯಾರ್ಥಿಗಳಿಗೆ ವಿಚಾರ ಮಾಡಲು ಸಹಾಯ ಮಾಡಿರಿ.
ಸ್ತ್ರೀ ಪ್ರತಿಮೆ
ಪ್ರತ್ಯಕ್ಷ ಆಯುಷ್ಯದಲ್ಲಿ ಹೀಗೆ ಇರುವದಿಲ್ಲ ಈ ಅರಿವನ್ನು ವಿದ್ಯಾರ್ಥಿಗಳಲ್ಲಿ ನಿರ್ಮಾಣ ಮಾಡುವ ಪ್ರಯತ್ನ ಮಾಡಿರಿ.
ಇಂಥ ಇನ್ನೂ ವಾಕ್ಯಗಳು, ಪ್ರಸಂಗಗಳ ಮಾಹಿತಿಯು ಇದೆಯೇ? ಎಂಬುದನ್ನು ಕೇಳಿರಿ.

**ಇವ್ಹ ಟೀಝಿಂಗ:** ಹುಡುಗಿಯರಿಗೆ ಚುಡಾಯಿಸುವದು, ಕೆಣಕುವದು, ಸಾರ್ವಜನಿಕ ಸ್ಥಳದಲ್ಲಿ ಹುಡುಗಿಯರಿಗೆ ಹಿಂಸೆ ಕೊಡುವದು, ಉದ್ದೇಶ ಪೂರ್ವಕವಾಗಿ ತೊಂದರೆ ಕೊಡುವದು ಇದಕ್ಕೆ 'ಇವ್ಹ ಟೀಝಿಂಗ್' ಎಂದು ಅನ್ನುವರು. ಕೆಲವು ಜನರು ದಾರಿಯಮೇಲೆ, ಗದ್ದಲದಲ್ಲಿ ಇಂಥ ತೊಂದರೆಕೊಡುವ ವರ್ತನೆ ಮಾಡುವರು. ಅಶ್ಲೀಲ ಶೀರೆ ಹೊಡೆಯುವದು, ಸ್ಪರ್ಶ ಮಾಡುವದು, ಟೀಕೆ ಮಾಡುವದು. ಒತ್ತಾಯ ಮಾಡುವದು. ಅಸಭ್ಯ (ಅಂಗ ವಿಕ್ಷೇಪ) ವರ್ತನೆ, ಉತ್ತೇಜಕ ಸನ್ನೆಯನ್ನು ಮಾಡುವದು ಇವೆಲ್ಲವುಗಳ ಸಮಾವೇಶವು ಇದರಲ್ಲಿ ಬರುವದು.

## ಮಾಡಿ ನೋಡಿರಿ

5-6 ಹುಡುಗಿಯರ ಮತ್ತು 5-6 ಹುಡುಗರ ಹೀಗೆ ಎರಡು ಬೇರೆ ಗುಂಪು ಮಾಡಿರಿ. ಪ್ರತಿ ಗುಂಪು ಸಾರ್ವಜನಿಕ ಸ್ಥಳದಲ್ಲಿ ಕೆಣಕುವ ಕೆಳಗೆ ಕೊಟ್ಟ ಪ್ರಸಂಗದ ನಾಟ್ಯಕರಣ ಬೇರೆ ಬೇರೆ ಮಾಡಬೇಕು. ನಾಟಕ ವಾದ ನಂತರ ಒಟ್ಟಿಗೆ ಚರ್ಚೆ ಮಾಡಿರಿ.

(ಹುಡುಗಿ ನಡೆಯುತ್ತ ಬರುವಳು. ನಾಲ್ಕೈದು ಹುಡುಗರ ಗುಂಪು ಕುಳಿತಿದೆ)

ಹುಡುಗ 1: (ಶಿಳ್ಳ ಹಾಕುವನು)

(ಹುಡುಗಿ ಮುಖಕೆಳಗೆ ಮಾಡಿ ಮುಂದೆ ಹೋಗುವವಳು)

ಎರಡನೆ ಹುಡುಗ : ಶುಕ್ ಶುಕ್

(ಆಕೆಯು ಮತ್ತಷ್ಟು ಮುಂದೆ ಹೋಗುವವಳು)

ಮೂರನೆ ಹುಡುಗ: (ಕಾಗದದ ಮುದ್ದೆಯನ್ನು ಬೀಸಿ ಒಗೆಯುವನು)

(ಆಕೆಯು ಗಾಬರಿಯಾಗುವಳು ಮತ್ತು ಝುಫ್-ಝುಫ್ ಹೆಜ್ಜೆ ಇಡುತ್ತ ಮುಂದೆ ಹೋಗಹತ್ತುವಳು)

(ಆಕೆಯು ಮುಂದೆ ಹೋದನಂತರ ಎಲ್ಲ ಮಿತ್ರರು ನಗುತ್ತ ಒಬ್ಬರಿಗೊಬ್ಬರು ಚಪ್ಪಾಳೆ ತಟ್ಟುವರು)

ನಾಟಕವಾದನಂತರ ವಿದ್ಯಾರ್ಥಿಗಳಿಗೆ ಕೇಳಿರಿ, ಏನೆಂದರೆ, ಹುಡುಗಿಯ ಪಾತ್ರ ಮಾಡುವಾಗ ಅವರಿಗೆ ಯಾವ ಅನುಭವ ಬಂದಿತು? ಅವರಿಗೆ ಆ ಅನುಭವವು ಪುನಃ ಹಿಡಿಸಬಹುದೇ? ಹುಡುಗಿಯರಿಗೆ ಆಗುವ ತೊಂದರೆಯ ಕುರಿತು ಅವರಿಗೆ ಏನು ತಿಳಿಯಿತು?

ಹುಡುಗರ ಪಾತ್ರ ಮಾಡುವ ಅವರ ಅನುಭವ ಹೇಗಿತ್ತು? ಅವರಿಗೆ ಹುಡುಗನೆಂದು ಹೆಚ್ಚು ಸಾಮರ್ಥ್ಯವಂತನೆನಿಸಿತೆ? ಎಂದು ಹುಡುಗಿಯರಿಗೆ ಕೇಳಿರಿ.

## ಸ್ವಲ್ಪ ವಿಚಾರ ಮಾಡಿರಿ

ಎಷ್ಟೋ ಹುಡುಗಿಯರಿಗೆ ಅಪವರ್ತನೆಯನ್ನು ಎದುರಿಸಬೇಕಾಗುವದೆಂಬ ಭೀತಿಯಿಂದ ಎಷ್ಟೋ ಪಾಲಕರು ಅವರ ಹುಡುಗಿಯರನ್ನು ಹೊರಗೆ ಕಲಿಯಲು ಭೀತಿಯಿಂದ ಕಳಿಸುವದಿಲ್ಲ, ಒಬ್ಬಂಟಿಗಳಾಗಿ ಹೊರಗೆ ಹೋಗ ಗೊಡುವದಿಲ್ಲ, ಹೊರಗೆ ನೌಕರಿ ಮಾಡಗೊಡುತ್ತಿಲ್ಲ. ಇಂಥ ಹುಡುಗಿಯರ ಎಷ್ಟೊಂದು ಅವಕಾಶಗಳು ಈ ಮಾನಸಿಕತೆಯಿಂದ ಮತ್ತು ಇದರಿಂದ ನಿರ್ಮಾಣವಾಗುವ ಅಸುರಕ್ಷಿತತೇಯ ಭಾವನೆಯಿಂದ ಕಸಿದುಕೊಳ್ಳಲಾಗುತ್ತದೆ ನಾವು ಪ್ರತಿಯೊಬ್ಬರಿಗಾಗಿ ಸುರಕ್ಷಿತ ವಾತಾವರಣ ನಿರ್ಮಾಣ ಮಾಡಬೇಕು ಎಂದು ನಿಮಗೆ ಅನಿಸುವದೇ? ಇದಕ್ಕಾಗಿ ನೀವು ಏನು ಮಾಡುವಿರಿ?



### ವರ್ಗದಲ್ಲಿಯ ವಾತಾವರಣ

1. ವರ್ಗದಲ್ಲಿಯ ವಾತಾವರಣವು ಸಮಾನತೆಯದಾಗಿದೆಯೇ?
2. ವರ್ಗದಲ್ಲಿ ಅಸ್ವಸ್ಥ ವಾಗಬಹುದು ಇಂಥ ಪ್ರಕಾರದಿಂದ ಚುಡಾಯಿಸುವದು, ಶೇರೆ ಹೊಡೆಯುವದು ಯಾರಿಂದ ಆಗುತ್ತದೆಯೇ?

3. ಒಬ್ಬರೊಬ್ಬರ ಅಡಚಣಿಯನ್ನು ತಿಳಿದುಕೊಂಡು ಯಾರ ಅವ್ಯವಸ್ಥೆ ಆಗ ಬಾರದೆಂದು ಕಾಳಜಿ ತಗೆದು ಕೊಳ್ಳಲಾಗಿದೆಯೇ?
4. ವರ್ಗದಲ್ಲಿಯ ಉಪಕ್ರಮಗಳಲ್ಲಿ ಸಹಭಾಗವಹಿಸುವ ಸಮಾನ ಅವಕಾಶ ಎಲ್ಲರಿಗೂ ಸಿಗುವದೇ?
5. ಯಾರ ವಿರುದ್ಧವೂ ಅಕ್ಷೇಪವುಳ್ಳ ಸುದ್ದಿ ಬರೆದಿಡುವದು ಇಲ್ಲವೆ ಹಾರುವ ಸುದ್ದಿ ಪಸರಿಸುವದು ಆಗುವದೇ?

ಮೇಲಿನ ಪ್ರಶ್ನೆಗಳ ಮೇಲೆ 5-10 ನಿಮಿಷಗಳ ವಿಚಾರ ಮಾಡಿರಿ.



**ಜವಾಬುದಾರ ಸಾಮಾಜಿಕ ವರ್ತನೆ**

### 1. ದುರ್ವರ್ತನೆ ಮತ್ತು ಅಯೋಗ್ಯ ವ್ಯವಹಾರ ಮಾಡುವವರಿಂದ ಒಬ್ಬರೊಬ್ಬರ ಸಂರಕ್ಷಣೆ



ಅನುಚಿತ ಇಲ್ಲವೆ ಅಯೋಗ್ಯ ಕೃತ್ಯಗಳಿಂದ ಎಚ್ಚರದಿಂದಿರಿ. ಯಾರಾದರೂ ನಿಮ್ಮೊಂದಿಗೆ ದುರ್ವರ್ತನೆ ಮಾಡುವ ಪ್ರಯತ್ನ ಮಾಡುತ್ತಿದ್ದರೆ ಆ ವ್ಯಕ್ತಿಗೆ ನಿಷ್ಠುರವಾಗಿ 'ಇಲ್ಲ' ಎನ್ನಿರಿ ನಿಮ್ಮ ವಿಶ್ವಾಸ ಯಾರ ಮೇಲೆ ಇದೆಯೋ, ಅವರಿಗೆ ಈ ಕುರಿತು ಹೇಳಿರಿ. ನಿಮ್ಮ ಪರಿಚಯದ ಹುಡುಗ-ಹುಡುಗಿಯರೊಂದಿಗೆ ಯಾರಾದರೂ ಅಪಕೃತ್ಯ ಮಾಡುವದು ಕಂಡು ಬಂದರೆ ಅವರಿಗೆ ಪ್ರತಿಬಂಧ ಹಾಕಿರಿ. ಹಾಗೆಯೇ ಈ ಕುರಿತು ನಿಮ್ಮ ವಿಶ್ವಾಸದಲ್ಲಿಯ ಪ್ರೌಢರಿಗೆ ಹೇಳಿರಿ. ಅಪಲಾಭ ತಗೆದುಕೊಳ್ಳುವರಿಗೆ ಇಲ್ಲವೆ ಅನುಚಿತ ವರ್ತನೆ ಮಾಡುವವರಿಗೆ ಎಂದಿಗೂ ಸಹಿಸಬೇಡಿರಿ.

### 2. ನಿಮ್ಮ ಸುತ್ತಲೂ ಇರುವ ವ್ಯಕ್ತಿಗಳ ಆದರ

ನಾವು ಎಷ್ಟೊ ವ್ಯಕ್ತಿಗಳಿಗೆ ಹಿಡಿಸುತ್ತೇವೆ ಆದರೆ ಅವರೆಲ್ಲರೂ ನಮಗೆ ಹಿಡಿಸುತ್ತಾರೆ ಎಂದಲ್ಲ. ಹಾಗೆಯೇ ನಮಗೂ ಅನೇಕ ವ್ಯಕ್ತಿಗಳು ಹಿಡಿಸುತ್ತಾರೆ ಆದರೆ ಅವರೆಲ್ಲರಿಗೂ ನಾವು ಹಿಡಿಸುತ್ತೇವೆ ಎಂದಿಲ್ಲ. ಲಕ್ಷದಲ್ಲಿ ಬಂದದ್ದೇನೆಂದರೆ ಒಬ್ಬರೊಬ್ಬರ ಭಾವನೆ ಆದರ ಮಾಡುವದು, ನಡೆಯಬಹುದು, ಹೇಗೆ ನಿಮ್ಮ ಕೆಲವು ಇಷ್ಟ-ಆಯ್ಕೆಗಳು ಇರುವವೋ ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಗೆ ಕೆಲವು ಅಂಶಗಳು ಹೆಚ್ಚುಹಿಡಿಸುವವು ಮತ್ತು ಕೆಲವು ಹಿಡಿಸುವದಿಲ್ಲ

ನೀವು ಇತರರ ಇಷ್ಟಗಳ ಆದರ ಮಾಡುವದನ್ನು ಕಲಿಯಿರಿ. ನಿಮ್ಮ ಮರ್ಯಾದೆಯನ್ನು ಗುರುತಿಸಿ ವರ್ತಿಸಿರಿ. ಗದ್ದಲದ ಲಾಭ ಪಡೆ ದುಕೊಂಡು ಡಿಕ್ಕಿ ಹೊಡೆಯುವದು, ಅಸಭ್ಯವಾಗಿ ಸ್ಪರ್ಷ ಮಾಡುವದು, ಶೀಳು ಹೊಡೆಯುವದು, ಅಶ್ಲೀಲ ಭಾಷೆಯಲ್ಲಿ ಚಿಟ್ಟಿ/ಪತ್ರಲೇಖನ, ಅಸಭ್ಯ ಕೈಸನ್ನೆ ಮಾಡುವದು, ಗೋಡೆಯ ಮೇಲೆ ಯಾರೊಬ್ಬರ ಕುರಿತು ಅಪಮಾನಕಾರಕ ವಿಧಾನಗಳನ್ನು/ವಾಕ್ಯಗಳನ್ನು ಬರೆಯುವದು. ಈ ಎಲ್ಲ ಪ್ರಕಾರದ ವರ್ತನೆ ನಿಷಿದ್ಧವಾಗಿವೆ. ಇದನ್ನು ತ್ಯಜಿಸಬೇಕು. ಎರಡನೆಯವರಿಗೂ ಇಂಥ ವರ್ತನೆ ಮಾಡಗೊಡಬೇಡಿ.

**ಲಕ್ಷ್ಯದಲ್ಲಿ ಇಡಿರಿ**

ಎಲ್ಲ ಸಜೀವಿಗಳಿಗೆ ಜೀವಂತ ವಾಗಿರಲು ಒಂದಿಲ್ಲ ಒಂದು ಅಂಶಗಳ ಅವಶ್ಯಕತೆ ಇರುವದು. ಹೇಗೆ ಗಿಡಗಳಿಗೆ ಯೋಗ್ಯ ಮಣ್ಣಿನ, ನೀರಿನ, ಕೆಲವೊಮ್ಮೆ ಗೊಬ್ಬರದ ಅವಶ್ಯಕತೆ ಇರುವದು. ಪ್ರಾಣಿಗಳಿಗೆ ಮತ್ತು ಮನುಷ್ಯರಿಗೆ ಕೂಡ ಇಂತಹ ಅವಶ್ಯಕತೆಗಳಿರುವವು. ಆದರೆ ಪ್ರಾಣಿ ಮತ್ತು ಮನುಷ್ಯ ಇವರಲ್ಲಿ ಮಹತ್ವದ ಅಂತರ ವೇನೆಂದರೆ ಮನುಷ್ಯನು ತನಗೆ ಜೀವಿಸಲು ಅವಶ್ಯಕ ವಿದ್ದ ಅಂಶಗಳಕುರಿತು ನಿಯಮ ಪಾಲಿಸುವನು. ಹೇಗೆಂದರೆ, ನೀರಡಿಕೆ ಆದರೆ ಸ್ವಚ್ಛ ನೀರು ದೊರಕಿಸಲು ಪ್ರಯತ್ನ ಮಾಡುವನು, ಹಸಿವೆಯಾದ ನಂತರ ಹಳಿಸಿದ ಅನ್ನವನ್ನು ತಿನ್ನುವದಿಲ್ಲ. ಅವಶ್ಯಕತೆ ಎನಿಸಿದರೆ ಸ್ವಂತದ ಮೇಲೆ ನಿಯಂತ್ರಣವಿಡುವನು, ಧೈರ್ಯದಿಂದಿರುವನು, ತನಗೆ ಜೀವಿಸುವಾಗ ಅತೀ ಅವಶ್ಯ ಕವಾದ ಅವಶ್ಯಕತೆಗಳ ಕುರಿತು ನಿಯಮವನ್ನು ಪಾಲಿಸುವ. ಕೆಲವು ಜವಾಬದಾರ ಮನುಷ್ಯನಿಗಿರುವ ಲಕ್ಷಣವಾಗಿದೆ.

ಆಕರ್ಷಣ ಮತ್ತು ಅದರಿಂದ ನಿರ್ಮಾಣ ವಾಗುವ ಅಟ್ಟಹಾಸ

ಇತರರ ಅಧಿಕಾರ /ತೊಂದರೆಯ ವಿಚಾರ ಮಾಡದೇ ಬೇಕಾದ ವಸ್ತು/ವ್ಯಕ್ತಿ ಕಸಿದುಕೊಂಡು -ಬರಚಿಕೊಳ್ಳುವದು.

ಆ ವಸ್ತು/ವ್ಯಕ್ತಿ ದೊರಕಿಸಿ ಕೊಳ್ಳಲು ಯಾವುದೇ ಮಾರ್ಗದ ಅವಲಂಬನೆ ಮಾಡಲು ಸಿದ್ಧನಾಗುವದು.

ಆ ವಸ್ತು/ವ್ಯಕ್ತಿ ನನಗೆ ಸಿಗಬೇಕು ಅದರ ಮೇಲೆ ನನ್ನದೇ ಹಕ್ಕು ಇದೆ. ಎಂದೆನಿಸುವದು.

ಆ ವ್ಯಕ್ತಿ/ವಸ್ತುವಿನ ಕುರಿತು ಆಕರ್ಷಣೆ ಎನಿಸುವದು.

ಆ ವ್ಯಕ್ತಿ/ವಸ್ತು ಹೆಚ್ಚು ಹಿಡಿಸುವದು

ಯಾವುದೇ ವಸ್ತು/ವ್ಯಕ್ತಿ ಹಿಡಿಸುವದು. ಉದಾ. ಅಮಲಿ ಪದಾರ್ಥ, ಹುಡುಗ/ಹುಡುಗಿ

ಜವಾಬ್ದಾರ ವ್ಯಕ್ತಿಯಿಂದ ಆಗುವ ಅಧೋಗತಿ

**ಮೇಲಿನ ಆಕೃತಿಯ ಆಧಾರದಿಂದ ಚರ್ಚೆ ಮಾಡಿರಿ.**

**ತಿಳಿದು ಕೊಳ್ಳಿರಿ**

ನಮಗೆ ಬೇಕಾದ ವಸ್ತು ಅಥವಾ ವ್ಯಕ್ತಿ ದೊರಕಿಸುವ ಆಕರ್ಷಣೆ ಮತ್ತು ಅದರಿಂದ ನಿರ್ಮಾಣವಾಗುವ ಅಟ್ಟಹಾಸಕ್ಕಾಗಿ ನಾವು, ಮೇಲಿನ ಒಂದೊಂದು ಮೆಟ್ಟಲುಗಳನ್ನು ಏರುತ್ತಹೋಗುತ್ತೇವೆ.ಆದರೆ ಅದೇ ವೇಳೆಗೆ ಒಬ್ಬ ಹೊಣೆಗಾರ ನಾಗರಿಕನೆಂದು ಒಂದೊಂದು ಮೆಟ್ಟಲುಗಳನ್ನು ಇಳಿಯುತ್ತ ಅಧೋಗತಿಯ ದಿಶೆಸ ಹೋಗುತ್ತೇವೆ.

### 3. ವಿಶ್ವಾಸವುಳ್ಳ ಮಾಹಿತಿಯನ್ನು ಪಡೆಯಿರಿ.



ಶರೀರಶಾಸ್ತ್ರ ಮತ್ತು ಶರೀರ ವಿಜ್ಞಾನ ಇಂಥ ವಿಷಯಗಳಿಂದ ನಮಗೆ ನಮ್ಮ ಶರೀರದಲ್ಲಿಯ ಯಂತ್ರಣ ಹೇಗೆ ನಡೆಯುತ್ತವೆ? ಪೋಷಣ ಮೂಲ್ಯಗಳು ಅಂದರೇನು? ಜೀವನಸತ್ವಗಳು ಎಂದರೇನು ಈ ಕುರಿತು ಮಾಹಿತಿ ದೊರಕು ವದು, ಆದರೆ ಆ ಮಾಹಿತಿಯ ಯೋಗ್ಯ ಉಪಯೋಜನೆ ಮಾಡದ ಹೊರತು ನಾವು ನಿರೋಗಿ/ಸದೃಡವಾಗಿ ಇರಲಾರೆವು. ಉದಾ. ಜೀವನಸತ್ವಗಳ ಕುರಿತು ಮಾಹಿತಿ ಇದೆ ಆದರೆ ಅವುಗಳ ಸಮಾವೇಶವುಳ್ಳ ಅನ್ನ ತಿನ್ನದಿದ್ದರೆ ಅದರ ಲಾಭ ಇಲ್ಲವೆ ಅಪೂರ್ಣ ಮಾಹಿತಿ ದೊರಕಿದರೆ ನಮಗೆ ಅಂಜಿಕೆ, ಅಸ್ವಸ್ಥತೆ ಎನಿಸುವದು. ಉದಾ. ಕುಷ್ಠರೋಗವಾದ ವ್ಯಕ್ತಿಯ ಸಮೀಪಕ್ಕೆ ಕುಳಿತರೆ ನಮಗೂ ಕುಷ್ಠರೋಗ ವಾಗಬಹುದು ಇಲ್ಲವೆ ಕೆಲವೊಮ್ಮೆ ತಪ್ಪು ಮಾಹಿತಿಯಿಂದ ಉತ್ಸುಕತೆ ಇಲ್ಲವೆ ಅತಿ ಕುತೂಹಲ ನಿರ್ಮಾಣ ವಾಗಬಹುದು. ಮತ್ತು ಅದನ್ನು ಆರಿಸಲು ಪರಿಣಾಮಗಳ ವಿಚಾರ ಮಾಡದೇ ಕೃತಿಘಟಿಸುವ ಸಾಧ್ಯತೆ ಇರುವದು. ಹೇಗೆಂದರೆ ಯಾರೊಬ್ಬ 'ಅ' ಔಷಧ ತಿಂದರೆ ಎರಡು ದಿವಸಗಳಲ್ಲಿ ಐದು ಕಿಲೋ ಭಾರ ಕಡಿಮೆಯಾಗುವುದು.

**ನಿಮ್ಮ ಕುರಿತು ಇಲ್ಲವೆ ನಿಮ್ಮ ಪರಿಚಯದ ಯಾರಿಗಾದರೂ ಅತ್ಯಾಚಾರ, ಕೌಟುಂಬಿಕ ಅತ್ಯಾಚಾರ, ಒತ್ತಾಯ ಇಂತಹ ಕೆಲವು ಗಂಭೀರ ಕೃತ್ಯ ಘಟಿಸುತ್ತಿದ್ದರೆ. ಶಾಂತ ಕೂಡ ಬೇಡಿರಿ. ಕೂಡಲೇ 1098 ಈ ನಂಬರಿಗೆ ಫೋನಮಾಡಿ. ಈ ನಂಬರ ಬಾಲಕ ಮತ್ತು ಕಿಶೋರ ವಯಸ್ಸಿನವರಿಗಾಗಿ ಸಹಾಯ ಕೇಂದ್ರದ್ದಿದೆ. ಆಪತ್ತುಗ್ರಸ್ತ ಮಹಿಳೆಯರಿಗಾಗಿ ಸಹಾಯ ಕೇಂದ್ರದ ದೂರಧ್ವನಿ ಕ್ರಮಾಂಕ 1010/1091ಇದು ಇದೆ.**

## 4. ಕಾಯ್ದೆಯ ಆಧಾರ

ಯಾವುದೇ ಇಲೆಕ್ಟ್ರಾನಿಕ ಮತ್ತು ಸಂಗಣಕ ಮಾಧ್ಯಮದ ಮೂಲಕ ಉದಾ. ಮೊಬಾಯಿಲ್, ಸಂಗಣಕ ಪೆನ ಡ್ರಾಯಿವ್ಹ, ಕೆಮೆರಾ ಇತ್ಯಾದಿಗಳ ಮೂಲಕ ಮಾಡಿದ ಅಪರಾಧಕ್ಕೆ ಸಾಯಬರ ಕ್ರಾಯಿಮ ಎಂದು ಸಂಬೋಧಿಸಲಾಗುವದು, ಯಾವುದೇ ವ್ಯಕ್ತಿ ಇಲ್ಲವೆ ಸಂಸ್ಥೆಯ ಕುರಿತು ಅಶ್ಲೀಲ ಮತ್ತು ಆಕ್ಷೇಪವುಳ್ಳ ಸುದ್ಧಿಯನ್ನು ಪ್ರಸಾರ ಮಾಡುವದು. ವೈಯಿಕ್ತಿಕ ಸಂವೇದನಶೀಲ ಮಾಹಿತಿಯ ಕಳ್ಳತನ ಮತ್ತು ದುರುಪಯೋಗ ಮಾಡುವದು, ಗೈರವರ್ತನೆ ಇಲ್ಲವೆ ವಿಷಯ ಪ್ರಸಾರ ಮಾಡುವದು. ಇದು ಸಾಯಬರ ಕಾಯ್ದೆಯ ಪ್ರಕಾರ ಅಪರಾಧವಿದ್ದು ಆಕುರಿತು ಸೆರೆಮನೆವಾಸ ಇಲ್ಲವೆ ದಂಡ ಎರಡೂ ಆಗಬಹುದು.

ವಿದ್ಯಾರ್ಥಿಗಳ ಸಹಾಯಕ್ಕಾಗಿ ಅವರಿಗೆ ಹೊಣೆಗಾರ ವ್ಯಕ್ತಿಗಳ ದೂರಧ್ವನಿ ನಂಬರಗಳನ್ನು ಕೊಡಬೇಕು.

### ಯೋಗ್ಯ/ಅಯೋಗ್ಯ

ಕೆಳಗಿನ ಕಿಶೋರ ವಯಸ್ಸಿನ ವಿದ್ಯಾರ್ಥಿಗಳು ಹೊಣೆಗಾರಿಕೆಯಿಂದ ವರ್ತಿಸುತ್ತಾರೆ ಎಂದು ನಿಮಗೆ ಅನಿಸುವುದೆ?



1. ನಿಮ್ಮ ಮಿತ್ರನಿಗೆ ಒಬ್ಬ ಹುಡುಗಿ ಹಿಡಿಸುವಳು. ಆಕೆಯು ಕೋಚಿಂಗ ಕ್ಲಾಸಿಗೆ ಹೋಗುವಾಗ ಆ ಹುಡುಗ ಆಕೆಯ ಬೆನ್ನು ಹತ್ತುತ್ತಾನೆ ಆಕೆಯು ಪ್ರತಿಕಾರ ಮಾಡಿದಳು, ಈಗ ಅವನು ಆಕೆಯ ಕೆಟ್ಟ ಹೆಸರು ಮಾಡುವ ಹೆದರಿಕೆ ತೋರಿಸುವನು.
2. ಗದ್ದಲದಲ್ಲಿ ಹುಡುಗಿಯರಿಗೆ ಡಿಕ್ಕಿ ಹೊಡೆಯುವದು, ಕೆಟ್ಟ ಉದ್ದೇಶದಿಂದ ಸ್ಪರ್ಶ ಮಾಡುವದು. ನಿಮ್ಮ ಕೆಲವು ಮಿತ್ರರಿಗೆ ಹಿಡಿಸುವದು.



3. ವರ್ಗದಲ್ಲಿಯ ಯಾವುದೇ ಹುಡುಗನ ಕುರಿತು ಇಲ್ಲವೆ ಹುಡುಗಿಯ ಕುರಿತು ಕಲಂಕ ಹಚ್ಚುವ ಇಲ್ಲವೆ ಅವರಿಗೆ ಅಪಮಾನ ಗೊಳಿಸುವ ವಿಧಾನಗಳನ್ನು ಕರಿ ಹಲಿಗೆಯ ಮೇಲೆ ಬರೆಯುವದು.
4. ಇತರ ಹುಡುಗರ/ಹುಡುಗಿಯರಫೋಟೋ ಅವರ ಅನುಮತಿ ಇಲ್ಲದೆ ಗೊತ್ತಿಲ್ಲದ ಹಾಗೆ ತೆಗೆಯುವದು.
5. ಶಾಲೆಬಿಟ್ಟನಂತರ ನಿಮ್ಮ ಮಿತ್ರರು ಇತರ ಗೆಳೆಯ-ಗೆಳತಿಯರ ಕುರಿತು ಶೇರಾ (ಡೈಲಾಗ) ಹೊಡೆಯುವದು.

ಕೊಟ್ಟ ವಿಧಾನಗಳ ಮೇಲೆ ಚರ್ಚೆ ಮಾಡಿರಿ ಮತ್ತು ಯೋಗ್ಯ ಯಾವುದು, ಅಯೋಗ್ಯ ಯಾವುದು ಮತ್ತು ಏಕೆ ಎಂಬುದರ ಸ್ಪಷ್ಟೀಕರಣ ಮಾಡಲು ಹೇಳಿರಿ.

### ಇಂಥ ಪ್ರಸಂಗದಲ್ಲಿ ನೀವು ಏನು ಮಾಡುವಿರಿ? ವಿಚಾರ ಮಾಡಿರಿ.

- ನಿಮ್ಮ ಮಿತ್ರ ಇಲ್ಲವೆ ಗೆಳತಿಗೆ ಶಾಲೆಯಿಂದ ಮನೆಗೆ ಹೋಗುವಾಗ ಕೆಲವು ಹುಡುಗರು ಕೆಣಕುತ್ತಾರೆ, ತೊಂದರೆ ಕೊಡುತ್ತಾರೆ.
- ನಿಮ್ಮ ಗೆಳೆಯ/ಗೆಳತಿಯು ಬಹಳ ವಿಶ್ವಾಸದಿಂದ 'ಆ' ವಿಶಿಷ್ಠ ಮನುಷ್ಯನು ಸಮೀಪದಲ್ಲಿದ್ದರೆ ಅವನಿಗೆ/ಅವಳಿಗೆ ಬಹಳ ಅಸ್ವಸ್ಥತೆ ಬರುವದು, ಒತ್ತಡ ಬರುವದೆಂದು ನಿಮಗೆ ಹೇಳಿದ್ದಾರೆ.
- ನಿಮ್ಮ ಮಿತ್ರನಿಗೆ ಗುಟಖಾ ತಿನ್ನು ಚಟ ಹತ್ತಿದೆ. ಅವನು ಗುಟುಖಾದ ಬಲೆಯಲ್ಲಿ ಸಿಕ್ಕಿದ್ದಾನೆ.
- ನಿಮ್ಮ ಮಿತ್ರನು ಹುಡುಗಿಯರೊಂದಿಗೆ/ ಸ್ತ್ರೀಯರೊಂದಿಗೆ ಬಹಳ ಅನಾದರದಿಂದ ವರ್ತಿಸುವನು. ಅವನ ಈ ವಿಚಾರ ಮತ್ತು ವರ್ತನೆ ನಿಮಗೆ ಬದಲಿಸುವದಿದೆ.

ಮಕ್ಕಳ ನಾಲ್ಕು ಇಲ್ಲವೆ ಐದು ಗುಂಪು ಮಾಡಿರಿ. ಪಕ್ಕದ ಒಂದೊಂದು ಉದಾಹರಣೆ ಒಂದೊಂದು ಗುಂಪಿಗೆ ಕೊಡಿರಿ. ಈ ಸಮಸ್ಯೆಯು ನಿಮ್ಮ ಮಿತ್ರರು ಕುರಿತು ಇದ್ದರೆ ನೀವು ಅವನಿಗೆ ಹೇಗೆ ತಿಳಿಹೇಳುವಿರಿ? ಹತ್ತು ನಿಮಿಷಗಳ ಚರ್ಚೆ ಮಾಡಿರಿ. ವರ್ಗದ ಎದುರಿಗೆ ಸಾದರ ಪಡಿಸಿರಿ. ನೋಟಬುಕ್ಕಿನಲ್ಲಿ ಬರೆಯಿರಿ.

## ಸಮಾಜ ಮಾಧ್ಯಮಗಳು

ಯಾವ ಮಾಧ್ಯಮಗಳ ಉಪಯೋಗವು ಸಮಾಜದಲ್ಲಿಯ ವಿವಿಧ ಗುಂಪಿನಲ್ಲಿಯ ಜನರು ಪ್ರಾಮುಖ್ಯವಾಗಿ ಒಬ್ಬರೊಬ್ಬರೊಂದಿಗೆ ಕೂಡಿ ಇರಲು, ಸಂವಾದ ಸಾಧಿಸಲು, ಒಬ್ಬರೊಬ್ಬರ ಆಯುಷ್ಯದಲ್ಲಿಯ ಘಟನೆ, ಪ್ರಸಂಗ ಒಬ್ಬರಿಗೊಬ್ಬರು ಹೇಳಲು ಉಪಯೋಗಿಸುವರು. ಅವುಗಳಿಗೆ ಸಮಾಜ ಮಾಧ್ಯಮಗಳು ಎಂದು ಅನ್ನುತ್ತಾರೆ WhatsApp, Facebook, Twitter ಮುಂತಾದವುಗಳು ಸಧ್ಯದ ಕಾಲದಲ್ಲಿ ಉಪಯೋಗಿಸಲಾಗುವ ಕೆಲವು ಸಮಾಜ ಮಾಧ್ಯಮಗಳಾಗಿವೆ.



## ಮಾಹಿತಿ ಪ್ರಸಾರದ ಮಾಧ್ಯಮಗಳು ಮತ್ತು ಸಮಾಜ ಮಾಧ್ಯಮಗಳಲ್ಲಿಯ ಅಂತರ




ಮಾಹಿತಿ ಪ್ರಸಾರ ಮಾಧ್ಯಮಗಳು ಮತ್ತು WhatsApp, Facebook ದಂತಹ ಸಮಾಜ ಮಾಧ್ಯಮಗಳು ಇವುಗಳಲ್ಲಿ ನಿಮಗೆ ಏನು ಅಂತರ ಕಾಣುವದು? ಕೆಳಗೆ ನಿಮ್ಮ ವಿಚಾರಕ್ಕಾಗಿ ಕೆಲವು ಅಂಶಗಳನ್ನು ಕೊಡಲಾಗಿದೆ-

1. ಖರ್ಚಿನ/ಕಡಿಮೆ ಖರ್ಚಿನ
2. ಅನೇಕ ಜನರವರೆಗೆ ಮುಟ್ಟುವದು/ಮುಟ್ಟದೇ ಇರುವದು
3. ನಿಯಮ, ನಿಯಂತ್ರಣ ಮತ್ತು ಉತ್ತರದಾಯಿತ್ವ
4. ಉಪಯೋಗಿಸಲು ಸುಲಭ/ಕಠಿಣ
5. ಪ್ರಭಾವಿ/ನಿಷ್ಪ್ರಭ

## ಸಮಾಜ ಮಾಧ್ಯಮಗಳಿಂದ ದೊರಕುವ ಮಾಹಿತಿಗಳು

ಕೆಳಗಿನ ಸಂದೇಶಗಳು WhatsApp ಮೇಲೆ ಬಹಳ ತಿರುಗುತ್ತಿದ್ದವು.

"UNESCOವು ಭಾರತದ ರಾಷ್ಟ್ರಗೀತೆಯು ಸರ್ವೋತ್ತಮವಾಗಿದೆ ಎಂದು ಜಾಹಿರು ಪಡಿಸಿತು"

ಸಾಧ್ಯವಾದರೆ ವಿದ್ಯಾರ್ಥಿಗಳಿಗೆ ಈ ಸಂದೇಶದ ಕುರಿತು ಮಾಹಿತಿ ಶೋಧಿಸಲು ಹೇಳಿ, ಅವುಗಳ ಸತ್ಯ ಅಸತ್ಯತೆಯನ್ನು ಪರೀಕ್ಷಿಸಲು ಹೇಳಿರಿ.

1. ನಿಮ್ಮ ತಂದೆ, ತಾಯಿ, ಗೆಳೆಯ-ಗೆಳತಿಯರು WhatsApp ಮೇಲಿನ ಮಾಹಿತಿಯನ್ನು ಶೋಧಿಸಿ ನೋಡುವರೆ?
2. ತಿಳಿಯಿರಿ, ಏನೋ ಅಸತ್ಯ ಮಾಹಿತಿಯನ್ನು ಪಸರಿಸಲಾಯಿತು ಅಂದರೆ ಅದರ ಪರಿಣಾಮ ಏನಾಗಬಹುದು? ಚರ್ಚೆ ಮಾಡಿರಿ.

## ತಿಳಿದು ಕೊಳ್ಳಿರಿ

ಸುಳ್ಳು ಮಾಹಿತಿಯನ್ನು ಪಸರಿಸುವದರ ಪರಿಣಾಮ

ಸಮಾಜಮಾಧ್ಯಮಗಳ ಮೇಲೆ ಯಾರದೇ ನಿಯಂತ್ರಣವಿಲ್ಲದ್ದರಿಂದ ಯಾರು ಬೇಕಾದರೂ ಏನೋ ಮಾಹಿತಿಯನ್ನು ಹಾಕಿದರೂ ಯಾರೂ ಆಕುರಿತು ಹೊಣೆಗಾರರಿಲ್ಲ. ಇದರ ಲಾಭವನ್ನು ಹಲವಾರು ಸಲ ಸಮಾಜ ಕಂಟಕರು ಮಾಡಿಕೊಳ್ಳುತ್ತಾರೆ. ಬೇರೆ ಬೇರೆ ಗುಂಪಿನ ಕುರಿತು ಜನರಲ್ಲಿ ಅಪನಂಬಿಕೆ ಪಸರಿಸುವದು, ಸ್ವಂತದ ಅಭಿಪ್ರಾಯದಂತೆ ಇದು ಸತ್ಯವಿದೆ ಎಂದು ಹೇಳಿ ಹಾರಿಕೆಯ ಸುದ್ದಿ ಪಸರಿಸುವದು. ಇಂಥ ಅನೇಕ ಪ್ರಕಾರಗಳು ಘಟಿಸುವವು. ಒಬ್ಬ ಹೊಣೆಗಾರ ನಾಗರಿಕನೆಂದು ಹೀಗೆ ಮಾಡದೇ ಇರುವದು ಮತ್ತು ಇಂಥ ಮಾಹಿತಿಯು ನಿಮ್ಮ ವರೆಗೆ ಮುಟ್ಟಿದರೆ ಅದರ ಸತ್ಯತೆಯನ್ನು ನೋಡಿ, ಅದು ಸರಿ ಎನಿಸಿದರೆ ಅದರ ಮೇಲೆ ವಿಶ್ವಾಸವನ್ನಿಟ್ಟು ಅದನ್ನು ಮುಂದೆ ಕಳಿಸುವದು ಇಲ್ಲದೆ ಕಳಿಸದೆ ಇರುವದು. ಇದನ್ನು ನೀವು ಕಟಾಕ್ಷೆಯಿಂದ ಕಳಿಸುವದು ಇಲ್ಲದೆ ಕಳಿಸದೇ ಇರುವದು. ಇದನ್ನು ನೀವು ಕಟಾಕ್ಷೆಯಿಂದ ಪಾಲಿಸಬೇಕು.

ಯಾವುದೇ ಮಾಹಿತಿ ದೊರಕಿದರೆ ಅದನ್ನು ಶೋಧಿಸುವ ಪದ್ಧತಿ–

1. ಇಂಟರನೆಟ್ ಮೇಲೆ ಹೋಗಿ ಈ ಮಾಹಿತಿಯು ಎಲ್ಲಿ ಕಾಣಿಸುತ್ತದೆಯೋ ಅದನ್ನು ಶೋಧಿಸಿರಿ.
2. ಆ ಮಾಹಿತಿ ಕಾಣಿಸಿದರೆ, ಅದು ಯಾವ ಅಧಿಕೃತವಾದ ವರ್ತಮಾನಪತ್ರಿಕೆಯ ಇಲ್ಲವೆ ಸರಕಾರದ ವೆಬಸಾಯಿಟ್‌ದ ಮೇಲೆ ಇದೆಯೇ ಎಂಬುದನ್ನು ನೋಡಿರಿ.
3. ಮಾಹಿತಿ ಕೊಡುವ ವ್ಯಕ್ತಿಯು ಅಧಿಕೃತ ವಾಗಿದ್ದಾನೋ? ಅವನ ಕಡೆಗೆ ಆ ಕುರಿತು ಅಂಕಿಸಂಖ್ಯೆ ಇದೇಯೋ? ಇಲ್ಲವೆ ಕೇವಲ ತನ್ನ ಮತವನ್ನು ವ್ಯಕ್ತಪಡಿಸುತ್ತಿದ್ದಾನೆ ಎಂಬುದನ್ನು ಪರೀಕ್ಷಿಸಿರಿ ಮತ್ತು ಆ ಮೇಲೆ ಅದರ ಮೇಲೆ ವಿಶ್ವಾಸವಿಡಿರಿ.

### ನಮ್ಮ ಮೇಲೆ ಆಗುವ ಪರಿಣಾಮಗಳು

ನಿಮಗೆ facebook, Twitter ಇಲ್ಲವೆ WhatsApp ಇವುಗಳ ಕುರಿತು ಯಾವ ಮಾಹಿತಿ ಇದೆ?

ದಿವಸದಲ್ಲಿ ಎಷ್ಟು ವೇಳೆ ನೀವು ಈ ಎಲ್ಲವುಗಳ ಉಪಯೋಗದಲ್ಲಿ ಕಳೆಯುವಿರಿ?

ನಿಮಗೆ ಈ ಎಲ್ಲ ಮಾಧ್ಯಮಗಳನ್ನು ಉಪಯೋಗಿಸಲು ಇನ್ನೂ ವೇಳೆ ದೊರಕಿದರೆ ಹಿಡಿಸುವದೇ ಏಕೆ?

ವಿದ್ಯಾರ್ಥಿಗಳ ಗುಂಪು ಮಾಡಿ ಅವರಿಗೆ ಚರ್ಚೆ ಮಾಡಲು ಹತ್ತು ನಿಮಿಷಗಳ ಅವಧಿ ಕೊಡಿರಿ. ಪ್ರತಿಯೊಂದು ಗುಂಪು ಅವುಗಳ ಕಾರಣಗಳನ್ನು ಹೇಳಬೇಕು. ಕಾರಣಗಳನ್ನು ನೋಟಬುಕ್ಕಿನಲ್ಲಿ ಬರೆದಿಡಬೇಕು.



### ನಮ್ಮದನ್ನು ಕೇಳಲಾಗುತ್ತಿದೆ ಎಂದು ಅನಿಸುವದು.

ಸಮಾಜ ಮಾಧ್ಯಮಗಳಲ್ಲಿ ನಮ್ಮ ಯಾವುದೇ ಅಭಿವ್ಯಕ್ತಿಗೆ ಪ್ರತಿಕ್ರಿಯೆ ದೊರಕುವದು. ಇದರಿಂದ ನಾವು ವ್ಯಕ್ತ ಪಡಿಸಿದ. ವಿಚಾರಗಳನ್ನು ಜನರು ಲಕ್ಷಕೊಟ್ಟು ಕೇಳುತ್ತಾರೆ, ಕಾಳಜಿಯಿಂದ ತಿಳಿದುಕೊಳ್ಳುತ್ತಾರೆ ಎಂಬ ಭ್ರಮೆಯಲ್ಲಿ ಇರುವೆವು. ವಾಸ್ತವದಲ್ಲಿಮಾತ್ರ ನಾವು ವ್ಯಕ್ತ ಪಡಿಸಿದ ಪ್ರತಿಯೊಂದು ವಿಚಾರವನ್ನು ಗಣನೆಗೆ ತಗೆದು ಕೊಳ್ಳಲಾಗುತ್ತದೆ ಎಂದಿಲ್ಲ.

### ನಿಜವಾದ ಜೀವನ ಮತ್ತು ಆನಲೈನ್ ಜೀವನ



ಸಮಾಜ ಮಾಧ್ಯಮಗಳ ಮೇಲೆ ಪ್ರತಿಯೊಬ್ಬ ವ್ಯಕ್ತಿಯು ತನ್ನ ಆಯುಷ್ಯದಲ್ಲಿ ಘಟಿಸುವ ಒಳ್ಳೆಯದ್ದೇ ಸುದ್ದಿಯನ್ನು ಜನರ ವರೆಗೆ ಮುಟ್ಟಿಸುವ ಪ್ರಯತ್ನ ಮಾಡುತ್ತಿರುತ್ತಾನೆ. ಆದರೆ ನಿಜ ಆಯುಷ್ಯದಲ್ಲಿ ಸುಖದುಃಖ ಎರಡೂ ಇರುವವು. ಇತರರು ಕಳುಹಿಸಿದ ಮಾಹಿತಿಯನ್ನು ನೋಡಿ ಇತರರೆಲ್ಲರೂ ಆನಂದದಲ್ಲಿದ್ದಾರೆ ಮತ್ತು ನಮ್ಮ ಆಯುಷ್ಯದಲ್ಲಿ ಹೀಗೆನೂ ಆಗಲಿಲ್ಲವೆಂದು ಅನಿಸಿ ಅನೇಕರಿಗೆ ನಿರಾಶೆ ಬರುವ ಸಾಧ್ಯತೆ ಇರುವದು.

### ಪರಿಪೂರ್ಣತೆಯ ಭ್ರಮೆ

ನಮ್ಮ ತೋರಿಕೆ, ನಮ್ಮ ಆಯುಷ್ಯ, ನಮ್ಮ ರಕ್ತ ಸಂಬಂಧಗಳು ಶಾಶ್ವತವಾಗಿ ಸರ್ವೋತ್ತಮ ನಿರ್ದೋಷ, ಪರಿಪೂರ್ಣ ಆದರ್ಶ ಇರಲೇಬೇಕು ಇಲ್ಲದಿದ್ದರೆ ಅದು ನಿಷ್ಪ್ರಭ ಇದೆ. ಎಂಬ ತಿಳಿವಳಿಕೆ ಸಮಾಜ ಮಾಧ್ಯಮದಿಂದ ನಿರ್ಮಾಣವಾಗುವದು. ಆದ್ದರಿಂದ ಚಿಕ್ಕ ಘಟನೆಗಳನ್ನು ದೊಡ್ಡದಾಗಿ ಮಾಡಿ ತೋರಿಸುವದು, ಇಲ್ಲದ ಘಟನೆಯ ತೋರಿಕೆ ನಿರ್ಮಾಣ ಮಾಡುವದು ಮತ್ತು ವೈಯಕ್ತಿಕ ಆಯುಷ್ಯ ಮಾತ್ರ ಹಾಗೆ ಇಲ್ಲವೆಂದು ಕೊರತೆಯ ಚಿತೆಯನ್ನಿಟ್ಟು ಕೊಳ್ಳುವದು. ಬಹಳ ವೇಳೆ ಕಂಡು ಬರುವದು. ವಾಸ್ತವದಲ್ಲಿ ಮಾತ್ರ ತಮ್ಮ ಕಾಣಿಸುವಿಕೆ, ತಮ್ಮ ಆಯುಷ್ಯ, ತಮ್ಮ ರಕ್ತ ಸಂಬಂಧ ಪರಿಪೂರ್ಣವಾಗಿರುವದಿಲ್ಲ. ಅದು ಉತ್ತಮವಾಗಲು ಪ್ರಯತ್ನ ಮಾಡಬೇಕಾಗುವದು.

### ಪರಿಸ್ಥಿತಿಯ ಆಕಲನ ವಾಗುವದು.

ಯಾವುದೇ ಪರಿಸ್ಥಿತಿಯ ಕುರಿತು ಅರಿವನ್ನು ನಿರ್ಮಾಣ ಮಾಡುವದಕ್ಕಾಗಿ ಅನೇಕ ಘಟಕಗಳ ಅವಶ್ಯಕತೆ ಇರುವದು. ಶಬ್ದ, ಶರೀರದ ಚಲನ ವಲನ ಹಾವಭಾವನೆ, ಮಾತನಾಡುವ ಪದ್ದತಿ ಮುಂತಾದವುಗಳು, ಒಂದು ಸಂಶೋಧನೆಯಂತೆ ಕೇವಲ 7% ಸಂವಾದವು ಶಬ್ದಗಳಿಂದಾಗುವದು ಉಳಿದ 93% ಸಂವಾದವು ಶರೀರದ ಚಲನೆ, ಹಾವಭಾವನೆ ನಮ್ಮ ಸ್ವರ ಇವುಗಳಿಂದ ಆಗುವದು ಪರಿಸ್ಥಿತಿಯ ಆಕಲನ ವಾಗದ ಹೊರತು ನಮಗೆ ಸಮಾಜದಲ್ಲಿ ಅಲೆಯುವದು ಮತ್ತು ವರ್ತಿಸಲಾಗುವದಿಲ್ಲ. ಇದಕ್ಕಾಗಿ ಹತ್ತುವ ಮೆದುಳಿನಲ್ಲಿಯ ಜೋಡಿಕೆಗಳು ಕೇವಲ ಪ್ರತ್ಯಕ್ಷ ಅನುಭವಗಳಿಂದಲೇ ಸಿದ್ಧವಾಗುವವು ಇದರ ಅರ್ಥ ಸಮಾಜ ಮಾಧ್ಯಮಗಳಂಥ ಆಭಾಸವು ಜಗತ್ತಿನಲ್ಲಿ ನಮ್ಮ ಎಷ್ಟು ವೇಳೆ ಹೋಗಬಹುದೋ ಅಷ್ಟು ಪ್ರತ್ಯಕ್ಷ ಅನುಭವದ ಅವಕಾಶಗಳು ಕಡಿಮೆಯಾಗುತ್ತ ಹೋಗಬಹುದು. ಮತ್ತು ಜೀವಿಸಲು ಬೇಕಾದ ಕೌಶಲ್ಯಗಳು ವಿಕಸಿತವಾಗಲಾರವು.

### ಲಿಖಿತ ಶಬ್ದಗಳ ಅರ್ಥ ಹಚ್ಚುವದು.



### ಸ್ವಲ್ಪ ಮೋಜು ಮಾಡೋಣ

ಚಾರ್ಟ್ ಪೇಪರದ 5-6 ಚಿಟ್ಟಿಗಳನ್ನು ತಯ್ಯಾರಿಸಿರಿ. ಪ್ರತಿಯೊಂದರ ಮುಂದಿನ ಭಾಗದಲ್ಲಿ ಲಾಯಿಕದ ಚಿನ್ಹೆ ತಗೆಯಿರಿ. ಹಿಂದಿನ ಬದಿಗೆ ಯಾವುದೇ ಅಂಶಗಳ ಕುರಿತು ಪ್ರತಿಕ್ರಿಯೆ ಕೊಡುವ ಯಾವುದೇ ವಾಕ್ಯಗಳನ್ನು ಬರೆಯಿರಿ. ನೀವು ನಿಮ್ಮ ಮನಸ್ಸಿನಿಂದಲೂ ವಾಕ್ಯಗಳನ್ನು ಬರೆಯಬಹುದು.

1. ಒಳ್ಳೆಯದಿದೆ.

2. ಸರಿಯಾಗಿ ಇದೆ. ಬಳಹ ವಿಶೇಷವೇನಿಲ್ಲ

3. ಸರಿಯಾಗಿ ಇದೆ. ತಪ್ಪು ಏನು ಇಲ್ಲ

4. ಸರಿಯಾಗಿ ಇದೆ. ನನಗೆ ಒಪ್ಪಿಗೆ ಯಾಗಿದೆ.

5. ಸರಿಯಾಗಿ ಇದೆ. ನನ್ನ ಅಪೇಕ್ಷೆ ಹೆಚ್ಚಿಗೆ ಇತ್ತು, ಆದರೆ ಈಗ ಏನು ಮಾಡುವದು

6. ಉತ್ಕೃಷ್ಟ ವಾಗಿದೆ.


ಒಬ್ಬ ವಿದ್ಯಾರ್ಥಿಯನ್ನು ಎದುರಿಗೆ ಕೂಡಿಸ ಬೇಕು ಅವನಿಗೆ ಕೇವಲ 'ಲಾಯಿಕ್'ದ ಚಿಹ್ನೆ ತಗೆದ ಭಾಗ ಕಾಣಿ ಸಬಹುದು ಆದರೆ ಇತರರಿಗೆ ಮಾತ್ರ ಎರಡನೆಯ ಭಾಗ ಕಾಣಿಸಬಹುದು ಹೀಗೆ ಚಿಟ್ಟಿಗಳ ರಚನೆ ಮಾಡಿರಿ. ಈಗ ಆ ವಿದ್ಯಾರ್ಥಿಯು ಯಾವುದೇ ಒಂದು ಕೃತಿ ಮಾಡ ಬೇಕು. ಹಾಡು-ಹಾಡುವದು, ವಿನೋದ ಹೇಳುವದು ಮುಂತಾದವುಗಳು ಇತರ ವಿದ್ಯಾರ್ಥಿಗಳಲ್ಲಿಯ ಯಾರಾ ದರೂ ಅದರಲ್ಲಿ ಭಾಗವನ್ನು ಆ ವಿದ್ಯಾರ್ಥಿಗೆ ತೋರಿಸ ಬೇಕು ಆ ವಿದ್ಯಾರ್ಥಿಯು ಈ ಲಾಯಿಕದ ಏನು ಅರ್ಥ ವಿರಬಹುದು ಎಂಬ ವಿಚಾರ ಮಾಡಿ ಇತರರಿಗೆ ಹೇಳಬೇಕು

**ತಿಳಿದು ಕೊಳ್ಳಿರಿ**

ಒಂದು ಲಾಯಿಕ ಚಿನ್ಹದ ಇಷ್ಟೊಂದು ವಿವಿಧ ಅರ್ಥಗಳು ಹೊರಡುವವು. ಆದರೆ, ಒಂದುವೇಳೆ ಸಮಾಜ ಮಾಧ್ಯಮಗಳೇ ಇತರರಿಗೆ ಪ್ರತಿಕ್ರಿಯೆ ಕೊಡುವ ಮುಖ್ಯ ಸಾಧನಗಳಾಗಿರಬಹುದು. ಮತ್ತು ಅದರಿಂದ ಜನರೊಂದಿಗೆ ನಮ್ಮ ವೈಯಕ್ತಿಕ ಸಂವಾದ ಕಡಿಮೆ ಯಾಗಿ, ನಮ್ಮ ಜನರ ಕುರಿತು ಹಲವಾರು ಅಪನಂಬಿಕೆಗಳು ನಿರ್ಮಾಣವಾಗಬಹುದು. ಇದನ್ನು ನಾವು ಯಾವಾಗಲೂ ಲಕ್ಷದಲ್ಲಿಡಬೇಕು.

**ಒಂಟಿತನ**

**ಹೊಂದಾಣಿಕೆ ಮಾಡಿರಿ.**



| | |
|---|---|
| 1. ಅ- ನಿಯಮಿತವಾಗಿ ವ್ಯಾಯಾಮ ಮಾಡುವನು ಮತ್ತು ಆಟ ಆಡಲು ಹೋಗುವನು | 1. ಆ - ರಾತ್ರಿ ಬಹಳ ವೇಳೆಯ ವರೆಗೆ ಮೋಬಾಯಿಲ ಮೇಲೆ ಗೇಮ್ ಆಡುವನು ಆದ್ದರಿಂದ ಬೇಗ ಏಳುವದಿಲ್ಲ ವ್ಯಾಯಾಮ ಮಾಡುವದಿಲ್ಲ. ಸಾಯಕಲ ಮೇಲೆ ಇಲ್ಲವೇ ಬಸ್ಸಿನಲ್ಲಿ ಹೋದರೂ ಹಾಡನ್ನು ಕೇಳುತ್ತ, ಮೋಬಾಯಿಲದೊಂದಿಗೆ ಆಡುತ್ತ ಹೋಗುವನು. |

| | |
|---|---|
| 2. ಶಾಲೆಯಲ್ಲಿ ಅವನ ಗೆಳೆಯರೊಂದಿಗೆ ಮಾತನಾಡುವನು, ಊಟದ ಬಿಡುವಿನಲ್ಲಿ ಎಲ್ಲ ಗೆಳೆಯರು ಒಟ್ಟಿಗೆ ಊಟಮಾಡು ವರು, ಹರಟೆ ಹೊಡೆಯುವನು. | 2. ಊಟದ ಬಿಡುವಿನಲ್ಲಿ ಅವನು ಮತ್ತು ಅವನ ಎಲ್ಲ ಮಿತ್ರರು ಊಟ ಮಾಡುವಾಗ ತಮ್ಮ ತಮ್ಮ ಮೋಬಾಯಿಲ ನೋಡುತ್ತಿರುತ್ತಾರೆ. |
| 3. ಸಂಜೆಗೆ ಮನೆಯವರೊಂದಿಗೆ, ಅಕ್ಕಪಕ್ಕದವರೊಂದಿಗೆ ಹರಟೆ ಹೊಡೆಯುವನು. | 3. ರಾತ್ರಿ ಎಲ್ಲರೊಂದಿಗೆ ಊಟ ಮಾಡುವದಿಲ್ಲ, ಒಬ್ಬನೆ ಟಿ.ವ್ಹಿ ಇಲ್ಲವೆ ಇಂಟರ್ನೆಟ ನೋಡುತ್ತ ಊಟ ಮಾಡುವನು |
| 4. ಅ – ಸಮಾಜ ಮಾಧ್ಯಮಗಳ ಮರ್ಯಾದಿತ ಉಪಯೋಗ ಮಾಡುವನು. ಆದರೆ ಅವನಿಗೆ ಅವನ ಪರಿಸರದಲ್ಲಿಯ ಅನೇಕ ಜನರು ಗುರುತಿಸುತ್ತಾರೆ. | 4. ಬ – ಇವನ ಫೇಸ್‌ಬುಕ್ ಮೇಲೆ 1500 ಮಿತ್ರರು (ಫ್ರೆಂಡ್ಸ) ಇದ್ದಾರೆ |

**ನಿಮ್ಮ ಅಭಿಪ್ರಾಯದಂತೆ ಯಾರು ಹೆಚ್ಚಿಗೆ ಒಂಟಿ ಯಾಗಿದ್ದಾರೆ?**

**ತಿಳಿದು ಕೊಳ್ಳಿರಿ**

ನಮಗೆ ಅನಿಸುವದೇನೆಂದರೆ, ಸಮಾಜ ಮಾಧ್ಯಮಗಳಿಂದ ನಾವು ಹೆಚ್ಚು ಜನರೊಂದಿಗೆ ಹೊಂದಿಕೊಂಡಿದ್ದೇವೆ, ನಮಗೆ ಹೆಚ್ಚು ಮಿತ್ರರಿದ್ದಾರೆ. ಆದರೆ ಹೀಗೆ ಹೊಂದಿಕೊಳ್ಳುವದು ಮೇಲಿಂದಲೇ ಇದೆ. ಇದರಲ್ಲಿ ಅರ್ಥಪೂರ್ಣ ಮಿತ್ರತ್ವದ ಸಾಧ್ಯತೆ ಬಹಳ ಕಡಿಮೆ ಇದೆ. ಎಷ್ಟೊಂದು ವೇಳೆ ನಾವು ಆನಲಾಯಿನ ಕಳೆಯುತ್ತೇವೆ ಅಷ್ಟೇ ವೇಳೆ ಎದುರಿನಲ್ಲಿ ಮಾತನಾಡಲು ಕಡಿಮೆ ವೇಳೆಯನ್ನು ಕೊಡುತ್ತೇವೆ ಮತ್ತು ಇದರಿಂದ ನಮ್ಮ ಮನಸ್ಸಿನಲ್ಲಿಯ ಹೇಳಿಕೆಯಷ್ಟು ಬಲವಾದ ಗೆಳೆತನ ಯಾರೊಂದಿಗೂ ಆಗುವದಿಲ್ಲ

## ಯಾರು ಹೆಚ್ಚಿಗೆ ಪ್ರಗತಿ ಮಾಡಬಹುದು?

ಐದು ಗೊಂಬೆಗಳನ್ನು ಮಾಡಿರಿ/ತನ್ನಿರಿ. ಅವುಗಳಿಗೆ ಕೆಳಗಿನವುಗಳಲ್ಲಿಯ ಒಂದು ವ್ಯಕ್ತಿಮತ್ವ ಕೊಡಿರಿ.

1. ವ್ಯಸನ ಉಳ್ಳ ವ್ಯಕ್ತಿ
2. ಶೋಷಣೆಯಾಗಿದ್ದರಿಂದ ನಿರಾಶೆಯಾಗಿ ಶಾಲೆ ಬಿಟ್ಟ ವ್ಯಕ್ತಿ
3. ಜಾಹಿರಾತು ಮತ್ತು ಮಾಧ್ಯಮಗಳ ಪ್ರಭಾವದಿಂದ ಅಭ್ಯಾಸದಿಂದ ಲಕ್ಷಹಾರಿದ ವ್ಯಕ್ತಿ
4. ಸಮಾಜ ಮಾಧ್ಯಮಗಳಿಂದ ಸುಳ್ಳು ಮಾಹಿತಿಯ ಪ್ರಭಾವದಲ್ಲಿ ದಂಗೆಯಲ್ಲಿ (ಗಲಭೆ) ಭಾಗವಹಿಸುವ ವ್ಯಕ್ತಿ
5. ನಿರೋಗಿ, ಶಾಲೆಯಲ್ಲಿ ಲಕ್ಷ ಕೊಡುವ ತರುಣ/ತರುಣಿ

ಕೆಳಗಿನ ಅಂಶಗಳ ಮೇಲೆ ಕಾರಣ ಸಹಿತ ಚರ್ಚೆ ಮಾಡಿರಿ.

1. ಯಾರ ಮುಂದಿನ ಆಯುಷ್ಯವು ನಿರೋಗಿ ಯಾಗಿರಬಹುದು?
2. ಯಾರ ಕರಿಅರ ಒಳ್ಳೆಯದಾಗಬಹುದು?
3. ಯಾರ ಮನಃಸ್ವಾಸ್ಥ್ಯವು ಚನ್ನಾಗಿರಬಹುದು?
4. ಯಾರದು ಮನೆಯವರೊಂದಿಗೆ ಸಂಬಂಧ ಒಳ್ಳೆಯದಾಗಿರುವದು?
5. ಯಾರು ಸ್ವಂತದ ಮೋಜು– ಮಸ್ತಿಯ ಹವ್ಯಾಸ ಜೋಪಾಸನೆ ಮಾಡಬಹುದು?

ವರ್ಗದ ಒಂದು ತುದಿಯಿಂದ ಪ್ರಾರಂಭಮಾಡಿ ಎರಡನೇಯ ತುದಿಯ ವರೆಗೆ ಹೋಗುವದಿದೆ ಪ್ರತಿಯೊಂದು ಪ್ರಶ್ನೆ ಕೇಳಿದ ನಂತರ ಒಂದು ವೇಳೆ ಯಾವುದೇ ವ್ಯಕ್ತಿಮತ್ವದ ಸಂದರ್ಭದಲ್ಲಿ ಉತ್ತರವು ಹೌದು ಎಂದು ಬಂದರೆ ಅವನಿಗೆ ಒಂದು ಹೆಜ್ಜೆ ಮುಂದಿಡಲು ಹೇಳಿರಿ. ಇಲ್ಲ ಇದ್ದರೆ ಅಲ್ಲಿಯೇ ಇರಲು ಬಿಡಿರಿ. ಎಲ್ಲ ಪ್ರಶ್ನೆಗಳಾದ ನಂತರ ಯಾರು ಎಲ್ಲರಿಗಿಂತ ಹೆಚ್ಚು ಪ್ರಗತಿಯನ್ನು ಸಾಧಿಸಿದರು ಎಂಬುದನ್ನು ನೋಡಿರಿ ವಿದ್ಯಾರ್ಥಿಗಳಿಗೆ ಇದರಿಂದ ಏನು ತಿಳಿಯಿತು ಎಂದು ಕೇಳಿರಿ?

**ತಿಳಿದು ಕೊಳ್ಳಿರಿ**

ಮಾಧ್ಯಮಗಳ ನಕಾರಾತ್ಮಕ ಬದಿಯನ್ನು ನಾವು ನೋಡಿದೆವು. ಹಾಗೆಯೇ ಸಕಾರಾತ್ಮಕ ಬದಿಯು ಕೂಡಾ ಮಹತ್ವದ್ದಾಗಿದೆ. ಮಾಧ್ಯಮಗಳಿಂದ ನಮಗೆ ಪೌರಾಣಿಕ, ಐತಿಹಾಸಿಕ, ವೈಜ್ಞಾನಿಕ ಮಾಹಿತಿ. ದೊರಕುವದು. ಶೈಕ್ಷಣಿಕ ಸೂಚನೆ, ಫಲಿತಾಂಶ, ಪ್ರಬೋಧನೆಯ ಮಾಹಿತಿ, ಆಮಂತ್ರಣಗಳು ದೃಕ್‌ಶ್ರಾವ್ಯ ಮಾಹಿತಿ ಒಂದು ಕ್ಷಣದಲ್ಲಿ ದೊರಕಿಸಲು ಬರುವದು, ಇದನ್ನೂ ಲಕ್ಷದಲ್ಲಿಡ ಬೇಕಾಗಿದೆ. ಇದರೊಂದಿಗೆ ಮಾಧ್ಯಮಗಳಿಂದ ವಿಚಾರಗಳ ಕೊಡ ಕೊಳ್ಳುವಿಕೆ ಮಾಡಲು ಸುಲಭವಾಗುತ್ತದೆ. ಹಾಗೆಯೇ ರಾಷ್ಟ್ರೀಯ ಏಕಾತ್ಮತೆ ಮತ್ತು ಸಾಮಾಜಿಕ ಪರಿವರ್ತನೆಗಳಲ್ಲಿ ಸಹ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದೆ. ಕೃಷಿ, ಆರೋಗ್ಯ, ಶಿಕ್ಷಣ, ಉದ್ಯೋಗ ವ್ಯಾಪಾರ ಇಂತಹ ಕ್ಷೇತ್ರಗಳಲ್ಲಿಯೂ ಕೂಡ ಮಾಧ್ಯಮಗಳ ಉಪಯೋಗವಾಗುತ್ತದೆ.

ಮಾಧ್ಯಮಗಳ ಬೇರೆ ಬೇರೆ ಸಕಾರಾತ್ಮಕ ಉಪಯೋಗಗಳನ್ನು ನಿಮ್ಮ ನೋಟ ಬುಕ್ಕಿನಲ್ಲಿ ಬರೆಯಿರಿ

## ಸಮಾಜ ಮಾಧ್ಯಮಗಳ ಪ್ರಭಾವವನ್ನು ಯಶಸ್ವಿಯಾಗಿ ನಿರ್ವಹಿಸುವದು

### 1. ತಿಳಿದು ಕೊಳ್ಳಿರಿ

ಸಮಾಜ ಮಾಧ್ಯಮಗಳ ನಿಮ್ಮ ಮೇಲೆ ಆಗುವ ಪ್ರಭಾವದ ಕುರಿತು ಜಾಗರೂಕ ರಾಗಿರಿ. ಆ ಪ್ರಭಾವವನ್ನು ಸರಿಯಾಗಿ ತಿಳಿದು ಕೊಳ್ಳಿರಿ.

### 2. ಗುರುತಿಸಿರಿ

ನೀವು ಸ್ವತಃ ದಿವಸದಲ್ಲಿ ಎಷ್ಟು ಸಲ ಸಮಾಜ ಮಾಧ್ಯಮಗಳನ್ನು ಉಪಯೊಗಿಸುವಿರಿ ಎಂಬುದರ ಕಡೆಗೆಲಕ್ಷ್ಯ ಕೊಡಿರಿ. ನೀವು ನಿಮ್ಮ ಫೋನ/ ಇಂಟರನೆಟ ಉಪಯೋಗಿಸದಿದ್ದರೆ ಅಸ್ವಸ್ಥರಾದಂತೆ ಅನಿಸುವದೇ? ಈ ಕುರಿತು ವಿಚಾರ ಮಾಡಿರಿ.

# 3. ಆವ್ಹಾನ ಕೊಡಿರಿ

ದಿನಾಲು ನಿರ್ಧರಿಸಿ ಕೆಲವೊಂದು ವೇಳೆ ಸ್ವಂತಕ್ಕಾಗಿ ಕೊಡಿರಿ. ಮೋಬಾಯಿಲ್, ಇಂಟರ್ನೆಟ್‌ದಿಂದ ದೊರವಿರುವ ಪ್ರಯತ್ನ ಮಾಡಿರಿ. ಮೊದಲು ಹತ್ತು ನಿಮಿಷಗಳು ಸ್ವಂತದ ಕುರಿತು ವಿಚಾರ ಮಾಡಲು, ಸ್ವಂತದ ಆರೋಗ್ಯಕ್ಕಾಗಿ ಪ್ರಾರಂಭಿಸಿರಿ. ಮೆಲ್ಲ ಮೆಲ್ಲನೆ ಈ ವೇಳೆಯನ್ನು ಹೆಚ್ಚಿಸುತ್ತ ಹೋಗಿರಿ.

F9XT9G

# 4. ಕಾರ್ಯರೂಪಕ್ಕೆ ತನ್ನಿರಿ

ನೀವು ನಿರ್ಧರಿಸಿದ ಬದಲಾವಣೆಯನ್ನು ಕಾರ್ಯರೂಪಕ್ಕೆ ತನ್ನಿರಿ. ಯಶಸ್ವಿಯಾಗದಿದ್ದರೆ ನಿಮ್ಮ ಪಾಲಕರೊಂದಿಗೆ ಮಾತನಾಡಿರಿ. ನೀವು ಏನು ಮಾಡಬೇಕೆನ್ನುವಿರಿ ಎಂಬುದನ್ನು ಅವರಿಗೆ ತಿಳಿಸಿ ಹೇಳಿರಿ. ಹೊಸ ಯೋಜನೆಯನ್ನು ರೂಪಿಸಿರಿ.

### ಮೂಲ್ಯ ಮಾಪನ (ಭಾರಾಂಶ 15%)

| ಒರೆಗಲ್ಲು | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಅಂಕಗಳು |
|---|---|---|---|---|
| ಜಾಹೀರಾತುಗಳನ್ನು ಶೋಧಿಸಿರಿ | ಜಾಹಿರಾತುಗಳನ್ನು ಶೋಧಿಸುವ ಉಪಕ್ರಮದಲ್ಲಿ ಸಕ್ರಿಯ ಸಹಭಾಗ ವಹಿಸಿ ತಮ್ಮ ನಿಷ್ಕರ್ಷವನ್ನು ಸ್ಪಷ್ಟವಾಗಿ ಮಂಡಿಸಲಾಗಿದೆ | ಸಹಭಾಗಿ ವಹಿಸಿದೆ ಆದರೆ ಕೆಲವೊಂದು ನಿಷ್ಕರ್ಷ ತಗೆಯಲಾಗಿಲ್ಲ. | ಎರಡನೇಯ ವಿದ್ಯಾ-ರ್ಥಿಯ ನೋಟಬುಕ್ ನೋಡಿ ಕೆಲಸಗಳನ್ನು ಪೂರ್ಣ ಮಾಡಲಾಗಿದೆ. | |
| ವರ್ಗದಲ್ಲಿಯ ವಾತಾವರಣ ಆತ್ಮಪರೀಕ್ಷಣೆ | ಪ್ರಾಮಾಣಿಕವಾಗಿ ಆತ್ಮಪರಿಕ್ಷಣೆ ಮಾಡಲಾಗಿದೆ ಮತ್ತು ಅವಶ್ಯಕತೆ ಇದ್ದಲ್ಲಿ ಬದಲಾವಣೆ ಮಾಡುವ ನಿಯೋಜನೆ ಮಾಡಲಾಗಿದೆ. | ಆತ್ಮಪರಿಕ್ಷಣ ಮಾಡಲಾಯಿತು ಆದರೆ, ಯಾವುದೇ ಬದಲಾವಣೆ ಸೂಚಿಸಿಲ್ಲ | ಎರಡನೇಯ ವಿದ್ಯಾ-ರ್ಥಿಯ ನೋಟಬುಕ ನೋಡಿ ಉತ್ತರಗಳನ್ನು ಪೂರ್ಣ ಮಾಡಲಾಗಿದೆ. | |
| ನೀವು ಏನು ಮಾಡುವಿರಿ? | ಗುಂಪು ಚರ್ಚೆಯಲ್ಲಿ ಉತ್ಸಾಹದಿಂದ ಭಾಗ ವಹಿಸಿ ಪಾಠದಲ್ಲಿ ಹೇಳಿದ ಅಂಶಗಳ ಸಹಾಯದಿಂದ ಉಪಾಯ ಸೂಚಿಸಲಾಗಿದೆ. | ಚರ್ಚೆಯಲ್ಲಿ ಸಹಭಾಗಿ ಆದರೆ ಪಾಠದಲಿಲಯ ಅಂಶಗಳ ಉಪಾಯ ಯೋಜನೆಯಲ್ಲಿ ಅಂತರ್ಭಾವ ಇಲ್ಲ. | ಚರ್ಚೆಯಲ್ಲಿ ಸಹ ಭಾಗವಹಿಸಿಲ್ಲ ಕೇವಲ ಇತರರದನ್ನು ಕೇಳ ಲಾಗಿದೆ. | |



ಲೋಬೊ ಉತ್ಸಾಹದಿಂದ ಓಡುತ್ತ ಓಡುತ್ತ ನಿಶಾಳ ಹತ್ತಿರ ಬರುವನು
ನನ್ನ ನಿರ್ಧಾರವಾಯಿತು ನಾನು ಗಾಯಕನಾಗುವವನಿದ್ದೇನೆ
ಅದು ಹೆಗೆ?
ನೋಡು ನನಗೆ ಹಾಡುವದು ಹಿಡಿಸುವದು. ಉತ್ತಮವಾಗಿ ಹಾಡಲು ಬರುವದು.. ನಾನು ಹಾಡುಗಳನ್ನು ಕಲಿಯುತ್ತಿದ್ದೇನೆ ಮತ್ತು ಗಾಯಕನಾಗಲು ಅವಕಾಶ ಕೂಡ ಇದೆ ಅಂದರೆ ಇಷ್ಟ ಕ್ಷಮತೆ ಮತ್ತು ಅವಕಾಶ ಎಲ್ಲವೂ ಕೂಡಿ ಬಂದಿವೆ
ಹೊಂ ಸರಿ
ಪ್ರತಿಯೊಂದು ಹಂತದಲ್ಲಿ ಹೀಗೆಯೆ ವಿಚಾರ ಮಾಡಬೇಕಾಗುವದು
ಯಾವುದನ್ನು ಕೈಗೆತ್ತಿ ಕೊಂಡಿದ್ದೇವೊ ಅದನ್ನು ಉತ್ತಮವಾಗಿ ಮಾಡಬೇಕಾಗುವದು. ನಾವು ದೊಡ್ಡವರಾದಂತೆ ಬೇರೆ ಬೇರೆ ಪರ್ಯಾಯಗಳು ನಮ್ಮಮುಂದೆ ಬರುವವು
ಆದರ, ಇಷ್ಟ, ಕ್ಷಮತ ಅವಕಾಶದ ಹೊಂದಾಣಿಕೆ ಹಾಕುತ ಮುಂದೆ ಹೋಗಬೇಕಾಗುವದು.

# 5 ನಾನು ಮತ್ತು ನನ್ನ ಕರಿಅರ



ಪ್ರಯತ್ನ ಮಾಡದೇ ಇರುವದು, ಇದು ಜಗತ್ತಿನಲ್ಲಿಯ ಏಕಮಾತ್ರ ಅಪಯಶಸ್ಸು ಆಗಿದೆ.

**ಉದ್ದೇಶಗಳು:**

1. ಕರಿಅರದ ಕುರಿತು ಕೆಲವು ಪ್ರಚಲಿತ ತಿಳುವಳಿಕೆಯ ಕುರಿತು ಪುನರ್ವಿಚಾರ ಮಾಡಿ ಸ್ವಂತದ ಮತವನ್ನು ಮಂಡಿಸಲು ಬರುವದು.
2. 'ಕರಿಅರ ಇದು ಒಮ್ಮೆಲೆ ಘಟಿಸುವ ಘಟನೆ ಇರದೇ ಒಂದು ಸತತವಾಗಿ ನಡೆಯುವ ಪ್ರಕ್ರಿಯೆಯಾಗಿದೆ' ಇದರ ಸ್ಪಷ್ಟೀಕರಣ ಸ್ವಂತದ ಶಬ್ದಗಳಲ್ಲಿ ಮಾಡಲು ಬರುವದು.
3. ಕಲಚಾಚಣಿಯ ಪರಿಚಯ ವಾಗುವದು, ಕಲಚಾಚಣಿಯ ಮಹತ್ವವನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವದು.
4. ಮಹಾಕರಿಅರಮಿತ್ರ ಪೋರ್ಟಲದ ಪರಿಚಯ ವಾಗುವದು.
5. ಸ್ವಂತದ ಧ್ಯೇಯವನ್ನು ನಿಶ್ಚಿತವಾಗಿ ನಿರ್ಧರಿಸಲು ಬರುವದು ಮತ್ತು ಅದನ್ನು ಶಬ್ದಗಳಲ್ಲಿ ಮಂಡಿಸಲು ಬರುವದು.
6. ತಮ್ಮ ಕರಿಅರದ ಸಂಕಲ್ಪನೆಯ ಕುರಿತು ತಮ್ಮ ಪಾಲಕರೊಂದಿಗೆ ರಚನಾತ್ಮಕ ಸಂವಾದವನ್ನು ಮಂಡಿಸಲು ಬರುವದು.
7. ಹತ್ತನೇ ನಂತರದ ಪ್ರವೇಶ ಪ್ರಕ್ರಿಯೆಯಲ್ಲಿ ಅವಶ್ಯಕವಿದ್ದ ಕಾಗದ ಪತ್ರಗಳ ಮತ್ತು ಉಪಲಬ್ಧವಿದ್ದ ಕೆಲವು ಶಿಷ್ಯವೃತ್ತಿಗಳ ಮಾಹಿತಿ ಆಗುವದು.

ಹೋದ ವರ್ಷ ನಾವು ಕರಿಅರ ಅಂದರೇನು, ಕರಿಅರ ಹೇಗೆ ಆರಿಸಬೇಕು. ಕರಿಅರ ಮ್ಯಾಜಿಕ ಫ್ರೇಮವರ್ಕದ ಕುರಿತು ಮಾಹಿತಿಯನ್ನು ಪಡೆದುಕೊಂಡಿದ್ದೇವೆ. ಈ ವರ್ಷ ನಾವು ಹತ್ತನೆಯ ನಂತರ ಇರುವ ಪರ್ಯಾಯಗಳ ಕುರಿತು ಮತ್ತು ಧ್ಯೇಯ ನಿಶ್ಚಿತ ಗೊಳಿಸುವ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆದು ಕೊಳ್ಳೋಣ.

**ಕರಿಅರದ ಕುರಿತು ಕೆಲವು ಮತಪ್ರವಾಹಗಳು**

ಕೇಳಿದ ಪ್ರಶ್ನೆಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚೆಮಾಡಿರಿ. ಅವರ ಅಭಿಪ್ರಾಯ ತಿಳಿದುಕೊಳ್ಳಿರಿ. ಅವರಿಗೆ ಪ್ರತಿ ಪ್ರಶ್ನೆ ಕೇಳಿರಿ ಅವರ ಉತ್ತರ 'ಹೌದು' ಇದ್ದರೆ ಏಕೆ ಮತ್ತು 'ಇಲ್ಲ' ವಿದ್ದರೆ ಏಕೆ ಇಲ್ಲ ಇದನ್ನು ಸ್ಪಷ್ಟಪಡಿಸಲು ಹೇಳಿರಿ.

ಪ್ರಾಥಮಿಕ ಚರ್ಚೆಯನ್ನು ಮಾಡಿದನಂತರ ಮುಂದಿನ ಉದಾಹರಣೆ ಕೊಡಿರಿ ಮತ್ತು ಕೊಟ್ಟ ವಿಧಾನಗಳ ಕುರಿತು ಅವರ ಅಭಿಪ್ರಾಯವನ್ನು ಬದಲಿಸುವಂತೆ ಅನಿಸುತ್ತದೆಯೇ ಎಂದು ಕೇಳಿರಿ. ಅದರ ಸ್ಪಷ್ಟೀಕರಣ ಕೊಡಲು ಪ್ರೋತ್ಸಾಹಿಸಿರಿ.



1. ನಿಮ್ಮ ಆರ್ಥಿಕ ಪರಿಸ್ಥಿತಿ ಒಳ್ಳೆಯದಾಗಿದ್ದರೆ ಮಾತ್ರ ಕರಿಅರ ಮಾಡಲು ಬರುವದು.

ಹೌದು ಇಲ್ಲ

2. ನಿಮ್ಮ ಕರಿಅರದ ಆಯ್ಕೆ ಒಮ್ಮೆ ತಪ್ಪಿದರೆ ಮರಳಿ ನಿಮಗೆ ಎಂದೊಂದೂ ಯಶಸ್ವಿಯಾಗಲು ಬರುವದಿಲ್ಲ.

ಹೌದು ಇಲ್ಲ

3. ವಿಜ್ಞಾನ ಇಲ್ಲವೆ ಗಣಿತ ಶಾಖೆ ಪಡೆದು ಕೊಂಡರೆ ಮಾತ್ರ ಕರಿಅರ ಮಾಡಲು ಬರುವದು.

ಹೌದು ಇಲ್ಲ

4. ಯಾವ ಕರಿಅರದಲ್ಲಿ ಎಲ್ಲಕ್ಕೂ ಹೆಚ್ಚು ಹಣದೊರಕುವವು, ಅದೇ ಕರಿಅರ ಆರಿಸಬೇಕು.

ಹೌದು ಇಲ್ಲ

5. 'ನೌಕರಿ ಮಾಡುವದು' ಇದುವೇ ಕರಿಅರ ಮಾಡುವ ಏಕಮಾತ್ರ ಮಾರ್ಗವಾಗಿದೆ

ಹೌದು ಇಲ್ಲ




1. ಶಾಸ್ತ್ರಜ್ಞ ಡಾ. ಎ. ಪಿ. ಜೆ ಅಬ್ದುಲಕಲಾಮ, ಉದ್ಯೋಜಕ ಧೀರುಭಾಯಿ ಅಂಬಾನಿ, ಆಲಂಪಿಕ ಪದಕ ವಿಜೇತ, ಕುಸ್ತಿ ಆಟಗಾರ ಸುಶೀಲಕುಮಾರ, ಅಭಿನೇತ ರಜನಿಕಾಂತ ಮತ್ತು ಇತರ ಅಸಂಖ್ಯ ವ್ಯಕ್ತಿಗಳು ಬಡತನದಿಂದ ಮೇಲೆ ಬಂದರು ಮತ್ತು ತಮ್ಮ ತಮ್ಮ ಕ್ಷೇತ್ರದಲ್ಲಿ ಪ್ರಭಾವಶಾಲಿಗಳಾದರು.
2. ಹ್ಯಾರಿ ಪಾಟರ್ ಬರೆಯುವ ಲೇಖಕಿ ಜೆ. ಕೆ. ರಾವುಲಿಂಗ ಹಿಂದೆ ಇಂಗ್ಲೀಷ ಶಿಕ್ಷಕಿಯಾಗಿದ್ದರು. ಅನೀಲ ಕುಂಬಳೆ, ಹರ್ಷಾ ಭೋಗಲೆ ಕ್ರಿಕೇಟ ಕ್ಷೇತ್ರಕ್ಕೆ ಬರವಂತದಕ್ಕಿಂತ ಮುಂಚೆ ಇಂಜಿನಿಯರ ಆಗಿದ್ದರು. ಹಾಗೆಯೇ ಲೇಖಕ ಚೇತನ ಭಗತ ಇವರು ಕೂಡಾ ಇಂಜನಿಯರ ಆಗಿದ್ದರು. ನಟರಾದ ಶ್ರೀರಾಮ ಲಾಗು, ಮೋಹನ ಆಗಾಸೆ ಇವರು ಅಭಿನೇತಾರಾಗುವ ಮುಂಚೆ ಮುಂಬೈ ವೈದ್ಯಕೀಯ ಕ್ಷೇತ್ರದಲ್ಲಿ ಶಿಕ್ಷಣ ಪಡೆದಿದ್ದರು.



3. ಶೇಫ ಸಂಜೀವ ಕಪೂರ, ಅನೇಕ ಪತ್ರಕಾರರು, ಆಟಗಾರರು, ನಮ್ಮ ದೇಶದಲ್ಲಿಯ ಅರ್ಥಶಾಸ್ತ್ರಜ್ಞ, ಲೇಖಕ, ಕವಿ, ಸಂಗೀತಕಾರ ಇವರು ಕಲಾ, ಲಲಿತಕಲಾ, ಮಾನವ್ಯವಿದ್ಯಾ, ವಾಣಿಜ್ಯ ಇಲ್ಲವೆ ಕೌಶಲ್ಯಾಧಿಷ್ಟಿತ ಶಿಕ್ಷಣ ಪಡೆದು ತಮ್ಮ ಕರಿಅರ ಮಾಡಿಕೊಂಡರು



4. ಡಾ. ಪ್ರಕಾಶ ಆಮಟೆ ಇವರು ವೈದ್ಯಕೀಯ ಶಾಸ್ತ್ರದಲ್ಲಿ ಪದವಿ ಪಡೆದು ಕೊಂಡರು. ಪಟ್ಟಣದಲ್ಲಿ ವೈದ್ಯಕೀಯ ಸೇವೆ ಮಾಡಿ ಸಾಕಷ್ಟು ಹಣ ಗಳಿಸಲು ಬರುತ್ತಿತ್ತು. ಆದರೆ ಅವರು ಹಾಗೆ ಮಾಡದೇ ಚಂದ್ರಪುರದಲ್ಲಿಯ ಆದಿವಾಸಿ ಜನ ಸಮುದಾಯದ ವರಿಗೆ ವೈದ್ಯಕೀಯ ಸೇವೆ ಮುಟ್ಟಿಸುವದು ಹೆಚ್ಚು ಶ್ರೇಯಸ್ಕರವೆಂದು ಮನ್ನಿಸಿದರು.

5. ಹಿಂದಿನ ಕಾಲದಲ್ಲಿ ಜನರಿಗೆ ನೌಕರಿ ಮಾಡುವದು ಹೆಚ್ಚು ಸುರಕ್ಷಿತ ವೆನಿಸುತ್ತಿತ್ತು. ಆದರೆ ಈಗ ಎಲ್ಲ ಕ್ಷೇತ್ರಗಳಲ್ಲಿ ವಿವಿಧ ಪ್ರಕಾರದ ಅವಕಾಶಗಳು ಉಪಲಬ್ದವಿದ್ದುದರಿಂದ ವ್ಯವಸಾಯ ಮಾಡುವದು ಮೊದಲಿನಗಿಂತ ಸುಲಭ ಮತ್ತು ಜನಪ್ರೀಯವಾಗಿದೆ. ಇದರಿಂದ ವ್ಯವಸಾಯ ಮಾಡುವದು ಇದು ಕೂಡ ಕರಿಅರ ಮಾಡುವ ಒಂದು ಪ್ರಮುಖ ಮಾರ್ಗ ನಿರ್ಧರಿಸಹತ್ತಿದೆ (ಉದಾಹರಣೆ ಕೊಡಿರಿ)

**ಕೆಳಗಿನ ಉದಾಹರಣೆಗಳ ವಿಚಾರ ಮಾಡಿರಿ.**

1. ಪಾಏಂಗ ಜಾದವ ಈ ಆಸಾಮದ ಮನುಷ್ಯನು ಒಬ್ಬನೇ 37 ವರ್ಷಗಳ ವರೆಗೆ ಪರಿಶ್ರಮ ಪಟ್ಟು ಗಿಡಗಳನ್ನು ಹಚ್ಚಿ 1360 ಎಕರೆ ಭೂಮಿಯ ಮೇಲೆ ಅರಣ್ಯವನ್ನು ನಿರ್ಮಾಣ ಮಾಡಿದನು.
2. ಡಾ. ಅಭಯ ಮತ್ತು ಡಾ. ರಾಣಿಬಂಗ ಇವರ ಸಾರ್ವಜನಿಕ ಆರೋಗ್ಯದಲ್ಲಿಯ ಸಂಶೋಧನೆಯಿಂದ ಗಡಚಿರೋಲಿ ಜಿಲ್ಹೆಯಲ್ಲಿಯ ಬಾಲಮೃತ್ಯವಿನ ಪ್ರಮಾಣ ಕಡಿಮೆಯಾಯಿತು
3. ರಾಜೇಂದ್ರ ಸಿಂಗ ಇವರು ಲೋಕಸಹಭಾಗದಿಂದ 4500 ಚಿಕ್ಕ ಆಣೆಕಟ್ಟುಳನ್ನು ಕಟ್ಟಿ ರಾಜಸ್ತಾನದ ಭೂಜಲ ಮಟ್ಟದಲ್ಲಿ ಹೆಚ್ಚಳ ಮಾಡಿದರು.

ಮೇಲಿನ ಉದಾಹರಣೆಗಳಲ್ಲಿ ಮನುಷ್ಯರು ಅವರ ಕರಿಅರದಲ್ಲಿ ಯಶಸ್ವಿಯಾಗಿದ್ದಾರೆ ಎಂದು ನಿಮಗೆ ಅನಿಸುವುದೇ? ಅವರ ಯಶಸ್ವಿಯಾಗುವದರ, ಕರಿಅರ ಮಾಡುವ ವ್ಯಾಖ್ಯೆಏನು ಇರಬಹುದು ಎಂದು ನಿಮಗೆ ಅನಿಸುವದು.

ಕೆಳಗಿನ ಅಂಶಗಳ ಮೇಲೆ ಚರ್ಚೆಮಾಡಿರಿ.

1. ಯಶಸ್ವಿ ಯಾಗುವದೆಂದರೆ ಏನು?
2. ಕೊಟ್ಟ ಉದಾಹರಣೆಯಲ್ಲಿಯ ವ್ಯಕ್ತಿಗಳು ಯಶಸ್ವಿಯಾಗಿದ್ದಾರೆಯೇ?
3. ಅವರು ತಮ್ಮ ಕೆಲಸದಲ್ಲಿ ಬಹಳ ಹಣಗಳಿಸಿರಬಹುದಲ್ಲವೇ?
4. ಹಣ ಗಳಿಸುವದು ಇದು ಕರಿಅರ ಏಕಮಾತ್ರ ಉದ್ದಿಷ್ಟವಾಗಿರಬೇಕೇ?

**ಕರಿಅರ -ಘಟನೆ ಅಲ್ಲ ಪ್ರಕ್ರಿಯೆ**

ಮೀನಾಜಳು ಪದವಿ ಪಡೆದನಂತರ ಒಂದು ಕಂಪನಿಯಲ್ಲಿ ಕೆಲಸಕ್ಕೆ ಹತ್ತಿದಳು. ಹೊಸದಾಗಿ ಸೇರ್ಪಡೆಯಾಗುವ ಕರ್ಮಚಾರಿಗಳಿಗೆ ಕಂಪನಿಯಲ್ಲಿ ನಡೆಯುವ ಕೆಲಸ ಕಲಿಸುವ ಹೊಣೆಗಾರಿಕೆಯನ್ನು ಇವಳಿಗೆ ಕೊಡಲಾಯಿತು. ಈ ಹೊಣೆಯನ್ನು ಪೂರೈಸುತ್ತ ಪೂರೈಸುತ್ತ ಆಕೆಯ ಲಕ್ಷಕ್ಕೆ ಬಂದುದ್ದೇನೆಂದರೆ, ಆಕೆಗೆ ಕಲಿಸುವದು ಹಿಡಿಸುತ್ತದೆ. ಮತ್ತು ಚನ್ನಾಗಿ ಕಲಿಸಲು ಬರುತ್ತದೆ. ಹಾಗೆಯೇ ಸಧ್ಯ ಟ್ಯೂಶನ್ ತಗೆದು ಕೊಳ್ಳುವದಕ್ಕೆ ಬಹಳ ಬೇಡಿಕೆ ಇದೆ. ಕೆಲವು ವರ್ಷಗಳನಂತರ ಅವಳು ಆ ಕಂಪನಿಯನ್ನು ಬಿಟ್ಟು ಸ್ವಂತದ ಟ್ಯೂಶನ್ ವರ್ಗ ಪ್ರಾರಂಭಿಸಿದಳು. ಮತ್ತು ಅದಕ್ಕೆ ಒಳ್ಳೆಯ ಪ್ರತಿಫಲವು ದೊರಕಿತು.

ರಮೇಶನು ವಾಣಿಜ್ಯ ಶಾಖೆಯಿಂದ ಪದವಿ ಪಡೆದು ಕೊಂಡನು ಮತ್ತು ಅವನು ಒಂದು ಹಾಸ್ಪಿಟಲದಲ್ಲಿ ಅಕೌಂಟಂಟ ಎಂದು ಸೇರಿಕೊಂಡನು. ಅವನು ಕೆಲಸ ಮಾಡುವಾಗ ಅವನಿಗೆ ಲಕ್ಷಕ್ಕೆ ಬಂದುದೇನಂದರೆ ಅಕೌಂಟಸ್‌ದ ಕೆಲಸಗಳನ್ನು ಮಾಡುವದುರ ಜೊತೆಗೆ ಆಫೀಸಿನ ವ್ಯವಸ್ಥಾಪನೆಯಲ್ಲೂ ಅವನಿಗೆ ಗತಿ ಮತ್ತು ಆಸಕ್ತಿ ಇದೆ ನೌಕರಿ ಮಾಡುತ್ತ ಅವನು ಎಮ್.ಬಿ.ಎದ ಪದವಿಯನ್ನು ಪಡೆದು ಕೊಂಡನು. ಮತ್ತು ಹಾಸ್ಪಿಟಲದಲ್ಲಿ ವ್ಯವಸ್ಥಾಪಕನೆಂದು ಅವನಿಗೆ ಮುಂಬಡತಿ ದೊರಕಿತು.

ಕೊಟ್ಟ ಉದಾಹರಣೆಗಳಿಂದ ಏನು ಕಾಣುವದು ಎಂದು ಕೇಳಿರಿ. ಕೆಳಗಿನ ಅಂಶಗಳ ಮೇಲೆ ಚರ್ಚೆ ಮಾಡಿರಿ.

1. ಪ್ರತಿಯೊಬ್ಬನು ಪ್ರಾರಂಭಕ್ಕೆ ನಿರ್ಧರಿಸಿದ ಮಾರ್ಗದಿಂದಲೇ ತನ್ನ ಕರಿಅರ ಮಾಡಿದನೇ?
2. ಕೊಟ್ಟ ಉದಾಹರಣೆಗಳಲ್ಲಿ ಕರಿಅರದ ಮಾರ್ಗ ಬದಲಿಸುವ ಕಾರಣವೇನಿತ್ತು
3. ಮೂವರೂ ಸ್ವಂತದ ಕರಿಅರ ಮಾಡಿದರು ಎಂದು ನಾವು ಅನ್ನ ಬಹುದೇ?

ಜೊಸೆಫ ಇವನೊಬ್ಬ ರೈತನಾಗಿದ್ದು ಅವನ ಸ್ವಂತದ ಹೊಲವಿದೆ ಜೊಸೆಫನ ಲಕ್ಷದಲ್ಲಿ ಬಂದುದೇನಂದರೆ ಸದ್ಯ ಹೊಲದಲ್ಲಿಯ ಕೃಷ್ಟಿ ವಸ್ತುಗಳ ಮೇಲೆ ಪ್ರಕ್ರಿಯೆ ಮಾಡಿ ಅದನ್ನು ಸಂಗ್ರಹಿಸುವದು. ಅದರಿಂದ ವಿವಿಧ ಉತ್ಪಾದನೆಗಳನ್ನು ನಿರ್ಮಾಣ ಮಾಡುವದು. ಇದಕ್ಕೆ ಬಹಳ ಬೇಡಿಕೆ ಇದೆ. ಜೊಸೆಫನು ಫುಡ್ ಪ್ರೊಸೆಸಿಂಗದಲ್ಲಿ ಮುಂದಿನ ಶಿಕ್ಷಣ ಪಡೆದುಕೊಂಡನು ಮತ್ತು ಕೃಷಿಗೆ ಪೂರಕವಾದ ಸ್ವಂತದ ವ್ಯವಸಾಯವನ್ನಾರಂಭಿಸಿದನು.



**ತಿಳಿದು ಕೊಳ್ಳಿರಿ**

**ಕರಿಅರ ಇದು ಆಯುಷ್ಯದಲ್ಲಿ ಒಮ್ಮೆಯೇ ಘಟಿಸುವ ಘಟನೆಯಾಗಿರದೆ ಅದು ಒಂದು ಪ್ರಕ್ರಿಯೆ ಇದೆ.** ನಾವು ಹೇಗೆ ಹೊಸ ಹೊಸ ಸಂಗತಿಗಳನ್ನು ಕಲಿಯುತ್ತ ಹೋಗುವೆವೋ, ಅನುಭವಗಳನ್ನು ಎದುರಿಸುತ್ತೇವೆಯೋ ಹಾಗೆಯೇ ತಮ್ಮ ಸ್ವಂತದ ಕುರಿತು, ಸ್ವಂತದ ಕ್ಷಮತೆಯ ಕುರಿತು, ಆಯ್ಕೆಯ ಕುರಿತು ಹೆಚ್ಚು ಸ್ಪಷ್ಟತೆ ಬರಲಾರಂಭಿಸುವದು. ಹಾಗೆ ಉಪಲಬ್ಧವಿರುವ ಅವಕಾಶದ ಮಾಹಿತಿಯಾಗುವದು. ಅದಕ್ಕನುಸರಿಸಿ ನಾವು ಮೇಲಿಂದ ಮೇಲೆ ತಮ್ಮ ಕರಿಅರಕ್ಕೆ ಆಕಾರ ಕೊಡುತ್ತ ಹೋಗುತ್ತೇವೆ. ಇದರಿಂದ ಕರಿಅರ ಸಂದರ್ಭದಲ್ಲಿಯ ನಿರ್ಣಯಗಳು ಕೇವಲ ಹತ್ತನೇ ಇಲ್ಲವೆ ಹನ್ನೆರಡನೇಯಲ್ಲಿಯೇ ತಗೆದುಕೊಳ್ಳಲಾಗುತ್ತದೆ ಎಂದೆನಿಲ್ಲ.


### ಕರಿಅರ ಮ್ಯಾಜಿಕ ಫ್ರೇಮವರ್ಕ – ಮರುಪರಿಶೀಲನೆ

ತಮ್ಮ ಇಷ್ಟ, ಕ್ಷಮತೆ ಮತ್ತು ಅವಕಾಶ ಈ ಮೂರರ ಸಂಗಮ ಯಾವ ಕ್ಷೇತ್ರದಲ್ಲಿ ಆಗುವದೋ, ಅದೇ ಕ್ಷೇತ್ರದಲ್ಲಿ ತಮ್ಮ ಕರಿಅರ ಘಟಿಸಲು ಸಾಧ್ಯವಿದೆ. ಈ ಮೂರರಲ್ಲಿ ಒಂದೂ ಘಟಕ ವಿಲ್ಲದಿದ್ದರೆ ಕೇವಲ ನೌಕರಿ, ಹವ್ಯಾಸ ಇಲ್ಲವೆ ಸ್ವಪ್ನ ಉಳಿಯುವದು.

ಹಿಂದಿನ ಉದಾಹರಣೆಯನ್ನೇ ನೋಡೋಣ

- ಪಾರಂಭದದಲ್ಲಿ ರಮೇಶನು ಅವನ ಇಷ್ಟ, ಅವಕಾಶ ಮತ್ತು ಕ್ಷಮತೆ ಇವುಗಳ ವಿಚಾರಮಾಡಿ ವಾಣಿಜ್ಯ ಶಾಖೆಯಿಂದ ಪದವಿ ಪಡೆದು ಅಕೌಂಟಂಟ ನೌಕರಿ ಸ್ವೀಕರಿಸಿದನು. ಅಂದರೇನೆ ಅವನು ತನ್ನ ಕರಿಅರ ಆರಿಸಿದನು.
- ಕೆಲವು ಕಾಲದ ನಂತರ ಅವನಿಗೆ ಹೊಸ ಇಚ್ಛೆ ಸಿಕ್ಕಿತು. ಹಾಸ್ಪಿಟಲ ವ್ಯವಸ್ಥಾಪನೆಯಲ್ಲಿ ಅವಕಾಶವಿದ್ದುದರಿಂದ ಅವನು ತನ್ನ ಕ್ಷಮತೆಯನ್ನು ಹೆಚ್ಚಿಸಲು ಎಮ್.ಬಿ.ಎದ ಡಿಗ್ರಿ ಪಡೆದು ಕೊಂಡನು.
- ರಮೇಶನ ಉದಾಹರಣೆಗಳಿಂದ ನಮಗೆ ಕಂಡು ಬರುವದೇನೆಂದರೆ, ಕರಿಅರದ ಪ್ರಕ್ರಿಯೆಯ ಪ್ರತಿಯೊಂದು ಹಂತದಲ್ಲಿ ಕರಿಅರ ಆಯ್ಕೆ ಮಾಡಲು ಬಹಳ ಉಪಯುಕ್ತವಾಗಬಹುದು.

ಇದೇ ರೀತಿಯಿಂದ ಮಿನಾಜ ಮತ್ತು ಜೊಸೆಫ ಇವರ ಉದಾಹರಣೆಗಳ ಕುರಿತು ನಿಮಗೆ ಕರಿಅರ **ಮ್ಯಾಜಿಕ ಫ್ರೇಮ ವರ್ಕದ ರಚನೆ ಮಾಡಲು ಬರಬಹುದೇ? ನೋಟಬುಕ್ಕಿನಲ್ಲಿ ಬರೆಯಿರಿ.**




ತಮ್ಮ ಇಷ್ಟ ಮತ್ತು ತಮ್ಮ ಕ್ಷಮತೆಗಳನ್ನು ಶೋಧಿಸಲು ನಾವು ಸ್ವಯಂ ಮೂಲ್ಯ ಮಾಪನೆಯ ಕೆಲವು ಉಪಕ್ರಮಗಳನ್ನು ಹೋದ ವರ್ಷ ಮಾಡಿದ್ದೇವೆ. ಆದರಿಂದ ನಿಮಗೆ ಕೆಲವು ಸ್ಪಷ್ಟತೆ ಬಂದಿರಬಹುದು ಎಂಬ ಅಪೇಕ್ಷೆ ಇದೆ. ಈ ವರ್ಷ ನಾವು ಇದರ ಕುರಿತು ಸ್ವಲ್ಪ ಹೆಚ್ಚಿಗೆ ಮಾಹಿತಿಯನ್ನು ಪಡೆದುಕೊಳ್ಳುವವರಿದ್ದೇವೆ.

### ಸ್ವಂತದ ಇಷ್ಟವನ್ನು ಶೋಧಿಸುವದು

- ಒಂಬತ್ತನೇ ಇಯತ್ತೆಯಲ್ಲಿ ಉಪಕ್ರಮ ಮಾಡಿಯಾದ ನಂತರ ಹತ್ತನೇ ಇಯತ್ತೆಯಲ್ಲಿ ಸ್ವಂತದ ಇಷ್ಟವನ್ನು ಶೋಧಿಸುವದಕ್ಕಾಗಿ ಕಲ ಚಾಚಣಿ (Aptitude Test)ಯ ಸಹಾಯವನ್ನು ನೀವು ಪಡೆಯಬಹುದು.
- ಮಹಾರಾಷ್ಟ್ರ ರಾಜ್ಯ ಮಾಧ್ಯಮಿಕ ಶಿಕ್ಷಣ ಮಂಡಳವು ಪ್ರತಿವರ್ಷ ಹತ್ತನೇ ವರ್ಗದ ಎಲ್ಲ ವಿದ್ಯಾರ್ಥಿಗಳಿಗಾಗಿ 'ಕಲ ಚಾಚಣಿ' (Aptitude Test) ಆಯೋಜಿಸುತ್ತದೆ
- 'ಕಲಚಾಚಣಿ' ಇದು ಒಂದು ಮಾನಸಶಾಸ್ತ್ರೀಯ ಟೆಸ್ಟ ಆಗಿದೆ. ಅದು ನಿಮಗೆ ಕರಿಅರ ಆರಿಸಲು ಸಾಮಾನ್ಯವಾಗಿ 10ನೇ ನಂತರ ಉಪಲಬ್ದವಿರುವ ಏಳು ಕ್ಷೇತ್ರಗಳು ಅಂದರೆ ಕೃಷಿ, ಲಲಿತಕಲೆ, ವಾಣಿಜ್ಯ, ತಾಂತ್ರಿಕ, ಕಲೆ, ಗಣವೇಶಧಾರಿ ಸೇವೆ, ಆರೋಗ್ಯ ವಿಜ್ಞಾನ ಇವುಗಳಲ್ಲಿಯ ಸ್ವಂತದ ಇಷ್ಟವನ್ನು ಗುರುತಿಸಲು ಸಹಾಯವಾಗುತ್ತದೆ.
- ಇದು ನಿಜವಾಗಿಯೂ ಪರೀಕ್ಷೆಯಾಗಿರದೆ ಸ್ವಂತದಕುರಿತು, ಸ್ವಂತದ ಬೇಕುಬೇಡದ ಕುರಿತು ಕೆಲವು ವಿಧಾನಗಳನ್ನು ಆರಿಸುವದು ಅಪೇಕ್ಷಿತವಿದೆ.
- ಕಲಚಾಚಣಿಗೆ ಅಂಕಗಳಿರದೇ ಅದರಲ್ಲಿ ಯಾವುದೇ ಉತ್ತರ ಸರಿಯೋ, ತಪ್ಪೋ ಇರುವದಿಲ್ಲ.
- ಈ ಕಲಚಾಚಣಿಯ ವರದಿಯು ನಿಮಗೆ www.mahacareermitra.in ಈ ಸಂಕೇತ ಸ್ಥಳದ ಮೇಲೆ ನೋಡಲು ಸಿಗಬಹುದು. ಹಾಗೆಯೇ ನಿಮ್ಮ 10ನೇ ವರ್ಗದ ಫಲಿತಾಂಶದ ವೇಳೆಯಲ್ಲಿಯೂ ಅದರ ಒಂದು ಪ್ರತಿ ನಿಮಗೆ ಸಿಗಬಹುದು.
- ಕಲಚಾಚಣಿ ಇದು ಕೇವಲ ಮಾರ್ಗದರ್ಶನ ಕೆಲಸ ಮಾಡುತ್ತದೆ. ಯಾವುದೇ ಶಾಖೆ ಆರಿಸುವ ಕೊನೆಯ ನಿರ್ಣಯವು ವಿದ್ಯಾರ್ಥಿ-ಗಳದ್ದಾಗಿರುತ್ತದೆ.

## ಕರಿಅರದ ಏಳು ಕ್ಷೇತ್ರಗಳು

ನಿಮಗೆ ಇಷ್ಟವಾದ ಕ್ಷೇತ್ರ ಯಾವುದು ಎಂಬುದುರ ಅಂದಾಜು ನಿಮ್ಮ ಕಲಚಾಚಣಿ ವರದಿಯಿಂದ ಬರಬಹುದು. ಕರಿಅರದ ಏಳು ಕ್ಷೇತ್ರಗಳ ಕುರಿತು ನಾವು ಹೆಚ್ಚಿನ ಮಾಹಿತಿಯನ್ನು ಪಡೆದು ಕೊಳ್ಳೋಣ ಹತ್ತನೇಯ ನಂತರದ ಪರ್ಯಾಯಗಳನ್ನು ಕೆಳಗೆ ಕೊಡಲಾಗಿದೆ.

### ಕೃಷಿ

ಪ್ರಮಾಣಪತ್ರ ಅಭ್ಯಾಸಕ್ರಮ (MSBVE ಮತ್ತು ಇತರ)
ಪದವಿಕಾ ಅಭ್ಯಾಸಕ್ರಮ
ಎಚ್‌ಎಸ್‌ವ್ಹಿಇ (ಉಚ್ಚ ಮಾಧ್ಯಮಿಕ ವ್ಯವಸಾಯಿಕ ಶಿಕ್ಷಣ)
ತಂತ್ರನಿಕೇತನ (ಹತ್ತನೆ ನಂತರದ ಪದವಿಕಾ ಅಭ್ಯಾಸಕ್ರಮ)
ಎಚ್‌ಎಸ್‌ಸಿ ವಿಜ್ಞಾನ (ಉಚ್ಚ ಮಾಧ್ಯಮಿಕ ಪ್ರಮಾಣಪತ್ರ)

### ಲಲಿತ ಕಲಾ

ಪ್ರಮಾಣ ಪತ್ರ ಅಭ್ಯಾಸಕ್ರಮ (ಎಮ್‌ಎಸ್‌ಬಿವ್ಹಿಇ ಮತ್ತು ಇತರ)
ಎಚ್‌ಎಸ್‌ವ್ಹಿಇ (ಉಚ್ಚ ಮಾಧ್ಯಮಿಕ ವ್ಯವಸಾಯಿಕ ಶಿಕ್ಷಣ)
ITI ಅಭ್ಯಾಸಕ್ರಮ (ಔದ್ಯೋಗಿಕ ಪ್ರಶಿಕ್ಷಣ ಸಂಸ್ಥೆ)
ತಂತ್ರನಿಕೇತನ (ಹತ್ತನೇ ನಂತರ ಪದವಿಕಾ ಅಭ್ಯಾಸಕ್ರಮ)
ಫೌಂಡೇಶನ ಪದವಿಕಾ ಅಭ್ಯಾಸಕ್ರಮ

### ತಾಂತ್ರಿಕ

ಪ್ರಮಾಣಪತ್ರ ಅಭ್ಯಾಸಕ್ರಮ (ಎಮ್‌ಎಸ್‌ಬಿವ್ಹಿಇ ಮತ್ತು ಇತರ)
ಎಚ್‌ಎಸ್‌ವ್ಹಿಇ (ಉಚ್ಚ ಮಾಧ್ಯಮಿಕ ವ್ಯವಸಾಯಿಕ ಶಿಕ್ಷಣ)
ITI ಅಭ್ಯಾಸಕ್ರಮ (ಔದ್ಯೋಗಿಕ ಪ್ರಶಿಕ್ಷಣ ಸಂಸ್ಥೆ)
ತಂತ್ರನಿಕೇತನ (ಹತ್ತನೇ ನಂತರ ಪದವಿಕಾ ಅಭ್ಯಾಸಕ್ರಮ)
ಎಚ್‌ಎಸ್‌ಸಿ ವಾಣಿಜ್ಯ (ಉಚ್ಚ ಮಾಧ್ಯಮಿಕ ಪ್ರಮಾಣಪತ್ರ)

### ಆರೋಗ್ಯ ವಿಜ್ಞಾನ

ಪ್ರಮಾಣಪತ್ರ ಅಭ್ಯಾಸಕ್ರಮ (ಎಮ್‌ಎಸ್‌ಬಿವ್ಹಿಇ ಮತ್ತು ಇತರ)
ಎಚ್‌ಎಸ್‌ವ್ಹಿಇ (ಉಚ್ಚ ಮಾಧ್ಯಮಿಕ ವ್ಯವಸಾಯಿಕ ಶಿಕ್ಷಣ)
ITI ಅಭ್ಯಾಸಕ್ರಮ (ಔದ್ಯೋಗಿಕ ಪ್ರಶಿಕ್ಷಣ ಸಂಸ್ಥೆ)
ತಂತ್ರನಿಕೇತನ (ಹತ್ತನೇ ನಂತರ ಪದವಿಕಾ ಅಭ್ಯಾಸಕ್ರಮ)
ಎಚ್‌ಎಸ್‌ಸಿ ವಿಜ್ಞಾನ (ಉಚ್ಚ ಮಾಧ್ಯಮಿಕ ಪ್ರಮಾಣ ಪತ್ರ)

### ವಾಣಿಜ್ಯ

ಪ್ರಮಾಣಪತ್ರ ಅಭ್ಯಾಸಕ್ರಮ (ಎಮ್‌ಎಸ್‌ಬಿವ್ಹಿಇ ಮತ್ತು ಇತರ)
ಎಚ್‌ಎಸ್‌ವ್ಹಿಇ (ಉಚ್ಚ ಮಾಧ್ಯಮಿಕ ವ್ಯವಸಾಯಿಕ ಶಿಕ್ಷಣ)
ಎಚ್‌ಎಸ್‌ಸಿ ವಾಣಿಜ್ಯ (ಉಚ್ಚ ಮಾಧ್ಯಮಿಕ ಪ್ರಮಾಣಪತ್ರ)

### ಕಲಾ

ಪ್ರಮಾಣಪತ್ರ ಅಭ್ಯಾಸಕ್ರಮ (ಎಮ್‌ಎಸ್‌ಬಿವ್ಹಿಇ ಮತ್ತು ಇತರ)
ಎಚ್‌ಎಸ್‌ವ್ಹಿಇ (ಉಚ್ಚ ಮಾಧ್ಯಮಿಕ ವ್ಯವಸಾಯಿಕ ಶಿಕ್ಷಣ)
ಎಚ್‌ಎಸ್‌ಸಿ ಕಲಾ (ಉಚ್ಚ ಮಾಧ್ಯಮಿಕ ಪ್ರಮಾಣಪತ್ರ)

### ಗಣವೇಶಧಾರಿ ಸೇವೆ

12ನೇ ನಂತರ/ಪದವಿಯ ನಂತರ

### ಸ್ವಂತದ ಕ್ಷಮತೆಯನ್ನು ಗುರುತಿಸುವದು

- ಒಂಬತ್ತನೇ 'ಸ್ವವಿಕಾಸ ಮತ್ತು ಕಲಾರಸಾಸ್ವಾದ' ಈ ಪುಸ್ತಕದಲ್ಲಿಯ ಪ್ರಕರಣ ಎಂಟು - 'ಕರಿಅರ' ದಲ್ಲಿ ನಿಮಗೆ ನಿಮ್ಮ ಕ್ಷಮತೆಯನ್ನು ಗುರುತಿಸುವ ಸಲುವಾಗಿ ಕೆಲವು ಉಪಕ್ರಮಗಳನ್ನು ಕೊಡಲಾಗಿದೆ.
- ಅದರೊಂದಿಗೆ, ನಿಮ್ಮ ಹಿಂದಿನ ಮೂರು ವರ್ಷಗಳ ಗುಣಪತ್ರಿಕೆಯ ವಿಶ್ಲೇಷಣೆ ಮಾಡಿದರೆ ನಿಮ್ಮ ಸಾತತ್ಯಪೂರ್ಣ ಕಾರ್ಯವು ಯಾವ ವಿಷಯದಲ್ಲಿ ಇದೆ. ಎಂಬುದನ್ನು ಗುರುತಿಸಲು ಸಹಾಯವಾಗಬಹುದು.
- ಮೇಲಿನ ಎರಡೂ ಉಪಕ್ರಮಗಳಿಂದ ನಿಮ್ಮ ಕ್ಷಮತೆಯನ್ನು ಕುರಿತು ನಿಮಗೆ ಒಂದು ಅಂದಾಜು ಬರಬಹುದು.

### ಕರಿಅರದ ಪಾಲು

ಈಗ ಒಮ್ಮೆ ನಮಗೆ ಹಿಡಿಸುವ ಕ್ಷೇತ್ರ ನಿರ್ಧರಿಸಿದ ನಂತರ ಆ ಕ್ಷೇತ್ರದಲ್ಲಿಯ ಇತರ ಉಪಕ್ಷೇತ್ರಗಳು ಮತ್ತು ಅವುಗಳಲ್ಲಿ ಇರುವ ಅವಕಾಶಗಳ ಕುರಿತು ನಾವು ಹೆಚ್ಚಿನ ಮಾಹಿತಿಯನ್ನು ಪಡೆದು ಕೊಳ್ಳಬೇಕು.

### ಮಹಾಕರಿಅರಮಿತ್ರ ಪೋರ್ಟಲ

'ಮಹಾಕರಿಅರಮಿತ್ರ ಪೋರ್ಟಲ' ವನ್ನು ವಿದ್ಯಾರ್ಥಿಗಳಿಗೆ ಕರಿಅರ ಮಾರ್ಗದರ್ಶನ ಸಿಗಬೇಕು ಎಂಬ ಉದ್ದೇಶದಿಂದ ಸ್ಥಾಪಿಸಲ್ಪಟ್ಟಿತು. ಈ ಸಂಕೇತಸ್ಥಳದ ಮೇಲೆ (ವೆಬಸಾಯಿಡದ ಮೇಲೆ) ನಿಮ್ಮ ಜಿಲ್ಹೆಯಲ್ಲಿ, ತಾಲೂಕಿನಲ್ಲಿ ಉಪಲಬ್ಧವಿರುವ ವಿವಿಧ ಕರಿಅರದ ಕ್ಷೇತ್ರಗಳು, ಉಪಕ್ಷೇತ್ರಗಳು ಮತ್ತು ಅದರಲ್ಲಿ ಪದವಿ ಪ್ರದಾನ ಮಾಡುವ ಕಾಲೇಜುಗಳು ಇವುಗಳ ಮಾಹಿತಿಯನ್ನು ಕೊಡಲಾಗಿದೆ ಹಾಗೆಯೆ ಪ್ರತಿಯೊಂದು ಕ್ಷೇತ್ರದಲ್ಲಿಯ ಮಾನನೀಯ ಜನರು ಆಯಾ ಕ್ಷೇತ್ರಗಳ ಕುರಿತು ನೀಡಿದ ಮಾಹಿತಿಯನ್ನು ನೀವು ನೋಡಬಹುದು.

www.mahacareermitra.in ಈ ಸಂಕೇತ ಸ್ಥಳಕ್ಕೆ ಭೆಟ್ಟಿಯಾಗಿರಿ.

### ಸ್ವಲ್ಪ ಮೋಜು ಮಾಡೋಣ

ಅ : ಈ ರಸ್ತೆ ಎಲ್ಲಿಗೆ ಹೋಗುವದು?

ಬ : ರಸ್ತೆ ಎಲ್ಲಿಗೂ ಹೋಗುವದಿಲ್ಲ ನಿಮಗೆ ಎಲ್ಲಿ ಹೋಗಬೇಕಾಗಿದೆ?

ಅ : ಹೀಗೆನೂ ನಿರ್ಧರಿಸಿಲ್ಲ

ಬ : ಹಾಗಾದರೆ ಯಾವದಾದರೂ ರಸ್ತೆಯನ್ನೂ ಆರಿಸಿರಿ. ಏನು ಅಂತರ ಬೀಳುವದಿದೆ?

### ತಿಳಿದು ಕೊಳ್ಳಿರಿ

ಎಲ್ಲಿಯ ವರೆಗೆ ನಮಗೆ ಏನನ್ನು ಸಾಧ್ಯಮಾಡುವದಿದೆಯೊ, ಆದರೆ ಅದು ಕರಿಅರದ ಕುರಿತು ಇರಲಿ ಇಲ್ಲವೆ ಆಯುಷ್ಯದಲ್ಲಿಯ ಇತರ ಮಹತ್ವದ ಘಟನೆಗಳಿಗಾಗಿ ಇರಲಿ- ಇದು ನಿಶ್ಚಯಿಸುವದಿಲ್ಲ, ಅಲ್ಲಿಯ ವರೆಗೆ ನಮಗೆ ಅದಕ್ಕಾಗಿ ಯಾವುದೇ ಕೃತಿ ನಿಶ್ಚಿತವಾಗಿ ಮಾಡಲು ಬರುವದಿಲ್ಲ ಅಂತೆಯೆ ನಮಗೆ ಏನು ಸಾಧಿಸಬೇಕಾಗಿದೆಯೋ ಅದನ್ನು ಎಲ್ಲಕ್ಕೂ ಪ್ರಥಮವಾಗಿ ಸ್ಪಷ್ಟವಾಗಿ ನಿರ್ಧರಿಸಬೇಕು. ಇದಕ್ಕೆ ಧ್ಯೇಯ ನಿಶ್ಚಿತ ಎಂದು ಅನ್ನುತ್ತಾರೆ.

### ಧ್ಯೇಯ ನಿಶ್ಚತ



ಕೆಳಗಿನ ಉದಾಹರಣೆಗಳನ್ನು ನೋಡಿರಿ, ಯಾರ ಯಾರ ಧ್ಯೇಯ ಪೂರ್ಣವಾಗಬಲ್ಲದು ಎಂದು ನಿಮಗೆ ಅನಿಸುವದು?

1. ರಫಿಕನ ಧ್ಯೇಯವೇನಂದರೆ, ಅವನಿಗೆ **ಬಹಳ ಬಹಳ ದೊಡ್ಡ**ವನಾಗುವದಿದೆ. ಆದರೆ ನಿಶ್ಚಿತವಾಗಿ ಏನು ಎಂಬುದು ಅವನಿಗೆ ಗೊತ್ತಿಲ್ಲ.
2. ಪೀಟರನ ಧ್ಯೇಯವಿದೆ ಏನೆಂದರೆ, ಅವನಿಗೆ ಬಹಳ ಗಿಡಗಳನ್ನು ಹಚ್ಚುವದಿದೆ. ಅದಕ್ಕಾಗಿ ಅವನು ದಿನಾಲು ಒಂದು ಗಿಡವನ್ನು ಹಚ್ಚುವನು. ಆದರೆ ತನ್ನ ಧ್ಯೇಯವು ಯಾವಾಗ ಪೂರ್ಣವಾಗಬಹುದು ಎಂಬುದು ಅವನಿಗ ತಿಳಿಯುವದಿಲ್ಲ.
3. ರಾಧಿಕಾಳ ಧ್ಯೇಯ ವೆಂದರೆ, ಆಕೆಗೆ ಜಗತ್ತಿನಲ್ಲಿಯ ಎಲ್ಲ ಪ್ರಶ್ನೆಗಳನ್ನು ಬಿಡಿಸುವದಿದೆ.
4. ಜಸಮೀತನ ಧ್ಯೇಯವೆಂದರೆ, ಅವರಿಗೆ ಎರಡು ತಿಂಗಳುಗಳಲ್ಲಿ ಒಳ್ಳೆಯ ಆಟಗಾರನಾಗುವದಿದೆ.
5. ಡೆಲನಾಜಳ ಧ್ಯೇಯ ವೆಂದರೆ, ಆಕೆಗೆ ಆಯುಷ್ಯದಲ್ಲಿ ಎಂದಾದರೂ ಸಂಗೀತ ಕಲಿಯುವದಿದೆ.

ಕೊಟ್ಟ ಪ್ರತಿಯೊಬ್ಬ ವ್ಯಕ್ತಿಯ ವಿಚಾರ ಮಾಡಲು ಹೇಳಿರಿ. ಪ್ರತಿಯೊಬ್ಬರ ಧ್ಯೇಯ ಸಾಧ್ಯವಾಗುವದು ಸುಲಭವಿದೆಯೋ ಅಥವಾ ಕಠಿಣವಿದೆ ಎಂಬುದನ್ನು ಕೇಳಿರಿ. ಅದರ ಕಾರಣವನ್ನು ಕೇಳಿರಿ. ಕೆಳಗಿನ ಅಂಶಗಳ ಮೇಲೆ ಚರ್ಚೆ ಮಾಡಿರಿ.

1. ರಫಿಕನ ಧ್ಯೇಯ ಯಾವಾಗ ಪೂರ್ಣವಾಗಬಹುದು? ಅವನು ವಯಸ್ಸಿನಿಂದ ಇಲ್ಲವೆ ತೂಕದಿಂದ ಬಹಳ ದೊಡ್ಡವನಾದರೆ ನಡೆಯ ಬಹುದೇ?
2. ಪೀಟರನ ಧ್ಯೇಯ ಪೂರ್ಣವಾದದ್ದನ್ನು ಹೇಗೆ ಅಳೆಯುವಿರಿ?
3. ರಾಧಿಕಾಳ ಧ್ಯೇಯವು ನಿಜವಾಗಿ ಪೂರ್ಣ ವಾಗಬಹುದು?
4. ಜಸಮೀತನ ಧ್ಯೇಯ ಸಾಧ್ಯಗೊಳಿಸುವದು ವ್ಯವಹಾರ್ಯವಾಗಿದೆಯೇ?
5. ಡೆಲನಾಜಳ ಧ್ಯೇಯ ಪೂರ್ಣವಾಗಲು ಯಾವ ಅಡಚಣೆ ಇದೆ?

ಪ್ರತಿಯೊಂದು ಧ್ಯೇಯ ವಿಧಾನದ ಮೇಲೆ ಚರ್ಚೆ ಮಾಡಿರಿ. ಪ್ರತಿಯೊಂದು ವಿಧಾನವು SMART ಆಗಿದೆಯೇ ಎಂಬುದನ್ನು ಪರೀಕ್ಷಿಸಿ ನೋಡಿರಿ. ಇಲ್ಲದಿದ್ದರೆ ಅದರಲ್ಲಿ ಏನು ಕಡಿಮೆ ಇದೆ ಎಂಬುದನ್ನು ಗುರುತಿಸಿ ಹಾಗೆ ಧ್ಯೇಯ ವಿಧಾನ ದಿಂದ 'ನಿಶ್ಚತವಾಗಿ ಏನು'? 'ಯಾವಾಗ' 'ಎಷ್ಟು' ಇವು ಸ್ಪಷ್ಟವಾಗುತ್ತವೆಯೇ ಅದನ್ನು ಪರೀಕ್ಷಿಸಿರಿ.

**ಮೇಲಿನ ಉದಾಹರಣೆಗಳಲ್ಲಿ ಆಯಾ ವ್ಯಕ್ತಿಯ ಕೇವಲ ಇಚ್ಛೆ ವ್ಯಕ್ತವಾಗಿವೆ. ಅವುಗಳು ಧ್ಯೇಯದಲ್ಲಿ ರೂಪಾಂತರ ವಾಗದೆ ಅವು ಪ್ರತ್ಯಕ್ಷದಲ್ಲಿ ಬರುವದು ಕಠಿಣ ವಿರುವದು.** ನಮ್ಮ ಧ್ಯೇಯವು ಪೂರ್ಣಮಾಡುವದಿದ್ದರೆ ಪ್ರಥಮವಾಗಿ ಅದನ್ನು ಯೋಗ್ಯ ಪದ್ಧತಿಯಿಂದ ಶಬ್ದಬದ್ಧ ಮಾಡಲು ಬರಬೇಕು. ಕಾಗದದ ಮೇಲೆ ಮಂಡಿಸಲಿಕ್ಕೆ ಬರಬೇಕು. ಇಚ್ಛೆ ಧ್ಯೇಯದಲ್ಲಿ ರೂಪಾಂತರ ಹೇಗೆ ಮಾಡಬೇಕು. ರೂಪಾಂತರ ಹೀಗೆ ಮಾಡಬೇಕು ಎಂಬುದನ್ನು ನಾವು ನೋಡೋಣ.

**S** **1. Specific**

ನಿಶ್ಚಿತವಾಗಿ – ನಮಗೆ ನಿಶ್ಚಿತವಾಗಿ ಏನನ್ನು ಸಾಧ್ಯಮಾಡುವ ದಿದೆಯೊ ಅದನ್ನು ಸ್ಪಷ್ಟ ಶಬ್ದಗಳಲ್ಲಿ ಮಂಡಿಸಬೇಕು. ಸಾಧ್ಯವಾದರೆ 'ಏನಾದರೂ', 'ದೊಡ್ಡ' 'ಭವ್ಯ' ಮುಂತಾದ ಶಬ್ದಗಳನ್ನು ಉಪಯೋಗಿಸಬಾರದು.

**M** **2. Measureable**

ಅಳೆಯಲು ಬರುವಂತೆ– ನಮಗೆ ಏನನ್ನು ಸಾಧಿಸುವದಿದೆಯೊ ಅದು ನಮಗೆ ಅಳೆಯಲು ಬಂದರೇನೆ ಅದು ಸಾಧ್ಯವಾಯಿತು ಎಂಬುದು ನಮಗೆ ತಿಳಿಯಬಹುದು 'ಬಹಳ', 'ಹೆಚ್ಚು' 'ಎಲ್ಲ' ಒಳ್ಳೆಯ ಇಂಥಹ ಶಬ್ದಗಳನ್ನು ಸಾಧ್ಯವಾದಷ್ಟು ಬಳಸಬಾರದು. 'ಪರೀಕ್ಷೆಯಲ್ಲಿ ಬಹಳ ಅಂಕಗಳು ದೊರಕುವದು. 'ಇದಕ್ಕಿಂತ 'ಪರೀಕ್ಷೆಯಲ್ಲಿ 70%ದ ಮೇಲೆ ಅಂಕಗಳು ದೊರಕಿಸುವದು ಇದು ಹೆಚ್ಚುಯೋಗ್ಯ ಧ್ಯೇಯವಾಗಿದೆ.

**A** **3. Achievable**

ಸಾಧ್ಯವಾಗುವ ಹಾಗೆ– ನಾವು ಯಾವ ಧ್ಯೇಯವನ್ನು ನಿರ್ಧರಿಸುವೆವೊ ಅವು ನಿಜವಾಗಿ ಸಾಧ್ಯವಾಗುವಂತೆ ಇವೆಯೇ ಇವುಗಳ ವಿಚಾರ ಮಾಡಬೇಕು. ಜಗತ್ತಿನಲ್ಲಿ ಎಲ್ಲ ದುಃಖವನ್ನು ದೂರ ಮಾಡುವದು. ಇದು ಅಸಾಧ್ಯಧ್ಯೇಯ ವಾಗಿದೆ. ಇದಕ್ಕಿಂತ ಇಬ್ಬರಿಗೆ ಬರೆಯಲು, ಓದಲು ಕಲಿಸುವದು ಇದು ಸಾಧ್ಯವಾಗುವ ಧ್ಯೇಯವಾಗಿದೆ.

**R** **4. Realistic**

ವ್ಯಾವಹಾರಿಕ – ಎರಡು ತಿಂಗಳಲ್ಲಿ ಒಳ್ಳೆಯ ಆಟಗಾರ ನಾಗುವದು ವ್ಯವಹಾರಿಕವಲ್ಲ. ಒಳ್ಳೆಯ ಆಟಗಾರನಾಗಲು ವರ್ಷಾನುವರ್ಷಗಳ ವರೆಗೆ ಪರಿಶ್ರಮ ವಹಿಸ ಬೇಕಾಗುವದು.

**T** **5. Time bound**

ವೇಳೆಯ ಮರ್ಯಾದೆ ಇದ್ದದ್ದು – ಯಾವುದೇ ಧ್ಯೇಯ ನಮಗೆ ಎಲ್ಲಿಯವರೆಗೆ ತಲುಪಬೇಕಾಗಿದೆ. ಇದಕ್ಕೆ ನಾವು ಎಲ್ಲಿಯವರೆಗೆ ಕಾಲಮರ್ಯಾದೆಯನ್ನು ಹಚ್ಚುವದಿಲ್ಲವೋ ಅಲ್ಲಿಯ ವರೆಗೆ ಆ ಧ್ಯೇಯವನ್ನು ತಲುಪಲು ನಮ್ಮಿಂದ ಸಾಧ್ಯವಾಗುವದಿಲ್ಲ. ಒಂದುವೇಳೆ ನಮ್ಮ ಮೇಲೆ ಯಾವುದೇ ರೀತಿಯ ಕಾಲಮರ್ಯಾದೆ ಇಲ್ಲದಿದ್ದರೆ ನಾವು ಕೆಲಸವನ್ನು ಮಾಡಲು ಪ್ರಾರಂಭಿಸುವದೇ ಇಲ್ಲ.

ಸ್ವಲ್ಪದರಲ್ಲಿ ನಮ್ಮ ಧ್ಯೇಯವು SMART ಆಗಿರಬೇಕು.

## ತಿಳಿದು ಕೊಳ್ಳಿರಿ

ಕೆಳಗೆ ಕೊಟ್ಟ ಧ್ಯೇಯ ವಿಧಾನಗಳಲ್ಲಿ ಕೊರತೆ ಗಳಿವೆಯೇ ಎಂಬುದನ್ನು ಶೋಧಿಸಿರಿ ಮತ್ತು ನಿಮ್ಮ ನೋಟಬುಕದಲ್ಲಿ ಬರೆಯಿರಿ. ಇದ್ದರೆ ಆ ವಿಧಾನಗಳಿಗೆ ಯೋಗ್ಯ ಸ್ವರೂಪದಲ್ಲಿ ಹೇಗೆ ಬರೆಯಲು ಬರಬಹುದು ಎಂಬುದರ ವಿಚಾರ ಮಾಡಿ ಯೋಗ್ಯ ಧ್ಯೇಯ ವಿಧಾನ ಬರೆಯಿರಿ.

1. ರೇಮೋನ ಧ್ಯೆಯವೆಂದರೆ ಅವನಿಗೆ ಒಳ್ಳೆಯ ಅಂಕಗಳನ್ನು ದೊರಕಿಸುವದಿದೆ
2. ಮನಿಷಾಳ ಧ್ಯೇಯವು ಆಕೆ ಯಶಸ್ವಿ ವ್ಯಕ್ತಿಯಾಗುವದಿದೆ.
3. ರಾಕೇಶನ ಧ್ಯೇಯವು ಅವನಿಗೆ ಕಾರನ್ನು ಕೊಂಡು ಕೊಳ್ಳುವದಿದೆ.
4. ಪರವೀನಳ ಧ್ಯೇಯವೆಂದರೆ ಆಕೆಗೆ ಹನ್ನೊಂದನೆ ಇಯತ್ತೆಯಲ್ಲಿ 60% ಅಂಕ ದೊರಕಿಸಿ 'ಅಬಕ' ಕಾಲೇಜಿನಲ್ಲಿ ಅಡಮಿಶನ ಪಡೆಯುವದಿದೆ.




### ಸ್ವಂತದ ಕರಿಅರದ ನಿಯೋಜನೆ

ತಿಳಿಯಿರಿ, ನಿಮಗೆ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವದಿದೆ. ಆಗ ನೀವು ಸರಳವಾಗಿ ಎದ್ದು ನಡೆಯಲಾರಂಭಿಸುವಿರಾ? ತಿಳಿಯಿರಿ, ನಿಮ್ಮ ಮನೆಯಲ್ಲಿ ಒಂದು ದೊಡ್ಡ ಲಗ್ನಕಾರ್ಯ ನಿರ್ಧರಿಸಿರಬಹುದು, ಆದರೆ ಲಗ್ನದ ದಿನವೇ ಎಲ್ಲ ಸಿದ್ಧತೆಯನ್ನು ಮಾಡುವರೆ? ತಿಳಿಯಿರಿ. ಯಾವುದೇ ಆಟಗಾರನಿಗೆ ಆಲಿಂಪಿಕ್‌ದಲ್ಲಿ ಪದಕ ಗೆಲ್ಲುವದಿದೆ, ಆದರೆ ಕೇವಲ ಸ್ಪರ್ಧೆಯ ದಿವಸವೇ ಮೈದಾನದಲ್ಲಿ ಓಡಿ ಅವನಿಗೆ ಧ್ಯೇಯ ಸಾಧಿಸಲು ಬರಬಹುದೇ? ಎಲ್ಲ ಪ್ರಶ್ನೆಗಳ ಉತ್ತರ 'ಇಲ್ಲ' ಎಂದೇ ಬರುವದು. ಯಾವುದೇ ಸಂಗತಿಯನ್ನು ಸಾಧ್ಯಮಾಡುವ ದಿದ್ದರೆ ಅದರ ಪೂರ್ವಸಿದ್ಧತೆ ಮಾಡುವದು ಬಹಳ ಆವಶ್ಯಕವಾಗಿದೆ. ಅದಕ್ಕನುಸರಿಸಿ ಇಂದಿನಿಂದ ಏನೆನು ಮಾಡಬೇಕು ಎಂಬುದನ್ನು ನಿರ್ಧರಿಸುವದು. ಅವಶ್ಯಕವಾಗಿದೆ. ಹಾಗಾದರೆ ನಮ್ಮ ಕರಿಅರ ಕುರಿತು ಸಹ ಸ್ಪಷ್ಟತೆ ಇರುವದು ಅತ್ಯಂತ ಮಹತ್ವದ್ದಾಗಿದೆ ನಮೂನೆಯ ಕೋಷ್ಟಕವು ನಿಮಗೆ ಸ್ಪಷ್ಟತೆಯನ್ನು ತರಲು ಸಹಾಯ ಮಾಡಬಹುದು.



ನಮೂನೆಯ ಕೋಷ್ಟಕದ ಹಾಗೆ ವಿದ್ಯಾ-ರ್ಥಿಗಳಿಗೆ ಅವರ ಸ್ವಂತದ ಕೋಷ್ಟಕ ಮಾಡಲು ಸಹಾಯ ಮಾಡಿರಿ.

ಕೋಷ್ಟಕದಲ್ಲಿ ಹೆಚ್ಚೆಚ್ಚು ನಿಶ್ಚಿತತನವನ್ನು ತರಲು ಸಹಾಯ ಮಾಡಿರಿ.




| ವರ್ಷಗಳು | ನಾನು ಯಾರು ಇರಬಹುದು | ನಾನು ಏನು ಮಾಡುತ್ತಿರುವೆನು | ನನ್ನಕಡೆಗೆ ಏನಿರಬಹುದು |
|---|---|---|---|
| 10 ವರ್ಷಗಳ ನಂತರ | ನಾನು ಒಬ್ಬ ಯಶಸ್ವಿ ರೈತನಾಗಿರ ಬಹುದು | ನಾನು ನನ್ನ ಸ್ವಂತದ ಒಕ್ಕಲುತನ ಮಾಡುತ್ತಿರ ಬಹುದು. | • ಸ್ವಂತದ ಹೊಲ<br>• ಸ್ವಂತದ ಮನೆ<br>• ಸ್ವಂತದ ಟ್ರ್ಯಾಕ್ಟರ್ |
| 5 ವರ್ಷಗಳ ನಂತರ | ನಾನು ‘ಅಬಕ’ ಕಾಲೇಜಿನಿಂದ ಬಿ.ಎಸ್ಸಿ ಕೃಷಿ ಪದವಿ ದೊರಕಿಸಿಕೊಂಡವನಿರ ಬಹುದು. | ನಾನು ಅನುಭವ ಪಡೆದು ಕೊಳ್ಳಲು ಯಾವದೋ ಯಶಸ್ವಿ ರೈತ ನೊಡನೆ ಕೆಲಸ ಮಾಡುತ್ತಿರಬಹುದು. | • ನನ್ನ ಡಿಗ್ರಿ<br>• ಉತ್ತಮ ಕೃಷಿ ಮಾಡುವ ಕೌಶಲ್ಯ |
| 3 ವರ್ಷಗಳ ನಂತರ | ನಾನು ಹನ್ನೆರಡನೆ ಇಯತ್ತೆಯಲ್ಲಿ ‘ಕ’ ಮಾರ್ಕ ಪಡೆದು ‘ಅಬಕ’ ಕಾಲೇಜಿನಲ್ಲಿ ಪ್ರವೇಶ ಪಡೆದಿರಬಹುದು. | ನಾನು ಬಿ. ಎಸ್ಸಿ ಕೃಷಿ ಪದವಿ ಅಭ್ಯಾಸಕ್ರಮ ಪೂರ್ಣ ಮಾಡುತ್ತ ಇರಬಹುದು. ಆ ಸಂದರ್ಭದಲ್ಲಿ ಹೊಸ ಸಂಗತಿಗಳನ್ನು ಕಲಿಯುತ್ತಿರಬಹುದು. | • ಹೆಚ್ಚೆಚ್ಚು ಕಲಿಯುವ ಛಲ<br>• ಈ ಶಿಕ್ಷಣ ಹೇಗೆ ಉಪಯೋಗ ಮಾಡುವದು ಎಂಬುದರ ಸ್ಪಷ್ಟತೆ.<br>• ವಿವಿಧ ಯೋಜನೆಗಳ ಮಾಹಿತಿ ಯನ್ನು ನಾನು ದೊರಕಿಸಿರ ಬಹುದು. |
| 1 ವರ್ಷದ ನಂತರ | ನಾನು ಹತ್ತನೇ ಪರೀಕ್ಷೆಯಲ್ಲಿ ‘ಬ’ ಪ್ರತಿಶತಗಿಂತ ಹೆಚ್ಚು ಅಂಕಗಳನ್ನು ಪಡೆದು ಹನ್ನೊಂದನೆ ಇಯತ್ತೆಗಾಗಿ ಕಾಲೇಜಿನಲ್ಲಿ ಪ್ರವೇಶ ಪಡೆದಿರಬಹುದು. | ನಾನು ಹನ್ನೊಂದನೆ ಇಯತ್ತೆಯಲ್ಲಿ ‘ಕಖಗ’ ಕಾಲೇಜಿನಲ್ಲಿ ಕಲಿಯುತ್ತಿರ ಬೇಕು. ಹನ್ನೆರಡನೆ ಇಯತ್ತೆಯಲ್ಲಿ ‘ಕ’ ಪ್ರತಿಶತಗಿಂತ ಹೆಚ್ಚು ಅಂಕಗಳನ್ನು ಪಡೆ ಯುವ ದಿಸೆಯಲ್ಲಿ ಪ್ರಯತ್ನಿ ಸುತ್ತಿರ ಬಹುದು. | • ಹೆಚ್ಚೆಚ್ಚು ಕಲಿಯುವ ಛಲ<br>• ಮುಂದೆ ಏನು ಮಾಡಬೇಕೆಂಬು ದರ ಕುರಿತು ಮಾಹಿತಿಯನ್ನು ಪಡೆದಿರಬಹುದು.<br>• ಸಂಬಂಧಿತ ವ್ಯಕ್ತಿಗಳಿಗೆ ಭೆಟ್ಟಿಯಾದೆ/ ಭೆಟ್ಟಿಯಾಗಿರಬಹುದು. |


## ನನ್ನ ಧ್ಯೇಯ ವಿಧಾನಗಳು

ನಮಗೆ ಹತ್ತು ವರ್ಷ ಮುಂದೆ ಹೋಗಿ ಏನು ಮಾಡುವದಿದೆ. ಇದು ಸ್ಪಷ್ಟವಾದ ನಂತರ ಈಗ ನಮಗೆ ಹತ್ತನೇ ವರ್ಗ ಇಲ್ಲವೆ ಮುಂದಿನ ಮೂರು/ಆರು ತಿಂಗಳಿನ ಧ್ಯೇಯ ನಿಶ್ಚತಗೊಳಿಸಿ ಅದಕ್ಕಾಗಿ ನಿಯೋಜನೆಯನ್ನು ನಿಶ್ಚಿತ ಗೊಳಿಸಲು ಬರುವದು.

ಕೊಟ್ಟ ನಮೂನೆಯಂತೆ ಧ್ಯೇಯವಿಧಾನ ತಯ್ಯಾರಿಸಲು ಸಹಾಯ ಮಾಡಿರಿ.

ಪ್ರತಿಯೊಬ್ಬ ವಿದ್ಯಾರ್ಥಿಯ ಧ್ಯೇಯದಂತೆ ವಾಕ್ಯರಚನೆಯಲ್ಲಿ ಅಂತರವಾಗ ಬಹುದು ಎಂಬುದು ಲಕ್ಷದಲ್ಲಿಟ್ಟು ಕೊಳ್ಳಿರಿ.

## ಧ್ಯೇಯ ವಿಧಾನಗಳು



**ನಿಯೋಜನೆ**

"ನಿಮ್ಮ ಧ್ಯೇಯ ವಿಧಾನ ಬರೆದು ಆಗಿದೆ. ಅದಕ್ಕಾಗಿ ಇಂದಿನಿಂದ ಏನು ಮಾಡಬೇಕೆಂಬುದರ ನಿಯೋಜನೆ ಮಾಡುವದು ಅವಶ್ಯಕವಾಗಿದೆ ಕೆಳಗೆ ಕೊಟ್ಟ ಕೋಷ್ಟಕದಂತೆ ನೀವು ನಿಯೋಜನೆಯನ್ನು ಮಾಡಬಹುದು."

ಕೊಟ್ಟ ನಮೂನೆಯಂತೆ ನಿಯೋಜನೆ ಮಾಡಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಿರಿ. ಪ್ರತಿಯೊಬ್ಬ ವಿದ್ಯಾರ್ಥಿಯ ಧ್ಯೇಯದ ಹಾಗೆ ಅವರ ನಿಯೋಜನೆಯಲ್ಲಿ ಅಂತರ ವಾಗಬಹುದು ಇದನ್ನು ಲಕ್ಷದಲ್ಲಿಟ್ಟು ಕೊಳ್ಳಿರಿ.

| ಇಂದು ನಾನು ಎಲ್ಲಿ ಇದ್ದೇನೆ? | ನನಗೆ ಆರುತಿಂಗಳಲ್ಲಿ/ವರ್ಷ ತುಂಬೆಲ್ಲ ಎಲ್ಲಿ ಹೋಗುವದಿದೆ. | ಅದಕ್ಕಾಗಿ ನಾನು ಏನು ಮಾಡಬೇಕು |
|---|---|---|
| ಇಂದು ನನಗೆ 60% ಅಂಕಗಳು ಸಿಗುತ್ತಿವೆ. | ನನಗೆ ಹತ್ತನೆಯ ಪರೀಕ್ಷೆಯಲ್ಲಿ ಸುಮಾರು 70% ಅಂಕಗಳನ್ನು ದೊರಕಿಸುವದಿದೆ. | • ಅಭ್ಯಾಸದ ಗತಿಯನ್ನು ಹೆಚ್ಚಿಸ ಬೇಕು<br>• ತಿಳಿಯಲಾರದ ಸಂಗತಿಗಳನ್ನು ಶಿಕ್ಷಕರಿಗೆ ಪುನಃ ಕೇಳಿತಿಳಿದು ಕೊಳ್ಳಬೇಕಾಗಿದೆ.<br>• ನಿಬಂಧ ಲೇಖನದಲ್ಲಿ ಕಡಿಮೆ ಗುಣಗಳು ಬೀಳುತ್ತಿವೆ. ಲೇಖನದ ಅಭ್ಯಾಸ ಮಾಡಬೇಕು. |

**ಸಮಯದ ನಿಯೋಜನೆ**

**"ಪ್ರತಿಯೊಬ್ಬ ಮನುಷ್ಯನಿಗೆ ಒಂದು ದಿವಸದ ಇಪತ್ನಾಲ್ಕು ತಾಸುಗಳೇ ಇರುವವು. ಅದರಲ್ಲಿ ಅವನು ಏನು ಮಾಡಬೇಕು ಎಂಬುದನ್ನು ನಿರ್ಧರಿಸುವನು. ಆಗಲೇ ಅವನ ಯಶಸ್ವಿನ ಎತ್ತರ ನಿರ್ಧರಿಸುವದು."**

ಹತ್ತನೆ ವರ್ಗದಲ್ಲಿ ಒಟ್ಟಾರೆ ಶಾಲೆ, ಅಭ್ಯಾಸ, ರೂಢಿ ಪರೀಕ್ಷೆ ಇತ್ಯಾದಿಗಳ ವ್ಯಾಪ ನೋಡಲು ಸಮಯದ ಕೊರತೆ ಯಾವಾಗಲೂ ಇರುವದು ಇದು ಕಂಡು ಬರುವದು. ನಮ್ಮ ಇಚ್ಛಿಸಿದ ಧ್ಯೇಯ ತಲುಪಲು ಸಮಯದ ನಿಯೋಜನೆ ಮಾಡುವದು ಅತ್ಯಂತ ಮಹತ್ವದ್ದಾಗಿದೆ. ಕೆಳಗೆ ಸಮಯದ ನಿಯೋಜನೆ ಮಾಡುವ ಒಂದು ಪದ್ಧತಿಯನ್ನು ಕೊಡಲಾಗಿದೆ. ಇಂಥ ಅನೇಕ ಪದ್ಧತಿಗಳು ಇರಬಹುದು.

ನಿಮ್ಮ ಸಂಪೂರ್ಣ ದಿನದಲ್ಲಿಯ ನಿದ್ದೆಯ ವೇಳೆಯನ್ನು ಬಿಟ್ಟು ಇತರ ವೇಳೆಯ ಅರ್ಧ ಅರ್ಧ ತಾಸುಗಳ ಭಾಗ ಮಾಡಿರಿ.

ಯಾವ ಸಂಗತಿಯನ್ನು ಕೆಂಪು ಬಣ್ಣದಿಂದ ಬಣ್ಣ ಬಳಿಯುವದು, ಯಾವುದಕ್ಕೆ ಹಳದಿ ಬಣ್ಣ. ಇದನ್ನು ತಿಳಿದುಕೊಳ್ಳಲು ವಿದ್ಯಾರ್ಥಿಗಳಿಗೆ ನಿಮ್ಮ ಸಹಾಯ ಬೇಕಾಗುವದು. ಹಾಗೆಯೆ ಯಾವುದೇ ಕೃತಿಗಾಗಿ ಹತ್ತುವ ವೇಳೆ ಕಡಿಮೆ ಮಾಡಲು ಎರಡನೆಯ ಪರ್ಯಾಯ ಮಾರ್ಗ ಇದ್ದರೆ, ಅದರ ವಿಚಾರ ಮಾಡಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಿರಿ.

- ಎರಡು-ಮೂರು ದಿವಸ ನೀವು ಪ್ರತಿ ಅರ್ಧತಾಸಿನಲ್ಲಿ ಏನು ಮಾಡುವಿರಿ ಎಂಬುದನ್ನು ನೋಂದಾಯಿಸಿರಿ.
- ಅದರ ಮೇಲಿಂದ ನಿಮಗೆ ಸಾಧಾರಣವಾಗಿ ಅಂದಾಜು ಬರಬಹುದು.
- ಯಾವ ಸಂಗತಿಗಳು ನಿಮ್ಮ ಧ್ಯೇಯಕ್ಕೆ ಏನೇನು ಸಂಬಂಧವಿಲ್ಲವೋ, ಅವುಗಳಿಗೆ ಕೆಂಪು ಬಣ್ಣದಿಂದ ಹಚ್ಚಿರಿ. ಉದಾ. TV ನೋಡುವದು ಇದು 70% ಅಂಕಗಳನ್ನು ಪಡೆಯಲು ಏನೇನೂ ಸಂಬಂಧಿಸಿಲ್ಲ ಅದಕ್ಕಾಗಿ ಆಕೃತಿಗೆ ಕೆಂಪು ಬಣ್ಣ ಹಚ್ಚಿರಿ.
- ಯಾವ ಸಂಗತಿಗಳು ನಿಮ್ಮ ಧ್ಯೇಯಕ್ಕೆ ಸಂಬಂಧಿಸಿಲ್ಲ ಆದರೂ ಪೂರಕ ವಾಗಿವೆ, ಅವುಗಳಿಗೆ ಹಳದಿ ಬಣ್ಣ ಹಚ್ಚಿರಿ. ಉದಾ. ಶಾಲೆಗೆ ಬರ-ಹೋಗುವ ವೇಳೆ ಇದರ ಧ್ಯೇಯಕ್ಕೆ ಸರಳ ಸಂಬಂಧವಿರದಿದ್ದರೂ ಆ ಧ್ಯೆಯವನ್ನು ತಲುಪಲು ಪೂರಕವಾಗಿದೆ.
- ಯಾವ ಸಂಗತಿಗಳು ನಿಮ್ಮ ಧ್ಯೇಯಕ್ಕೆ ಸಂಬಂಧಿಸಿವೆ, ಅವುಗಳಿಗೆ ಹಸಿರು ಬಣ್ಣ ಹಚ್ಚಿರಿ. ಉದಾ. ಗಣಿತದ ಪ್ರ್ಯಾಕ್ಟಿಸ ಮಾಡಲು ಕೊಟ್ಟ ಸಮಯ.
- ಮೊಟ್ಟಮೊದಲು ಕೆಂಪು ಬಣ್ಣದಿಂದ ಬಳಿದ ಸಂಗತಿಗಳಿಗೆ ಹೋಗುವ ವೇಳೆಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿರಿ. ಆನಂತರ ಹಳದಿ ಬಣ್ಣದಿಂದ ಬಳಿದ ಕೃತಿ. ಮಾಡುವ ವೇಳೆಯನ್ನು ಕಡಿಮೆ ಮಾಡಬಹುದು. ಎಂಬುದನ್ನು ನೋಡಿರಿ. ಇಲ್ಲವೆ ಎರಡು ಕೃತಿಗಳನ್ನು ಒಟ್ಟಿಗೆ ಮಾಡಲು ಬರುವದೇ ಎಂಬದನ್ನು ನೋಡಿರಿ ಇಲ್ಲವೆ ಎರಡು ಕೃತಿಗಳನ್ನು ಒಟ್ಟಿಗೆ ಮಾಡಲು ಬರಬಹುದೆ? ಎಂಬುದರ ವಿಚಾರ ಮಾಡಿರಿ. ಉದಾ. ಓದಿರಿ ಸಂಗತಿಯನ್ನು ಶಾಲೆಗೆ ಹೋಗುತ್ತಿರುವಾಗ ಮನಸ್ಸಿನಲ್ಲಿಯೇ ಪಾಠ ಮಾಡುವದು.

| **ವೇಳೆ** | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ | ರವಿವಾರ |
|---|---|---|---|---|---|---|---|
| 6.00 ರಿಂದ 6.30 | | | | | | | |
| 6.30 ರಿಂದ 7.00 | | | | | | | |
| 7.00 ರಿಂದ 7.30 | | | | | | | |
| 7.30 ರಿಂದ 8.00 | | | | | | | |
| 8.00 ರಿಂದ 8.30 | | | | | | | |
| 8.30 ರಿಂದ 9.00 | | | | | | | |
| 9.00 ರಿಂದ 9.30 | | | | | | | |
| 9.30 ರಿಂದ 10.00 | | | | | | | |
| 10.00 ರಿಂದ 10.30 | | | | | | | |
| 10.30 ರಿಂದ 11.00 | | | | | | | |

## ಸ್ವಲ್ಪ ಮೋಜು ಮಾಡೋಣ

### ವ್ಹಿಜನ್ ಬೋರ್ಡ್

ನಿಮ್ಮ ಧ್ಯೇಯವನ್ನು ಲಕ್ಷದಲ್ಲಿ ಇಟ್ಟುಕೊಂಡು ಅದರಂತೆ ಒಂದು ವ್ಹಿಜನ ಬೋರ್ಡ್ ತಯ್ಯಾರಿಸಿರಿ. ನಿಮ್ಮ ಧ್ಯೇಯವನ್ನು ಕಾಗದದ ಮೇಲೆ ಬರೆದು ಮನೆಯಲ್ಲಿಯ ಯಾವುದೇ ಗೋಡೆಯ ಮೇಲೆ ಅಂಟಿಸಿರಿ. ಅದರ ಆಕ್ಕಪಕ್ಕದಲ್ಲಿ ಆ ಧ್ಯೇಯಕ್ಕೆ ಸಂಬಂಧಿಸಿದ ಫೋಟೊ, ಸುಭಾಷಿತಗಳು, ಆ ಕ್ಷೇತ್ರದಲ್ಲಿಯ ಯಶಸ್ವಿ ವ್ಯಕ್ತಿಗಳ ಚಿತ್ರಗಳನ್ನು ಹಚ್ಚಿರಿ. ವ್ಹಿಜನ ಬೋರ್ಡದ ಉದಿಷ್ಟಗಳು ನಿಮಗೆ ಸತತವಾಗಿ ಪ್ರೇರಣೆ ಕೊಡಬೇಕು ಮತ್ತು ನಿಮ್ಮ ಧ್ಯೇಯದ ಕುರಿತು ಸ್ಪಷ್ಟತೆ ಬರುವುದಕ್ಕಾಗಿ ಇರುವವು.

## ಕರಿಅರದ ಮಾರ್ಗದಲ್ಲಿಯ ಅಡಚಣೆಗಳು

### 1. ಪಾಲಕರೊಂದಿಗೆ ಸಂವಾದ

ಮಿತಾಲಿಗೆ ಮುಂದೆ ಹೋಗಿ ಕ್ರೀಡಾ ಕ್ಷೇತ್ರದಲ್ಲಿ ಕರಿಅರ ಮಾಡುವದಿದೆ. ಆದರೆ ಮಿತಾಲಿಯು ನರ್ಸಿಂಗ ಕೋರ್ಸ್‌ಮಾಡಬೇಕೆಂದು ಆಕೆಯ ಪಾಲಕರಿಗೆ ಅನಿಸುತ್ತದೆ. ಮಿತಾಲಿ ಅವರಿಗೆ ತನ್ನ ದೃಷ್ಟಿಕೋನವನ್ನು ಬಿಚ್ಚಿಡಲಾರಳು ಮನೆಯಲ್ಲಿ ದಿನಾಲು ಜಗಳಗಳು ನಡೆಯುತ್ತವೆ. ಈ ದಿನನಿತ್ಯದ ಜಗಳಕ್ಕೆ ಬೇಸತ್ತು ಮಿತಾಲಿಗೆ ಅಭ್ಯಾಸವನ್ನು ಮಾಡಬಾರದು ಅನಿಸುತ್ತದೆ.

ಬಹಳಷ್ಟು ಸಲ ನಾವು ಪಾಲಕರಿಗೆ ನಮ್ಮ ಅನ್ನುವಿಕೆ ಬಿಚ್ಚಿ ಹೇಳಲಾಗುವದಿಲ್ಲ, ಸ್ಪಷ್ಟವಾಗಿ ಹೇಳಲೂ ಆಗುವದಿಲ್ಲ.ಇದರಿಂದ ನಮ್ಮ ವಿಚಾರ ಅವರಿಗೆ ತಿಳಿಯುವದಿಲ್ಲ ಮತ್ತು ಅವರಿಗೆ ನಮ್ಮ ಆಯ್ಕೆಯ ಮೇಲೆ ವಿಶ್ವಾಸ ಬರುವದಿಲ್ಲ. ಅದಕ್ಕಾಗಿ ಕೆಳಗಿನ ಅಂಶಗಳನ್ನು ಮಾಡಲು ಬರಬಹುದು–

> ವಿದ್ಯಾರ್ಥಿಗಳಲ್ಲಿ ಯಾರಿಗಾದರೂ ಈ ಪ್ರಕಾರದ ಅನುಭವ ಬರುವದೇ? ಬಂದಿದೆಯೆ ಎಂದು ಕೇಳಿರಿ.
>
> ಯಾರ ಇಚ್ಚೆ ಇದ್ದರೆ ಅವನು/ಅವಳು ಮುಂದೆ ಬಂದು ವಿಚಾರ ಮಂಡಿಸಬೇಕು

#### ಕೇಳಿ ಕೊಳ್ಳಿರಿ:

ನಿಮ್ಮ ಪಾಲಕರ ಮಾತನ್ನು ಒಮ್ಮೆಲೆ ಮುರಿದು ಹಾಕಬೇಡಿ. ಅವರ ಚಿಂತೆಯನ್ನು ಗಮನದಲ್ಲಿ ತಗೆದು ಕೊಳ್ಳಿರಿ. ಬಹಳಷ್ಟು ಪಾಲಕರ ಚಿಂತೆ ಕೆಳಗಿನಂತೆ ಇರುತ್ತದೆ.

1. ನೀವು ಅರ್ಥಾರ್ಜನೆಯನ್ನು ಹೇಗೆ ಮಾಡುವಿರಿ?
2. ನಿಮ್ಮ ಕ್ಷೇತ್ರದಲ್ಲಿ ಮುಂದೆ ಯಾವ ಅವಕಾಶ (ಸ್ಕೋಪ) ಇದೆ? ನಿಮಗೆ ನೌಕರಿ/ವ್ಯವಸಾಯದ ಅವಕಾಶ ವಿದೆಯೇ?
3. ನೀವು ಆರಿಸಿದ ಕೋರ್ಸ್/ಕರಿಅರ ನಿಮಗೆ ನಿಭಾಯಿಸಲು ಸಾಧ್ಯವಿದೆಯೆ?
4. ಕೋರ್ಸಿನ ಫೀ ಎಷ್ಟಿರಬಹುದು?

ಈ ಪ್ರಶ್ನೆಗಳ ಉತ್ತರವನ್ನು ನೀವು ಸ್ವಂತಕ್ಕೆ ಮತ್ತು ಅವರಿಗೆ ಸಮಾಧಾನಕಾರಕವಾಗಿ ಕೊಟ್ಟಿರೆ, ಬಹಳಷ್ಟು ಪಾಲಕರು ತಮ್ಮ ವಿರೋಧವನ್ನು ಹಿಂತೆಗೆದು ಕೊಳ್ಳುವ ಸಾಧ್ಯತೆ ಇರುವದು.

#### ಮಾಹಿತಿಯನ್ನು ಸಂಗ್ರಹಿಸಿರಿಃ

ನಿಮಗೆ ಇಷ್ಟವಾದ ಕ್ಷೇತ್ರಗಳ ಕುರಿತು ಪೇಪರದಲ್ಲಿ ಬರುವ ಮಾಹಿತಿ, TV ಮೇಲೆ ಬರುವ ಸಂದರ್ಶನ, ಇಂಟರ್ನೆಟ್ ಮೇಲಿನ ಮಾಹಿತಿ ಇತ್ಯಾದಿಗಳನ್ನು ನಿಮ್ಮ ಪಾಲಕರಿಗೆ ತೋರಿಸಿರಿ. ನೀವು ಮುಂದೆ ಏನು ಮಾಡಬೇಕೆನ್ನುವಿರಿ. ಕಲಿಸುವ ಮಹಾವಿದ್ಯಾಲಯ ಎಲ್ಲಿದೆ? ಅದರ ಫೀ ಎಷ್ಟು ಇರುವದು? ಪ್ರಶ್ನೆಗಳಿಗೆ ಉತ್ತರಿಸುವ ಸಿದ್ಧತೆ ಮಾಡಿರಿ.



#### ಜನರೊಂದಿಗೆ ಮಾತನಾಡಿಃ

ನೀವು ಆರಿಸಿದ ಕೋರ್ಸ್ ಮಾಡುವ ಇಲ್ಲವೆ ಅದನ್ನು ಪೂರ್ಣ ಮಾಡಿ ಕರಿಅರ ಮಾಡುವ ಇತರ ಜನರೊಂದಿಗೆ ಜೊತೆಗೆ ಪಾಲಕರನ್ನು ಕರೆದುಕೊಂಡು ಭೇಟ್ಟಿಯಾಗಿರಿ. ಅವರ ಹೇಳಿಕೆಯನ್ನು ಕೇಳಿರಿ.

## 2. ಆರ್ಥಿಕ ಅಡಚಣೆಗಳು

ಬಹಳ ವೇಳೆಗೆ ಆರ್ಥಿಕ ಅಡಚಣೆಯಿಂದ ನಮಗೆ ಬೇಕಾದಹಾಗೆ ಕರಿಅರ ಮಾಡಲು ಬರುವದಿಲ್ಲ. ಇಂಥ ವೇಳೆಗೆ ಸರಕಾರಿ ಮತ್ತು ಖಾಸಗಿ ಶಿಷ್ಯವೃತ್ತಿಯ ಪರ್ಯಾಯವನ್ನು ನಮಗೆ ಆರಿಸಲು ಬರುವದು. ಕೆಲವು ಶಿಷ್ಯವೃತ್ತಿ ಕುರಿತು ಮಾಹಿತಿಯನ್ನು ಕೆಳಗೆ ಕೊಡಲಾಗಿದೆ. ಆದರೆ ಕೆಳಗಿನ ಮಾಹಿತಿಯಲ್ಲಿ ಬದಲಾವಣೆಯಾಗಬಹುದು ಆ ಸಂದರ್ಭದಲ್ಲಿಯ ಹೊಸದಾದ ಸಂಕೇತ ಸ್ಥಳದ ಮೇಲಿಂದ ಮಾಹಿತಿ ಪಡೆಯಿರಿ.

1. ಗುಣವಂತ ಶಾಲೆಯ ವಿದ್ಯಾರ್ಥಿಗಳಿಗಾಗಿ 'ಎನ್‌ಸಿಇಆರ್‌ಟಿ' ಶಿಷ್ಯವೃತ್ತಿ
   ಹೆಚ್ಚಿನ ಮಾಹಿತಿಗಾಗಿ www.ncert.nic.in ಈ ಸಂಕೇತಸ್ಥಳಕ್ಕೆ ಭೆಟ್ಟಿಯಾಗಿರಿ.
2. ಎಸ್‌ಐಎನ್ ಯುಥ್ ಸ್ಕಾಲರಶಿಪ್
   ಹೆಚ್ಚಿನ ಮಾಹಿತಿಗಾಗಿ www.sia-youth-scholarships.html ಈ ಸಂಕೇತಸ್ಥಳಕ್ಕೆ ಭೆಟ್ಟಿಯಾಗಿರಿ.
3. ಕಿಶೋರ್ ವೈಜ್ಞಾನಿಕ ಪ್ರೋತ್ಸಾಹನ ಯೋಜನೆ
   ಹೆಚ್ಚಿನ ಮಾಹಿತಿಗಾಗಿ http://kvpy.iisc.ernet.in ಈ ಸಂಕೇತಸ್ಥಳಕ್ಕೆ ಭೆಟ್ಟಿಯಾಗಿರಿ.
4. ಮಹಿಂದ್ರಾ ಅಖಿಲ ಭಾರತೀಯ ಗುಣವತ್ತಾ ಶಿಷ್ಯವೃತ್ತಿ
   ಹೆಚ್ಚಿನ ಮಾಹಿತಿಗಾಗಿ www.kcmet.org ಈ ಸಂಕೇತಸ್ಥಳಕ್ಕೆ ಭೆಟ್ಟಿಯಾಗಿರಿ.
5. ತಂತ್ರಶಿಕ್ಷಣ ಅಭ್ಯಾಸಕ್ರಮದ ವಿದ್ಯಾರ್ಥಿಗಳಿಗಾಗಿ ಶಿಷ್ಯವೃತ್ತಿ
   ಹೆಚ್ಚಿನ ಮಾಹಿತಿಗಾಗಿ www.aicte-india.org ಈ ಸಂಕೇತಸ್ಥಳಕ್ಕೆ ಭೆಟ್ಟಿಯಾಗಿರಿ.
6. ಹತ್ತನೆನಂತರ ಗುಣವತ್ತತೆ ಶಿಷ್ಯವೃತ್ತಿ
   ಹೆಚ್ಚಿನ ಮಾಹಿತಿಗಾಗಿ ತಮ್ಮ ಮಹಾವಿದ್ಯಾಲಯದೊಂದಿಗೆ ಸಂಪರ್ಕ ಬೆಳೆಸಿರಿ.
7. 'ಜಿಆಯ್‌ಆಯ್‌ಎಸ್'ದ ಸಿ.ವ್ಹಿ.ರಾಮನ ಶಿಷ್ಯವೃತ್ತಿ
   ಹೆಚ್ಚಿನ ಮಾಹಿತಿಗಾಗಿ www.giisscholarship.org ಈ ಸಂಕೇತಸ್ಥಳಕ್ಕೆ ಭೆಟ್ಟಿಯಾಗಿರಿ.
8. ರಾಜರ್ಷಿ ಛತ್ರಪತಿ ಶಾಹು ಮಾಹಾರಾಜ ಶಿಕ್ಷಣ ಶುಲ್ಕ ಪ್ರತಿಪೂರ್ತಿ ಯೋಜನೆ
   https://dtemaharashtra.gov.in
   https://mahaeschol.maharashtra.gov.in
9. ಡಾ. ಪಂಜಾಬ್‌ರಾವ್ ದೇಶಮುಖ ವಸತಿಗೃಹ ನಿರ್ವಾಹ ಭತ್ತಾ ಯೋಜನೆ
   https://mahaeschol.maharashtra.gov.in
10. ತಂತ್ರಶಿಕ್ಷಣ ಅಭ್ಯಾಸಕ್ರಮದ ಹುಡುಗಿಯರಿಗಾಗಿ ಪ್ರಗತಿ ಶಿಷ್ಯವೃತ್ತಿ
    ಅಧಿಕ ಮಾಹಿತಿಗಾಗಿ www.aicte-india.org ಈ ಸಂಕೇತಸ್ಥಳಕ್ಕೆ ಭೆಟ್ಟಿಯಾಗಿರಿ.
11. ಇಂಡಿಯನ್ ಆಯಿಲ್ ಸ್ಪೋರ್ಟ್ಸ್ ಸ್ಕಾಲರಶಿಪ
    ಹೆಚ್ಚಿನ ಮಾಹಿತಿಗಾಗಿ www.iocl.com ಈ ಸಂಕೇತ ಸ್ಥಳಕ್ಕೆ ಭೇಟ್ಟಿಯಾಗಿರಿ.
12. ವ್ಯವಸಾಯಿಕ ಅಭ್ಯಾಸಕ್ರಮಕ್ಕಾಗಿ ಅಲ್ಪಸಂಖ್ಯಾಕರಿಗಾಗಿ ವಿಶೇಷ ಶಿಷ್ಯವೃತ್ತಿ
    https://dtemaharashtra.gov.in
13. ಕೇಂದ್ರಸರಕಾರದ ಮಹಾರಾಷ್ಟ್ರದಲ್ಲಿಯ ಅಲ್ಪಸಂಖ್ಯಾಕ ವಿದ್ಯಾರ್ಥಿಗಳಿಗಾಗಿ ಶಿಷ್ಯವೃತ್ತಿ
    ಹೆಚ್ಚಿನ ಮಾಹಿತಿಗಾಗಿ www.momascholarship.gov.in ಈ ಸಂಕೇತಸ್ಥಳಕ್ಕೆ ಭೆಟ್ಟಿಯಾಗಿರಿ.

14. ಅಲ್ಪಸಂಖ್ಯಾಕ ಹುಡುಗಿಯರಿಗಾಗಿ ಮೌಲಾನಾ ಆಝಾದ್ ರಾಷ್ಟ್ರೀಯ ಶಿಷ್ಯವೃತ್ತಿ

ಹೆಚ್ಚಿನ ಮಾಹಿತಿಗಾಗಿwww.maef.nic.in ಈ ಸಂಕೇತಸ್ಥಳಕ್ಕೆ ಭೇಟಿಯಾಗಿರಿ.

15. ದಿವ್ಯಾಂಗರಿಗಾಗಿ ಹತ್ತನೇನಂತರದ ಶಿಷ್ಯವೃತ್ತಿ

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪರಿಷದ್ ಸಮಾಜ ಕಲ್ಯಾಣ ವಿಭಾಗದ ಕಡೆಗೆ ಸಂಪರ್ಕಿಸಿರಿ.

16. ಮಾಜಿ ಸೈನಿಕರ ಗುಣವಂತ ಪಾಲ್ಯರಿಗಾಗಿ ಶಿಷ್ಯವೃತ್ತಿ

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸೈನಿಕ ಕಲ್ಯಾಣ ಅಧಿಕಾರಿ ಕಾರ್ಯಾಲಯಕ್ಕೆ ಸಂಪರ್ಕಿಸಿರಿ.

17. ಮಾಜಿ ಸೈನಿಕರ ನಿರಾಧಾರ ಪಾಲ್ಯರಿಗಾಗಿ ಶಿಷ್ಯವೃತ್ತಿ

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸೈನಿಕ ಕಲ್ಯಾಣ ಅಧಿಕಾರಿ ಕಾರ್ಯಾಲಯಕ್ಕೆ ಸಂಪರ್ಕಿಸಿರಿ.

15. ಇತರ ಶೋಧಿಸಿರಿ

## 3. ಹನ್ನೊಂದನೇ ಪ್ರವೇಶ ಪ್ರಕ್ರಿಯೆಯಲ್ಲಿಯ ಅಡಚಣಿಗಳು

ಅನೇಕವೇಳೆಗೆ ಅಂಕಗಳು ಚನ್ನಾಗಿದ್ದರೂ ಸಹ ಯೋಗ್ಯವಾದ ಕಾಗದ ಪತ್ರಗಳು ಇಲ್ಲದೇ ಇದ್ದುದರಿಂದ ಹನ್ನೊಂದನೆ ವರ್ಗದಲ್ಲಿ ಪ್ರವೇಶ ಪಡೆಯುವಾಗ ಅಡಚಣಿಗಳು ಉದ್ಭವಿಸುವವು. ಇದಕ್ಕಾಗಿ ಹತ್ತನೇ ಪರೀಕ್ಷೆ ಯಾದ ಕೂಡಲೇ ಸ್ವಂತದ ಒಂದು ಪ್ರವೇಶ ಪ್ರಕ್ರಿಯೆಯ ಫಾಯಿಲ್ ತಯ್ಯಾರು ಮಾಡಲು ಪ್ರಾರಂಭಿಸಬೇಕು ಅದರಲ್ಲಿ

### ತೆರೆದಿಟ್ಟ (ಮುಕ್ತ) ವರ್ಗಕ್ಕಾಗಿ

ಮೂಲ ಗುಣಪತ್ರಿಕೆ (ಮ್ಯಾರ್ಕ್ಸಕಾರ್ಡ್) (ಹತ್ತನೆ ಇಯತ್ತೆ ಇಲ್ಲವೆ ಸಮಕಕ್ಷ)

ಶಾಲೆಬಿಟ್ಟ ಮೂಲ ದಾಖಲೆ (L.C), ಆಧಾರ ಕಾರ್ಡ

### ವೈಧಾನಿಕ ಆರಕ್ಷಣೆ

(SC/ST/VJ-A/NT-B/NT-C/NT-D/OBC/SBC)

ಮೂಲ ಗುಣಪತ್ರಿಕೆ (ಹತ್ತನೆ ಇಯತ್ತೆ ಇಲ್ಲವೆ ಸಮಕಕ್ಷ)

ಶಾಲೆ ಬಿಟ್ಟ ಮೂಲ ದಾಖಲೆ

ಜಾತಿಯ ಮೂಲ ದಾಖಲೆ, ಆಧಾರ ಕಾರ್ಡ್

### ವಿಶೇಷ ಆರಕ್ಷಣೆ

ಅ) ಕ್ರೀಡೆ

ಬ) ಕಲಾ ಮತ್ತು ಸಂಸ್ಕೃತಿಕ

ಅ) ಒಂದು ಅಕ್ಟೋಬರ 2016 ಮತ್ತು ಅದರ ನಂತರ ಪುಣೆ ಮತ್ತ ಚಿಂಚವಡ್ ಮಹಾನಗರಪಾಲಿಕಾ ಕ್ಷೇತ್ರದಲ್ಲಿ ಬದಲಿಯಾಗಿ ಬಂದ ರಾಜ್ಯ/ಕೇಂದ್ರ ಸರಕಾರ/ಖಾಸಗಿ ಕ್ಷೇತ್ರದಲ್ಲಿಯ ಕರ್ಮಚಾರಿಗಳ ಪಾಲ್ಯರು

ಡ) ನಿವೃತ್ತ-ಈಗಿನ ಸೈನಿಕರ ಮಕ್ಕಳು

ಇ) ಸ್ವಾತಂತ್ರ್ಯ ಸೈನಿಕರ ಮಕ್ಕಳು

ಫ) ದಿವ್ಯಾಂಗ ವಿದ್ಯಾರ್ಥಿ

ಗ) ಪ್ರಕಲ್ಪಗ್ರಸ್ತ ಪ್ರಮಾಣಪತ್ರ

ಹ) ಭೂಕಂಪಗ್ರಸ್ತ ಪ್ರಮಾಣಪತ್ರ

ಮೂಲ ಗುಣಪತ್ರಿಕೆ (ಹತ್ತನೇ ಮತ್ತು ಸಮಕಕ್ಷ)
ಶಾಲೆ ಬಿಟ್ಟ ಮೂಲ ದಾಖಲೆ, ಆಧಾರ ಕಾರ್ಡ್
ವಿಶೇಷ ಆರಕ್ಷಣೆಯ ಪ್ರಮಾಣಪತ್ರ

FA7PB4

**ಇತರ ಇನ್ನೂ ಆವಶ್ಯಕ ಕಾಗದ ಪತ್ರಗಳು**

ಉತ್ಪನ್ನದ ದಾಖಲೆ
ಆದಿವಾಸಿ ದಾಖಲೆ, ಆಧಾರ ಕಾರ್ಡ್
ಜಾತಿಯ ವೈಲಿಡಿಟಿ ದಾಖಲೆ
ನಾನ್ ಕ್ರಿಮಿಲೇಯರ್ ದಾಖಲೆ
ರಹಿವಾಸಿ ದಾಖಲೆ
ರಾಷ್ಟ್ರೀಯತ್ವದ ದಾಖಲೆ ಮುಂತಾದವುಗಳು.
(ಹೊಸ ಮಾದರಿಯನ್ನು ಮಾಹಿತಿ ಸಂಬಂಧಿತ ಪ್ರವೇಶ ಪ್ರಕ್ರಿಯಾ ಕೇಂದ್ರ ಶಾಲೆ/ಮಹಾವಿದ್ಯಾಲಯಗಳಿಂದ ಪಡೆದು ಕೊಳ್ಳಬೇಕು)

## ಮೂಲ್ಯ ಮಾಪನ (ಭಾರಾಂಶ 15%)

| ಒರೆಗಲ್ಲು | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಅಂಕಗಳು |
|---|---|---|---|---|
| SMART ಧ್ಯೇಯ ವಿಧಾನ | ಕೊಟ್ಟ ಐದು ಒರೆಗಲ್ಲಿನ ಆದಾರದಿಂದ 1,3,5,10 ವರ್ಷಗಳ ನಂತರದ ಧ್ಯೇಯ ವಿಧಾನಗಳನ್ನು ನಿಶ್ಚಿತವಾಗಿ ತಯ್ಯಾರಿ ಮಾಡಿದೆ. | 1,3,5,10 ವರ್ಷಗಳ ನಂತರದ ಧ್ಯೇಯ ವಿಧಾನಗಳನ್ನು ತಯಾರಿಸಲಾಗಿದೆ ಆದರೆ ಆಳವಾಗಿ ವಿಚಾರ ಮಾಡಿಲ್ಲ. | ಹೆಚ್ಚಿಗೆ ವಿಚಾರ ಮಾಡದೇ ಅಂದಾಜಿನಂತೆ ಧ್ಯೇಯ ವಿಧಾನಗಳನ್ನು ಪೂರ್ಣ ಮಾಡಲಾಗಿದೆ. | |
| ಧ್ಯೇಯ ವಿಧಾದನಂತೆ ಕೃತಿ | ಧ್ಯೇಯ ವಿಧಾನ ಪ್ರಕಾರ ಕೃತಿರೂಪರೇಷೆ ಮಾಡಿ ಅದಕ್ಕನುಸರಿಸಿ ಕೃತಿ ಮಾಡುತ್ತ ಇರುವರು. ಮತ್ತು ಅವುಗಳ ನೋಂದಿ ಇಡಲಾಗುತ್ತದೆ. | ಧ್ಯೇಯ ವಿಧಾನಗಳಂತೆ ಕೃತಿರೂಪರೇಷೆ ಮಾಡಲಾಗಿದೆ. ಆದರೆ ಅದನ್ನು ಅನುಸರಿಸಿ ಕೃತಿಯನ್ನು ನೋಂದಾಯಿಸಿಲ್ಲ. | ಕೃತಿರೂಪರೇಷೆಯನ್ನು ಮಾಡಿಲ್ಲ. | |
| ವರ್ಗಕೃತಿಯಲ್ಲಿ ಸಹಭಾಗಿ | ಪಾಠದಲ್ಲಿಯ ಎಲ್ಲ ಕೃತಿಗಳನ್ನು ಉತ್ಸಾಹದಿಂದ ಪೂರ್ಣಮಾಡಲಾಗಿದೆ (ಸಕ್ರಿಯ ಸಹಭಾಗ) ಎಲ್ಲ ವರ್ಷಕೃತಿಗಳನ್ನು ನೋಟಬುಕ್‌ದಲ್ಲಿ ಪೂರ್ಣ ಮಾಡಲಾಗಿದೆ. | ಪಾಠದಲ್ಲಿಯ ಎಲ್ಲ ಕೃತಿಗಳನ್ನು ಪೂರ್ಣ ಮಾಡಲಾಗಿದೆ. | ಎರಡನೆಯ ವಿದ್ಯಾರ್ಥಿಯ ನೋಟಬುಕ್ ನೋಡಿ ನೋಟಬುಕದಲ್ಲಿ ಕೃತಿ ಪೂರ್ಣ ಮಾಡಲಾಗಿದೆ. | |


ಪ್ರತಾಪ ಮತ್ತು ನಿಶಾ ಹಾಡಿನ ಪ್ರ್ಯಾಕ್ಟಿಸ್ ಮಾಡುತ್ತಿರುವರು ರಾಘವ ಇದನ್ನು ಕೇಳಿ ಒಳಗೆ ಬರುವನು
ಇದೇನು? ಈ ಹಾಡನ್ನು ಹಾಡುವ ವರಿದ್ದೀರಿ ನೀವು ಸ್ನೇಹಸಮ್ಮೆಲನದಲ್ಲಿ?
ಏಕೆ? ಇದರಲ್ಲಿ ಏನು ತಪ್ಪಿದೆ?
ಏನ ಬೇರೆ ರಾಜ್ಯದ ಈ ಹಾಡು.. ಮಹಾರಾಷ್ಟ್ರದಲ್ಲಿಯ ಯಾವುದೇ ಲೋಕಗೀತೆ ಏಕೆ ಅನ್ನಬಾರದು? ನಿಮಗೆ ಮಹಾರಾಷ್ಟ್ರದ ಅಭಿಮಾನ ಇಲ್ಲವೆ?
ಅಭಿಮಾನ ಇದೆ ರಾಘವ.. ಅದರೆ ಕಲೆಗೆ 'ತಮ್ಮ', 'ಪರಕೀಯ' ವೆಂಬ ಮುದ್ರೆ ಒತ್ತಿ ಅದರ ತುಂಡು ಮಾಡಿ ನಾವು ನಮ್ಮ ಆಯುಷ್ಯದಲ್ಲಿಯ ಎಷ್ಟೋಂದು ಸುಂದರ ಅನುಭವಗಳನ್ನು ಕಳೆದು ಕೊಳ್ಳುತೇವೆ.
ಹೌದಲ್ಲಾ ಇತರ ರಾಜ್ಯಗಳಲ್ಲಿ ಸಂಗೀತದೊಂದಿಗೆ ಹೊಂದಿಕೊಳ್ಳು ವದೆಂದರೆ ಒಂದು ರೀತಿಯಿಂದ ಅಲ್ಲಿಯ ಜನರೊಂದಿಗೆ, ಅವರ ಜೀವನ ದೊಂದಿಗೆ ಹೊಂದಿಕೊಳ್ಳುವದು
ನೀವನ್ನುವದು ನನಗೆ ಹಿಡಿಸಿದೆ, ಆದರೆ ಅದರ ಅರ್ಥ ನಮ್ಮ ಸಂಗೀತದಲ್ಲಿ ಏನೋ ಕಡಿಮೆ ಇದೆ ಎಂದಾಗುವದಿಲ್ಲವೆ.
ಒಟ್ಟಾರೆ ಇಲ್ಲ... ಇತರರ ಕಲೆಯೊಂದಿಗೆ ಹೊಂದಿಕೊಳ್ಳುವದರಿಂದ ವಿರುದ್ಧವಾಗಿ ನಮಗೆ ನಮ್ಮ ಕಲೆಯು ಹೆಚ್ಚು ಒಳ್ಳೆಯದಾಗಿ ತಿಳಿಯುವದು. ನಾವು ಸಮೃದ್ಧರಾಗುವೆವು.
ನಾನಂತೂ ಅನ್ನುತ್ತೇನೆ... ನಾವು ಕೇವಲ ಭಾರತದಲ್ಲಿಯಷ್ಟೆ ಅಲ್ಲ, ಇತರ ದೇಶಗಳಲ್ಲಿಯ ಸಂಗೀತದೊಂದಿಗೆ ಕೂಡ ಹೊಂದಿಕೊಳ್ಳಬೇಕು! ಏನು... ಹಿಡಿಸುವುದೆ?

# 6 ನಾನು ಮತ್ತು ಪ್ರಯೋಗ ಕಲೆ



“ಎಲ್ಲಿ ಶಬ್ದಗಳು ನಿಲ್ಲುತ್ತವೆಯೋ, ಅಲ್ಲಿಂದ ಕಲೆ ಆರಂಭವಾಗುತ್ತದೆ.”

## ಉದ್ದೇಶಗಳು:

1. ನಾಟಕವನ್ನು ಮನೋರಂಜಕವನ್ನಾಗಿ ಮಾಡುವ ಕೆಲವು ಘಟಕಗಳ ಹೆಸರು ವಿದ್ಯಾರ್ಥಿಗಳಿಗೆ ತಿಳಿಯುವದು ಮತ್ತು ಅವುಗಳ ಮಹತ್ವವನ್ನು ಸ್ವಂತದ ಶಬ್ದಗಳಲ್ಲಿ ಮಂಡಿಸಲು ಬರುವದು.
2. ಮಾನವೇತರ ಪಾತ್ರಗಳನ್ನು ನಾಟಕದಲ್ಲಿ ಹೇಗೆ ಶೃಂಗರಿಸಲು ಬರಬಹುದು ಈ ಕುರಿತು ಸ್ವಂತದ ಕಲ್ಪಕತೆ ಉಪಯೋಗಿಸಲು ಅವಕಾಶ ದೊರೆಯುವದು.
3. ಒಂದೇ ಸಂವಾದವು ವಿವಿಧ ಸಂದರ್ಭದಲ್ಲಿ, ವಿವಿಧ ಪ್ರಸಂಗಗಳಲ್ಲಿ ಆಗಬಹುದು ಇದನ್ನು ತಿಳಿದುಕೊಳ್ಳುವದು ಮತ್ತು ಕೆಲವು ಲೋಕನೃತ್ಯಗಳ ಪರಿಚಯ ಮಾಡುವದು.
4. ಸೂತ್ರ ಸಂಚಾಲನೆ ಕಲೆಯ ಮತ್ತು ಕೆಲವು ಲೋಕನೃತ್ಯಗಳ ಪರಿಚಯ ಮಾಡುವದು.
5. ನೃತ್ಯದ ಮಾನವಿ ಜೀವನದಲ್ಲಿಯ ಮಹತ್ವವನ್ನು ತಮ್ಮ ಶಬ್ದಗಳಲ್ಲಿ ಹೇಳಲು ಬರುವದು.
6. ಅವಕಾಶ, ಕಾಲ ಮತ್ತು ಹುರುಪು ಈ ಮೂರು ಘಟಕಗಳ ಉಪಯೋಗ ನೃತ್ಯದಲ್ಲಿ ಮಾಡಲು ಬರುವದು.
7. ಭಾರತೀಯ ಪ್ರಾಂತಗಳಲ್ಲಿ ಪ್ರಚಲಿತವಿದ್ದ ವಾದ್ಯಗಳ ಪರಿಚಯ ವಾಗುವದು ಮತ್ತು ಅವುಗಳಲ್ಲಿಯ ವಿವಿಧತೆ ತಿಳಿಯುವದು.
8. ತಮಗೆ ಹಿಡಿಸಿದ ಸಂಗೀತವು ನಿಶ್ಚಿತವಾಗಿ ಏಕೆ ಹಿಡಿಸಿತು ಎಂಬುದರ ವಿಶ್ಲೇಷಣೆಯನ್ನು ಸ್ವಂತದ ಶಬ್ದಗಳಲ್ಲಿ ಮಾಡಲು ಬರುವದು.

ಹೋದ ವರ್ಷ ಪ್ರಯೋಗ ಜೀವಿ ಕಲೆಗಳ ಕುರಿತು ಸ್ವಲ್ಪದರಲ್ಲಿ ಮಾಹಿತಿಯನ್ನು ಪಡೆದು ಕೊಂಡಿದ್ದೇವೆ. ಈ ವರ್ಷನಾವು ಅವುಗಳ ಕುರಿತು ಹೆಚ್ಚುವಿಸ್ತಾರದಿಂದ ತಿಳಿದು ಕೊಳ್ಳೋಣ.

### ನಾಟ್ಯ

### ಸ್ವಲ್ಪ ನೆನಪಿಸಿ ನೋಡಿ

1) ಕೆಳಗಿನ ಅಂಶಗಳನ್ನು ನಾಟಕದಲ್ಲಿ ರೂಪಾಂತರ ಮಾಡುವದಿದ್ದರೆ ಅದರಲ್ಲಿ ಏನು ಕಡಿಮೆ ಇದೆ ಎಂದು ನಿಮಗೆ ಅನಿಸುವದು?

"ಒಬ್ಬ ರೈತನಿದ್ದನು. ಅವನು ಬಹಳ ಕಠಿಣ ಕೆಲಸವನ್ನು ಮಾಡುತ್ತಿದ್ದನು. ಮತ್ತು ತನ್ನ ಕುಟುಂಬದ ಪಾಲನೆ ಪೋಷಣೆ ಮಾಡುತ್ತಿದ್ದನು ಮೆಲ್ಲಮೆಲ್ಲನೆ ಅವನ ಮಕ್ಕಳು ಕಲಿಯ ತೊಡಗಿದರು. ದೊಡ್ಡವರಾದರು, ಸ್ವಂತದ ಕಾಲಿನ ಮೇಲೆ ನಿಂತರು ಎಲ್ಲ ಮಕ್ಕಳು ಒಳ್ಳೆಯವರದಾದರು. ಮಕ್ಕಳು ತಮ್ಮ ತಂದೆತಾಯಿಗೆ ಬಹಳ ಪ್ರೀತಿಯನ್ನು ತೋರಿಸುತ್ತಿದ್ದರು. ಈ ರೀತಿ ಅವರು ಆನಂದದಿಂದ ಇರುತ್ತಿದ್ದರು."

2) ಯಾವುದೇ ವ್ಯಕ್ತಿರೇಖೆ ನಿಲ್ಲಿಸಲು ಯಾವ ಘಟಕಗಳ ಕಡೆಗೆ ಗಮನ ಕೊಡಬೇಕಾಗುವದು? ಉದಾ. ಒಬ್ಬ ಬಡ ಮುದುಕಿ.

ಈ ಹಿಂದೆ ಕಲಿತ ನಾಟ್ಯ ಸಂದರ್ಭದಲ್ಲಿಯ ಸಂಕಲ್ಪನೆಯ ಆಧಾರದಿಂದ ವಿಚಾರ ಮಾಡುವಂತೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿರಿ. ನಾಟಕದಲ್ಲಿಯ ಸಂಘರ್ಷ, ವ್ಯಕ್ತಿರೇಖೆಯ ಕುರಿತು ವಿಚಾರ, ವೇಷಭೂಷೆ, ಚಲನ ವಲನೆ, ಧ್ವನಿ, ಶರೀರದ ಚಲನ ವಲನ ಈ ಎಲ್ಲ ಸಂಕಲ್ಪನೆಗಳು ಪುನರ್ನಿರಿಕ್ಷಣೆ ಮಾಡಿರಿ.

**ನಾಟಕವನ್ನು ಮನೋರಂಜಕವಾಗಿ ಮಾಡಬಹುದಾದ ಘಟಕಗಳು.**

### 1. ಪರದೆ (ನೇಪಥ್ಯ):

ನಾಟಕ ಎಲ್ಲಿ ಘಟಿಸುತ್ತದೆ ಎಂಬುದನ್ನು ತೋರಿಸಲು ಇಲ್ಲವೆ ನಾಟದಲ್ಲಿಯ ಪ್ರಸಂಗವು ಹೆಚ್ಚು ನಿಜವೆನಿಸಲು ಮತ್ತು ಪ್ರಭಾವಶಾಲಿಯಾಗಲು ಮಂಚದ ಮೇಲೆ ಯಾವ ರಚನೆಯನ್ನು ಮಾಡಲಾಗುತ್ತದೆ; ಅದಕ್ಕೆ 'ನಾಟಕದ ಸೆಟ' ಎಂಬ ರೂಢಿಯಲ್ಲಿಯ ಶಬ್ದವೂ ಇದೆ.




### 2. ವೇಶಭೂಷಣ:



ನಾಟಕದಲ್ಲಿಯ ಪಾತ್ರಗಳು ಯಾರದಿವೆ, ಯಾವ ಕಾಲದಲ್ಲಿಯದಿವೆ, ಅವರ ವೈಶಿಷ್ಟ್ಯಗಳು, ನಾಟಕ ಸಾದರ ಪಡಿಸುವ ಶೈಲಿ ಇವೆಲ್ಲಗಳ ವಿಚಾರ ಮಾಡಿ ನಾಟಕದಲ್ಲಿ ಪಾತ್ರಗಳ ವೇಶಭೂಷೆ (ಪೋಷಾಖು) ನಿರ್ಧರಿಸಲಾಗುವದು. ಉದಾ. ಐತಿಹಾಸಿಕ ನಾಟಕ ವಿದ್ದರೆ ಅದಕ್ಕೆ ಶೋಭಿಸುವಂಥ ವೇಶಭೂಷೆ ಮಾಡುವದು.

### 3. ರಂಗಭೂಷಣ:

ಯಾವುದೇ ನಾಟದಲ್ಲಿಯ ಪಾತ್ರಗಳ ವೇಶಭೂಷೆಯ ಹೇಗೆ ವಿಚಾರ ಮಾಡಲಾಗುತ್ತದೆಯೋ ಹಾಗೆ ಪಾತ್ರಗಳ ವಯಸ್ಸು ಅವರ ವೈಶಿಷ್ಟ್ಯಗಳನ್ನು ಗಮನದಲ್ಲಿಟ್ಟು ಕೊಂಡು ಅವರ ಮುಖದಮೇಲೆ ಸೌಂದರ್ಯ ಪ್ರಸಾಧನ ಮತ್ತು ಬಣ್ಣ ಹಚ್ಚಲಾಗುವದು. ಹಾಗೆಯೆ ರಂಗದ ಮೇಲಿನ ದೀಪಗಳ ಪ್ರಕಾಶದಲ್ಲಿ ಕಲಾಕಾರರ ಭಾವ ಸ್ಪಷ್ಟವಾಗಿ ಎದ್ದು ಕಾಣಿಸಬೇಕೆಂದು ಸಹ ಮಾಡಲಾಗುತ್ತದೆ. ಇದಕ್ಕೆ ರೂಢಿಯಲ್ಲಿದ್ದ ಶಬ್ದ 'ಮೇಕಅಪ್' ಮಾಡುವದು ಎಂದಿದೆ. ಉದಾ. ಯಾವುದೇ ವಯಸ್ಕರ (ವಯಸ್ಸಾದ) ವ್ಯಕ್ತಿ ತೋರಿಸುವದಿದ್ದರೆ, ಬಿಳಿ ಕೂದಲು ಮಾಡುವದು. ಇದ್ದಲಿಯ ಸಹಾಯದಿಂದ ಕಣ್ಣಿನ ಕೆಳಗೆ ಕಪ್ಪು ವರ್ತುಲಗಳನ್ನು ನಿರ್ಮಾಣ ಮಾಡುವದು ಮುಂತಾದವುಗಳು.



## 4. ಬೆಳಕು ಯೋಜನೆ:



ಮಂಚದ ಮೇಲಿನ ಯಾವುದೇ ಭಾಗದ ಕಡೆಗೆ ನಮ್ಮ ಲಕ್ಷವನ್ನು ಸೆಳೆಯಲು, ಯಾವುದೇ ಸ್ಥಳ ತೋರಿಸಲು, ಯಾವುದೇ ಘಟನೆ ತೋರಿಸಲು ವಿಶಿಷ್ಟ ಪ್ರಕಾರದ ದೀಪಗಳು ಒಮ್ಮೊಮ್ಮೆ ಮಂಚದ ಮೇಲಿನ ಭಾಗದಲ್ಲಿ ಕಟ್ಟಿದ್ದು ಇರುತ್ತವೆ. ಒಮ್ಮೊಮ್ಮೆ ಮಂಚದ ಬದಿಗೆ, ಒಮ್ಮೊಮ್ಮೆ ಕೆಳಗೆ ಹಚ್ಚಿರುವರು. ಉದಾ. ರಾತ್ರಿಯ ವೇಳೆ ತೋರಿಸಲು ಬಹಳ ಸಲ ನೀಲಿ ಪ್ರಕಾಶವನ್ನು ಉಪಯೋಗಿಸುವ ಪದ್ಧತಿ. ಇದೆ ಪ್ರತಿಯೊಂದು ದೀಪ ಬೇಕಾದಾಗ, ಹಚ್ಚುವದು ಆರಿಸುವದು. ಒಬ್ಬ ವ್ಯಕ್ತಿಯ ಕಡೆಗೆ ಒಪ್ಪಿಸಿರುವರು.

## 5. ಹಿನ್ನೆಲೆಗಾಯನ:



ನಾಟಕದ ಪರಿಣಾಮವನ್ನು ಹೆಚ್ಚಿಸಲು ಬಹಳ ವೇಳೆ ಸಂಗೀತದ ಉಪಯೋಗ ಮಾಡಲಾಗುವದು. ಈ ಸಂಗೀತವು ಒಮ್ಮೆ ಪಾತ್ರಗಳ ಸಂವಾದದ ಹಿಂದೇ ಸಾವಕಾಶವಾಗಿ ನಡೆಯುತ್ತಿರುತ್ತದೆ. ಒಮ್ಮೊಮ್ಮೆ ಯಾವುದೇ ಸಂವಾದವಿದ್ದರೂ ದೊಡ್ಡ ಸ್ವರದಲ್ಲಿ ನಡೆಯುತ್ತಿದೆ. ಉದಾ. ಜೋರಾದ ಗಾಳಿ, ಬಿರುಗಾಳಿಯಲ್ಲಿ ಒಣಗಿದ ಎಲೆಗಳು ಹಾರುವ ಸಪ್ಪಳ ಕೇಳಿಸಿದರೆ, ಬಿರುಗಾಳಿಯ ಭಾಸ ಹೆಚ್ಚು ಪರಿಣಾಮಕಾರಕವಾಗಿ ನಿರ್ಮಾಣ ಮಾಡಲು ಬರುವದು.

### ನಾಟಕದಲ್ಲಿಯ ಕಲ್ಪಕತೆ

ಸಾಮಾನ್ಯವಾಗಿ ಯಾವುದೇ ಒಂದು ನಾಟಕ ಪ್ರಾರಂಭಿಸಲು ಅನೇಕ ಸಂಗತಿಗಳ ವಿಚಾರ ಮಾಡಲಾಗುತ್ತದೆ. ನಾಟಕದಲ್ಲಿಯ ಪ್ರಸಂಗವು ಎಲ್ಲಿ ನಡೆಯುತ್ತಿದೆ, ನಾಟಕ ಯಾವ ಕಾಲದಿದೆ, ಯಾವುದೇ ಪ್ರಸಂಗವು ದಿನದ ಕಾಲದಲ್ಲಿ ಘಟಿಸುತ್ತಿದೆ ಮುಂತಾದವುಗಳು. ಸ್ಥಳ, ಕಾಲ, ವೇಳೆ ಮುಂತಾದವುಗಳನ್ನು ತೋರಿಸಲು ವಿವಿಧ ಸಂಗತಿಗಳ ಉಪಯೋಗವಾಗುವದು. ಆದರಲ್ಲಿಯ ಕೆಲವು ಸಂಗತಿಗಳನ್ನು ನಾವು ಸ್ವಲ್ಪದರಲ್ಲಿ ನೋಡೋಣ. ಆದರೆ ಗಮನದಲ್ಲಿಟ್ಟುಕೊಳ್ಳುವ ಅಂಶವೆಂದರೆ, ನಾಟಕ ಪ್ರಾರಂಭಿಸಲು ಸ್ಥಳ, ಕಾಲ, ವೇಳೆ ಮುಂತಾದವುಗಳನ್ನು ತೋರಿಸಲೇಬೇಕೆಂಬ ಬಂಧನ ವಿರುವದಿಲ್ಲ.



## ವಿವಿಧ ಸ್ಥಳಗಳನ್ನು ತೋರಿಸುವದು:

ಬಹಳ ಸಲ ಯಾವುದೇ ನಾಟಕದಲ್ಲಿಯ ಘಟನೆಗಳು ಬೇರೆ ಬೇರೆ ಸ್ಥಳದಲ್ಲಿ ಘಟಿಸುತ್ತಿರುತ್ತವೆ. ಇವೆಲ್ಲ ಸ್ಥಳಗಳನ್ನು ತೋರಿಸಲೇ ಬೇಕು ಎಂದೇನಿಲ್ಲ, ಆದರೆ ಅದನ್ನು ತೋರಿಸುವದೇ ಆದರೆ, ಅದಕ್ಕಾಗಿ ಕೆಲವು ಕಲ್ಪನೆಗಳನ್ನು ಉಪಯೋಗಿಸಲು ಬರುವವು.

1. ಬೇರೆ ಬೇರೆ ಸ್ಥಳಗಳಿಗಾಗಿ ಮಂಚದ ಮೇಲಿನ ಬೇರೆ ಬೇರೆ ಭಾಗ ಕಾಯ್ದಿರಿಸುವದು. ಉದಾ. ತಿಳಿಯಿರಿ ಮನೆ ಮತ್ತು ಹಾಟೇಲ್ ಹೀಗೆ ಎರಡು ಸ್ಥಳಗಳಿದ್ದರೆ ರಂಗಮಂಚದ ಒಂದು ಮೂಲೆ ಮನೆಯ ಹಾಗೆ ಮತ್ತು ಇನ್ನೊಂದು ಮೂಲೆ ಹಾಟೇಲದ ಹಾಗೆ ಕಾಣಬಹುದು ಹೀಗೆ ಶೃಂಗರಿಸಬೇಕು.
2. ಬೇರೆಬೇರೆ ಸ್ಥಳಗಳನ್ನು ತೋರಿಸಲು ರಂಗಮಂಚದ ಭಾಗವನ್ನು ಕಾಯ್ದಿರಿಸದೆ ಮಂಚದ ಮೇಲಿನ ಅದೇ ಅದೇ ಸ್ಥಳದಲ್ಲಿ ತಾತ್ಪೂರ್ತಿಕವಾಗಿ ಸಾಮಾನುಗಳು, ಸ್ಥಳವನ್ನು ತೋರಿಸುವ ಬೋರ್ಡು ಇಡಬೇಕು. ಉದಾ. ಚಿತ್ರದಲ್ಲಿ ನ್ಯಾಯಾಲಯ ತೋರಿಸುವ ಪ್ರಯತ್ನ ಮಾಡಲಾಗಿದೆ.
3. ಯಾವುದೇ ಸಾಮಾನುಗಳು, ಬೋರ್ಡನ್ನು ಉಪಯೋಗಿಸದೆ ಕೇವಲ ಅಭಿನಯದ ಮೂಲಕ, ಹಿನ್ನೆಲೆ ಸಂಗೀತದ ಮೂಲಕ ಯಾವುದೇ ಸ್ಥಳವನ್ನು ತೋರಿಸುವದು ಉದಾ. ಪಾರ್ಕ್‌ದಲ್ಲಿ ಒಬ್ಬ ವ್ಯಕ್ತಿ ಕುಳಿತಿದ್ದಾಳೆ. ಇದನ್ನು ಯಾವುದೇ ಸಾಮಾನುಗಳನ್ನು ಉಪಯೋಗಿಸದೇ ಕೇವಲ ಅವಳ ಅಭಿನಯದಿಂದ ಮತ್ತು ಪಾರ್ಕಿನ ಅಕ್ಕಪಕ್ಕದಲ್ಲಿರುವ ವಿವಿಧ ಸ್ವರಗಳಿಂದ ಉಪಯೋಗಿಸಿ ತೋರಿಸಬೇಕು.



## ಸ್ವಲ್ಪ ಮೋಜು ಮಾಡೋಣ

ಕೆಳಗಿನ ಸ್ಥಳಗಳನ್ನು ನೀವು ನಾಟಕದಲ್ಲಿ ಹೇಗೆ ತೋರಿಸುವಿರಿ?

ಅದಕ್ಕಾಗಿ ಯಾವು-ಯಾವುದರ ಉಪಯೋಗ ಮಾಡುವಿರಿ ಎಂಬುದನ್ನು ವಿವರಿಸಿರಿ.

1. ಮರುಭೂಮಿ
2. ಸಮುದ್ರ ದಂಡೆ
3. ಹೊಲ
4. ಪಟ್ಟಣದಲ್ಲಿಯ ಬಸ್ ಸ್ಟಾಪ್

ವಿದ್ಯಾರ್ಥಿಗಳ ಗುಂಪು ಮಾಡಿ ಅವರಿಗೆ ಒಂದೊಂದು ಸ್ಥಳವನ್ನು ಕೊಡಿರಿ. ಪರದೆ, ಪ್ರಕಾಶಯೋಜನೆ ಮತ್ತು ಹಿನ್ನೆಲೆ ಸಂಗೀತ ಈ ಮೂರು ಅಂಶಗಳ ವಿಚಾರ ಮಾಡಲು ಪ್ರೋತ್ಸಾಹನೆ ಕೊಡಿರಿ.

## ಬೇರೆ ಬೇರೆ ಕಾಲವನ್ನು ತೋರಿಸುವದು

ಬಹಳಸಲ ಯಾವುದೇ ನಾಟಕದಲ್ಲಿಯ ಪ್ರಸಂಗಗಳು ಬೇರೆ ಬೇರೆ ಕಾಲದಲ್ಲಿ ಘಟಿಸುತ್ತವೆ. ಕೆಲವು ಪ್ರಸಂಗಗಳು ಸಧ್ಯಕಾಲದ್ದಿರುತ್ತವೆ. ಮತ್ತು ಕೆಲವು ನೆನಪಿನದಾಗಿರುತ್ತವೆ. ಕೆಲವು ದಿನಗಳ ಮತ್ತು ಕೆಲವು ರಾತ್ರಿಗಳದಿರುವವು. ಕೆಲವು ಒಂದರನಂತರ ಒಂದು ಘಟಿಸುವವು ಬೇರೆ ಬೇರೆ ಕಾಲ ತೋರಿಸುವದಾದರೆ ಅದಕ್ಕಾಗಿ ಕೆಲವು ಕಲ್ಪನೆಗಳನ್ನು ಉಪಯೋಗಿಸಲು ಬರುವವು.




1. ಎರಡು ಪ್ರಸಂಗಗಳಲ್ಲಿ ರಂಗಮಂಚದ ಮೇಲಿನ ಎಲ್ಲ ದೀಪಗಳನ್ನು ಕೆಲವು ಸೆಕಂದ ಆರಿಸಿ ಒಂದು ಅವಕಾಶ ತಗೆದು ಕೊಳ್ಳಲು ಬರುವದು. ಇದಕ್ಕೆ ಬ್ಲ್ಯಾಕ್‌ಆಉಟ್ ಎಂದು ಸಹ ಕರೆಯುವರು.
2. ಕನಸು ಇಲ್ಲವೆ ನೆನಪಿನಲ್ಲಿಯ ಕಾಲವನ್ನು ತೋರಿಸಲು ಒಮ್ಮೊಮ್ಮೆ ಬೇರೆ ಬಣ್ಣದ ಬೆಳಕನ್ನು ರಂಗ ಮಂಚದ ಮೇಲೆ ಹಾಕುವ ಒಂದು ಪದ್ಧತಿಯೂ ಇದೆ.
3. ರಂಗಮಂಚದ ಮೇಲೆ ಎರಡು ಬೇರೆ ಬೇರೆ ಸ್ಥಳಗಳಲ್ಲಿ ಒಟ್ಟಿಗೆ ಎರಡು ಬೇರೆ ಕಾಲದಲ್ಲಿಯ ಪ್ರಸಂಗವನ್ನು ಸರತಿಯಂತೆ ಪ್ರಾರಂಭಿಸುವದು.
4. ಮುಂಜಾನೆಯ ಸಮಯ ತೋರಿಸಲು ಹೆಚ್ಚು ಹಳದಿ ಬೆಳಕು ಮತ್ತು ರಾತ್ರಿಯ ಸಮಯ ತೋರಿಸಲು ಕಡಿಮೆ ಪ್ರಕಾಶ ಮತ್ತು ವಿಶೇಷವಾಗಿ ನೀಲಿ ಬೆಳಕನ್ನು ತೋರಿಸುವದು.

## ಮನುಷ್ಯನ ಹೊರತು ಇತರ ವ್ಯಕ್ತಿರೇಖೆಗಳನ್ನು ಸಾದರಪಡಿಸುವದು



ನಾಟಕದ ವಿಷಯಗಳ ವ್ಯಾಪ್ತಿ ಕೇವಲ ಮಾನವ ಸಂಗತಿಗಳ ವರೆಗೆ ಮಾತ್ರ ಸೀಮಿತವಾಗಿರದೆ ಸಂಘರ್ಷ ಇರುವ ಯಾವುದೇ ಕಥೆಯ ನಾಟ್ಯರೂಪಾಂತರ ಮಾಡಲು ಬರುವದು ಸಾಧ್ಯವಿದೆ. ಮನುಷ್ಯನ ಹೊರತು ಇತರ ವ್ಯಕ್ತಿರೇಖೆ ಸಾದರ ಪಡಿಸಲು ಕೆಳಗಿನ ಕೆಲವು ಮಾರ್ಗಗಳು ಇರಬಹುದು.

1. ಏನೇನೂ ಬೇರೆ ಮಾಡದೆ, ಸಂವಾದದಿಂದ ವ್ಯಕ್ತಿರೇಖೆ ಸ್ಪಷ್ಟವಾಗುವದು.
2. ಪ್ರಾಣಿ, ಪಕ್ಷಿ ಇತ್ಯಾದಿಗಳ ವ್ಯಕ್ತಿರೇಖೆ ಇದ್ದರೆ ಮಧ್ಯದಲ್ಲಿ ಅವುಗಳ ಧ್ವನಿ ತಗೆಯುವದು. ಅವುಗಳ ಹಾಗೆ ಚಲನವಲನೆ, ಶರೀರದ ಚಲನವಲನೆ ಮಾಡುವುದು ಇಲ್ಲವೆ ವೇಶಭೂಷೆಯಿಂದ ಹಾಗೆ ಸೂಚಿಸುವದು.



ಪಂಚತಂತ್ರದಲ್ಲಿಯ ಕಥೆಗಳನ್ನು ನೀವೆಲ್ಲರೂ ಓದಿರಬಹುದು. ಪಂಚತಂತ್ರದಲ್ಲಿಯ ಕತೆ ಮತ್ತು ಇತರ ಕತೆಗಳಲ್ಲಿ ಯಾವ ಅಂತರ ನಿಮಗೆ ಕಾಣಿಸುವದು?

ಯಾವುದೇ ಒಂದು ಕತೆಯನ್ನು ತಗೆದುಕೊಳ್ಳಿರಿ. ನಾವು ಈ ಹಿಂದೇ ನೋಡಿದ ಎಲ್ಲ ಸಂಕಲ್ಪನೆಗಳ ಆಧಾರದಿಂದ ಆ ಕತೆಯ ನಾಟ್ಯೀಕರಣ ಮಾಡಿರಿ. ಪ್ರತಿಯೊಂದು ಗುಂಪು ಒಂದು ಕತೆಯನ್ನು ತಗೆದುಕೊಳ್ಳಬೇಕು. ಗುಂಪಿನಲ್ಲಿಯ ಪ್ರತಿಯೊಬ್ಬನು ರಂಗಮಂಚದ ಮೇಲೆ ಬಂದು ನಾಟಕದಲ್ಲಿ ಯಾವುದಾದರೂ ವ್ಯಕ್ತಿರೇಖೆಯನ್ನು ಸಾದರ ಪಡಿಸುವದು ಬಂಧನಕಾರಕವಾಗಿದೆ. ಆರಿಸಿದ ಗುಂಪಿನಲ್ಲಿಯ ವಿದ್ಯಾರ್ಥಿಗಳಷ್ಟು ಪಾತ್ರಗಳು ಇರದಿದ್ದರೆ ಪಾತ್ರಗಳನ್ನು ಹೆಚ್ಚಿಸಿ ಹಾಕಬಹುದು.

ಪಂಚತ್ರದಲ್ಲಿಯ ಕಥೆಗಳನ್ನು ನೆನಪಿಸಲು ವಿಧ್ಯಾರ್ಥಿಗಳಿಗೆ ಹೇಳಿರಿ. ಅವರು ಓದದೇ ಇದ್ದರೆ ಯಾವ ಕತೆಯಲ್ಲಿ ಮಾನವ ಪಾತ್ರವಿಲ್ಲ ಯಾವ ಪಶುಪಕ್ಷಿಗಳದಿದೆ. ಇಂಥ ಯಾವದಾದರೂ ಕತೆ ನಡೆಯುವದು.

ವಿದ್ಯಾರ್ಥಿಗಳ 6-8 ಜನರ ಗುಂಪು ಮಾಡಿರಿ.

ಪ್ರತಿಯೊಬ್ಬರಿಗೆ ಪಂಚತಂತ್ರದಲ್ಲಿಯ ಒಂದು ಕತೆ ಆರಿಸಲು ಹೇಳಿರಿ. ಅದಕ್ಕಾಗಿ ಅವರಿಗೆ ಪುಸ್ತಕಗಳನ್ನು ದೊರಕಿಸಿ ಕೊಡಿರಿ.

ವಿಧ್ಯಾರ್ಥಿಗಳ ಗುಂಪು ಮಾಡಬೇಕು. ಪ್ರತಿಯೊಂದು ಗುಂಪಿಗೆ ಒಂದೊಂದು ಸಂವಾದವನ್ನು ಹಂಚಿ ಕೊಡಬೇಕು ವಿಧ್ಯಾರ್ಥಿಗಳ ಸಂಖ್ಯೆ ಹೆಚ್ಚಿಗಿದ್ದರೆ, ಅದೇ ಸಂವಾದವನ್ನು ಒಬ್ಬರಿಗಿಂತ ಹೆಚ್ಚು ಗುಂಪುಗಳಿಗೆ ಕೊಡಬೇಕು. ಸಂವಾದವನ್ನು ಎಲ್ಲಿ, ಹೇಗೆ, ಯಾರ ನಡುವೆ, ಯಾವ ಸಂದರ್ಭದಲ್ಲಿ ಘಟಿಸುತ್ತಿದೆ ಇದನ್ನು ಪ್ರತಿಯೊಂದು ಗುಂಪಿಗೆ ನಿರ್ಧರಿಸಲು ಹೆಳಿರಿ. ಅದನ್ನನುಸರಿಸಿ ಪಾತ್ರಗಳ ಶರೀರದ ಚಲನವಲನೆ, ಭಂಗಿ ಮುಂತಾದವುಗಳ ವಿಚಾರ ಮಾಡಿ ಅಭಿನಯಿಸಲು ಪ್ರೋತ್ಸಾಹಿಸಿರಿ. ಸ್ಥಳ, ಕಾಲ, ವೇಳೆಗೆ ತಕ್ಕಂತೆ ಗುಂಪಿನಲ್ಲಿ ವಿದಾರ್ಥಿಗಳಿಗೆ ಪರದೆ ಹಿನ್ನಲೆ ಸಂಗೀತ ಇತ್ಯಾದಿಗಳ ವಿಚಾರ ಮಾಡಲು ಹೇಳಬೇಕು ಎಲ್ಲ ಗುಂಪುಗಳ ಸಿದ್ಧತೆಯಾದ ಮೇಲೆ ಪ್ರತಿಗುಂಪಿಗೆ ಸಾದರ ಪಡಿಸಲು ಅವಕಾಶ ಮಾಡಿ ಕೊಡಬೇಕು. ಸಾಧರ ಪಡಿಸಿದ ನಂತರ ಇತರ ಗುಂಪುಗಳು ಆ ಸಂವಾದವನ್ನು ಯಾವ ಸಂದರ್ಭದಲ್ಲಿ ಅನ್ನಹತ್ತಿದ್ದಾರೆ ಎಂಬುದನ್ನು ಹೇಳಬೇಕು.

ಪ್ರತಿಯೊಂದು ಗುಂಪಿನಲ್ಲಿ ವಿದ್ಯಾರ್ಥಿಗಳು ಎರಡನೇ ಗುಂಪಿನಲ್ಲಿಯ ವಿದ್ಯಾರ್ಥಿಗಳ ಸಾದರ ಪಡಿಸುವಿಕೆಯನ್ನ ಲಕ್ಷಕೊಟ್ಟು ನೋಡಬೇಕು ಮತ್ತು ಅದರಲ್ಲಿಯ ತಪ್ಪುಗಳನ್ನು ಆರಿಸದೇ ತಮಗೆ ಅದರಲ್ಲಿ ಏನು ಹಿಡಿಸಿತು, ಏನು ಹಿಡಿಸಿಲ್ಲ ಮತ್ತು ಏಕೆ ಇದರ ಸ್ಪಷ್ಟೀಕರಣ ಕೊಡಬೇಕು.

### ಸಂವಾದಗಳಿಗೆ ಸಂದರ್ಭ ಕೊಡುವದು.

ಕೆಳಗೆ ಕೆಲವು ಸಂವಾದಗಳನ್ನು ಕೊಡಲಾಗಿದೆ ಈ ಸಂವಾದವು ಯಾವ ಎರಡು ಪಾತ್ರಗಳಲ್ಲಿ, ಎಲ್ಲಿ ಘಟಿಸುತ್ತಿರಬಹುದು ಇವುಗಳ ವಿಚಾರ ಮಾಡಿರಿ. ಮತ್ತು ಅದರಂತೆ ಅದನ್ನು ಸಾದರ ಪಡಿಸಬೇಕು. ಗುಂಪಿನಲ್ಲಿಯ ಕೆಲವು ಜನರು ಸಾದರ ಪಡಿಸಬೇಕು ಮತ್ತು ಕೆಲವರು ಹಿನ್ನೆಲೆ ಸಂಗೀತ, ಪರದೆ ಇತ್ಯಾದಿಗಳ ವಿಚಾರ ಮಾಡಬೇಕು.

## ಸಂವಾದ 1

1\. : ''ನನ್ನ ಜೊತೆಗೆ ಇದು ಹೀಗೆ ಆಗುವದಿತ್ತು''!

2\. : ''ಹೀಗಿಲ್ಲ, ಪ್ರತಿಯೊಬ್ಬರಿಗೂ ಈ ಅನುಭವ ಒಂದಿಲ್ಲ ಒಂದು ದಿನ ಬರುವದು.

1\. : ''ಆದರೆ ನಾನೇನು ಕಡಿಮೆ ಮಾಡಿದ್ದೇನೆ? ಆದರೂ ನನ್ನ ಉಡಿಯಲ್ಲಿ ನಿರಾಶೆಯೇ''!

2\. : ''ಆದದ್ದು ಆಯಿತು. ಈ ಅನುಭವದಿಂದ ಏನು ಕಲಿಯಬೇಕು ಇದರ ವಿಚಾರವನ್ನು ನೀನು ಮಾಡಬೇಕು''

1\. : ''ಅದರಿಂದ ತೊಂದರೆ ಕಡಿಮೆಯಾಗುವುದೇ?''

2\. : ''ತೊಂದರೆ ಕಡಿಮೆಯಾಗುವದಿಲ್ಲ, ಆದರೆ ಮುಂದಿನ ತೊಂದರೆ ಆಗಲಿಕ್ಕಿಲ್ಲ.''

1\. : ''ನನಗೆ ಈಗ ಈ ಎಲ್ಲದರಲ್ಲಿ ಮರಳಿ ಬೀಳುವದಿಲ್ಲ.''

2\. : ''ಹೀಗೆ ಕೈಕಾಲುಗಳನ್ನು ಜೋತು ಬಿಟ್ಟು ಹೇಗೆ ನಡೆಯುವದು?..... ಸ್ವಲ್ಪ ಧೈರ್ಯ ತಾಳು.''

1\. : ''ಹೇಳಲು ಬಹಳ ಸುಲಭವಿದೆ''!

2\. : ''ನಿನ್ನ ಮಾತು ನಿಜವಿದೆ.... ಆದರೆ ಬೇರೆ ಏನಾದರೂ ಮಾರ್ಗವಿದೆಯೇ''?

1\. : ''ಹೂಂಽಽಽ.... ಎಂದಾದರೂ ನಿನಗೆ ಇಂಥ ಅನುಭವ ಬಂದಿರಬೇಕಲ್ಲ?..... ಆ ವೇಳೆಯಲ್ಲಿ ನೀನೇನು ಮಾಡಿದ್ದಿಯಾ?

2\. : ''ಹೊಸದಾಗಿ ಮತ್ತೆ ಪ್ರಯತ್ನ ಮಾಡಿದೆ.... ನನ್ನ ಮೇಲೆ ನಿರಾಶೆಗೆ ಆಕ್ರಮಣ ಮಾಡಗೊಡಲಿಲ್ಲ....! ಮತ್ತು ನನ್ನ ಅನಿಸಿಕೆಯಂತೆ ನೀನೂ ಹಾಗೆ ಮಾಡಬೇಕು.''

1\. : ''ಹೌದು, ಪ್ರಯತ್ನವಂತೂ ಮಾಡಲೇ ಬೇಕು .... ಒಳ್ಳೆಯದು... ಹೊಸದಾಗಿ ಪುನಃ ಎಲ್ಲವನ್ನು ಪ್ರಾರಂಭಿಸೋಣ.''

## ಸಂವಾದ 2

1\. : ''ಸಮಯ ಎಷ್ಟಾಗಿದೆ?

2\. : ''12.00''

1\. : ''ಇನ್ನೂ ಅವಳು ಬಂದಿಲ್ಲ''

2\. : ''ಹೌದು.... ಆಕೆಗೆ ಇಷ್ಟೊಂದು ತಡ ಎಂದೂ ಆಗಿಲ್ಲ.''

1\. : ''ಇಂದು ನಾಳೆ ಏನು ಹೇಳಲು ಬರುವದಿಲ್ಲ. ಮಳೆಗಾಲದ ದಿನಗಳಿವೆ ತಡವಾಗುತ್ತದೆ.''

2\. : ''ಕಳೆದ ಎರಡು ಗಂಟೆಗಳಿಂದ ದಾರಿಕಾಯುತ್ತಿರುವೆವು. ಹೀಗೆಯೇ ಕುಳಿತು ಇರುವುದೆ?

1\. : ''ಇನ್ನೂ ಸ್ವಲ್ಪ ವೇಳೆ ನಿಲ್ಲೋಣ ಬಹುಶಃ ಬರುತ್ತಿರಬಹುದು.



2\. : ''ನನಗೆ ಈಗ ಚಿಂತೆಯಾಗ ಹತ್ತಿದೆ.''

1\. : ''ಯಾರಿಗಾದರೂ ಕೇಳೋಣವೇ?

2\. : ''ಯಾರಿಗೆ ಕೇಳುವಿ?''

1\. : ''ಅದೂ ನಿಜ.''

2\. : ''ಸಮಯವನ್ನು ಪಾಲಿಸಲು ಏಕೆ ಅಗುವದಿಲ್ಲ. ಇತ್ತೀಚೆಗೆ ಇದು ನಿತ್ಯವೂ ಆಗಿದೆ.

1\. : ''ಹೌದು... ಹಿಂದೊಮ್ಮೆ ಆಕೆಯು ಬರುವದೇರದ್ದಾಗಿತ್ತು''


2\. : ''ಮತ್ತೆ''

1\. : ''ಮತ್ತೇನು... ನಾವು ಆಕೆಯ ದಾರಿಕಾಯುತ್ತ ಕುಳಿತೆವು.''

2\. : ''ನಾವು ಏನನ್ನು ಮಾತನಾಡುವದಿಲ್ಲವಲ್ಲಾ... ಅದರ ಪರಿಣಾಮ.''

1\. : ''ಒಂದು ನಿಮಿಷ.... ಸಪ್ಪಳ ಬಂದಿತಲ್ಲ.... ಬಂದಳು ಅನಿಸುತ್ತದೆ.''

## ಸಂವಾದ 3



1. : "ನಾನು ಎಲ್ಲ ಸಿದ್ಧತೆಯನ್ನು ಮಾಡಿದ್ದೇನೆ."
2. : "ಇದನ್ನು ಎಲ್ಲಿ ಇಡಲಿ?"
1. : "ಆ ಮೂಲೆಯಲ್ಲಿ ಇಡಿರಿ?"
2. : "ಇದನ್ನು ನಿಲ್ಲಿಸಬೇಕು ಏನು ಅಡ್ಡಲಾಗಿಡಬೇಕು!"
1. : "ನಿಲ್ಲಿಸಬೇಕು ತೊಂದರೆ ಬೇಡ."
2. : "ಇವು ಉಳಿದ ಹಣ. ಕಡಿಮೆ ಹಣದಲ್ಲಿ ಎಲ್ಲ ಸಾಮಾನುಗಳು ದೊರಕಿದವು
1. : "ಉತ್ತಮ. ಮುಂದೆ ನಮ್ಮ ಕೆಲಸಕ್ಕೆ ಬರಬಹುದು."
2. : "ಬೀಗಗಳು ಬೇಕಾಗಿದ್ದವು. ಎಲ್ಲಿ ಇರಬಹುದು."
1. : "ಬೀಗಗಳು ಏಕೆ ಬೇಕಾಗಿವೆ? ನಾನು ತೆರೆದು ಕೊಡುವೆ."
2. : "ಒಳ್ಳೆಯದು ಹಾಗಿದ್ದರೆ ಹಾಗೆ.... ಸುಮ್ಮನೆ ಮಾತು ಬೇಡ."
1. : "ಮಾತಿನ ಪ್ರಶ್ನೆ ಇಲ್ಲ.... ನನ್ನ ಮೇಲೆ ಹೊಣೆಗಾರಿಕೆ ಇದೆ."
2. : "ನಾವು ಕೂಡ ಹೊಣೆಗಾರಿಕೆಯಿಂದ ಕೆಲಸ ಮಾಡುತ್ತಿದ್ದೆವು."
1. : "ಅದು ನಿಮ್ಮ ಕೆಲಸದಿಂದ ಕಾಣಿಸಬೇಕಾಗುತ್ತದೆ."
2. : "ಒಳ್ಳೆಯದು. ಜಗಳಾಡಬೇಡಿರಿ. ವೇಳೆಯಲ್ಲಿ ಕೆಲಸವಾಗುವದರ ಕಾರಣ."
1. : "ಹೂಂ.. ಹೂಂऽऽ"
2. : "ಅಬ್ಬಾ! ಸಮಯವಾಯಿತು. ಮುಗಿಯಿತಿಲ್ಲವೋ"?
1. : "ಹೌದು. ನಾನು ಸಿದ್ಧನಿದ್ದೇನೆ."
2. : "ನಾನೂ ಕೂಡ."

## ಸಂವಾದ 4

1. : "ಏನಿದೆ ಅದು ಕೈಯಲ್ಲಿ?
2. : "ಎಲ್ಲಿ ಏನು? ಏನೂ ಇಲ್ಲ.?
1. : "ಏನು ಇಲ್ಲ ಹೇಗೆ? ಹಾಗಾದರೆ ಕೈಯನ್ನು ಹಿಂದೆ ಏಕೆ ಮುಚ್ಚಿರುವಿ?"
2. : "ಎಲ್ಲಿ ಮುಚ್ಚಿವೆ?... ಕೈ ಮಡಿಕೆ ಹಾಕಿದ್ದೇನೆ ಹಿಂದೆ."
1. : "ಹಾಗಾದರೆ ಮುಂದೆ ಏಕೆ ತರುವದಿಲ್ಲ?"
2. : "ನನ್ನ ಮೇಲೆ ವಿಶ್ವಾಸವಿಲ್ಲವೆ?
1. : "ಮುಚ್ಚುವಂತದ್ದು ಏನೂ ಇಲ್ಲವೇ? ಹಾಗಾದರೆ ಕೈಯನ್ನು ಮುಂದೆ ತರಲು ಯಾವ ಅಡ್ಡಿ ಇಲ್ಲ?"
2. : "ನಾನು ಏನನ್ನು ಮುಚ್ಚುವದಿಲ್ಲ. ನಾನೇಕೆ ತರಬೇಕು?"
1. : "ಇದು ಒಳ್ಳೆಯದಿದೆ... ಮೊದಲು ಸ್ವತಃ ಕಣ್ಣು ಮುಚ್ಚಾಲೆ ಆಡುವದು. ಆಮೇಲೆ ಪ್ರಾಮಾಣಿಕತೆಯ ಭಾವ ತರುವದು."
2. : "ಈಗ ಬಹಳ ವಾಯಿತು... ನಾನು ಹೇಳಿದ್ದೆನಲ್ಲ ಏನೂ ಮುಚ್ಚಿಲ್ಲವೆಂದು!"
1. : "ಇಲ್ಲ ಇಲ್ಲ .... ನನಗೆ ಭಾಸ ವಾಗಹತ್ತಿದೆ!"
2. : "ಆಗುತ್ತಿರಬಹುದು!"
1. : "ವಿಷಯ ಬದಲಿಸುವ ಅವಶ್ಯಕತೆ ಇಲ್ಲ."
2. : "ಕೈ ಮುಂದೆ ಬರದಿದ್ದರೆ ನನಗೆ ಅತ್ತ ಬರಬೇಕಾಗಬಹುದು!"
1. : "ಇದೇನು ಹುಚ್ಚುತನ...."
2. : "ಇಲ್ಲ... ಈಗ ಆಗಿಹೋಗಲಿ... ನನಗೇ ಬರಬೇಕಾಗಬಹುದು!"
1. : "ಇಲ್ಲ.. ಇಲ್ಲ.. ಆಯ್ಯೋ ದೇವರೇ... ರಕ್ಷಿಸಿ...."
2. : "ಅಬ್ಬಾ! ಏನಿದು? ಈ ದಿನವನ್ನು ನೋಡುವುದೊಂದೇ ಉಳಿದಿತ್ತು!"

### ದಿಗ್ದರ್ಶಕರ ಪಾತ್ರ



ಹಿಂದಿನ ಉಪಕ್ರಮದಲ್ಲಿಯ ಸಂವಾದವನ್ನು ನೀವು ನೋಡಿದ್ದೀರಿ. ಆ ಸಂವಾದಗಳು ನಿಜವಾಗಿ ಯಾವುದೇ ಪಾತ್ರಗಳಲ್ಲಿ, ಯಾವುದೇ ಸ್ಥಳದಲ್ಲಿ, ಬೇರೆಬೇರೆ ಸಂದರ್ಭದಲ್ಲಿ ಆಗಬಹುದಿತ್ತು. ಈ ಸಂವಾದ ಯಾರ ನಡುವೆ ನಡೆದಿದೆ, ಏಕೆ ನಡೆಯುತ್ತಿದೆ? ಪಾತ್ರಗಳು ಎಲ್ಲಿವೆ, ಯಾವ ಕಾಲದಲ್ಲಿಯವಿವೆ. ಇದನ್ನೆಲ್ಲ ನೀವು ನಿಮ್ಮಲ್ಲಿ ನಿರ್ಧರಿಸಿ ಮತ್ತು ಆ ಸಂವಾದದ ವಾಚನ ಮಾಡಿದ್ದೀರಿ. ಹಾಗೆಯೆ ಯಾವುದೇ ಕತೆ, ನಾಟಕ ಅಖಿತ ಸ್ವರೂಪದಲ್ಲಿ ಇರುವದು, ಆಗ ಅದನ್ನು ಪ್ರಾರಂಭಿಸುವಾಗ ಆ ಲಿಖಿತ ನಾಟಕದ ಅರ್ಥ ಹಚ್ಚುವದು, ಪ್ರತಿಯೊಂದು ಸಂವಾದದಿಂದ ಯಾವ ಪ್ರಸಂಗವನ್ನು ಹೇಗೆ ತೋರಿಸಲಾಗುವದು, ನಾಟಕದಲ್ಲಿಯ ಪಾತ್ರಗಳು ಹೇಗೆ ವರ್ತಿಸುವವು, ಮಾತನಾಡಬಹುದು. ಯಾವ ಪ್ರಸಂಗವು ಹೇಗಿದೆ, ಹಾಗೆ ತೋರಿಸುವದು. ಯಾವ ಪ್ರಸಂಗವನ್ನು ಸ್ವಲ್ಪ ಕಡಿಮೆ, ಹೆಚ್ಚು ಮಾಡಬೇಕು, ಬದಲಾವಣೆ ಮಾಡಬೇಕು, ಇದೆಲ್ಲವನ್ನು ನಿರ್ಧರಿಸುವದು ಅವಶ್ಯಕ ವಿರುವದು. ಈ ಕೆಲಸವನ್ನು ಮಾಡುವ ಹೊಣೆ ಒಬ್ಬ ವಿಶಿಷ್ಟ ವ್ಯಕ್ತಿಯದ್ದಿರುವದು. ಅವನಿಗೆ/ಅವಳಿಗೆ ದಿಗ್ದರ್ಶಕ/ದಿಗ್ದರ್ಶಿಕೆ ಎಂದು ಕರೆಯುತ್ತಾರೆ.

### ಸೂತ್ರ ಸಂಚಾಲನೆ

ನೀವು ಯಾವುದೇ ಕಾರ್ಯಕ್ರಮದಲ್ಲಿ ಸ್ಟೇಜಿನ ಮೇಲೆ, ಮಾಯಿಕದ ಎದುರು ಮಾತನಾಡುವ ಅನುಭವವನ್ನು ಎಂದಾದರೂ ತಗೆದು ಕೊಂಡಿದ್ದೀರಾ? ಮಾಯಿಕದ ಮುಂದೆ ಇಲ್ಲವೆ ಕೈಯಲ್ಲಿ ಹಿಡಿದು ಮಾತನಾಡುವಾಗ ನಿಮಗೆ ಹೇಗೆ ಅನಿಸುವದು?

ನೀವು ಬಹಳವೇಳೆ ಟಿ.ವ್ಹಿ ಮೇಲೆ ಇಲ್ಲವೆ ಪ್ರತ್ಯಕ್ಷವಾಗಿ ದೊಡ್ಡ ಸ್ಟೇಜಿನಮೇಲೆ ಕೆಲವು ಕಾರ್ಯಕ್ರಮಗಳ ನಿವೇದನೆ ಮಾಡುತ್ತಿರುವ ನಿವೇದಕನಿಗೆ/ನಿವೇದಿಕೆಗೆ ನೋಡಿರಬಹುದು. ನಿಯೋಜಿಸಿದ ಕಾರ್ಯಕ್ರಮದಲ್ಲಿಯ ಒಂದು ಕಾರ್ಯಕ್ರಮದ ನಂತರ ಅದರ ಮುಂದಿನ ಕಾರ್ಯಕ್ರಮ ಯಾವುದಿದೆ ಎಂಬುದು ಪ್ರೇಕ್ಷಕರಿಗೆ ತಿಳಿಯುವದು ಅವಶ್ಯಕವಿದ್ದುದರಿಂದ ಅದನ್ನನುಸರಿಸಿ ಯಾವ ನಿವೇದನೆಯನ್ನು ಮಾಡಲಾಗುತ್ತದೆಯೋ ಅದಕ್ಕೆ 'ಸೂತ್ರ ಸಂಚಾಲನೆ' ಎಂದು ಕರೆಯಲಾಗುತ್ತದೆ ಮತ್ತು ಈ ಸೂತ್ರಸಂಚಾಲನೆ ಮಾಡುವ ವ್ಯಕ್ತಿ ಅಂದರೆ 'ಸೂತ್ರ ಸಂಚಾಲಕ' ಹೌದು. ಸೂತ್ರ ಸಂಚಾಲನೆ ಮಾಡುವದು ಇದೂ ಕೂಡ ಒಂದು ವ್ಯವಸಾಯವಾಗಿದೆ.

### ಸ್ವಲ್ಪ ಮೋಜು ಮಾಡೋಣ

ಕಾಗದವನ್ನು ದುಂಡಾಗಿ ಸುತ್ತಿ ಅದನ್ನು ಬಾಯಿಯ ಮುಂದೆ ಹಿಡಿಯಿರಿ ಮತ್ತು ಸ್ವಂತದ ಹೆಸರು ಹೇಳಿ ವರ್ಗದಲ್ಲಿಯ ಗೆಳೆಯ ಗೆಳತಿಯರ, ಗುರುಜನರ ಸ್ವಾಗತ ಮಾಡುವ ಸೂತ್ರ ಸಂಚಾಲನೆಯ ನಮೂನೆಯನ್ನು ವರ್ಗದಲ್ಲಿ ಸಾದರ ಪಡಿಸಿರಿ.

ಉದಾ. ''ನಮಸ್ಕಾರ, ನಾನು ಸ್ವರಾಜ, ಇಂದು ಇಲ್ಲಿ ಸೇರಿದ ಎಲ್ಲರಿಗೂ ಮನಃ ಪೂರ್ವಕ ಸ್ವಾಗತ ಮಾಡುತ್ತೇನೆ.''



### ನೃತ್ಯ

ನೃತ್ಯ ಇದು ಇಂತಹ ಕಲಾಪ್ರಕಾರವಿದೆ, ಇದರಲ್ಲಿ ಯಾವುದೇ ಆಶಯವನ್ನು ವ್ಯಕ್ತಗೊಳಿಸಲು ಉದ್ದೇಶಪೂರ್ವಕವಾಗಿ ಆರಿಸಿದ ಸುಂದರ ಚಲನ ವಲನೆ, ಕ್ರಮವಾಗಿ, ಲಯಬದ್ಧ ರೀತಿಯಿಂದ ಮಾಡಲಾಗುತ್ತದೆ. ಇದನ್ನು ನಾವು ಹೋದ ವರ್ಷ ನೋಡಿಯೇ ಇದ್ದೇವೆ ಈ ವರ್ಷ ನಾವು ನೃತ್ಯದಲ್ಲಿಯ ಕೆಲವು ಘಟಕ ಮತ್ತು ಸೂಕ್ಷ್ಮತೆಯನ್ನು ಕಲಿಯುವವರಿದ್ದೇವೆ.


## ನಿತ್ಯದ ಜೀವನದಲ್ಲಿ ನೃತ್ಯದೊಂದಿಗೆ ಇದ್ದ ಸಂಬಂಧ

ಸ್ವಲ್ಪ ನೆನಪಿಸಿ ನೋಡಿರಿ, ನಿಮ್ಮ ನಿತ್ಯದ ಆಯುಷ್ಯದಲ್ಲಿ ನೃತ್ಯದೊಂದಿಗೆ ಇಲ್ಲವೆ ನೃತ್ಯದಹಾಗೆ ಚಲನ ವಲನೆಯೊಂದಿಗೆ ನಿಮ್ಮ ಸಂಬಂಧ ಬರುತ್ತದೆಯೇ? ಯಾವಾಗ ಬರುವದು? ಕ್ರಿಕೇಟದ ಮ್ಯಾಚ ಗೆದ್ದಾಗ ಆನಂದವನ್ನು ವ್ಯಕ್ತ ಪಡಿಸಲು ಆಟಗಾರರು ಕುಣಿಯುತ್ತಾರೆ, ಮೆರವಣಿಗೆಯಲ್ಲಿ ನಾವು ಕುಣಿಯುತ್ತೇವೆ, ಚಿತ್ರಪಟಗಳಲ್ಲಿ ನೃತ್ಯವು ಅವಿಭಾಜ್ಯ ಘಟಕ ವಾಗಿರುವದು. ಸ್ನೇಹಸಮ್ಮೆಲನದ ವೇಳೆಯಲ್ಲಿ ನೃತ್ಯಗಳನ್ನು ಸಾದರ ಪಡಿಸಲಾಗುತ್ತವೆ. ಯಾವುದೇ ಹಾಡುಗಳನ್ನು ಕೇಳುವಾಗ, ಕಾಲಿಂದ ಠೇಕಾ ಹಿಡಿಯುತ್ತೇವೆ. ಚಿಕ್ಕ ಮಕ್ಕಳ ಆಟಿಗೆಗೆ ಬೀಗ ತಿರುಗಿಸಿದಾಗ ಅದು ಕುಣಿಯ ತೊಡಗುವದು ಮುಂತಾದವುಗಳು. ಈ ಯಾದಿಯಲ್ಲಿ ನಿಮಗೆ ಇನ್ನೂ ಏನಾದರೂ ಸೇರಿಸಲು ಬರಬಹುದೇ? ಯಾದಿಕಡೆಗೆ ನೋಡಿದಾಗ ತಮ್ಮ ಜೀವನದಲ್ಲಿ ನೃತ್ಯಕ್ಕೆ ಇದ್ದ ಸ್ಥಾನದಕುರಿತು ತಮಗೆ ಏನು ಹೇಳಲು ಬರಬಹುದು?

## ನಾವು ನೃತ್ಯವನ್ನು ಏಕೆ ಮಾಡುತ್ತೇವೆ?

ಮಾನವನ ಆಯುಷ್ಯದಲ್ಲಿ ನೃತ್ಯಕ್ಕೆ ಅವಿಭಾಜ್ಯ ಸ್ಥಾನವಿದೆ. ಪುರಾತನ ಕಾಲದಿಂದ ಮಾನವೀ ಸಂಸ್ಕೃತಿಯಲ್ಲಿ ನೃತ್ಯದ ಸಮಾವೇಶ ಇದ್ದದ್ದು ಕಂಡು ಬಂದಿದೆ. ಸ್ಪೇನದಲ್ಲಿಯ ಆದಿಮಾನವರ ಕಾಲದಲ್ಲಿಯ ಚಿತ್ರಗಳಿರಲಿ ಇಲ್ಲವೆ ಮಧ್ಯಪ್ರದೇಶದಲ್ಲಿ ಭೀಮಬೆಟಕಾದಲ್ಲಿಯ ಗುಹೆಯಲ್ಲಿಯ ಚಿತ್ರಗಳಿರಲಿ, ಆಕಾಲದ ಜೀವನ ಶೈಲಿಯಲ್ಲಿಯೂ ನೃತ್ಯಕ್ಕೆ ಮಹತ್ವದ ಸ್ಥಾನ ವಿದ್ದದ್ದು ಕಂಡುಬರುವದು.





ಹಾಗೆಯೇ ಕರ್ನಾಟಕದಲ್ಲಿಯ ಬದಾಮಿಯಲ್ಲಿಯ ಆರನೇ ಶತಮಾನದಲ್ಲಿ ಮಂದಿರಗಳಲ್ಲಿ, ವೇರೂಳದ ಗುಹೆಗಳೆಲ್ಲಿಯೂ ಕೂಡ ನಟರಾಜನ (ನೃತ್ಯ ಮಾಡುವ ಶಿವ) ಶಿಲ್ಪಗಳು ನೋಡಲು ಸಿಗುವವು. ನೃತ್ಯಕ್ಕೆ ಮಾನವನ ಆಯುಷ್ಯದಲ್ಲಿ ಇದ್ದ ಮಹತ್ವವು ಇದರಿಂದ ಸ್ಪಷ್ಟವಾಗುವದು.



ಕೆಲವು ಸಂಶೋದಕರ ಅಭಿಪ್ರಾಯದಂತೆ ನೃತ್ಯ ಮಾಡುವ ಪಂಗಡದವರಿಗೆ ಈ ಕಾರಣದಿಂದ ಒಟ್ಟಿಗೆ ಇರುವ ಚಟ ಬಿದ್ದಿತು ಮತ್ತು ಸಾಮಾಜಿಕ ಸಂಬಂಧ ಹೆಚ್ಚಿತು ಇದರ ಲಾಭ ಅವರಿಗೆ ವಿಪರೀತವಾದ ಪರಿಸ್ಥಿತಿಯಲ್ಲಿಯೂ ಧೈರ್ಯದಿಂದ ಇರಲು ಆಯಿತು ಇದರಿಂದ ಇಂಥ ನೃತ್ಯಮಾಡುವ ಪಂಗಡಗಳು ಹಿಮಯುಗದಲ್ಲಿ ಕೂಡ ಜೀವಿಸಿದರು. ಇದರಿಂದಲೇ ಇಂದು ನೃತ್ಯ ಮತ್ತು ಸಂಗೀತದ ಪರಂಪರೆ ನಮಗೆ ಜಗತ್ತಿನ ತುಂಬ ನೋಡಲು ಸಿಗುವದು.

ಕೆಲವು ಸಂಶೋಧಕರ ಹೇಳಿಕೆಯಂದರೆ, ನಮ್ಮ ಮೆದುಳಿನಲ್ಲಿಯ ಕೆಲವು ಆನಂದ ಕೇಂದ್ರಗಳು ಒಟ್ಟಾಗಿ ಲಯಬದ್ಧವಾದ ಚಲನವಲನೆಯಿಂದ ಉದ್ದಿಪ್ತವಾಗುತ್ತವೆ. ಇಷ್ಟೇ ಅಲ್ಲ ಇತರರು ಒಟ್ಟಿಗೆ ಮಾಡಿದ ಲಯಬದ್ಧವಾದ ಚಲನವಲನೆ ನೋಡುವದರಿಂದಲೂ ನಮ್ಮ ಮೆದುಳಿನಲ್ಲಿಯ ಆನಂದಕೇಂದ್ರಗಳು ಉದ್ದಿಪ್ತವಾಗುವವು ಮತ್ತು ನಾವು ಆನಂದದ ಅನುಭವ ಪಡೆಯುವೆವು.



ನೃತ್ಯ ಇದು ವಿವಿಧ ಪ್ರಸಂಗಳಲ್ಲಿ ಮಾಡುತ್ತಿರುವದು ಇತಿಹಾಸದಲ್ಲಿ ಕಂಡು ಬರುವದು. ತಮ್ಮ ಮಾತನಾಡುವ ಭಾಷೆ ವಿಕಸಿತವಾಗುವ ಮೊದಲು ಸ್ತ್ರೀ ಪುರುಷರಲ್ಲಿ ಒಬ್ಬರೊಬ್ಬರನ್ನು ಆಕರ್ಷಿಸಲು ನೃತ್ಯದ ಮಾಧ್ಯಮದ ಉಪಯೋಗತ್ತಿತ್ತು. ಹಿಂದಿನ ಕಾಲದಲ್ಲಿ ಯುದ್ಧದ ಪ್ರಸಂಗದಲ್ಲಿಯೂ ನೃತ್ಯಗಳು ನಡೆಯುತ್ತಿದ್ದವು. ಸೈನಿಕರ ಮೈಯಲ್ಲಿ ಶಾರೀರಿಕ ಉತ್ಸಾಹ ಮತ್ತು ಶೌರ್ಯ ಹೆಚ್ಚಿಸಲು ನೃತ್ಯದ ಉಪಯೋಗವಾಗುತ್ತಿತ್ತು. ಹಾಗೆಯೆ ಯುದ್ಧದಲ್ಲಿ ಜಯಶಾಲಿಯಾದ ನಂತರ ಆನಂದೋತ್ಸವವನ್ನು ಆಚರಿಸುವ ವೇಳೆಯಲ್ಲಿಯೂ ನೃತ್ಯಮಾಡಲಾಗುತ್ತಿತ್ತು.



ಹಾಗೆಯೆ ಬೆಳೆಗಳು ಒಳ್ಳೆಯ ರೀತಿಯಿಂದ ಬರಲೆಂದು, ಹಾಗೆಯೆ ಬೆಳೆ ಬಂದನಂತರ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಲು ನೃತ್ಯ ಮಾಡಲಾಗುತ್ತಿತ್ತು. ಪಂಜಾಬದಲ್ಲಿಯ ಭಾಂಗಡಾ ಹಾಗೆಯೆ ಗಿಡ್ಡಾ ಇವು ಇಂಥ ಪ್ರಸಂಗಗಳಲ್ಲಿ ಮಾಡುವ ನೃತ್ಯಗಳಾಗಿವೆ. ದೇವ ದೇವತೆಗಳನ್ನು ಪ್ರಸನ್ನ ಗೊಳಿಸಲು ಸಹ ನೃತ್ಯ ಮಾಡುವ ಪದ್ಧತಿ ಇದೆ.

### ಲೋಕನೃತ್ಯದ ಕೆಲವು ಪ್ರಕಾರಗಳು

ಒಂಬತ್ತನೇ ಇಯತ್ತೆಯಲ್ಲಿ ನಾವು ಭಾರತೀಯ ಶಾಸ್ತ್ರಿಯ ನೃತ್ಯದ ಪ್ರಕಾರಗಳನ್ನು ನೋಡಿದ್ದೇವೆ. ಈಗ ನಾವು ಮಹಾರಾಷ್ಟ್ರದಲ್ಲಿಯ ಕೆಲವು ನೃತ್ಯಪ್ರಕಾರಗಳನ್ನು ನೋಡೋಣ

ಲೋಕನೃತ್ಯವೆಂದರೆ ವಿಶಷ್ಟ ಸಮುದಾಯದಲ್ಲಿಯ ಜನರು ವಿಶಿಷ್ಟ ಪ್ರಸಂಗಗಳಲ್ಲಿ ಒಟ್ಟಿಗೆ ಬಂದು ಮಾಡಿದ ನೃತ್ಯವಾಗಿದೆ. ಕೆಲವು ನೃತ್ಯಪ್ರಕಾರಗಳನ್ನು ನೋಡೋಣ

### ಬಾಲ್ಯಾ ನೃತ್ಯ ಇಲ್ಲವೆ ಜಾಖಡಿ ನೃತ್ಯ

ಪ್ರಾಂತ : ಕೊಂಕಣ ಮತ್ತು ಮುಂಬೈ



ಈ ನೃತ್ಯವನ್ನು ಸಾಮಾನ್ಯವಾಗಿ ಶ್ರಾವಣ ತಿಂಗಳಿನಿಂದ ದೀಪಾವಳಿ ವರೆಗಿನ ಕಾಲದಲ್ಲಿ ಸಾದರ ಪಡಿಸಲಾಗುವದು ಏಕೆಂದರೆ ಈ ಕಾಲದಲ್ಲಿ ಹಲವಾರು ಹಬ್ಬ ಉತ್ಸವಗಳು ಬರುವವು. ಪುಣೆ, ಮುಂಬೈ, ನಾಶಿಕದಂತಹ ಸ್ಥಳಗಳಲ್ಲಿ ಗಣೇಶನ ವಿಸರ್ಜನೆಯ ಮೆರವಣಿ-ಗೆಯಲ್ಲಿಯೂ ಈ ನೃತ್ಯ ನೋಡಲು ಸಿಗುವದು. ಈ ನೃತ್ಯ ಸಾಮಾನ್ಯವಾಗಿ ವರ್ತುಳಾಕಾರದಲ್ಲಿ ಮಾಡಲಾಗುತ್ತದೆ. ಒಂದೆರಡು ಗಾಯಕರು, ವಾದಕರು ಮತ್ತು ಕೋರಸ (ಹಿಂದೆ ಹಾಡುವವರು) ವರ್ತುಲಾಕಾರದ ಮಧ್ಯದಲ್ಲಿ ಕುಳಿತು ಕೊಳ್ಳುವರು. ಅವರ ಸುತ್ತಲೂ ನೃತ್ಯ ಮಾಡುವವರಿರುವರು: ಅವರ ಒಂದು ಕಾಲಲ್ಲಿ ಘುಂಗರು (ಗಜ್ಜೆ) ಕಟ್ಟಿರುತ್ತಾರೆ. ಒಂದು ಕಾಲಿನ ಮೇಲೆ ಒತ್ತು ನೀಡಿ ನೃತ್ಯ ಮಾಡುವದು ಈ ನೃತ್ಯದ ವೈಶಿಷ್ಟ್ಯವಾಗಿದೆ.

### ಆದಿವಾಸಿ ನೃತ್ಯ

ಆದಿವಾಸಿ ನೃತ್ಯ-ಬಿಲ್ಲ, ಕೊರಕು ಠಾಕರ, ವಾರಲಿ, ಕಾತಕರಿ, ಗೊಂಡ ಹೀಗೆ ಆದಿವಾಸಿ ಜನಾಂಗದವರು ಹಬ್ಬ

ಹುಣ್ಣಿಮೆಯ ಮತ್ತು ದುಃಖದ ಪ್ರಸಂಗಗಳಲ್ಲಿ ವಿವಿಧ ಪ್ರಕಾರದ ನೃತ್ಯ ಮಾಡುವರು. ಈ ನೃತ್ಯಗಳು ವಿವಿಧ ವಾದ್ಯಗಳ ಹೆಸರಿನಿಂದ ಗುರುತಿಸಲಾಗುವವು. ಉದಾ. ಢೋಲು ನೃತ್ಯ ತಂಬೋರಿ ನೃತ್ಯ, ತಾರಪಾ ನೃತ್ಯ ಮುಂತಾದ ನೃತ್ಯಗಳನ್ನು ಆದಿವಾಸಿ ಜನರು ವರ್ತುಲಾಕಾರದಲ್ಲಿ ಮೆಲ್ಲನೆ ಇಲ್ಲವೆ ಜೋರಾಗಿ ಮಾಡುವರು. ''ವಾರಿ ಘಾಲಣೆ'' (ವಾರಿ ಹಾಕುವದು) ಇದು ಬಿಲ್ಲ ಜನಾಂಗದಲ್ಲಿ ಅಂತ್ಯ ಸಂಸ್ಕಾರದ ವೇಳೆಗೆ ಮಾಡುವ ನೃತ್ಯ ಪ್ರಕಾರವಾಗಿದೆ.



## ತಾರಪಾ ನೃತ್ಯ



ಆದಿವಾಸಿ ಸಮಾಜದ ಹಬ್ಬ-ಉತ್ಸವ ಇಲ್ಲವೆ ಮಂಗಲ ಪ್ರಸಂಗದಲ್ಲಿ ಒಂದು ಗಮನಸೆಳೆಯುವ ನೃತ್ಯ ವಾಗಿರುವದು ಅದುವೇ ತಾರಪಾನೃತ್ಯ. ವಾರಲಿ ಸಮಾಜವು ಕಲೆಯ ಆಸಕ್ತಿ ಉಳ್ಳವರು, ಉತ್ಸವ ಪ್ರೀಯರಾಗಿದ್ದಾರೆ. ವಾರಲಿ ಪೆಂಟಿಂಗ್ ಹೇಗೆ ಪ್ರಸಿದ್ಧವಾಗಿದೆ ಹಾಗೆಯೇ ಈ ಸಮಾಜದ ತಾರಪಾ ನೃತ್ಯ ನಡೆಯುವದಲ್ಲದೆ ಗುಡ್ಡದ ಕೆಳಗಿನ ಭೂಮಿಯಲ್ಲಿ ಯಾವಾಗ ಭತ್ತ ಇಲ್ಲವೆ ನಾಗಲಿ ಬೆಳೆ ಹಚ್ಚುವದಿರುವದೋ ಆಗ ತಾರಪಾ ನೃತ್ಯದ ಉತ್ಸವವನ್ನು ಆಚರಿಸಲಾಗುವದು.

## ಧನಗಿರಿ (ಕುರುಬ) ಗಾಜಾ




ಈ ನೃತ್ಯವನ್ನು ಮಹಾರಾಷ್ಟ್ರದಲ್ಲಿಯ ಧನಗರ (ಕುರುಬ) ಸಮಾಜದವರು ಮಾಡುತ್ತಾರೆ. ಕುರುಬರ ಸಮಾಜವು ನಿಸರ್ಗದಲ್ಲಿ ರಮಿಸುತ್ತಿರುವದರಿಂದ ಹೆಚ್ಚಾಗಿ ಅವರ ಹಾಡುಗಳು ನಿಸರ್ಗಕ್ಕೆ ಸಂಬಂಧಿಸಿರುತ್ತವೆ. ಹಾಗೆಯೇ ಅವರ ಕೆಲವು ಹಾಡುಗಳು ಅವರ ದೇವತೆಗಳ ಜನ್ಮಕಥೆಗೆ ಸಂಬಂಧಿಸಿರುತ್ತವೆ. ಈ ನೃತ್ಯಗಳು ಢೋಲ (ಢೊಳ್ಳ)ದ ಮೇಲೆ ಸಾದರ ಪಡಿಸಲಾಗುತ್ತವೆ.

## ಕೋಳಿ (ಮೀನುಗಾರ ಸಮುದಾಯ) ನೃತ್ಯ



ಕೋಳಿನೃತ್ಯವು ಕೋಳಿ ಸಮಾಜದ ಜನಪ್ರೀಯ ನೃತ್ಯವಾಗಿದೆ. ಹಬ್ಬ ಹುಣ್ಣಿವೆಯ ದಿನದಂದು ಮತ್ತು ಲಗ್ನ ಪ್ರಸಂಗದಲ್ಲಿ ಕೋಳಿಜಾತಿಯ ಸ್ತ್ರೀ-ಪುರುಷರು ಸಮೂಹದಿಂದ ಕುಣಿಯುವರು. ಕೋಳಿ ನೃತ್ಯದಲ್ಲಿಯ ತಾಲ, ಠೇಕಾ, ಮತ್ತು ಪದನ್ಯಾಸ ನೋಡುವಂತಿರುತ್ತದೆ. ಕೋಳಿಹಾಡುಗಳು ಕೂಡ ಮಹಾರಾಷ್ಟ್ರದಲ್ಲಿ ಜನಪ್ರೀಯವಾಗಿವೆ.

## ಲೇಝಿಮ



ಇದು ವೀರರಸವುಳ್ಳ ನೃತ್ಯ ಪ್ರಕಾರವಾಗಿದೆ ಸಭೆ ಮೆರವಣಿಗೆ, ಜಾತ್ರೆ ಮುಂತಾದ ಸ್ಥಳಗಳಲ್ಲಿ ಲೇಝಿಮ ನೃತ್ಯಮಾಡಲಾಗುವದು. ಢೋಲ, ಘುಮಕ, ಮತ್ತು ವಾದ್ಯದೊಂದಿಗೆ ಈ ನೃತ್ಯವನ್ನು ಸಾದರ ಪಡಿಸಲಾಗುವದು. ಲೇಝಿಮದಲ್ಲಿ ವಿವಿಧ ನೃತ್ಯಪ್ರಕಾರಗಳು ಬರುತ್ತವೆ. ಇದು ವ್ಯಾಯಮ ಪ್ರಕಾರವೆಂದೂ ಗುರುತಿಸಲಾಗುವದು. ಕೆಲವು ಶಾಲೆಗಳಲ್ಲಿ ಶಾರೀರಿಕ ಶಿಕ್ಷಣದಲ್ಲಿ ಈ ಪ್ರಕಾರದ ಸಮಾವೇಶ ಮಾಡಲಾಗುತ್ತದೆ.

## ಲೋಕನೃತ್ಯ ಮತ್ತು ಶಾಸ್ತ್ರೀಯ ನೃತ್ಯ ಇವುಗಳಲ್ಲಿಯ ವ್ಯತ್ಯಾಸಗಳು

ಹೋದ ವರ್ಷ ನಾವು ಶಾಸ್ತ್ರೀಯ ನೃತ್ಯದ ಕುರಿತು ಮಾಹಿತಿಯನ್ನು ಪಡೆದು ಕೊಂಡಿದ್ದೇವೆ ಈ ವರ್ಷ ನಾವು ಲೋಕನೃತ್ಯದ ಮಾಹಿತಿ ಪಡೆದುಕೊಂಡೆವು. ನಿಮಗೆ ಈ ಎರಡೂ ಪ್ರಕಾರಗಳಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಿದೆಯೇ? ಕಂಡು ಬಂದಿದ್ದರೆ ಯಾವ ವ್ಯತ್ಯಾಸ ಕಾಣುವದು?

ವಿದ್ಯಾರ್ಥಿಗಳಿಗೆ ಹೋದ ವರ್ಷದ ಪುಸ್ತಕದ ಸಂದರ್ಭಪಡೆದು ವ್ಯತ್ಯಾಸಗಳ ಕುರಿತು ಸ್ವಂತ ವಿಚಾರ ಮಾಡುವಂತೆ ಪ್ರವೃತ್ತಿ ಮಾಡಿರಿ. ಕೆಳಗಿನ ಅಂಶಗಳ ಸಹಾಯದಿಂದ ಎರಡರ ವಿಚಾರಮಾಡಿರಿ. ಉಗಮ, ನಿಯಮ, ಸಮಾಜದಲ್ಲಿಯ ಸ್ಥಾನ, ದೊರಕಿದ ರಾಜಾ ಶ್ರಯ ಮುಂತಾದವುಗಳು. ಇವುಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಇಂಟರನೇಟದಿಂದ ಶೋಧಿಸಲು ಬರುವದು.

ನೃತ್ಯದಲ್ಲಿಯ ಭಾವ ಮುದ್ರೆ ಮತ್ತು ಲಯಬದ್ಧವಾದ ಶಾರೀರಿಕ ಚಲನವಲನೆ ಇವು ನೃತ್ಯದ ಎರಡು ಮುಖ್ಯ ಅಂಗಗಳಾಗಿವೆ ಇದನ್ನು ನಾವು ಹೋದ ವರ್ಷವೇ ನೋಡಿದ್ದೇವೆ. ಆದರೆ ಈ ಎರಡೂ ಸಂಗತಿಗಳು ಸಹಜವಾಗಿ ಮಾಡಲು ನಮ್ಮ ಮನಸ್ಸಿನಲ್ಲಿದ್ದ ಸಂಕೋಚ ಮತ್ತು ಭೀತಿ ದೂರವಾಗುವದು ಮಹತ್ವದ್ದಾಗಿದೆ ಹಾಗೆಯೆ ನಮ್ಮ ಶರೀರದ ಮೇಲೆ, ಶಾರೀರಿಕ ಚಲನವಲನೆಯ ಮೇಲೆ ನಿಯಂತ್ರಣವಿರುವದು ಇದಕ್ಕಾಗಿ ಅವಶ್ಯಕವಾಗಿದೆ. ಕೆಳಗಿನ ಕೆಲವು ಕೃತಿಗಳನ್ನು ಮಾಡಿ ನೋಡುವದು ಉಪಯುಕ್ತವಾಗಬಹುದು.

### ನೃತ್ಯದಲ್ಲಿಯ ಭಾವಭಂಗಿ




ನಮ್ಮ ಮುಖಚರ್ಯೆಯ ಮೇಲೆ ಯೋಗ್ಯವಾದ ಭಾವವನ್ನು ತೋರಿಸಲು ನಮ್ಮ ಅವಯವಗಳ ಮೇಲೆ ನಿಯಂತ್ರಣ ವಿರುವದು ಮಹತ್ವದ್ದಾಗಿದೆ. ಕೆಳಗಿನ ಕೆಲವು ಚಲನವಲನೆಗಳನ್ನು ಮಾಡಿ ನೋಡಿರಿ.

- ಎರಡೂ ಹುಬ್ಬುಗಳನ್ನು ಎತ್ತರಿಸುವದು.
- ಒಂದು ಹುಬ್ಬನ್ನು ಎತ್ತರಿಸುವದು
- ಹಣೆಯ ಮೇಲೆ ಅಡ್ಡಗಂಟನ್ನು ಕೆಡುಹುವದು (ಆಶ್ಚರ್ಯ ವ್ಯಕ್ತ ಪಡಿಸಲು)
- ಹಣೆಯ ಮೇಲೆ ಉದ್ದಗಂಟನ್ನು ಕೆಡುಹುವದು (ತಿರಸ್ಕಾರ ವ್ಯಕ್ತ ಪಡಿಸಲು)

- ಮೂಗಿನ ಸೊಳ್ಳೆಗಳನ್ನು ಹಿಗ್ಗಿಸುವದು
- ಕಣ್ಣುಗಳನ್ನು ಅಕ್ಕಪಕ್ಕಕ್ಕೆ ಮೇಲೆ, ಕೆಳಗೆ, ಗೋಲಾಕಾರವಾಗಿ ತಿರುಗಿಸುವದು
- ಕಣ್ಣುಗಳನ್ನು ಕಿಸಿಯುವದು.
- ಬಾಯಿಯನ್ನು ಡೊಂಕು ಮಾಡುವದು.

ಒದಿಗೆ ಕೊಟ್ಟ ಭಾವಭಂಗಿಯನ್ನು ವಿದ್ಯಾರ್ಥಿಗಳಿಂದ ಮಾಡಿಸಿಕೊಳ್ಳಿರಿ. ನಂತರ ವಿದ್ಯಾರ್ಥಿಗಳ ಎರಡೆರಡು ಗುಂಪುಗಳನ್ನು ಮಾಡಿರಿ. ಪ್ರತಿ ಗುಂಪಿನಲ್ಲಿಯ ಒಬ್ಬನು ಮುಖಚರ್ಯ ಮೇಲೆ ಕೆಲವು ಭಾವಭಂಗಿ ತರಬೇಕು ಮತ್ತು ಎರಡನೆಯವನು ಆ ಭಾವ ಭಂಗಿಯ ನಕಲು ಮಾಡಬೇಕು ಮತ್ತೆ ಎರಡನೆಯವನು ಭಾವಭಂಗಿ ಮಾಡಬೇಕು ಮತ್ತು ಮೊದಲನೆಯವನು ನಕಲು ಮಾಡಬೇಕು.

## ಸ್ವಲ್ಪ ಮೋಜು ಮಾಡೋಣ



ಎಲ್ಲ ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಮುಂದೆ ಬರಬೇಕು ಮತ್ತು ಕೆಳಗೆ ಕೊಟ್ಟ ಭಾವನೆಯನ್ನು ಕೇವಲ ಮುಖದ ಮೇಲಿನ ಭಾವಭಂಗಿಯಿಂದ ವ್ಯಕ್ತಮಾಡಬೇಕು. ಇತರರು ಆ ಭಾವನೆ ವ್ಯಕ್ತಗೊಳಿಸುವಾಗ ಮುಖದ ಮೇಲಿನ ಯಾವ ಅವಯವ ಚಲನವಲನೆಯಾಗುತ್ತಿದೆ ಎಂಬುದನ್ನು ನೋಟಬುಕ್ಕಿನಲ್ಲಿ ನೋಂದಾಯಿಸಬೇಕು.

ಸಿಟ್ಟು, ದ್ವೇಷ, ದಯೆ, ವಾತ್ಸಲ್ಯ, ಆನಂದ, ದುಃಖ, ಶಾರೀರಿಕ ವೇದನೆ, ಸಹವೇದನೆ, ತಿರಸ್ಕಾರ, ಭೀತಿ, ಆಶ್ಚರ್ಯ, ಕುತೂಹಲ ಇತ್ಯಾದಿ.

### ನೃತ್ಯದಲ್ಲಿಯ ಲಯಬದ್ಧ ಚಲನ ವಲನೆ

ಪಾಶ್ಚಾತ್ಯ ನೃತ್ಯಶೈಲಿಯ ಮಹತ್ವದ ಘಟಕಗಳಲ್ಲಿಯ ಮೂರು ಘಟಕಗಳು–

- ಅವಕಾಶ (ಸ್ಥಳ)
- ಕಾಲ (ಸಮಯ)
- ಹುರುಪು (ಹಮ್ಮುನು)

### ಅವಕಾಶ

ನೃತ್ಯದಲ್ಲಿಯ ಚಲನವಲನೆ ಮಾಡುವಾಗ ಸ್ಥಳದ ಉಪಯೋಗವನ್ನು ಹೇಗೆ ಮಾಡಲಾಗುತ್ತದೆ? ಕುಣಿಯುವ ವ್ಯಕ್ತಿ ಲಯಬದ್ಧವಾಗಿ ಚಲನವಲನೆ ಮಾಡಲು ಉಪಲಬ್ಧವಿದ್ದ ಸ್ಥಳವನ್ನು ಯಾವ ರೀತಿಯಿಂದ ಉಪಯೋಗಿಸುವನು ನೃತ್ಯದ ಸೌಂದರ್ಯವನ್ನು ಹೆಚ್ಚಿಸಲು ಇದಕ್ಕೆ ಬಹುದೊಡ್ಡ ಪಾಲು ಇರುವದು.

### ಮಾಡಿ ನೋಡಿರಿ

- ವಿದ್ಯಾರ್ಥಿಗಳು ತಮ್ಮ ಶರೀರದ ಉಪಯೋಗ ಮಾಡಿ ವಿವಿಧ ಆಕಾರಗಳನ್ನು ಮಾಡಿ ನೋಡಬೇಕು (ದುಂಡಗೆ, ಆಯತ, ತ್ರಿಕೋನ) ಒಬ್ಬನೇ ಇಲ್ಲವೆ ಮೂರು ನಾಲ್ಕು ವಿದ್ಯಾರ್ಥಿಗಳ ಗುಂಪಿಗೂ ಸಹ ಇದನ್ನು ಮಾಡಲು ಬರುವದು.
- ಬೇರೆ ಬೇರೆ ಎತ್ತರಕ್ಕೆ ಹಾರಿ ಕೆಳಗೆ ಕೂಡುವದು.
- ಶರೀರವನ್ನು ಮಣಿಸುವದು (ಮುಂದೆ, ಹಿಂದೆ, ಬದಿಗೆ, ತಿರುವು, ಗೋಲಾಕಾರ ಹೋಗುವದು).
- ಕೈಯಿಂದ ಇಲ್ಲವೆ ಕಾಲಿನಿಂದ ವಿವಿಧ ಪ್ರಕಾರದ ಚಲನೆವಲನೆ ಮಾಡುತ್ತ ಉಪಲಬ್ಧವಿದ್ದ ಸ್ಥಳದಲ್ಲಿ ಇಲ್ಲಿಂದ ಅಲ್ಲಿ ತಿರುಗುವದು.

ಯಾವುದೇ ದೊಡ್ಡ ಬರಿದಾದ ಸ್ಥಳದಲ್ಲಿ, ಮೈದಾನದಲ್ಲಿ ಇಲ್ಲವೆ ಸಭಾಗೃಹದಲ್ಲಿ ಮುಂದಿನ ಉಪಕ್ರಮ ತಗೆದು ಕೊಳ್ಳಬೇಕು. ಪ್ರತಿ ವಿದ್ಯಾರ್ಥಿಯು ಈ ಉಪಕ್ರಮದಲ್ಲಿ ಸಹಭಾಗಿ ಯಾಗುವಂತೆ ಪ್ರವೃತ್ತ ಮಾಡಬೇಕು. ಸ್ವಂತದ ಚಲನವಲನೆ ಆರಿಸಲು ವಿದ್ಯಾರ್ಥಿಗಳಿಗೆ ಆಸ್ಪದ ವಿರಬೇಕು. ಒಂದು ವೇಳೆಗೆ ಒಬ್ಬನೇ ವಿದ್ಯಾರ್ಥಿ ಇಲ್ಲವೆ ಗುಂಪು ಕೃತಿ ಮಾಡಬೇಕು ಅಂದರೆ ಗದ್ದಲವಾಗುವದಿಲ್ಲ.

## ಕಾಲ

ನೃತ್ಯದಲ್ಲಿಯ ಚಲನೆವಲನೆ ಎಷ್ಟೊಂದು ವೇಗವಾಗಿ, ಮಂದವಾಗಿ ಆಗುತ್ತಿದೆ ಇಲ್ಲವೆ ಯಾವ ಠೇಕಾದ 'ಮೆಲೆ ಆಗುತ್ತಿದೆ, ಇವು ಕೂಡ ನೃತ್ಯದ ಸೌಂದರ್ಯ, ವೈಶಿಷ್ಟ್ಯ ಅರ್ಥಪೂರ್ಣತೆಯನ್ನು ಹೆಚ್ಚಿಸುವಲ್ಲಿ ದೊಡ್ಡ ಪಾಲು ಇದೆ.

### ಮಾಡಿ ನೋಡಿರಿ

- ವಿದ್ಯಾರ್ಥಿಗಳು ಒಂದೇ ನಿರ್ಧರಿಸಿದ ಚಲನವಲನೆಯನ್ನು ಅತಿ ಸಾವಕಾಶವಾಗಿ, ಮಂದವಾಗಿ, ಶೀಘ್ರವಾಗಿ, ಅತೀ ಶೀಘ್ರವಾಗಿ ಮಾಡಿ ನೋಡಬೇಕು.
- ಈಗ ಮೇಲಿನ ಎಲ್ಲ ಚಲನವಲನೆಗಳನ್ನು ಒಂದು ತುದಿಯಿಂದ ಎರಡನೇಯ ತುದಿಗೆ ಹೋಗುವಾಗ ಮಾಡಿ ನೋಡಬೇಕು

ಯಾವುದೇ ಹುರಪುತರುವ ಸಂಗೀತ ಬಾರಿಸ ಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗೆ ಉಪಕ್ರಮ ದಲ್ಲಿ ಸಹಭಾಗಿ ಯಾಗುವಂತೆ ಪ್ರವೃತ್ತರನ್ನಾಗಿ ಮಾಡಬೇಕು. ಸ್ವಂತದ ಚಲನವಲನೆ ಆರಿಸಲು ವಿದ್ಯಾರ್ಥಿಗಳಿಗೆ ಆಸ್ಪದ ಕೊಡಬೇಕು. ಒಂದು ವೇಳೆಗೆ ಒಬ್ಬನೇ ವಿದ್ಯಾರ್ಥಿ ಇಲ್ಲವೆ ಗುಂಪು ಕೃತಿಯನ್ನು ಮಾಡಬೇಕು. ಗದ್ದಲವಾಗಲಾರದು.

## ಹುಮ್ಮಸು

ನೃತ್ಯದಲ್ಲಿಯ ಚಲನೆವಲನೆ ಎಷ್ಟೊಂದು ಶೀಘ್ರ, ಮಂದವಾಗಿ ಆಗುತ್ತಿದೆ ಇಲ್ಲವೆ ಯಾವ ಠೇಕಾದ ಮೇಲಾಗುತ್ತಲಿದೆ. ಇವುಕೂಡ ನೃತ್ಯದ ಸೌಂದರ್ಯ, ವೈಶಿಷ್ಟ್ಯ ಅರ್ಥಪೂರ್ಣತೆಯನ್ನು ಹೆಚ್ಚಿಸುವಲ್ಲಿ ಹೆಚ್ಚಿನ ಪಾಲು ಇರುವದು.

### ಮಾಡಿ ನೋಡಿರಿ

- ವಿದ್ಯಾರ್ಥಿಗಳು ಒಂದೇ ನಿರ್ಧರಿಸಿದ ಚಲನವಲನೆಯನ್ನು ಅತ್ಯಂತ ಹುರುಪಿನಿಂದ ಮತ್ತು ಅತ್ಯಂತ ಮೆಲ್ಲಗೆ ಮಾಡಬೇಕು.
- ಈಗ ಮೇಲಿನ ಎಲ್ಲ ಘಟನೆಗಳನ್ನು ಒಂದು ತುದಿಯಿಂದ ಮತ್ತೊಂದು ತುದಿಯ ವರೆಗೆ ಹೋಗುವಾಗ ಮಾಡಿನೋಡಬೇಕು

ಯಾವುದೇ ಹುರುಪುತರುವ ಸಂಗೀತ ಬಾರಿಸ ಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗೆ ಉಪಕ್ರಮ-ದಲ್ಲಿ ಸಹಭಾಗ ವಹಿಸುವಂತೆ ಪ್ರವೃತ್ತರನ್ನಾಗಿ ಮಾಡಬೇಕು ಸ್ವಂತದ ಚಲನವಲನೆ ಆರಿಸಲು ಆಸ್ಪದ ಮಾಡಿ ಕೊಡಬೇಕು. ಒಂದು ವೇಳೆಗೆ ಒಬ್ಬನೇ ವಿದ್ಯಾರ್ಥಿ ಇಲ್ಲವೆ ಗುಂಪು ಕೃತಿ ಮಾಡ ಬೇಕು ಅಂದರೆ ಗದ್ದಲವಾಗಲಾರದು.

## ನಡೆಯಿರಿ ಉಪಯೋಗನೆ ಮಾಡೋಣ

ಕೊಟ್ಟ ಸಂಗೀತದ ಮೇಲೆ ಅವಕಾಶ, ಕಾಲ ಮತ್ತು ಹುರುಪು ಈ ಮೂರರ ವಿಚಾರ ಮಾಡಿ ನೃತ್ಯವನ್ನು ಕೂಡ್ರಿಸಿರಿ ಮತ್ತು ಅದನ್ನು ಸಾದರ ಪಡಿಸಿರಿ. ಇತರರ ಸಾದರೀಕರಣವನ್ನು ನೋಡಿರಿ. ಸಾದರಪಡಿಸುವದಾದ ಮೇಲೆ ಪ್ರತಿಯೊಂದು ಗುಂಪಿನ ಸಾದರದ ಕುರಿತು ಕೆಳಗಿನ ಅಂಶಗಳ ಆಧಾರದಿಂದ ಚರ್ಚೆ ಮಾಡಿರಿ.

- ಸಂಗೀತಕ್ಕೆ ಅನುಸರಿಸಿ ನೃತ್ಯದ ರಸಿಕತೆ ಇತ್ತೆ?
- ಸಂಗೀತಕ್ಕೆ ಅನುಸರಿಸಿ ಚಲನವಲನೆಯ ಗತಿ ಇತ್ತೇ?
- ಸಂಗೀತಕ್ಕೆ ಅನುಸರಿಸಿ ಯೋಗ್ಯವಾದ ಪ್ರಸಂಗದಲ್ಲಿ ಚಲನವಲನೆ ಜೋರಾಗಿ ಇಲ್ಲವೆ ಸಾವಕಾಶವಾಗಿ ಮಾಡುತ್ತಿದ್ದರೆ?
- ಉಪಲಬ್ದವಿರುವ ಸ್ಥಳದ ಯೋಗ್ಯ ಉಪಯೋಗವನ್ನು ಮಾಡುವ ಚಲನವಲನೆಗಳಿದ್ದವೇ?

ವಿದ್ಯಾರ್ಥಿಗಳ 5-6 ಗುಂಪುಗಳನ್ನು ಮಾಡಿರಿ. ಒಂದುಗುಂಪು ಎರಡನೆಗುಂಪಿಗಾಗಿ ಯಾವುದೇ ವಿಶಿಷ್ಠ ಸಂಗೀತವನ್ನು ಆರಿಸಬೇಕು. ಎರಡನೆಯ ಗುಂಪು ಸಂಗೀತವನ್ನು ಅದನ್ನು ಅನುಸರಿಸಿ ಉಪಲಬ್ದವಿದ್ದ ಸ್ಥಳದ ಉಪಯೋಗ ಹೇಗೆ ಮಾಡುವದು, ಯಾವ ಚಲನವಲನೆ ಕೊಡಿಸುವದು. ಚಲನವಲನೆಯ ಗತಿ ಹೇಗಿರಬೇಕು, ಅದರಲ್ಲಿ ಎಷ್ಟು ವಿವಿಧತೆ ಇರಬೇಕು ಅವು ಜೋರಾಗಿ ಇಲ್ಲವೆ ಸಾವಕಾಶವಾಗಿ ಇರಬೇಕೆಂಬುದರ ವಿಚಾರ ಮಾಡಿ ನೃತ್ಯ ದಿಗ್ದರ್ಶನ ಮಾಡಬೇಕು.



### ಸಂಗೀತ

## ಸ್ವಲ್ಪ ಮೋಜು ಮಾಡೋಣ

ಹಿಂದಿನ ವರ್ಷವಿಡಿ ನಿಮಗೆ ಹಿಡಿಸಿದ ಸಂಗೀತ ಯಾವುದು? ಆ ಸಂಗೀತವು ನಿಮಗೆ ಏಕೆ ಹಿಡಿಸಿತು? ಕೆಳಗಿನ ಅಂಶಗಳ ಆಧಾರದಿಂದ ಚರ್ಚೆ ಮಾಡಿರಿ.

1. ಧಾಟಿ
2. ಗಾಯನ
3. ಉಪಯೋಗಿಸಿದ ವಾದ್ಯಗಳು
4. ಠೇಕಾ
5. ಹಾಡಿನ ಶಬ್ದಗಳು

ವಿದ್ಯಾರ್ಥಿಗಳೊಂದಿಗೆ ವರ್ಗದಲ್ಲಿ ಚರ್ಚೆ ಮಾಡಿರಿ. ವಿದ್ಯಾರ್ಥಿಗಳು ಹೇಳಿದ ಪ್ರತಿಯೊಂದು ಪ್ರಕಾರದ ಸಂಗೀತದ ಕುರಿತು ಕೊಟ್ಟ ಅಂಶಗಳ ಆಧಾರದಿಂದ ಚರ್ಚೆ ಮಾಡಿರಿ.

ಒಂಬತ್ತನೆಯ ಇಯತ್ತೆಯಲ್ಲಿ ನಾವು ಸಂಗೀತದ ಕುರಿತು ಕೆಲವು ಪ್ರಾಥಮಿಕ ಮಾಹಿತಿಯನ್ನು ಪಡೆದುಕೊಂಡಿದ್ದೇವೆ. ಈ ವರ್ಷ ನಾವು ಭಾರತೀಯ ತಾಲ ವಾದ್ಯ ಮತ್ತು ಗೀತೆಗಳ ಪ್ರಕಾರದ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳೋಣ.

## ಭಾರತೀಯ ವಾದ್ಯಗಳು

ಭಾರತೀಯ ತಾಲವಾದ್ಯಗಳ ನಾಲ್ಕು ಪ್ರಕಾರಗಳಿವೆ-

### 1. ತಂತು ವಾದ್ಯಗಳು

ಯಾವುದರಲ್ಲಿ ತಂತಿಗಳ ಮೂಲಕ ಸ್ವರ ನಿರ್ಮಿತಿಯಾಗುವದೋ, ಅವುಗಳಿಗೆ ತಂತುವಾದ್ಯವೆಂದು ಕರೆಯಲಾಗುತ್ತದೆ. ಇದರಲ್ಲಿಯೂ ಎರಡು ಪ್ರಕಾರಗಳಿವೆ.

**ತತ ವಾದ್ಯಗಳು :** ಈ ವಾದ್ಯಗಳಲ್ಲಿ ತಂತಿಗಳಿಗೆ ಇತರ ಯಾವುದೇ ವಸ್ತುವಿನಿಂದ ಇಲ್ಲವೆ ಕೈಯಿಂದ ಬಾರಿಸಲಾಗುವದು ಉದಾ. ವೀಣೆ, ಸಿತಾರ, ತಂಬೊರಾ, ಸರೋದ ಮುಂತಾದವುಗಳು

**ವಿತತ ವಾದ್ಯಗಳು :** ಈ ವಾದ್ಯಗಳಲ್ಲಿ ತಂತಿಗಳಿಗೆ ಗಜದ ಸಹಯದಿಂದ ನುಡಿಸಲಾಗುವದು. ಉದಾ. ಸಾರಂಗಿ, ವ್ಹಾಯೋಲೀನ ಮುಂತಾದವುಗಳು

### 2. ಸುಷಿರ ವಾದ್ಯಗಳು

ಯಾವ ವಾದ್ಯಗಳು ಊದುವದರಿಂದ ಇಲ್ಲವೆ ಹವೆಯಿಂದ ನಾದವನ್ನು ನಿರ್ಮಾಣ ಮಾಡುತ್ತವೆಯೋ, ಅವುಗಳಿಗೆ ಸುಷಿರ ವಾದ್ಯಗಳೆಂದು ಕರಯುವರು. ಉದಾ. ಕೊಳಲು, ಹಾರ್ಮೋನಿಯಂ, ಸನಈ (ಶಹನಾಯಿ) ಮುಂತಾದವುಗಳು

### 3. ಅವನ್‌ದ್ಧ ವಾದ್ಯಗಳು

ತೊಗಲಿನಿಂದ ಬಿಗಿದ ತಾಲವಾದ್ಯಗಳು ಈ ಪ್ರಕಾರದಲ್ಲಿ ಬರುವವು ಉದಾ. ತಬಲಾ, ಮೃದಂಗ, ಢೋಲಕ, ಡಮರು ಮುಂತಾದವುಗಳು

### 4. ಘನ ವಾದ್ಯಗಳು

ಈ ವಾದ್ಯಗಳಲ್ಲಿ, ಆಘಾತ ಮಾಡಿದರೆ ಸ್ವರ ನಿರ್ಮಿತಿಯಾಗುವದು. ಉದಾ. ಜಲತರಂಗ, ಝಾಂಜ ಮುಂತಾದವುಗಳು.

## ಸ್ವಲ್ಪ ಮೋಜು ಮಾಡೋಣ

ಐದು ವಿವಿಧ ಪ್ರಕಾರದ ಹಾಡುಗಳನ್ನು ಕೇಳಿರಿ. ಆ ಹಾಡುಗಳಲ್ಲಿ ಯಾವ ಯಾವ ಪ್ರಕಾರದ ವಾದ್ಯಗಳನ್ನು ಉಪಯೋಗಿಸಲಾಗಿದೆ ಎಂಬುದನ್ನು ನಿಮಗೆ ಗುರುತಿಸಲು ಬರಬಹುದೆ? ಸಾಧ್ಯವಾದರೆ ಅದರಲ್ಲಿಯ ವಾದ್ಯಗಳ ಹೆಸರುಗಳನ್ನು ನಿಮಗೆ ಗುರುತಿಸಲು ಬರುವದೆ?

ವಿದ್ಯಾರ್ಥಿಗಳೊಂದಿಗೆ ವರ್ಗದಲ್ಲಿ ಚರ್ಚೆ ಮಾಡಿರಿ. ಪ್ರತಿಯೊಂದು ಹಾಡಿನಲ್ಲಿ ಯಾವ ಪ್ರಕಾರದ ವಾದ್ಯಗಳನ್ನು ಉಪಯೋಗಿಸಲಾಗಿದೆ. ಮತ್ತು ಅವುಗಳ ಹೆಸರುಗಳೇನು ಎಂಬುದನ್ನು ಗುರುತಿಸಲು ವಿದ್ಯಾರ್ಥಿಗಳಿಗೆ ಸಹಾಯಮಾಡಿರಿ. ಬಹುಶಃ ಎಲ್ಲಾ ವಾದ್ಯಗಳ ಹೆಸರು ಗುರುತಿಸಲಿಕ್ಕೆ ಬರಲಾರದು. ಆ ವೇಳೆಗೆ ಮಾರ್ಗದರ್ಶನ ಮಾಡಿರಿ.

### ಪ್ರದೇಶಕ್ಕೆ ಅನುಸರಿಸಿ ಪ್ರಚಲಿತ ವಾದ್ಯಗಳು

ಭಾರತವು ಬಹಳ ವೈವಿಧ್ಯತೆಯಿಂದ ಕೂಡಿದ ದೇಶವಾಗಿದೆ. ಪ್ರತಿಯೊಂದು ರಾಜ್ಯಕ್ಕೆ ತಮ್ಮದೇ ಆದ ಸಂಸ್ಕೃತಿ ಇದೆ. ಹಾಗೆಯೆ ಪ್ರತಿಯೊಂದು ರಾಜ್ಯದ, ಭಾಗದ ವಿಶಿಷ್ಟ ಪರಂಪರಾಗತ ಸಂಗೀತವಿದೆ. ಈ ಪರಂಪರಾಗತ ಸಂಗೀತಕ್ಕಾಗಿ ಉಪಯೋಗಿಸಿದ ವಾದ್ಯಗಳು ಸಹ ವಿಶಿಷ್ಟವಾಗಿವೆ. ಉದಾ. ಮಹಾರಾಷ್ಟ್ರದಲ್ಲಿಯ ಲಾವಣಿ ಈ ಗೀತಪ್ರಕಾರದಲ್ಲಿ ಢೋಲಕಿಯ ತಾಲ ಇದು ಅತ್ಯಂತ ಮಹತ್ವಪೂರ್ಣವೆಂದು ತಿಳಿಯಲಾಗಿದೆ ದಾಕ್ಷಿಣಾತ್ಯ ಸಂಗೀತದಲ್ಲಿ ಮೃದಂಗ ಇಲ್ಲವೆ ಘಟಮ್ ಇವುಗಳಿಗೆ ಮಹತ್ವದ ಸ್ಥಾನವಿರುವದು. ರಾಜಸ್ಥಾನಿ ಸಂಗೀತದಲ್ಲಿ ಸಾರಂಗಿ ಮತ್ತು ಅಲ್ಗೋಝಾ ಹೆಸರಿನ ಕೊಳಲು ಪ್ರಾಮುಖ್ಯವಾಗಿ ಉಪಯೋಗಿಸಲಾಗುವದು.


ಇದೇ ರೀತಿಯಾಗಿ ಇತರ ಪ್ರಾಂತಗಳಲ್ಲಿ ಉಪಯೋಗಿಸಲಾಗುವ ವಾದ್ಯಗಳ ಕುರಿತು ನಿಮಗೆ ಏನಾದರೂ ಹೇಳಲು ಬರಬಹುದೇ?

ವಿದ್ಯಾರ್ಥಿಗಳ ಗುಂಪನ್ನು ಮಾಡಿರಿ. ಪ್ರತಿಯೊಂದು ಗುಂಪಿಗೆ ಒಂದೊಂದು ಪ್ರಾಂತಗಳನ್ನು ಹಂಚಿಕೊಡಿರಿ. ಆ ಪ್ರಾಂತಗಳಲ್ಲಿಯ ಸಂಗೀತ ಕೇಳಲು ವೇಳೆ ಮತ್ತು ಸಾಧನೆಗಳನ್ನು ದೊರಕಿಸಿ ಕೊಡಿರಿ. ಪ್ರತಿಯೊಂದು ಗುಂಪು ಹಾಡನ್ನು ಕೇಳಿ ಯಾವ ಯಾವ ವಾದ್ಯಗಳ ಉಪಯೋಗ ಅದರಲ್ಲಿ ಪ್ರಾಮುಖ್ಯವಾಗಿ ಮಾಡಲಾಗಿದೆ. ಇದರ ಕುರಿತು ಚರ್ಚೆ ಮಾಡಿರಿ.

## ಸ್ವಲ್ಪ ಮೋಜು ಮಾಡೋಣ

### ಸ್ವತಃ ವಾದ್ಯಗಳ ನಿರ್ಮಾಣ ಮಾಡುವದು

ನಿಮಗೆ ನಿಮ್ಮ ಆಕ್ಕಪಕ್ಕದಲ್ಲಿರುವ ಉಪಲಬ್ಧವಿರುವ ಡಬ್ಬಿಗಳು, ಬಾಟಲಿಗಳು, ತಂತಿ, ರಬರ ಇವುಗಳ ಉಪಯೋಗ ಮಾಡಿ ಕೆಲವು ವಾದ್ಯಗಳ ನಿರ್ಮಾಣ ಮಾಡಲು ಬರಬಹುದೇ? ಆದರಿಂದ ಕರ್ಣಮಧುರ ನಾದ ಬರಬೇಕು, ಇಷ್ಟೇ ಮಹತ್ವದ್ದಾಗಿದೆ.



### ಆರ್ಕೆಸ್ಟ್ರಾ

ನೀವು ತಯ್ಯಾರಿಸಿದ ವಾದ್ಯಗಳನ್ನು ಉಪಯೋಗಿಸಿ ಒಂದು ಆರ್ಕೆಸ್ಟ್ರಾ ತಯ್ಯಾರಿಸಿರಿ ಮತ್ತು ಹಾಡುಗಳನ್ನು ಕೂಡಿಸಿರಿ.

ವಿದ್ಯಾರ್ಥಿಗಳಿಗೆ ಅವರ ಇಷ್ಟದಂತೆ ಗುಂಪಿನಲ್ಲಿ ಇಲ್ಲವೆ ಒಬ್ಬಂಟಿಗನಾಗಿ ಕೆಲಸಮಾಡಲು ಬಿಡಿರಿ ಪ್ರತಿಯೊಬ್ಬನು ಮುಂದೆ ಬಂದು ಸ್ವತಃ ಸಿದ್ಧ ಪಡಿಸಿದ ವಾದ್ಯಗಳ ಪ್ರಾತ್ಯಕ್ಷಿಕೆಯನ್ನು ಮಾಡಬೇಕು.

ವಿದ್ಯಾರ್ಥಿಗಳ ಗುಂಪು ಮಾಡಿರಿ. ಪ್ರತಿಯೊಂದು ಗುಂಪು ಒಂದು ಹಾಡನ್ನು ಕೂಡಿಸುವ ಅಪೇಕ್ಷೆ ಇದೆ. ಆ ಹಾಡನ್ನು ಸ್ನೇಹಸಮ್ಮೇಲನ ಇಲ್ಲವೆ ನಿಮ್ಮ ವರ್ಗದಲ್ಲಿ ಸಾದರಪಡಿಸಬೇಕು.

### ಗೀತೆ

ಶಾಸ್ತ್ರೀಯ ಸಂಗೀತದಲ್ಲಿ ಹಾಡುಗಳನ್ನು ಹಾಡುತ್ತಾರೆ ಗೀತೆಗಳ ಅನೇಕ ಪ್ರಕಾರಗಳು ರಾಗಗಾಯನದಲ್ಲಿ ಪ್ರಚಾರದಲ್ಲಿವೆ. ಈ ಗೀತೆ ಪ್ರಕಾರವನ್ನು ತಿಳಿದುಕೊಳ್ಳುವದ-ಕ್ಕಿಂತ ಮುಂಚೆ ಗೀತವು ಹೇಗಿರಬೇಕು ಇದರ ಕುರಿತು ಬಹಳ ಹಿಂದಿನಿಂದ ಸಂಗೀತ ತಜ್ಞರು ಯಾವ ಪ್ರತಿಪಾದನೆ ಮಾಡಿದ್ದಾರೋ ಅದರ ವಿಚಾರ ಮೊದಲು ಮಾಡೋಣ ಸಂಗೀತದ ಮುಖ್ಯ ಉದ್ದೇಶ ಮನಸ್ಸನ್ನು ರಂಜಿಸುವದು ಇದ್ದುದ- ರಿಂದ ಗೀತ ರಚನೆಯಲ್ಲಿ ಆ ಸಾಮರ್ಥ್ಯಗಳ ಲಕ್ಷಣಗಳು ಯಾವುವು ಇವುಗಳ ಕುರಿತು ಸಂಗೀತ ಗ್ರಂಥದಲ್ಲಿ ಮುಂದಿನ ಶ್ಲೋಕವು ದೊರಕುವದು.

**ಸುಸ್ವರಮ್, ಸುರಸಮ್ ಚೈವ, ಮಧುರಮ್ ಮಧುರಾಕ್ಷರಮ್**
**ಸಾಲಂಕಾರಮ್ ಪ್ರಮಾಣಂ ಚ ಷಡ್‌ವರ್ಯಮ್ ಗೀತಲಕ್ಷಣಮ್**

ಇದರ ಅರ್ಥ, ಉತ್ತಮ ಸ್ವರಗಳಿಂದ ನಟಿಸಿದ, ಯೋಗ್ಯ ರಸಗಳ (ಭಾವಗಳ) ಪರಿಪೋಷಣೆ ಮಾಡುವ, ಮಧುರ ಅಕ್ಷರಗಳಿಂದ ಕೂಡಿದ ಮತ್ತು ಮಧುರರಾಗ ರಚನೆಯಲ್ಲಿ ಬಂಧಿಸಲ್ಪಟ್ಟ, ಅಲಂಕಾರಯುಕ್ತ, ಯೋಗ್ಯ ಲಯದಲ್ಲಿ ಪ್ರಮಾಣಿತವಾದ, ಇವು ಗೀತಗಳ ಆರು ಲಕ್ಷಣಗಳಿವೆ.

**ಸ್ವಲ್ಪ ವಿಚಾರ ಮಾಡಿರಿ**

FAGKCR

- ನೀವು ಕೇಳಿದ ಯಾವ ಮೂರು ಗೀತೆಗಳು ಮೇಲಿನ ಒರೆಗಲ್ಲಿಗೆ ಹತ್ತುವವು?
- ಹಿಂದಿನ ಕಾಲದಲ್ಲಿಯ ಸಂಗೀತ ಮತ್ತು ಇಂದಿನ ಕಾಲದಲ್ಲಿಯ ಸಂಗೀತ ಇವುಗಳಲ್ಲಿ ನಿಮಗೆ ಏನಾದರೂ ವ್ಯತ್ಯಾಸ ಕಂಡು ಬರುವದೇ? ವಿಚಾರ ಮಾಡಿರಿ.

## ಮೂಲ್ಯ ಮಾಪನ (ಭಾರಾಂಶ 20%)

| ಒರೆಗಲ್ಲು | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಅಂಕಗಳು |
|---|---|---|---|---|
| **ನಾಟ್ಯ**<br>ಸಂವಾದಗಳಿಗೆ ಸಂದರ್ಭ ಕೊಡುವದು | ಯೋಗ್ಯ ಸಂದರ್ಭ ಕೊಟ್ಟು ಅದರ ಹಾಗೆ ಧ್ವನಿ, ಶರೀರದ ಚಲನ ವಲನೆ ಮುಂತಾದವು ಗಳ ಯೋಗ್ಯ ಉಪಯೋಗ ಮಾಡಲಾಗಿದೆ | ಯೋಗ್ಯ ಸಂದರ್ಭಕೊಟ್ಟಿದೆ ಆದರೆ ಧ್ವನಿ, ಶರೀರದ ಚಲನ ವಲನೆ ಮುಂತಾದವುಗಳ ಯೋಗ್ಯ ಉಪಯೋಗವಾಗಿಲ್ಲ | ಸಂದರ್ಭ ಹೀನತೆಯಿಂದ ಕೇವಲ ವಾಕ್ಯ ಅನ್ನಲಾಗಿದೆ. | |
| **ಸಂಗೀತ**<br>ವಾದ್ಯ ನಿರ್ಮಿತಿ | ನಾದ ಹೊರಡುವ ವಾದ್ಯ ನಿರ್ಮಾಣ ಮಾಡಲಾಗಿದೆ. ವಾದ್ಯ ನಿರ್ಮಿತಿಯಲ್ಲಿ ಕಲ್ಪಕತೆ ಕಂಡು ಬಂದಿತು | ವಾದ್ಯ ನಿರ್ಮಿತಿ ಮಾಡಲಾಗಿದೆ ಆದರೆ ಅದರಿಂದ ಹೊರಡುವ ಧ್ವನಿ ಕರ್ಣಮಧುರವಾಗಿಲ್ಲ | ವಾದ್ಯ ನಿರ್ಮಿತಿಯನ್ನು ಮಾಡಿಯೇ ಇಲ್ಲ. | |
| **ನೃತ್ಯ**<br>ನೃತ್ಯ ಸಾದರಪಡಿಸುವಿಕೆ | ಪಾಠದಲ್ಲಿ ಕೊಟ್ಟ ಒರೆಗಲ್ಲುಗಳ ಆಧಾರದಿಂದ ಹುರುಪು (ಉತ್ಸಾಹ), ಕಾಲ ಮತ್ತು ಅವಕಾಶ ಇವುಗಳ ಯೋಗ್ಯ ಉಪಯೋಗ ಮಾಡಿ ನೃತ್ಯ ಸಾದರ ಪಡಿಸಲಾಯಿತು | ಮೂರರಲ್ಲಿ ಎರಡು ಅಂಶಗಳ ಆಧಾರದಿಂದ ಸಾದರ ಪಡಿಸಲಾಯಿತು | ಯಾವುದೋ ಒಂದು ಒರೆಗಲ್ಲಿನ ಉಪಯೋಗ ಮಾಡಿ ಕೇವಲ ಕೃತಿಯನ್ನು ಪೂರ್ಣ ಮಾಡಲಾಗಿದೆ. | |


ಹತ್ತನೇಯ ಪರೀಕ್ಷೆ ಮುಗಿದಿತ್ತು. ಇನ್ನೂ ಫಲಿತಾಂಶ ಜಾಹೀರು ಪಡಿಸಿದ್ದಿಲ್ಲ. ಐದೂ ಜನರು ಅವರ ನೆಚ್ಚಿನ ಮಾವಿನ ಮರದ ಕೆಳಗೆ ಹರಟೆಹೊಡೆಯುತ್ತ ಕುಳಿತಿದ್ದರು.
ನನಗೆ ಬಹಳ ಬೇಸರ ಬರಹತ್ತಿದೆ. ಈಗ ನಮ್ಮ ಗೆಳೆತನ ಮುರಿಯುವದು ನಾವೆಲ್ಲರೂ ಬೇರೆ ಬೇರೆ ದಿಕ್ಕಿಗೆ ಹೋಗುವವರು ನಮ್ಮ ಭೆಟ್ಟಿ ಕಡಿಮೆಯಾಗ ಬಹುದು... ಎಲ್ಲ ಮೋಜು ಮುಗಿಯಿತು...
ಹೀಗೆಕೆ ನಿರಾಶೆ ಗೊಳ್ಳುವಿ? ಅದಕ್ಕೆ ವಿರುದ್ಧವಾಗಿ ನಾವೀಗ ಒಂದು ಹೊಸ ನಿಜವಾದ ಜಗತ್ತಿನಲ್ಲಿ ಪ್ರವೇಶಿಸುವರಿದ್ದೇವೆ.
ಹೌದೋ.... ಅಂತೆಯೇ... ಉತ್ಸುಕತೆಯೂ ಇದೆ ಮತ್ತು ಚಿಂತೆಯೂ ಕೂಡ ಇದೆ... ಇನ್ನು ಮಂದೆ ಏನಾದರೂ ತೊಂದರೆಗಳು ಬಂದರೆ?
ತೊಂದರೆಗಳಂತೂ ಬರುವವೆ... ನೆನಪಿಗೆ ಬರುತ್ತದೆಯೇ... ಧೈರ್ಯಧರ ಮತ್ತು ಧೈರ್ಯಶೀಲಾ ನಮ್ಮನ್ನು ಬಿಟ್ಟು ಹೋಗುವಾಗ ಸಹ ನಮಗೆ ಹೀಗೆಯೆ ಅನಿಸುತ್ತಿತ್ತು... ಆದರೆ ನಾವೇ ಸ್ವಂತದ ಪ್ರಶ್ನೆ ಬಿಡಿಸಿದೆವು.. ಹೌದಲ್ಲ?
ಹೌದು... ಮತ್ತು ಇನ್ನುಮುಂದೆ ಸಹ ನಮ್ಮ ಪ್ರಶ್ನೆಗಳನ್ನು ನಾವೇ ಬಿಡಿಸಬೇಕಾಗಬಹುದು... ನಾವು ಈ ಎರಡು ವರ್ಷಗಳಲ್ಲಿ ಏನು ಕಲಿತದ್ದೇವೆಯೊ ಮುಂದಿನ ಆಯುಷ್ಯದಲ್ಲಿ ನಮ್ಮ ಕೆಲಸಕ್ಕೆ ಬರ ಬಹುದು.
ನನಗೆ ನಿಶ್ಚಿತವಾಗಿ ಒಂದು ಹೊಳಿದಿದೆ.... ಯಶಸ್ವೀ ಯಾಗುವಷ್ಟೇ, ಒಳ್ಳೆಯ ನಾಗರಿಕ ನಾಗುವದು, ಇತರರಿಗೆ ಸಹಾಯ ಮಾಡುವದು ಕೂಡ ಮಹತ್ವದ್ದಾಗಿದೆ.
ಮತ್ತು ಮೂಲ್ಯಾಧಿಷ್ಟಿತರಾಗಿ ಜೀವಿಸುವದೂ ಸಹ!
ಯಾವುದೇ ಪ್ರಶ್ನೆಗೆ ಅಂಜದೇ ಎದುರಿಸಬೇಕು!
ಒಮ್ಮೆ ಅಪಯಶವು ಬಂದರೆ ಎಲ್ಲವೂ ಮುಗಿಯುವದಿಲ್ಲ ನಾವು ಯಾವಾಗಲೂ ಮತ್ತೇ ಪ್ರಯತ್ನ ಮಾಡಬಹುದು...
ಮತ್ತೆ ಯಾರಿಗೆ ಗೊತ್ತು... ಬಹುಶಃ ಯಶಸ್ವಿಯಾದನಂತರವೂ ಹೀಗೆಯೇ ಒಬ್ಬರಿಗೊಬ್ಬರು ಭೇಟ್ಟಿಯಾಗುತ್ತ ಇರೋಣ... ಚೇಷ್ಟೆ ಮಾಡುವದಕ್ಕೆ....
सगळे हसतात.

## ಸಂದರ್ಭ ಸೂಚಿ:


1. ಆಕೃತಿ – ಆಭಾ ಭಾಗವತ
2. ಸಂಗೀತ ಶಾಸ್ತ್ರ ಪರಿಚಯ – ಆನಂದ ಮ. ಗೋಡಸೆ
3. ಸಂಗೀತ ಶಾಸ್ತ್ರ – ಡಾ. ವಸಂತರಾವ ರಾಜೋಪಾಧ್ಯೆ
4. ಸಂಗೀತ ವಿಶಾರದ – ವಸಂತ
5. 21 ವ್ಯಾ ಶತಕಾತೀಲ ಜೀವನ ಕೌಶಲ್ಯಾವರ ಸಂಶೋಧನ ವ ವಿಕಾಸ, ಶ್ಯಾಮಚಿ ಆಯಿ ಫೌಂಡೇಶನ
6. ದೇವನಾಗರಿ ಚಿತ್ರೆ–ವಿಷ್ಣುಪಂತ ಚಿಂಚಾಳಕರ ಗುರೂಜಿ
7. Discipline without tears - Rudolf Dreikurs
8. Positive Discipline - Jane Nelson
9. Superiority and social interest - Alfred Adler


## ಸಂದರ್ಭಕ್ಕಾಗಿ ಸಂಕೇತ ಸ್ಥಳಗಳು


1. www.safindia.org
2. http://mahacareermitra.in
3. http://ccrtindia.gov.in
4. http://ncert.nic.in
5. https://www.hindustantimes.com
6. https://www.elementsofdance.org
7. http://centurydancesport.com
8. http://www.nationalartsstandards.org
9. https://www.slideshare.net
10. www.marathiworld.com
11. http://majhamaharashtra.net
12. http://ketkardnyankosh.com



ಪುಸ್ತಕದಲ್ಲಿಯ ಕೆಲವು ಚಿತ್ರಗಳನ್ನು ಶೈಕ್ಷಣಿಕ ಉಪಯೋಗಕ್ಕಾಗಿ ಇಂಟರ್ನೆಟದಿಂದ ತೆಗೆದುಕೊಳ್ಳಲಾಗಿದೆ.

***




































- पाठ्यपुस्तक मंडळाची वैशिष्ट्यपूर्ण पाठ्येत्तर प्रकाशने.
- नामवंत लेखक, कवी, विचारवंत यांच्या साहित्याचा समावेश.
- शालेय स्तरावर पूरक वाचनासाठी उपयुक्त.

पुस्तक मागणीसाठी www.ebalbharati.in, www.balbharati.in संकेत स्थळावर भेट द्या.

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५

ಮಹಾರಾಷ್ಟ್ರ ರಾಜ್ಯ ಪಾಠ್ಯ ಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳ. ಪುಣೆ 4.

स्व–विकास व कलारसास्वाद इयत्ता दहावी (कन्नड)

₹ 63.00